PEER - REVIEWED JOURNAL
ISSN: 2320-9941
ಸಂಪುಟ - 9, ಸಂಚಿಕೆ- 4
VOLUME: 09, ISSUE: 04

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

ಭಾಗ - ೧
PART - 1



ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
literature, culture - Research Quarterly Peer - Reviewed journal
ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An Exchange of creative Impulse

ಭಾಗ – 01, PART - 1

ಸಂಪುಟ: 09, ಸಂಚಿಕೆ 04, ಡಿಸೆಂಬರ್ 2025

VOLUME: 09, ISSUE: 04, DECEMBER 2025

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಪ್ರಕಟಣೆ :

ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ

ತೋಟದ ಮನೆ ನಂ 107(25)

ಕಂಚಾಘಟ್ಟ ಹೊಸ ಬಡಾವಣೆ

ತಿಪಟೂರು 572201

e-mail: prathispanda@gmail.com

website : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ಸರಸ್ವತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಬಿ.ಎಂ.ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹುಳಿಯಾರು – ಕೆಂಕೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Saraswati K. B
Associate Professor, English Department
BMS Govt. First Grade College, Huliyar - Kenkere
Tumkur District, Karnataka

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

Dr. M. Rangaswamy
Assistant Professor,
Kannada Department
University Of Madras,
Chenni, Tamil Nadu

ಡಾ. ಜ್ಯೋತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Jyoti K. B.
Associate Professor, English Department
Govt. First Grade College, Koratagere,
Tumkur District, Karnataka

ಡಾ. ಗೋವಿಂದರಾಯ ಎಂ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ
ತುಮಕೂರು ಜಿಲ್ಲೆ, ಕರ್ನಾಟಕ

Dr. Govindaraya M.
Associate Professor
Kannada Department
Govt. First Grade College, Madhugiri
Tumkur District, Karnataka

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ, ವಸಂತನಗರ
ಬೆಂಗಳೂರು, ಕರ್ನಾಟಕ

Anitha K. V.
Assistant Professor, Kannada Department
Mount Carmel College Autonomous, Vasanthnagar
Bengaluru, Karnataka

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ
ಕೆ. ನಾರಾಯಣಪುರ
ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Kannada Department
Kristu Jayanti Deemed to be University,
K. Narayanapura
Bengaluru, Karnataka

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

ಪ್ರೊ. ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ಕಾನೂನು ಸಲಹೆಗಾರರು
ಪೃಥ್ವಿ ಸೂರಿ
ಲೇಖಕರು ಹಾಗೂ ವಕೀಲರು

ಸಂಪಾದಕೀಯ...

ಕಾಳನುಯದಿ ಬಿತ್ತೆ ಸಂಜೆಗದು ಪೈರಹುದೆ
ಪಾಲುಂಟು ಕಾಲಂಗೆ ನಮ್ಮ ಕೃಷಿಗಳಲಿ ।
ವೇಳೆ ಗಡು ಮರೆತಾತುರದಿನ್ ಅಡುಗೆ ಪಕ್ಕಹುದೆ
ತಾಳುಮೆಯೆ ಪರಿಪಾಕ – ಮಂಕುತಿಮ್ಮ ॥

ಸವಾಲುಗಳನ್ನು ಎದುರಿಸಿ ಮೇಲೇಳುವ ಶಕ್ತಿ ಅಥವಾ Resilience ಗುಣವು ಅಸಾಧಾರಣವಾದದ್ದು. ವಸಾಹತು ಪರಿಭಾಷೆಯಲ್ಲಿ ಈ ಸ್ವಭಾವವು ದಾಸ್ಯವೆಂದು ಭಾವಿಸಲ್ಪಡುತ್ತದೆ. ಜೀವನದ ಅಪರಿಮಿತ ಶಕ್ತಿಯನ್ನು ಎದುರಾಗುವ ಪ್ರಯತ್ನದ ಕಾರಣದಿಂದಲೇ ತನ್ನ ಜೀವ ಸೆಲೆಯನ್ನು ಜಾಗೃತವಾಗಿಡುವ ಹೆಮ್ಮಿಂಗ್ ವೇ ಯ ಮುದುಕನ ರೂಪಕ ಅನನ್ಯವಾದದ್ದು.

ಎಂತಹ ಕಠಿಣ ಪರಿಸ್ಥಿತಿಯಲ್ಲೂ ಏಳುವ ಸಮಸ್ಥಿತಿಗಳಿಸುವ ಪ್ರಕ್ರಿಯೆಗೆ ಕೆಲವು ಪೂರ್ವ ನಿಯಮಗಳಿರುತ್ತವೆ. Integrity, ತೀವ್ರಮೌನ, disinterestedness ಕೀಟ್ಸ್ ಕವಿ ಹೇಳುವ Negative Capability ಇಂತಹವು.

ಬದುಕಿನ ಬಗ್ಗೆ ನಾವು ಕಟ್ಟಿಕೊಳ್ಳುವ ಭ್ರಮೆಗಳು ನಿರಸನಗೊಂಡಾಗ, ತ್ರಿವ್ರವಾದ ಭಾವೋದ್ವೇಗಗಳು, ಹತ್ತಿರದವರನ್ನು ಕಳೆದುಕೊಂಡಾಗ ಆಗುವ ನೋವು, ಬದುಕುವ ಅಸ್ತಿತ್ವವನ್ನೇ ಅಲುಗಾಡಿಸುವ ಬಡತನ, ಯುದ್ಧಗಳು ಬರಗಾಲ, ರೋಗ ರುಜಿನ, ಯಾತನೆಗಳು ಮನುಷ್ಯರಲ್ಲಿ ಸಹಜವಾಗಿ Resilience ಗುಣವನ್ನು ಹೆಚ್ಚಿಸುತ್ತವೆ.

ಇಂದಿನ ಯುವ ಸಮೂಹವು ಇಂತಹ ಯಾವುದೇ ನೈಜ ದುರಂತಗಳು ಉಂಟುಮಾಡುವ ನೋವಿಗಿಂತ ಕಲ್ಪನೆಯಲ್ಲೇ ಕಾಡುವ ಭಯ, ಗೀಳು, ಅತಿಯಾದ ನಿರೀಕ್ಷೆ ಸ್ವಾರ್ಥದಿಂದ ಬರುವ ಹಠ, ಎಲ್ಲರನ್ನೂ, ಎಲ್ಲದನ್ನೂ ಒಳಗೊಳ್ಳದೇ ಇರುವ ಕಾರಣದಿಂದ ನೋವು ಅನುಭವಿಸುತ್ತಿದ್ದಾರೆ. ಇದು ಅಸಹಜ ಯಶಸ್ಸಿಗೆ ಅಡ್ಡದಾರಿಗಳನ್ನು

ಹುಡುಕುವ ಸಾಮರ್ಥ್ಯವಿಲ್ಲದಿದ್ದರೂ ಯಶಸ್ವಿ ಎಂದು ತೋರಿಸುವ ಕಾರಣದಿಂದ ದಿಕ್ಕು ತಪ್ಪುತ್ತಿದ್ದಾರೆ.

ನೋಡುವ, ಒಳನೋಟ ನೀಡುವ ಕಣ್ಣು ಕಳೆದುಕೊಂಡು ಅಂದರಾಗುವ ಮುನ್ನ ಎಚ್ಚೆತ್ತುಕೊಳ್ಳುವುದು ಅನಿವಾರ್ಯವಾಗಿದೆ. ಇಂತಹ ಪ್ರಜ್ಞಾವಿಹೀನ ಸ್ಥಿತಿ ಸಂಶೋಧನೆಗಳಿಗೆ ಮಾರಕವಾಗಿದೆ.

– ಡಾ. ಸರಸ್ವತಿ ಕೆ. ಬಿ

(ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಭಿಪ್ರಾಯಗಳು, ಆಯಾ ಲೇಖಕರ ಸಂಶೋಧನೆ, ಅಧ್ಯಯನಗಳಾಗಿರುತ್ತವೆ. ಆದ್ದರಿಂದ ಲೇಖನದ ಹಕ್ಕನ್ನು ಆಯಾ ಲೇಖಕರು ಹೊಂದಿರುತ್ತಾರೆ. ಪ್ರಕಟಣೆಯ ಹಕ್ಕನ್ನು ಪತ್ರಿಕೆಗೆ ನೀಡಿರುತ್ತಾರೆ.)

ISSN : 2320-9941
Linking ISSN (ISSN-L): 2320-9941
Key-title: Prathispandha
Title proper: Prathispandha.
Country: India
Medium: Print
Last modification date: 01/09/2014
Type of record: Confirmed
ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ಪರಿವಿಡಿ INDEX

1. ಕನ್ನಡದ ದೇಸಿ ಗುರುತು ಸಾಲು ಮರದ ತಿಮ್ಮಕ್ಕ

ಡಾ. ರವಿಶಂಕರ್ ಎ.ಕೆ **1–7**

2. ನೇಮಿಚಂದ್ರರ ಕತೆಗಳಲ್ಲಿ ಮಹಿಳೆ ಮತ್ತು ಸ್ವಾವಲಂಬನೆ

ಡಾ. ಬಸಯ್ಯ ಸ್ವಾಮಿ **8–15**

3. ಮಾಸ್ತಿಯವರ 'ಕಾಮನಹಬ್ಬದ ಒಂದು ಕತೆ'ಯ ಒಳನೋಟಗಳು

ಡಾ. ಸರ್ವೇಶ ಬಿ.ಎಸ್. **16–26**

4. ಜನಪದ ಲಾವಣಿ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಚಿತ್ರಣ

ಡಾ. ಸಂಗಮೇಶ ಎಸ್. ಗಣಿ **27–34**

5. ರಾಷ್ಟ್ರಕವಿ ಕುವೆಂಪು ಮತ್ತು ಭೂದಾನ ಚಳುವಳಿ ನೇತಾರ ಸಂತ ವಿನೋಬಾಭಾವೆ

ಡಾ. ಉಮೇಶ **35–40**

6. ಹೈದರ್ ಮತ್ತು ಟಿಪ್ಪು ಕಾಲದ ಅಂತರ್ ರಾಜ್ಯ ಹಾಗೂ ವಿದೇಶಿ ವರ್ತಕ ಸಮುದಾಯಗಳು

ಡಾ. ಕುಮಾರ ಎನ್. **41–57**

7. ಕಂಬಳಿ ನೇಕಾರರ ಪಾರಂಪರಿಕ ವೃತ್ತಿ ಸಂಸ್ಕೃತಿ ಮತ್ತು ಸ್ಥಿತಿಗತಿ

ಡಾ. ಮೇಘನ ಜಿ. **58–67**

8. ಶಿವಶರಣೆ ಅಕ್ಕಮ್ಮ

ಡಾ. ಪಿ. ನಾಗರಾಜ **68–78**

9. ಚದುರಂಗರ ವೈಶಾಖ ಕಾದಂಬರಿ : ಭಾರತೀಯ ಜೀವನ ಸಂಕಥನ ವಿಮರ್ಶೆ

ಡಾ. ಆನಂದ ಎಸ್.ಎನ್. **79–87**

10. ಮಹಿಳಾ ಸಂವೇದನೆಯ ಹಿನ್ನೆಲೆಯಲ್ಲಿ 'ಎದೆಯ ಹಣತೆ'

ಅಭಿಜಿತ್ ಬಿ. **88–92**

11. ಧಾರ್ಮಿಕ ಪ್ರಜ್ಞೆಯ ಹಿನ್ನಲೆಯಲ್ಲಿ 'ಬೆಂಕಿ ಮಳೆ'

ಕವನ ಕೆ. **93–96**

12. ಐತಿಹಾಸಿಕ ಲಾವಣಿಗಳಲ್ಲಿ ಪ್ರತಿಭಟನೆಯ ಸ್ವರೂಪ

ಡಾ. ಮಹಾಂತೇಶ ದುರಗಣ್ಣವರ **97–122**

ವಿಶೇಷ ಲೇಖನ

ಕನ್ನಡದ ದೇಸಿ ಗುರುತು ಸಾಲು ಮರದ ತಿಮ್ಮಕ್ಕ

1

ಡಾ. ರವಿಶಂಕರ್ ಎ.ಕೆ
ಸಹಾಯಕ ಪ್ರಾಧ್ಯಾಪಕ
ಸಮಾಜ ವಿಜ್ಞಾನಗಳು ಮತ್ತು ಭಾಷಾ ವಿಭಾಗ
ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ, ಬೆಂಗಳೂರು.
ravishankar@kristujayanti.com

ಪ್ರಮುಖ ಪದಗಳು
ದೇಸಿ ಗುರುತು. ಉದ್ಯಾನವನ, ಸೃಷ್ಟಿ, ಪ್ರಶಸ್ತಿ.

ಸಾಲು ಮರದ ತಿಮ್ಮಕ್ಕ ಇನ್ನಿಲ್ಲ ಎಂಬ ವಿಚಾರ ಸರಳವಾಗಿದ್ದರೂ, ಆ ವ್ಯಕ್ತಿತ್ವ ರೂಪಿಸಿದ ಕಾರ್ಯ, ಪ್ರೇರಣೆಯು ಅತ್ಯಂತ ಗಹನವಾಗಿದೆ. ಇದು ದೇಶ–ಕೋಶಗಳನ್ನು ದಾಟಿ, ವಿಶ್ವದ ಸುದ್ಧಿ ಮತ್ತು ಕಾರ್ಯಗಳಲ್ಲಿ ದಾಖಲಾಗಿದೆ.

ಒಬ್ಬ ಸಾಮಾನ್ಯ ವ್ಯಕ್ತಿ ಅಸಾಮಾನ್ಯ ವ್ಯಕ್ತಿತ್ವವಾಗಿ ಬೆಳೆಯುವುದು ಹೇಗೆ ಎಂಬ ಪ್ರಶ್ನೆಗೆ ನಮ್ಮಲ್ಲಿ ಹಲವು ಮಾದರಿಯ ವ್ಯಕ್ತಿತ್ವಗಳಿವೆ. ಸರಳವಾಗಿ ಬದುಕಬೇಕು. ಆಸೆಗಳಿಂದ ಮುಕ್ತವಾಗಬೇಕು. ಇನ್ನೊಬ್ಬರಿಗೆ ತೊಂದರೆ ಮಾಡದೆ, ಎಲ್ಲರನ್ನೂ ಸ್ವೀಕರಿಸುವ ಗುಣ ಹೊಂದಿರಬೇಕು. ದುಡಿದು ತಿನ್ನಬೇಕು, ಇರುವಷ್ಟರಲ್ಲೇ ತೃಪ್ತಿಪಡಬೇಕು. ತನ್ನ ಬದುಕನ್ನು ಮುಕ್ತವಾಗಿ ತೆರೆದಿಟ್ಟು, ತಾನು ಸಂಪೂರ್ಣ ಸ್ವಾರ್ಥವನ್ನು ಕಳಚಿ, ನಿಸ್ವಾರ್ಥಿಗಳಾದರೆ ಮಾತ್ರ ಆದರ್ಶ ವ್ಯಕ್ತಿಯಾಗಲು ಸಾಧ್ಯ. ಇಂತಹ ಆದರ್ಶ ವ್ಯಕ್ತಿಗಳು ಅಪರೂಪವಾಗಿ ಹುಟ್ಟುತ್ತಾರೆ. ಈ ಸಮಾಜದ ನಡುವೆಯೇ ಅಪರೂಪವಾಗಿ ಬದುಕುತ್ತಾರೆ.

ಕನ್ನಡ ನಾಡಿನಲ್ಲಿ ಪರಿಸರ ಕ್ಷೇತ್ರದ ಆದರ್ಶ ವ್ಯಕ್ತಿಗಳನ್ನು ಇಂದು ನಾವು ಹಸಿರು ಓದಿನೊಂದಿಗೆ ಅಧ್ಯಯನ ಮಾಡಬೇಕಿದೆ. ಪರಿಸರ ಎಂಬುದು ಸಹಜವಾದುದು. ಈ ಸಹಜ ಸಂಸ್ಕೃತಿಯೊಂದಿಗೆ ಸಹಕರಿಸಿದರೆ ಸಾಕು, ಪ್ರತಿಯೊಬ್ಬರೂ ಆದರ್ಶವ್ಯಕ್ತಿಗಳಾಗಬಹುದು. ಆದರೆ, ಇದರ ವಿರುದ್ಧವೇ ನಮ್ಮ ಅತಿ ಹೆಚ್ಚು ಕಾರ್ಯಗಳಿರುವಾಗ ಕೆಲವರಾದರೂ ಇದರ ಒಳಿತಿಗಾಗಿ ಶ್ರಮಿಸಿದ್ದಾರೆ, ಶ್ರಮಿಸುತ್ತಿದ್ದಾರೆ. ಬಾಲವನ ನಿರ್ಮಿಸಿ ಪರಿಸರ ಅಧ್ಯಯನದಲ್ಲಿ ವಿಭಿನ್ನವಾಗಿ ಪ್ರಕೃತಿ ಶಿಕ್ಷಣ ನೀಡಿದವರು ಶಿವರಾಮಕಾರಂತರು, ಪರಿಸರ ಛಾಯಾಚಿತ್ರ ಗ್ರಾಹಕ, ಪರಿಸರವಾದಿ ಡಾ. ಕೃಷ್ಣಾನಂದ ಕಾಮತರು, ಸಹ್ಯಾದ್ರಿಯ ಉಳಿವಿಗಾಗಿ ಹೋರಾಡಿದ ಪರಿಸರವಾದಿ ಕುಸುಮ ಸೊರಬ(ಕುಸುಮಕ್ಕ), ಇಕೋ–ವಾಚ್ ಎನ್.ಜಿ.ಒ ಸ್ಥಾಪಿಸಿದ ಚಿತ್ರ ನಿರ್ಮಾಪಕ, ನಿರ್ದೇಶಕ, ನಟರಾದ ಸುರೇಶ್ ಹೆಬ್ಳೀಕರ್, ಹಸಿರು ಹಾದಿ ಕರ್ತೃ ಪರಿಸರವಾದಿ ಡಾ. ಅ.ನ. ಯಲ್ಲಪ್ಪ ರೆಡ್ಡಿ ಇವರ ಸಾಲಿಗೆ ಸೇರುವ 114ವರ್ಷ ವಯಸ್ಸಿನ ಸಾಲುಮರದ ತಿಮ್ಮಕ್ಕ ಮೊದಲಾದಂತೆ ಇತ್ತೀಚೆಗೆ ಹಲವು ಆಯಾಮಗಳಲ್ಲಿ ಪರಿಸರ ಚಿಂತಕರನ್ನು ಗುರ್ತಿಸಬಹುದು. ನಮ್ಮ ನಡುವೆ ಚಂದ್ರಶೇಖರ ವಿ. ನಂಗಲಿ, ಕೃಪಾಕರ ಸೇನಾನಿ, ಕೃಷ್ಣಮೂರ್ತಿ ಬಿಳಿಗೆರೆಯಂತಹ ನುಡಿ, ನಡೆ, ಬದುಕನ್ನು ಏಕಮುಖವಾಗಿ ಪರಿಸರಕ್ಕೆ ಅರ್ಪಿಸಿಕೊಂಡವರನ್ನು ಗಮನಿಸಬಹುದು.

ಈ ಲೇಖನದಲ್ಲಿ ಸಾಲು ಮರದ ತಿಮ್ಮಕ್ಕನವರ ಕುರಿತು ಸಾವಿರಾರು ಬರಹಗಳ ನಡುವೆ ಮಾರ್ಗದರ್ಶಿಯಾಗಿ ಕಾಣುವ ವಿಭಿನ್ನ ಸ್ವರೂಪಗಳನ್ನು ಇಲ್ಲಿ ಚರ್ಚಿಸಲಾಗುವುದು. ಮಕ್ಕಳಿಲ್ಲದ ತಾಯಿ ಮರಗಳನ್ನೇ ಮಕ್ಕಳನ್ನಾಗಿ ಭಾವಿಸಿ ಮರಗಳನ್ನು ನೆಟ್ಟರು. ಇಂದು ಅವರ ಹೆಸರಿನಲ್ಲಿ ಎಂಟು ಸಾವಿರ ಮರಗಳು ಸೃಷ್ಟಿಗೊಂಡಿವೆ. ಇವರ ಹೆಸರಿನ ಮೂಲಕ ನೆಟ್ಟ ಗಿಡಗಳ ಸಂಖ್ಯೆ ಅದೆಷ್ಟೋ ಲೆಕ್ಕವಿಲ್ಲ. ನಮ್ಮಲ್ಲಿ ಆದರ್ಶಗಳನ್ನು ಸಾಲು ಸಾಲು ಪ್ರಶಸ್ತಿ, ಸನ್ಮಾನಗಳ ಮೂಲಕ ಶೃಂಗರಿಸುತ್ತಾರೆಯೇ ಹೊರೆತು, ಅವರ ಒಂದಿಷ್ಟು ಆದರ್ಶಗಳನ್ನು ತಮ್ಮ ಬದುಕಿನಲ್ಲಿ ಸ್ವೀಕರಿಸದ ಬಹುಮಂದಿಗಳನ್ನೇ ಈ ಸಮಾಜ ತುಂಬಿದೆ. ಇಂತಹ ಸಮಾಜದಲ್ಲಿ ಸರಳವಾಗಿ ಯಾವ ಯಾವ ಕಾರ್ಯಗಳನ್ನು ನಿರ್ವಹಿಸಬಹುದು ಎಂಬುದನ್ನೂ ಕೂಡ ಇಲ್ಲಿ ಚರ್ಚಿಸಬಹುದು.

ಚಿಕ್ಕ ತಿಮ್ಮಕ್ಕ ಎಂಬ ವ್ಯಕ್ತಿತ್ವವು ಸಾಲುಮರದ ತಿಮ್ಮಕ್ಕನಾಗುವ ಬಹು ಸುದೀರ್ಘವಾದ ಪ್ರಯಾಣವನ್ನು ಕೆಲವು ವಿಚಾರಗಳ ಮೂಲಕ ಅವಲೋಕಿಸಲು ಇಷ್ಟಪಡುತ್ತೇನೆ. 1930 ನವೆಂಬರ್ 17ರಂದು ಚಿಕ್ಕತಿಮ್ಮಕ್ಕ ಜನಿಸಿದ ದಿನಾಂಕವು

ದಾಖಲಾಗಿದೆ. ಚಿಕ್ಕರಂಗಯ್ಯ ಮತ್ತು ವಿಜಯಮ್ಮನ ಮಗುವಾಗಿ ಜನಿಸಿದ ಈಕೆಗೆ ಕಲ್ಪಿತ ಪುರಾಣದಂತಹ ಜನ್ಮವೃತ್ತಾಂತ ಬರೆಯಬಾರದು. ಅದೊಂದು ಬಡತನದಲ್ಲಿ ಅಂದಿನ ಸಮಾಜದ ಕೆಳಜಾತಿಯವರು ಅನುಭವಿಸಿದ ನೋವು, ದುಮ್ಮಾನಗಳ ಸಂಕಷ್ಟವೇ ಈಕೆಯ ಬಾಲ್ಯವನ್ನು ರೂಪಿಸಿದೆ. ಮುತ್ತುಗದ ಎಲೆ ಕೊಯ್ದು, ಗುಬ್ಬಿ ಪಟ್ಟಣಕ್ಕೆ ಹೊತ್ತು ತಂದು ಮಾರಾಟ ಮಾಡಿ ಅದರಿಂದ ಬದುಕಿದ ಕಥೆಯಾಗಲಿ, ಯಜಮಾನಿ ನರಸಮ್ಮನ ಕಾರುಣ್ಯದಲ್ಲಿ ಮನೆಗೆಲಸಮಾಡಿ ಬದುಕಿದ ಕಥೆಯಾಗಲಿ ನಿಜವಾದ ಅರ್ಥಗಳನ್ನು ಪಡೆದುಕೊಂಡಿವೆ. ಇಂತಹ ಕಷ್ಟಗಳನ್ನು ಆ ಕಾಲದ ಪ್ರತಿ ಬಡತನದ ಕುಟುಂಬವೂ ಅನುಭವಿಸಿದೆ. ಚಿಕ್ಕ ತಿಮ್ಮಕ್ಕ ಇಂತಹ ಬಾಳ್ವೆಗಳ ನಡುವೆ ಬದುಕಿದ ಜೀವವೆಂದು ಗೌರವಿಸಬಹುದು.

ಸಾಲು ಮರದ ತಿಮ್ಮಕ್ಕನ ಆದರ್ಶ ಕಾರ್ಯಗಳೇನು?

ಸಾಲು ಮರಗಳ ಪರಿಕಲ್ಪನೆಯು ಆಶೋಕನ ಕಾಲದಿಂದಲೂ ಪಠ್ಯವಾಗಿ ಮಕ್ಕಳಿಗೆ ಆದರ್ಶವಾಗಿದೆ. ಶಾಲೆಗೆ ಹೋಗದ ಜನಗಳಿಗೆ ಇದೊಂದು ಅನುಭವವಷ್ಟೆ. ತಿಮ್ಮಕ್ಕನ ಬಾಲ್ಯದಲ್ಲಿ ಸಾಮಾನ್ಯವಾಗಿ ಜನಗಳೆಲ್ಲಾ ನಡೆದೇ ಓಡಾಡುತ್ತಿದ್ದರು. ಸ್ವಲ್ಪ ಸ್ಥಿತಿವಂತರು ಎತ್ತಿನಗಾಡಿ ಬಳಸುತ್ತಿದ್ದರು. ಇವರೀರ್ವರ ನಡುವೆ ಅಂತಹ ವ್ಯತ್ಯಾಸವಿರಲಿಲ್ಲ. ರಸ್ತೆಯಲ್ಲಿ ಚಲಿಸುವಾಗ ತಮಗೆ ಸುಸ್ತಾದರೆ, ಬಿಸಿಲಿಗೆ ಸಾಲುಮರಗಳನ್ನು ನೆಡುವುದು, ಮಜ್ಜಿಗೆ, ನೀರು ಮೊದಲಾದಂತೆ ಅರವಟ್ಟಿಗೆ ಇಡುವುದು ಜನಗಳ ರೂಢಿಯಾಗಿತ್ತು. ದಾನಮಾಡುವುದು ಪುಣ್ಯದ ಕೆಲಸ. ಇನ್ನೊಬ್ಬರಿಗೆ ನೀಡಿದಷ್ಟು ಶಿವ ಮೆಚ್ಚುತ್ತಾನೆ ಎಂಬ ನಂಬಿಕೆಗಳು ಅವರನ್ನು ಭಾವನಾತ್ಮಕವಾಗಿ ಬೆಸೆದಿದ್ದವು. ಎಲ್ಲರೂ ತಿರುಗುವ ರಸ್ತೆಗಳ ಅಕ್ಕಪಕ್ಕ ಮರಗಳನ್ನು ನೆಡುವುದು, ನೆಟ್ಟು ಕಾಪಾಡುವುದು ಅತ್ಯಂತ ಜವಾಬ್ದಾರಿಯುತವಾದ ಕೆಲಸವಾಗಿತ್ತು. ಅಂದೂ ಕೂಡ ಇಂದಿನಂತೆಯೇ ಹಾಳುಮಾಡುವ ಇಲ್ಲವೆ ಪ್ರಾಣಿಗಳು ನಾಶಮಾಡುವ ಪ್ರಕ್ರಿಯೆ ಇತ್ತು. ಅದರ ನಡುವೆಯೇ ಕಾಪಾಡುತ್ತಾ ಇಂದಿಗೂ ಭಾರತದ ರಸ್ತೆಗಳ ಅಕ್ಕಪಕ್ಕ ಸಾಲು ಸಾಲು ಮರಗಳು ಅಲ್ಲಲ್ಲೇ ಇರುವುದನ್ನು ಕಾಣಬಹುದು.

ತಿಮ್ಮಕ್ಕನ ಜೀವನ ಚರಿತ್ರೆಯನ್ನು ಅವರಿಂದಲೇ ಕೇಳಿ ಬರೆದಿರುವ ದಾಖಲೆಯ ಪ್ರಕಾರ ಅವರು ಹುಟ್ಟಿದ್ದೆ ಆಲದ ಮರದಡಿಯಲ್ಲಿ. ಬದುಕಲ್ಲಿ ಮಕ್ಕಳೇ ಜನಿಸದ ಕಾರಣ, ಚಿಕ್ಕಯ್ಯ ಮತ್ತು ತಿಮ್ಮಕ್ಕನವರು ಕುದೂರು ರಸ್ತೆಯಲ್ಲಿ ಮರಗಳೇ ಇಲ್ಲದ ಕಾರಣ 1971ರ ಕಾಲದಲ್ಲಿ ಮೊದಲಿಗೆ ಹತ್ತು ಗುಣಿಗಳನ್ನು ತೋಡಿ ಆಲದ ಕೊಂಬೆಗಳನ್ನು ನೆಟ್ಟು, ನೀರೆರೆದು ಪ್ರಾರಂಭಿಸಿದ ಕಾರ್ಯವೇ ಹತ್ತಾರು ಎಂಬುದು

ನೂರಾರು ಆಗಿ ಸಾವಿರ ತಲುಪಿ ಇಂದು ಎಂಟು ಸಾವಿರದಷ್ಟು ದೊಡ್ಡ ಸಂಖ್ಯೆಯಲ್ಲಿ ಬೆಳೆದು ವಿಶ್ವಖ್ಯಾತಿ ಪಡೆದಿದೆ. 1993ರಲ್ಲಿಯೇ ಚಿಕ್ಕಯ್ಯ ತೀರಿಹೋಗದಿದ್ದರೆ ಇಂದು ಸಾಲು ಮರದ ತಿಮ್ಮಕ್ಕನ ಜಾಗದಲ್ಲಿ ಸಾಲು ಮರದ ತಿಮ್ಮಕ್ಕ ಚಿಕ್ಕಯ್ಯರು ಎಂಬ ಎರಡೂ ಹೆಸರು ಒಟ್ಟಿಗೆ ಸೇರುತ್ತಿದ್ದವು. ತನು ಶುದ್ಧವಾಗಿ ಮಾಡಿದ ಸತಿಪತಿಗಳ ಕಾರ್ಯವು ಅತ್ಯಂತ ಸಹಜವಾದುದಾದರೂ ಮನುಷ್ಯನ ಸ್ವಾರ್ಥ ಹಾಗೂ ಸೋಮಾರಿತನಗಳ ನಡುವೆ ಮಹತ್ ಕಾರ್ಯವೇ ಆಗಿ ಪದ್ಮಶ್ರೀ ಪಡೆಯಿತು.

ಇವರ ಕಾರ್ಯವನ್ನು ಮೊದಲಿಗೆ ಜಗತ್ತಿಗೆ ಪರಿಚಯಿಸಿದವರು ಕೆ.ವಿ ಸರ್ವೇಶ್ ಅವರ ಮೂಲಕ ಎಂ. ವಿ. ನೆಗಳೂರು ಅವರು. ಇವರು ಬರೆದ 'ಸಾಲು ಮರಗಳ ಸಂಗಾತಿ ತಿಮ್ಮಕ್ಕ' ಎಂಬ ಲೇಖನವು 1994 ಜೂನ್ 19ರಂದು ಪ್ರಜಾವಾಣಿಯಲ್ಲಿ ಪ್ರಕಟವಾಯಿತು.

ಸಾಲು ಮರಗಳನ್ನು ನೆಡುವ ಕಾರ್ಯದ ಹಿಂದಿರುವ ಗುಟ್ಟು

ಇಂದಿನ ಈ ಪ್ರಸಿದ್ಧಿ, ಶ್ರೇಷ್ಠತೆ, ಹೆಸರು, ಪ್ರಶಸ್ತಿ ಮೊದಲಾದ ಯಾವ ಕನಸುಗಳೂ ತಿಮ್ಮಕ್ಕ ಹಾಗೂ ಚಿಕ್ಕಯ್ಯ ಇವರಲ್ಲಿ ಇರಲಿಲ್ಲ. ಸಾಮಾನ್ಯವಾಗಿ ಆ ಕಾಲದಲ್ಲಿ ಇಂತಹ ಕಾರ್ಯಗಳನ್ನು ಸಾಕಷ್ಟು ಜನ ಮಾಡುತ್ತಿದ್ದರಾದರೂ ಮುಂದುವರೆಸುತ್ತಿರಲಿಲ್ಲ. ತಿಮ್ಮಕ್ಕ ಮತ್ತು ಚಿಕ್ಕಯ್ಯ ಇವರು ಒಮ್ಮತದಲ್ಲಿ ಮಕ್ಕಳಿಲ್ಲ ಎಂಬ ಬೇಸರವನ್ನು ಹೊಂದದೆ ಈ ಆಲೋಚನೆ ಮಾಡಿದರು. ನೆರಳಾಗುವ ಮರಗಳನ್ನು ನೆಟ್ಟು ಯಾವುದೇ ಸ್ವಾರ್ಥವಿಲ್ಲದೆ ಸಾರ್ವಜನಿಕ ಜಗತ್ತಿನಲ್ಲಿ ಸೇವೆ ಮಾಡುವ ಮನಸ್ಸು ಹೊಂದಿದ್ದೇ ಈ ಆದರ್ಶದ ಗುಟ್ಟು. ಸಾಕಷ್ಟು ಸವಾಲು, ಸಮಸ್ಯೆಗಳನ್ನು ಎದುರಿಸಿರಬಹುದು. ಆ ಸಮಸ್ಯೆಗಳೇ ಮುಖ್ಯವೆಂದು ಎಂದಿಗೂ ಅವರು ಭಾವಿಸಿರಲಾರರು. ಈ ದೃಷ್ಟಿಯಿಂದ ಚಿಕ್ಕಯ್ಯನೊಂದಿಗೆ ಪ್ರಾರಂಭಿಸಿದ ಸಾಲುಮರಗಳನ್ನು ನೆಡುವ ಪೋಷಿಸುವ ಕಾರ್ಯವು ಗಂಡನ ಮರಣದ ನಂತರವೂ ಮುಂದುವರೆದುದು ವಿಶೇಷ.

ಸಾಲು ಮರದ ತಿಮ್ಮಕ್ಕ ಅವರು ದಾಖಲಾದ ಕ್ಷೇತ್ರಗಳು

ಶಿಕ್ಷಣ ಕ್ಷೇತ್ರದಲ್ಲಿ ಸಾಲುಮರದ ತಿಮ್ಮಕ್ಕ ಪಠ್ಯವಾದರು. ಸಮಾಜ ಸೇವೆಯ ಪ್ರತಿ ಹಂತದಲ್ಲೂ ಮಾರ್ಗದರ್ಶಿಯಾದರು. ಅಮೇರಿಕಾದ ಸಂಯುಕ್ತ ಸಂಸ್ಥಾನಗಳಾದ ಲಾಸ್ ಏಂಜಲೀಸ್, ಓಕ್ ಲ್ಯಾಂಡ್, ಕ್ಯಾಲಿಫೋರ್ನಿಯಾಗಳಲ್ಲಿ ಪರಿಸರ ಶಿಕ್ಷಣದಲ್ಲಿ ಈಕೆಯ ಸೇವೆಯನ್ನು ಬಳಸಲಾಗಿದೆ. ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯು 2017–18ರಿಂದ ವೃಕ್ಷ ಉದ್ಯಾನ ಯೋಜನೆಯನ್ನು 'ಸಾಲು ಮರದ ತಿಮ್ಮಕ್ಕ ವೃಕ್ಷ

ಉದ್ಯಾನವನ' ಎಂದು ಮರುನಾಮಕರಣ ಮಾಡಿದೆ. ಈ ಯೋಜನೆಯಲ್ಲಿ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಸಾಲು ಮರಗಳು, ಉದ್ಯಾನವನಗಳನ್ನು ನೆಡುವ, ಕಾಪಾಡುವ ಯೋಜನೆಗಳನ್ನು ಒಳಗೊಂಡಿದೆ. ಸಾಲು ಮರದ ತಿಮ್ಮಕ್ಕ ಟ್ರಸ್ಟ್ ರಚನೆಯಾಗಿದೆ. 2018ರಲ್ಲಿ ಸಾಲು ಮರದ ತಿಮ್ಮಕ್ಕನ ಬದುಕನ್ನು ಕೇಂದ್ರೀಕರಿಸಿ ರಂಗರೂಪದಲ್ಲಿ ನಾಟಕ ಪ್ರದರ್ಶನ ಮಾಡಲಾಯಿತು. ಡಾ. ಬೇಲೂರು ರಘುನಂದನ ಅವರು ಈ ನಾಟಕ ರಚಿಸಿದ್ದು, ಹನುರಾಮ ಸಂಜೀವ ಅವರು ನಿರ್ದೇಶನ ಮಾಡಿದ್ದರು. ಪ್ರವರ ಆರ್ಟ್ ಸ್ಟೂಡಿಯೋದಲ್ಲಿ ಈ ನಾಟಕ ಆಯೋಜಿಸಿದ್ದರು. ಕಾರ್ಯಕ್ರಮಕ್ಕೆ ಸಾಲುಮರದ ತಿಮ್ಮಕ್ಕನವರೇ ಬಂದು, ನಾಟಕ ನೋಡಲು ಬಂದ ಎಲ್ಲಾ ಆಸಕ್ತರಿಗೆ ಒಂದೊಂದು ಸಸಿ ನೀಡಿ ಗೌರವಿಸಿದ್ದರು.

ಸರ್ಕಾರ ಮತ್ತು ಸಾಲುಮರದ ತಿಮ್ಮಕ್ಕ

ಕರ್ನಾಟಕ ಸರ್ಕಾರ ಮಾತ್ರವಲ್ಲದೆ, ಭಾರತ ಹಾಗೂ ವಿಶ್ವದ ಹಲವು ದೇಶಗಳು ಸಾಲು ಮರದ ತಿಮ್ಮಕ್ಕನ ಕುರಿತು ಗೌರವ ಹೊಂದಿ, ಇವರ ಆದರ್ಶದಲ್ಲಿ ಪ್ರಕೃತಿ ಉಳಿಸುವ, ಹಸಿರು ಹೆಚ್ಚಿಸುವ, ಮರಗಳನ್ನು ನೆಟ್ಟು ಕಾಡು ನಿರ್ಮಿಸುವ ಹಲವು ಯೋಜನೆ ನಿರ್ಮಿಸಿವೆ. ಅದರ ಫಲವಾಗಿ ಸಾವಿರಾರು ಗೌರವಗಳು ಇವರಿಗೆ ಲಭಿಸಿವೆ. ಕೆಲವು ಮುಖ್ಯವಾದ ಗೌರವಗಳ ಉಲ್ಲೇಖವಿದು.

ರಾಷ್ಟ್ರೀಯ ಪೌರ ಪ್ರಶಸ್ತಿ – 1995, ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ – 1997, ವೀರಚಕ್ರ ಪ್ರಶಸ್ತಿ – 1997, ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ – ಇವರಿಂದ ಮಾನ್ಯತೆಯ ಪ್ರಮಾಣ ಪತ್ರ, ಭಾರತೀಯ ವೃಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು – ಇವರಿಂದ ಶ್ಲಾಘನೆಯ ಪ್ರಮಾಣ ಪತ್ರ. ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ – 2000, ಗಾಡ್‌ಫ್ರಿ ಫಿಲಿಪ್ಸ್ ಧೀರತೆ ಪ್ರಶಸ್ತಿ – 2006, ಪಂಪಾಪತಿ ಪರಿಸರ ಪ್ರಶಸ್ತಿ, ಬಾಬಾಸಾಹೇಬ್ ಅಂಬೇಡ್ಕರ್ ಪ್ರಶಸ್ತಿ, ವನಮಾತೆ ಪ್ರಶಸ್ತಿ, ಮಾಗಡಿ ವ್ಯಕ್ತಿ ಪ್ರಶಸ್ತಿ, ಶ್ರೀಮಾತಾ ಪ್ರಶಸ್ತಿ, ಎಚ್.ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿ, ಕರ್ನಾಟಕ ಪರಿಸರ ಪ್ರಶಸ್ತಿ, ಮಹಿಳಾರತ್ನ ಪ್ರಶಸ್ತಿ, ನ್ಯಾಷನಲ್ ಸಿಟಿಜನ್ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ವಿಶ್ವಾತ್ಮ ಪುರಸ್ಕಾರ 2015, ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ವಿಶಾಲಾಕ್ಷಿ ಪ್ರಶಸ್ತಿ., 2010ರ ಸಾಲಿನ ಪ್ರತಿಷ್ಠಿತ 'ನಾಡೋಜ' ಪ್ರಶಸ್ತಿ ಲಭಿಸಿದೆ. 2019ರ ಗಣರಾಜ್ಯೋತ್ಸವ ಸಂದರ್ಭದಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. 2020ರಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಲಭಿಸಿದೆ. ಸಾಲು ಮರದ ತಿಮ್ಮಕ್ಕ ಟ್ರಸ್ಟ್

ಮೂಲಕ ನೂರಾರು ಮರಗಳನ್ನು ನೆಡುವ, ಪೋಷಿಸುವ ಕಾರ್ಯ ನಡೆಯುತ್ತಿದೆ. ಹೀಗೆ ನೂರಾರು ಗೌರವಗಳು, ಸನ್ಮಾನಗಳು ಲಭಿಸಿವೆ. ಕೆಲವರು ಇವರ ಸಲಹೆ ಹಾಗೂ ಸೇವೆಯನ್ನು ಆದರ್ಶವಾಗಿ ಸ್ವೀಕರಿಸಿ, ಸಾವಿರಾರು ಮರಗಳನ್ನು ನೆಟ್ಟಿದ್ದಾರೆ. ಇಂದಿಗೂ ಮುಂದುವರೆಸುತ್ತಿದ್ದಾರೆ.

ಮರಗಳು ಮತ್ತು ಅರಣ್ಯ – ಈ ವಿಚಾರದಲ್ಲಿ ನಾವೇನು ಮಾಡಬಹುದು?

ಸಾಲು ಮರದ ತಿಮ್ಮಕ್ಕ ಹಾಗೂ ಚಿಕ್ಕಯ್ಯನವರ ಸೇವೆಯು ಅತ್ಯಂತ ಪ್ರಾಮಾಣಿಕವಾದುದು. ಸರ್ಕಾರಗಳು ಇವರ ಸೇವೆಯನ್ನು ಗೌರವಿಸಿದೆ. ಆದರೆ, ಶತಾಯುಷಿಯಾದ ತಿಮ್ಮಕ್ಕನವರು ತಮ್ಮ ಸಾಕುಮಗನ ಮೂಲಕ ಅದನ್ನು ಮುಂದುವರೆಸುತ್ತಿರುವುದು ಕೂಡ ಅತ್ಯಂತ ಹರ್ಷನೀಯವಾಗಿದೆ. ಆದರೆ, ಇದು ರಾಜ್ಯವನ್ನು ವಿಸ್ತರಿಸಲು ಸಾಧ್ಯವಿಲ್ಲ. ದೇಶ ಹಾಗೂ ಈ ಭೂಮಂಡಲವನ್ನು ವ್ಯಾಪಿಸಲು ಕಷ್ಟಕರ. ಈ ಭೂಮಿಯು ತನ್ನದೇ ರಚನೆಯಲ್ಲಿ ಸ್ವಾಭಾವಿಕವಾಗಿ ಸ್ವರೂಪಗೊಂಡಿದೆ. ಹಸಿರು ಬೆಳೆದಷ್ಟೂ ತಾಪಮಾನವು ಸಮತೋಲನವಾಗುತ್ತದೆ. ಭೂಮಿಗಿಂತ ಅಧಿಕವಾಗಿರುವ ನೀರನ್ನು ಸರಿಯಾಗಿ ನಿರ್ವಹಿಸುವ ಕಾರ್ಯವನ್ನು ಗಿಡ, ಮರಗಳು ಮಾತ್ರ ನಿರ್ವಹಿಸಲು ಸಾಧ್ಯ. ಇಂದು ಮೂರ್ಖರಾದ ನಾವು ಸ್ವಾರ್ಥಕ್ಕೆ ಸಿಲುಕಿ ಕಾಂಕ್ರಿಟ್ ಕಾಡನ್ನು ನಿರ್ಮಿಸಿದ್ದೇವೆ. ಬಯಲನ್ನು ನುಂಗಿದ ನಗರಗಳು ಸಂಪೂರ್ಣ ಕಟ್ಟಡಗಳಿಂದ ಶೋಭಿಸುತ್ತಿವೆ. ಅರಣ್ಯ ಸಂರಕ್ಷಣೆಯು ಫಲಕದ ನುಡಿಯಾಗಿದೆ. ಹಾಗಾದರೆ ಸೃಷ್ಟಿಸುವವರು, ಕಾಪಾಡುವವರು ಯಾರು? ಇಂತಹ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕಿದೆ.

ಏನೂ ಇಲ್ಲದ ಎರಡು ಬಡ ಜೀವಗಳು ವಿಶ್ವ ನೋಡುವ ಶ್ರೇಷ್ಠ ಕಾರ್ಯವನ್ನು ಮಾಡಿದ್ದಾರೆ ಎಂದ ಮೇಲೆ ತಿನ್ನಲು ಅನ್ನ, ಕೈತುಂಬಾ ಕೆಲಸ ಇರುವ ಜೀವಿಗಳಾದ ನಮ್ಮ ಕೊಡುಗೆಯೇನು? ಆಲೋಚಿಸಬೇಕಿದೆ. ಸದ್ಯ ಭಾರತವು ಜನಸಂಖ್ಯೆಯಲ್ಲಿ ಪ್ರಪಂಚದಲ್ಲಿಯೇ ಮೊದಲ ಸ್ಥಾನ ಪಡೆದಿದೆ. ಪ್ರತಿ ಮನುಷ್ಯನು ಒಂದೊಂದು ಗಿಡ ನೆಡುವ, ಪೋಷಿಸುವ, ಕಾಪಾಡುವ ಹೊಣೆ ಹೊತ್ತರೆ ಒಂದು ಬಿಲಿಯನ್‌ಗಿಂತ ಹೆಚ್ಚು ಮರಗಳು ಸೃಷ್ಟಿಯಾಗುತ್ತವೆ. ಇರುವವರು ನೆಟ್ಟು ಸತ್ತವರ ಗಿಡಗಳನ್ನು ಕಾಪಾಡಿದರೆ, ಹಾಳಾಗುವ ಗಿಡಗಳನ್ನು ಪೋಷಿಸಬಹುದು. ಭಾರತವೇ ಪ್ರಪಂಚಕ್ಕೆ ಮಾರ್ಗದರ್ಶಿಯಾಗುತ್ತದೆ. ಈ ಭೂಮಿಯಲ್ಲಿ ಅತ್ಯಂತ ತುರ್ತಾದ ಕಾರ್ಯವೆಂದರೆ ಪ್ರಕೃತಿಯನ್ನು ಕಾಪಾಡುವುದು. ಪ್ರಕೃತಿಯು ಸಹಜತೆಯಲ್ಲಿ

ಇರುವುದಾದರೆ, ಅಲ್ಲಿನ ಹಸಿರು, ನೀರು, ಶುದ್ಧಗಾಳಿಯ ರಚನೆಯೇ ಮೊದಲ ಆಧ್ಯತೆ. ಇದಕ್ಕೆ ಸಾಲು ಮರದ ತಿಮ್ಮಕ್ಕನಂತಹ ವ್ಯಕ್ತಿತ್ವಗಳು ನಮಗೆಲ್ಲಾ ನಿತ್ಯ ಸ್ಫೂರ್ತಿ. ಪ್ರಕೃತಿಯನ್ನ ಉಳಿಸಲು ಸರ್ಕಾರವನ್ನು ಕಾಯುವುದು ಮೂರ್ಖತನ. ಬಳಸುವ ನಾವು, ಬಳಸಿದಂತೆ ಉಳಿಸುತ್ತಾ ಸಾಗಿದರೆ, ಅದುವೆ ಅರ್ಥಪೂರ್ಣ ಕಾರ್ಯವಾಗುತ್ತದೆ.

(ಸಾಂದರ್ಭಿಕ ಮರು ಪ್ರಕಟ ಲೇಖನ)

ಅಧ್ಯಯನ ಕೃತಿಗಳು :

1. ಪರಿಸರಮಾತೆ ಸಾಲುಮರದ ತಿಮ್ಮಕ್ಕ – ನೆಲ್ಲಿಕಟ್ಟೆ ಎಸ್. ಸಿದ್ದೇಶ್
2. ಸಾಲು ಮರದ ತಿಮ್ಮಕ್ಕ – ಕೆ.ಎನ್ ಪ್ರಮೀಳಾ ಪಾಲನೇತ್ರ
3. ಸಂವಾದಿನಿ – ಗಿರಿಜಾ ಎಸ್. ದೇಶಪಾಂಡೆ
4. ಪರಿಸರ ವಿಜ್ಞಾನ – ಹೆಚ್. ಆರ್. ಕೃಷ್ಣಮೂರ್ತಿ
5. ಬೇರು ತೋರಿದ ಹಾದಿ – ಡಾ. ಕುಮಾರ ಚಲ್ಯ

***

ನೇಮಿಚಂದ್ರರ ಕತೆಗಳಲ್ಲಿ ಮಹಿಳೆ ಮತ್ತು ಸ್ವಾವಲಂಬನೆ

1

ಡಾ. ಬಸಯ್ಯ ಸ್ವಾಮಿ

ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಜೈನ್ ವಿಶ್ವವಿದ್ಯಾಲಯ ಬೆಂಗಳೂರು
bassayya.s@jainuniversity.ac.in

ಆರ್ಥಿಕ ಸ್ವಾತಂತ್ರ್ಯವಿದ್ದರೆ ಬೇರೆಲ್ಲಾ ಸ್ವಾತಂತ್ರ್ಯಗಳು ಸಿಕ್ಕಿದಂತೆ ಎನ್ನುವ ಗಾದೆಯೊಂದಿದೆ. ಆರ್ಥಿಕ ಸ್ವಾತಂತ್ರ್ಯವು ಸಿಗಬೇಕಾದರೆ ದುಡಿಮೆಯ ಪಾತ್ರ ದೊಡ್ಡದು. ಪ್ರಾಚೀನ ಕಾಲದಿಂದಲೂ ಮಹಿಳೆಯು ಪುರುಷನ ಅಧೀನದಲ್ಲಿ ಬದುಕುತ್ತಿರುವುದಕ್ಕೆ ಆಕೆಯಿಂದ ಕಿತ್ತುಕೊಂಡಿರುವ ಆರ್ಥಿಕ ಸ್ವಾತಂತ್ರ್ಯವೂ ಪ್ರಮುಖ ಕಾರಣ. ಮಹಿಳೆಯು ಹುಟ್ಟಿನಿಂದ ಕೊನೆವರೆಗೂ ಗಂಡಸಿನ ಅಧೀನದಲ್ಲಿ ಬದುಕಬೇಕೆಂಬ ಯುಗವು ಮುಗಿದು. ಈಗ ಮಹಿಳೆಯು ಸ್ವಾತಂತ್ರ್ಯಯುತ ಬದುಕನ್ನು ಬದುಕಲು ಬಯಸುತ್ತಿದ್ದಾಳೆ. ಮತ್ತು ಅಂತೆಯೇ ಬದುಕುತ್ತಿದ್ದಾಳೆ. ಬದುಕಿನ ಎಲ್ಲಾ ನೆಲೆಗಳಲ್ಲಿಯೂ ತಾನು ಒಂಟಿಯಾಗಿ ಬದುಕಬಲ್ಲೆನೆಂಬ ಆತ್ಮವಿಶ್ವಾಸವನ್ನು ಮಹಿಳೆ ಹೊಂದಿದ್ದಾಳೆ ಮತ್ತು ಆ ನಿಟ್ಟಿನಲ್ಲಿ ಬದುಕುತ್ತಿದ್ದಾಳೆ ಕೂಡ. ಪ್ರಸ್ತುತ ಲೇಖನವು ಕೂಡ ಈ ನಿಟ್ಟಿನಲ್ಲಿ ಆಧುನಿಕ ಮಹಿಳೆಯರ ಸ್ವಾವಲಂಬನೆ ಕುರಿತು ಮಾತನಾಡುತ್ತದೆ.

ಇದಕ್ಕಾಗಿ ಕನ್ನಡದ ಪ್ರಮುಖ ಲೇಖಕಿಯಾದ ನೇಮಿಚಂದ್ರ ಅವರ ಅಯ್ದ ಕತೆಗಳ ಮೂಲಕ ಚರ್ಚಿಸಲು ಪ್ರಯತ್ನಿಸಲಾಗಿದೆ.

ಉದ್ಯೋಗವು ಪುರುಷರ ಲಕ್ಷಣ ಎಂಬ ಮಾತೊಂದು ನಮ್ಮಲ್ಲಿ ಜನಜನಿತವಾಗಿದೆ. ಅದರ ಅರ್ಥವು ಪುರುಷರ ಪರವಾಗಿಯೇ ಇದೆ ಎಂಬುದು ಎಂತಹವರಿಗೂ ತಿಳಿಯುತ್ತದೆ. ಆದ್ದರಿಂದ ಹೆಣ್ಣು ದುಡಿಯುವುದಾಗಲೀ, ತನ್ನ ಕಾಲ ಮೇಲೆ ತಾನು ಸ್ವಂತ ನಿಲ್ಲುವುದಾಗಲೀ ಮಾಡಿದರೆ ಅದನ್ನು ಪುರುಷ ಸಮಾಜವು ಮುಕ್ತ ಮನಸ್ಸಿನಿಂದ ಸ್ವೀಕರಿಸುವುದು ಕಷ್ಟ ಎಂಬಂತಹ ಬಡತನ ಸ್ಥಿತಿಯಿದ್ದಗಲೂ ಹೆಣ್ಣನ್ನು ದುಡಿಯಲು ಕಳಿಸಲು ಒಪ್ಪದ ಮನಸ್ಥಿತಿಗಳು ಇಂದಿಗೂ ಇವೆ. ಹೆಣ್ಣನ್ನು ದುಡಿಯಲು ಕಳಿಸಿದರೆ ತಮ್ಮ ಪುರುಷತ್ವಕ್ಕೆ ಅವಮಾನ ಎಂಬ ಮನಸ್ಥಿತಿಯ ಜೊತೆಗೆ ಹೆಣ್ಣು ಆರ್ಥಿಕವಾಗಿ ಮುಂದುವರೆಯುವುದು ಸಹ ಇಲ್ಲಿ ಒಪ್ಪದ ವಿಚಾರ. ಇದರ ಇನ್ನೊಂದು ಮುಖವೆಂದರೆ ಹೆಣ್ಣು ದುಡಿದರೂ ಕೂಡ ಅದರಿಂದ ಬಂದ ಆದಾಯದ ಮೇಲಿನ ಅಧಿಕಾರವು ಬಹುಪಾಲು ಹೆಣ್ಣಿಗೆ ದಕ್ಕುವುದಿಲ್ಲ. ಉದ್ಯೋಗ ಸಹಿತ ಜೀವನವನ್ನು ಹೊಂದುವ ಮಹಿಳೆಯರಿಗೆ, ಪುರುಷನಿಗೆ ಎದುರಾಗುವ ಸಮಸ್ಯೆಗಳಿಗಿಂತ ಭಿನ್ನವಾದ ಸಮಸ್ಯೆಗಳು ಎದುರಾಗುತ್ತವೆ. ಜೊತೆಗೆ ಈ ಉದ್ಯೋಗದ ವ್ಯವಸ್ಥೆಯಲ್ಲಿ ಗಂಡು ಮಕ್ಕಳಿಗೆ ಹೊರತಾದ ತಾಯ್ತನದ ಜವಾಬ್ದಾರಿಗಳು, ಮಕ್ಕಳ ಲಾಲನೆ ಪಾಲನೆ ಮುಂತಾದ ಜವಾಬ್ದಾರಿಗಳಿಂದ ಮಹಿಳೆಯರಿಗೆ ವಿನಾಯಿತಿ ಇರುವುದಿಲ್ಲ. ದಿನವಿಡೀ ಮಾಡಿದರೂ ಮುಗಿಯದಂತಹ ಮನೆಯ ಕೆಲಸಗಳಾದ ಅಡುಗೆ ಮಾಡುವ, ಬಟ್ಟೆ ಒಗೆಯುವ, ಮನೆಯನ್ನು ಸ್ವಚ್ಛಗೊಳಿಸುವ ಜವಾಬ್ದಾರಿಯು ಮಹಿಳೆಯ ಪಾಲಿಗಿರುತ್ತದೆ. ಒಂದು ಕಡೆ ಕುಟುಂಬದ ಜವಾಬ್ದಾರಿಗಳು, ಮತ್ತೊಂದು ಕಡೆ ಕೆಲಸ ಮಾಡುವ ಜಾಗದ ನಿರೀಕ್ಷೆಗಳು ಈ ಎರಡರ ಮಧ್ಯೆ ಹೆಣ್ಣು ಒದ್ದಾಡಬೇಕಾಗುತ್ತದೆ. ಎರಡೂ ಕಡೆ ಸಮತೋಲನ ಕಾಯ್ದುಕೊಂಡು ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಒಂದು ಕಡೆ ಜಾಸ್ತಿ ಮತ್ತೊಂದು ಕಡಿಮೆ ಆದರೂ, ಆ ಕಡಿಮೆಯಾದುದರ ಕಡೆಯಿಂದ ತಿರಸ್ಕಾರಕ್ಕೆ ಒಳಗಾಗಬೇಕಾಗುತ್ತದೆ. ಪರಿಸ್ಥಿತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಲೇ ಹೆಣ್ಣು ಮುಂದುವರೆಯಬೇಕಾಗುತ್ತದೆ.

ಹೆಣ್ಣು ಮತ್ತು ಗಂಡು ಇಬ್ಬರ ದೈಹಿಕ ಪರಿಸರಗಳು ಭಿನ್ನ, ಹಾಗಾಗಿ ಅವರು ಮಾಡುವಂತಹ ಕೆಲಸಗಳೂ ಸಹ ಕೆಲವೊಮ್ಮೆ ಭಿನ್ನತೆಯಿಂದ ಕೂಡಿರುತ್ತವೆ. ಈ ಭಿನ್ನತೆಯನ್ನೇ ಮುಂದು ಮಾಡಿಕೊಂಡು ಹೆಣ್ಣು ಮಾಡುವ ಕೆಲಸಗಳು ಗಂಡಿಗಿಂತ ಕಡಿಮೆ ಮಹತ್ವದವು ಎಂದು ಭಾವಿಸಲಾಗುತ್ತದೆ. ಅಲ್ಲದೆ ಹೆಣ್ಣು ಗಂಡಿನಷ್ಟೇ ಕೆಲಸವನ್ನು

ಅಥವಾ ಗಂಡು ಮಾಡುವ ಕೆಲಸವನ್ನೇ ನಿರ್ವಹಿಸಿದರೂ ಕೂಡ ಆಕೆಗೆ ಗಂಡಿಗಿಂತ ಕಡಿಮೆ ಕೂಲಿಯನ್ನು ನೀಡಲಾಗುತ್ತದೆ. ಹೆಂಗಸಿನ ದುಡಿಮೆಯನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು. ಒಂದು ಮನೆ ಒಳಗಿನ ದುಡಿಮೆ ಮತ್ತೊಂದು ಮನೆ ಹೊರಗಿನ ದುಡಿಮೆ: ಮನೆ ಒಳಗಿನ ದುಡಿಮೆಯನ್ನು ಸೇವೆ ಎಂತಲೋ ಕರ್ತವ್ಯ ಎಂತಲೋ ಕರೆದು ಅದಕ್ಕೆ ಪ್ರತಿಫಲವನ್ನು ನಿರಾಕರಿಸಲಾಗುತ್ತದೆ. ಈ ಮೂಲಕ ಸಂಪಾದನೆಯಿಂದ ಅವಳನ್ನು ದೂರವಿಡಲಾಗುತ್ತದೆ. ಈ ರೀತಿಯಾಗಿ ಪ್ರತಿಫಲದ ಯಾವ ನಿರೀಕ್ಷೆಯೂ ಇಲ್ಲದೆ ಬದುಕಬೇಕಾದ್ದೆ ಹೆಣ್ಣಿನ ಜೀವನಕ್ರಮ ಎಂದು ಭಾವಿಸಿ, ಇದನ್ನು ಬಿಟ್ಟು ಆಕೆಯು ಹೊಂದುವ ಆಕಾಂಕ್ಷೆಗಳನ್ನು ಆಕೆಯಿಂದ ದೂರವಿರುವಂತೆ ನೋಡಿಕೊಳ್ಳಲಾಗುತ್ತದೆ. ಒಂದುವೇಳೆ ಹೆಣ್ಣು ಮನೆಯಿಂದಹೊರಗೆ ದುಡಿಯಬೇಕಾದ ಸ್ಥಿತಿಗೆ ಬಂದಾಗ ಆಕೆ ಎಂತಹ ಉದ್ಯೋಗಗಳನ್ನು ಆಯ್ದುಕೊಳ್ಳಬೇಕು ಎಂಬುದನ್ನು ಬಹುಪಾಲು ಕುಟುಂಬವೇ ಚರ್ಚಿಸುತ್ತದೆ ಮತ್ತು ನಿರ್ಧರಿಸುತ್ತದೆ. ಎಷ್ಟೋ ಸಮಯದಲ್ಲಿ ಮನೆಯ ಹೊರಗಡೆ ದುಡಿಯುವ ಹೆಣ್ಣಿನ ಸಂಪಾದನೆಯನ್ನು 'ಪೂರಕ' ಆದಾಯ ಗಳಿಕೆ ಎಂಬ ದೃಷ್ಟಿಕೋನದಲ್ಲಿಯೇ ನೋಡಲಾಗುತ್ತದೆ. ಒಂದು ವೇಳೆ ಹೆಣ್ಣು ತಾಯಿಯಾಗಿದ್ದರಂತೂ ಆಕೆಯ ಉದ್ಯೋಗದ ಜೀವನ ಬಹಳ ಕಷ್ಟಮಯವಾದುದು ಆಗುತ್ತದೆ. ಇತ್ತ ಮಗುವನ್ನು ಸಾಕಬೇಕಾದ ಅನಿವಾರ್ಯತೆ. ಅತ್ತ ಕೆಲಸ ಮಾಡಬೇಕಾದ ಒತ್ತಡ ಇವೆರೆಡು ಹೆಣ್ಣನ್ನು ಇನ್ನೂ ಮಾನಸಿಕವಾಗಿ ಜರ್ಜರಿತವಾಗುವಂತೆ ಮಾಡುತ್ತವೆ.

ಆರ್ಥಿಕ ಸಬಲತೆ ಎನ್ನುವುದು ತಾಯ್ತನಕ್ಕೆ ಒಂದು ನೆಮ್ಮದಿಯನ್ನೂ ಸಹ ತಂದುಕೊಡಬಲ್ಲದು. ಅದಕ್ಕೆ ಉದಾಹರಣೆಯಾಗಿ ಒಂದು ಕತೆಯನ್ನು ನೋಡಬಹುದು. ಇಲ್ಲಿ ಉದ್ಯೋಗ ಇಲ್ಲದ ಮಹಿಳೆ ತನ್ನ ತಾಯ್ತನವನ್ನು ಹೇಗೆ ನಿಭಾಯಿಸಿದಳು ಮತ್ತು ಉದ್ಯೋಗ ಹೊಂದಿದಾಗ ಅದು ಯಾವ ರೀತಿ ಬದಲಾಯಿಸಲ್ಪಟ್ಟಿತು ಎಂಬುದನ್ನು ನೋಡಬಹುದು. ಕತೆಯ ಹೆಸರು 'ಕಪ್ಪು ಮೋಡ ಬೆಳ್ಳಿ ಅಂಚು'. ಈ ಕತೆಯಲ್ಲಿ ಗಂಡನಿಂದ ತಿರಸ್ಕೃತಳಾದ ಹೆಣ್ಣು ಹೇಗೆ ತನ್ನ ಬದುಕನ್ನು ಕಟ್ಟಿಕೊಂಡಳು ಎನ್ನುವುದು ತೋರಿಸಲಾಗಿದೆ. ತನ್ನ ಮಗಳಿಗಾಗಿ, ತನ್ನ ಮಗಳ ಆಸೆಗಳನ್ನು ಪೂರೈಸುವ ಸಲುವಾಗಿ ತಾಯಿಯೊಬ್ಬಳು ವೃತ್ತಿಪರಳಾಗಿ ಬದಲಾಗುವ ಕಥಾವಸ್ತು ಇಲ್ಲಿದೆ.

ಮಧು ಈ ಕತೆಯ ಮುಖ್ಯ ಪಾತ್ರ ಶೀಲ ಮಧುವಿನ ಪೋಷಕ ಪಾತ್ರ. ಮಧುವಿನ ಗಂಡ ರವಿ. ಈತ ಬೇರೆಯ ಹೆಂಗಸಲ್ಲಿ ಆಸಕ್ತಿಯನ್ನು ಹೊಂದಿ. ಮಧುವಿಗೆ ವಿಚ್ಛೇಧನ ಕೊಡುತ್ತಾನೆ. "ನಿನ್ನ ಮತ್ತು ಪುಟ್ಟಿಯ ಖರ್ಚುವೆಚ್ಚ ಆಮೇಲೂ ನಾನು ವಹಿಸ್ತೀನಿ. ನೀನು ಅದರ ಚಿಂತೆ ಮಾಡಬೇಡ"(ಕಪ್ಪು ಮೋಡ ಬೆಳ್ಳಿ ಅಂಚು, ಪುಟ

224) ಇದು ರವಿ ಮಧುವಿಗೆ ನೀಡಿದ ಆಶ್ವಾಸನೆ. ಎಷ್ಟು ಸುಲಭವಾಗಿ ಒಬ್ಬ ಗಂಡಸು ತಂದೆತನದ ಜವಾಬ್ದಾರಿಗಳಿಂದ ಜಾರಿಕೊಂಡು, ಕೇವಲ ಆರ್ಥಿಕವನ್ನು ಹೆಗಲಿಗೆ ಹೇರಿಕೊಂಡು ನಡೆಯುತ್ತಾನೋ, ಅಷ್ಟೇ ಸುಲಭವಾಗಿ ಒಬ್ಬ ತಾಯಿ ನಡೆಯಲಾರಳು. ಆತನ ನಿರ್ಧಾರದಿಂದ ಮಧು ಕದಡಿ ಹೋಗುತ್ತಾಳೆ. ಈಕೆ ಸಂಪೂರ್ಣ ಅವಲಂಬಿತ ಹೆಣ್ಣು, ಗಂಡನಿಗೆ ನಿಷ್ಠ ಸತಿಯಾಗಿ ಬಾಳಿದಾಕೆ. ಯಾವ ಜವಾಬ್ದಾರಿಯ ಉಸಾಬರಿಯನ್ನೂ ಬಯಸದೇ ಕೇವಲ ಮನೆಗೆ ಸೀಮಿತವಾದ ಹೆಣ್ಣು ಗಂಡನ ನಿರ್ಧಾರದಿಂದ ಸಾಯುವ ಯತ್ನ ಮಾಡುತ್ತಾಳೆ. ವೈದ್ಯಳಾದ ಶೀಲಾಳ ಪ್ರಯತ್ನದಿಂದ ಹೊಸಜೀವನ ಪಡೆಯುತ್ತಾಳೆ. ಗಂಡನ ತೆರವಿನ ನಂತರ ಈಕೆಯ ಬದುಕು ಅತಂತ್ರವಾಗುತ್ತದೆ. ತನ್ನ ಮಗಳಿಗೆ ಐಸ್‌ಕ್ರೀಮ್ ಕೊಡಿಸಲು ಕೂಡ ಈಕೆ ಅಶಕ್ತಳಾಗುತ್ತಾಳೆ. ಆಕೆಯ ಶಾಲಾ ಫೀ ಕಟ್ಟಲೂ ಈಕೆಯ ಬಳಿ ಹಣವಿರುವುದಿಲ್ಲ. ಮಗಳ ಸಣ್ಣ ಸಣ್ಣ ಬಯಕೆಗಳನ್ನೂ ಈಡೇರಿಸದ ತನ್ನ ಸ್ಥಿತಿಯ ಬಗ್ಗೆ ಆಕೆಗೆ ಹೇಸಿಕೆಯಾಗುತ್ತದೆ. ಮಗಳ ಜನ್ಮದಿನದಂದು ಮಗಳಿಗೆ ಇಷ್ಟವಾದ ಬಟ್ಟೆ ಕೊಡಿಸಲೂ ಕೂಡ ನೂರಾರು ಬಾರಿ ಯೋಚನೆ ಮಾಡುವ ಸ್ಥಿತಿ ಬರುತ್ತದೆ. ಇದೆಲ್ಲದರಿಂದ ರೋಸಿದ ಆಕೆ ಮಗಳಿಗಾಗಿ ಸ್ವಾವಲಂಬಿಯಾಗಲು ನಿಶ್ಚಯಿಸುತ್ತಾಳೆ. ತಾನೇ ದುಡಿಯಲು ನಿರ್ಧರಿಸುತ್ತಾಳೆ. ಈ ದುಡಿತದಿಂದ ಬರುವ ಹಣವು "ಪುಟ್ಟಿಯ ಭವಿಷ್ಯವನ್ನು ಕೊಡಬಲ್ಲುದು. ನನ್ನ ನಾಳೆಗಳನ್ನು ಕೊಡಬಲ್ಲದು, ನನ್ನ ಕಳೆದುಕೊಂಡ ಆತ್ಮ ವಿಶ್ವಾಸವನ್ನು ಕೊಡಬಲ್ಲದು"(ಕಪ್ಪು ಮೋಡ ಬೆಳ್ಳಿ ಅಂಚು, ಪುಟ 238) ಎಂದು ಯೋಚಿಸುತ್ತಾಳೆ. ಅಂತೆಯೇ ಸ್ವಂತ ದುಡಿದು ತಾನು ಸ್ವಾವಲಂಬಿಯಾಗುವುದರ ಜೊತೆಗೆ, ಮಗಳಿಗೆ ಒಳ್ಳೆಯ ಭವಿಷ್ಯವನ್ನು ಕೊಡಲು ಯಶಸ್ವಿಯಾಗುತ್ತಾಳೆ.

ಇಲ್ಲಿ ತಾಯ್ತನ ಎನ್ನುವಂತದ್ದು ಆಕೆಯನ್ನು ವೃತ್ತಿಪರತೆಯೆಡೆಗೆ ತಿರುಗಿಸಿದ ಅಂಶ, ತಾಯ್ತನದ ಮಹತ್ವವನ್ನು ಹೇಳುತ್ತದೆ. ಒಂದು ಮಗಳು ಇಲ್ಲದಿದ್ದ ಪಕ್ಷದಲ್ಲಿ ಖಂಡಿತವಾಗಿಯೂ ಆಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಳು. ಇಲ್ಲವೇ ಗಂಡ ಕಳಿಸುತ್ತಿದ್ದ ಚೂರು ಹಣದಿಂದಲೇ ಹೇಗೋ ತನ್ನ ಜೀವನವನ್ನು ಸಾಗಿಸಿಬಿಡುತ್ತಿದ್ದಳು. ಆದರೆ ತಾಯಿತನದ ಜವಾಬ್ದಾರಿ ಮತ್ತು ಸ್ವಾಭಿಮಾನವು ಆಕೆಯಲ್ಲಿ ಬದುಕುವ ಕಸುವನ್ನೂ ಧೈರ್ಯವನ್ನೂ ತುಂಬುತ್ತದೆ. ಮಗಳಿಗಾಗಿ ಬದುಕುತ್ತೇನೆ ಎಂದು ನಿರ್ಧಾರ ಮಾಡಿಸುತ್ತದೆ. ಈ ವೃತ್ತಿ ಜೀವನವು ಹೆಣ್ಣಿಗೆ ಸ್ವಾವಲಂಬಿತನವನ್ನು ತರಬಲ್ಲುದಾದರೂ ಬಹುತೇಕರು ಕೆಲಸ ಮಾಡುವ ಹೆಣ್ಣನ್ನು ಮದುವೆ ಮಾಡಿಕೊಳ್ಳಲು ಹಿಂಜರಿಯುವ ಸ್ಥಿತಿಯಿದೆ. ಕಾರಣ ಹೆಣ್ಣು ಎಂದರೆ ಪರಂಪರೆಯಿಂದಲೂ ಗಂಡನ ಮತ್ತು ಮನೆಯ

ಸೇವೆ ಮಾಡಿಕೊಂಡು ಬಂದಿರುವದರಿಂದ, ಸಮಾಜವು ಹೆಣ್ಣಿಂದ ಅದನ್ನೇ ನಿರೀಕ್ಷಿಸುತ್ತದೆ. ಕೆಲಸ ಮಾಡುವ ಹೆಣ್ಣು ಮನೆಯ ಇತರರ ಮುಲಾಜಿಗೆ ಬೀಳುವ ಅವಶ್ಯಕತೆಯಿಲ್ಲದುದರಿಂದ ಆಕೆ ವಿಧೇಯಳಾಗಳು ಎಂಬ ಮನಸ್ಥಿತಿಯೇ ಇದಕ್ಕೆ ಕಾರಣ. ಇಂದಿನ ಮಹಿಳೆಯೂ ಕೂಡ ಕೇವಲ ಮನೆಗೆಲಸಕ್ಕೆ, ಮಕ್ಕಳ ಪಾಲನೆಗೆ ಮಿತಿಯಾಗದೇ ತಾನೂ ಸಹ ಪುರುಷನಂತೆ ಇತರ ಕ್ಷೇತ್ರಗಳಲ್ಲೂ ಛಾಪು ಮೂಡಿಸುತ್ತಿರುವ ಜೊತೆ ಜೊತೆಗೆ, ಇಂತಹ ಕೆಲವು ಆಪಾದನೆಗಳಿಗೆ ಹೆಣ್ಣು ಗುರಿಯಾಗಬೇಕಾಗುತ್ತದೆ. ಅಂತಹ ಒಂದು ಉದಾಹರಣೆಯನ್ನು ನೇಮಿಚಂದ್ರರದೇ ಮತ್ತೊಂದು ಕತೆಯಾದ ‘ನೀವು ಕಾಣದ ನಾಳೆಗಳಲ್ಲಿ’ ಎಂಬುದರಲ್ಲಿ ಕಾಣುತ್ತೇವೆ. ಇಲ್ಲಿ ತಾಯಿಯೊಬ್ಬಳು ತನ್ನ ಯೋಗಕ್ಷೇಮವನ್ನು ವಿಚಾರಿಸುವಾಗ ಆತನು ಸೊರಗಿರುವುದನ್ನು ಕಂಡು ಹೀಗೆ ಹೇಳುತ್ತಾಳೆ “ಬೆಳಗ್ಗೆ ಎದ್ದು ಅವಳಿಗೊಂದು ಅಡುಗೆ ಮಾಡೋಕೂ ಆಗೊಲ್ಲವೆ? ಈ ಚಂದಕ್ಕೆ ಸಂಸಾರ ಯಾಕೇ? ಅದಕ್ಕೇ ಹೇಳೋದು ಈ ದುಡಿಯೋ ಹುಡಿಗೀರು ಬೇಡ ಅಂತ. ಅಚ್ಚುಕಟ್ಟಾಗಿ ನಿನ್ನ ಹೊಟ್ಟೆ ನೆತ್ತಿ ನೋಡೋ ಅಂತ ಹುಡುಗಿ ತಾ ಅಂದಿದ್ದೆ. ದುಡಿದು ಏನು ಉದ್ಧಾರ ಮಾಡ್ತಾಳೆ, ಗಂಡನ ಕೈಲೇ ಎಲ್ಲಾ ಮಾಡಿಸೋಳು”(ನೀವು ಕಾಣದ ನಾಳೆಗಳಲ್ಲಿ, ಪುಟ 258) ಎನ್ನುತ್ತಾರೆ. ಇಲ್ಲಿ ಗಂಡು ಮದುವೆ ಆಗುವ ಉದ್ದೇಶವೇ ತನಗೊಂದು ಸೇವಕಿಯ ಅಗತ್ಯತೆಗಾಗಿ ಎಂಬ ಅರ್ಥ ಬರುವಂತೆ ಇದೆ. ಹೆಣ್ಣಿನ ಕೆಲಸ ಗಂಡಿನ ಬಗೆಗೆ ಕಾಳಜಿ ವಹಿಸುವುದು ಮತ್ತು ಆತನ ಯೋಗಕ್ಷೇಮ ನೋಡಿಕೊಳ್ಳುವುದು ಎಂಬ ಅರ್ಥವನ್ನು ಈ ಮಾತುಗಳು ಹೊಂದಿವೆ. ಹೆಣ್ಣಾದವಳು ಗಂಡನ ಕೈಲಿ ಯಾವ ಕೆಲಸವನ್ನೂ ಮಾಡಿಸಬಾರದು ಎಂಬ ಪಾರಂಪರಿಕ ಪ್ರಜ್ಞೆಯು ಒಬ್ಬ ಹೆಣ್ಣಿನ ಮೂಲಕವೇ ವ್ಯಕ್ತವಾಗಿರುವುದು ಇಲ್ಲಿ ಕಾಣುತ್ತದೆ. ವೃತ್ತಿ ನಿರತ ಹೆಣ್ಣು ಇಂತಹ ಸಂದರ್ಭಗಳನ್ನು ಎದುರಿಸಿ ನಿಲ್ಲುತ್ತಾಳೆ. ಹೀಗೆ ಹೆಣ್ಣು ತನ್ನನ್ನು ತಾನು ಸಾಧಿಸಿಕೊಳ್ಳಬೇಕಾದ ಪರಿಸ್ಥಿತಿಯು ಈಗಲೂ ಸಹ ಇದೆ ಎಂಬುದು ವಾಸ್ತವ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮುಂದುವರೆದು ಇನ್ನೊಂದು ಕತೆಯನ್ನು ಇಲ್ಲಿ ಗಮನಿಸಬಹುದು. ಅದು ‘ಬದುಕು ಕಾಯುವುದಿಲ್ಲ’ ಎಂಬ ಕತೆ, ಇಲ್ಲಿ ಉದ್ಯೋಗಸ್ಥ ಗಂಡು ಹೆಣ್ಣು ಮತ್ತು ಅವರ ಮಗುವನ್ನು ಒಳಗೊಂಡ ಕತೆಯನ್ನು ಕಾಣುತ್ತೇವೆ. ಈ ಕತೆಯಲ್ಲಿ ಈ ಅಧ್ಯಾಯದ ಬಹುಪಾಲು ಅಂಶಗಳನ್ನು ಗಮನಿಸಲು ಅವಕಾಶವಿದೆ. ಸಂಯುಕ್ತ ಮತ್ತು ವಿಶೂ ಇಬ್ಬರೂ ದಂಪತಿಗಳು. ಇವರ ಮಗ ಮುನ್ನ. ಗಂಡ ಮತ್ತು ಹೆಂಡತಿ ಇಬ್ಬರೂ ಸಹ ದುಡಿಯುವವರಾಗಿದ್ದರೆ, ಅದು

ಮಕ್ಕಳ ಮೇಲೆ ಯಾವ ಪರಿಣಾಮವನ್ನು ಬೀರುತ್ತದೆ ಎಂದು ಇಲ್ಲಿ ಹೇಳಲಾಗಿದೆ. ಇವರ ಮಗನಾದ ಮುನ್ನ ಅನಾರೋಗ್ಯದಿಂದ ಬಳಲುತ್ತಿರುತ್ತಾನೆ ಈ ಪರಿಸ್ಥಿತಿಯಲ್ಲಿ ಸಂಯುಕ್ತಾಳು ಅವನನ್ನು ನೋಡಿಕೊಳ್ಳಲೆಂದು ಮೂರು ದಿನದಿಂದ ರಜೆಯಲ್ಲಿರುತ್ತಾಳೆ. ಇನ್ನೂ ಕೆಲವು ದಿನಗಳವರೆಗೆ ಆಕೆಗೆ ರಜೆ ಹಾಕುವುದು ಕಷ್ಟವೇನೂ ಅಲ್ಲ. ಆದರೆ ಅಂದು ಕಛೇರಿಗೆ ಹೋಗಲೇಬೇಕಾದ ಅನಿವಾರ್ಯತೆಯಲ್ಲಿ ಆಕೆಯಿರುತ್ತಾಳೆ. ಆದರೆ ಮಗು ಇನ್ನೂ ಹುಷಾರಾಗಿರುವುದಿಲ್ಲ. ಈ ಕಾರಣಕ್ಕೆ ಒಂದು ದಿನ ರಜೆ ಹಾಕಿ ಮಗುವನ್ನು ನೋಡಿಕೊಳ್ಳುವಂತೆ ಗಂಡನನ್ನು ಬೇಡಿಕೊಳ್ಳುತ್ತಾಳೆ. ಆದರೆ ಇದಕ್ಕೆ ಗಂಡನು ಒಪ್ಪುವುದಿಲ್ಲ. ಈಕೆ ಹೇಳುವ ಮಾತುಗಳನ್ನು ಕೇಳಿಸಿಕೊಳ್ಳುವ ಪುರುಸೊತ್ತು ಸಹ ಆತನಿಗೆ ಇರುವುದಿಲ್ಲ. ಆ ಕುರಿತು ಚರ್ಚೆ ಮಾಡದೆಯೇ ಆತ ಮನೆಯಿಂದ ಹೊರ ನಡೆಯುತ್ತಾನೆ. ಆದರೆ ತನ್ನ ಹೆಂಡತಿಯೂ ಸಹ ಅಂತದ್ದೇ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿರುವವಳೆಂದು ಆತ ಯೋಚಿಸುವುದಿಲ್ಲ. ಗಂಡನ ಈ ವರ್ತನೆಯನ್ನು ಕಂಡ ಆಕೆಯು "ತಾನೇಕೆ ನಡೆದು ಬಿಡಲಾರೆ ಅವನಂತೆ? ಏಕೇ? ಮಗುವನ್ನು ಮಡಿಲಲ್ಲಿಟ್ಟುಕೊಂಡು ಅತ್ತದ್ದು ಎಷ್ಟು ಬಾರಿ? ನಾನಿಂದು ಮನೆಯಲ್ಲುಳಿದದ್ದು ಯಾರಿಗಾಗಿ?" (ಬದುಕು ಕಾಯುವುದಿಲ್ಲ, ಪುಟ 76) ಎಂದು ಮುಂತಾಗಿ ಸಂಯುಕ್ತಾಳು ತನ್ನಲ್ಲಿಯೇ ಯೋಚಿಸುತ್ತಾಳೆ. ಮಗುವನ್ನು ಪಡೆಯುವಲ್ಲಿ ಇಬ್ಬರ ಪಾಲು ಇರುತ್ತದೆ. ಅದನ್ನು ಬೆಳೆಸುವ ಜವಾಬ್ದಾರಿಯಲ್ಲೂ ಇಬ್ಬರದ್ದು ಸಮಾನ ಪಾತ್ರವಿರಬೇಕು. ಆದರೆ ಇಲ್ಲಿ ಎಲ್ಲವೂ ತನ್ನ ಹಾದಿಗೆ ತೊಡಕಾಗಿ, ತನಗೆ ಮಾತ್ರ ಯಾಕೆ ಸಮಸ್ಯೆಯಾಗಿದೆ ಎಂದು ಆಕೆ ಯೋಚಿಸುತ್ತಿದ್ದಳು. ಆದರೆ ಇವೆಲ್ಲವೂ ಕ್ಲಿಷ್ಟವಾಗುತ್ತಾ ಸಾಗುವ ಸಮಸ್ಯೆಗಳು. ಅತ್ತ ಕಛೇರಿಗೆ ತೆರಳಿದ್ದ ವಿಶೂಗು ಕೂಡ ಮನಸ್ಸು ಸಮಾಧಾನವಿರುವುದಿಲ್ಲ, ಆತನಿಗೂ ಮಗನ ಬಗ್ಗೆ ಮನೆಯ ಬಗ್ಗೆ ಚಿಂತೆ ಇರುತ್ತದೆ. ಈ ಕಾರಣಕ್ಕೆ ಸಾಯಾಂಕಾಲ ಮನೆಗೆ ಬೇಗ ಬರುತ್ತಾನೆ. ಆಗ ಅವನಿಗೆ ಕಂಡದ್ದೇನೆಂದರೆ, ಎದುರು ಮನೆಯ ಶಕ್ತಿ ಎಂಬಾಕೆಯು ಮುನ್ನುವಿನ ಹಾರೈಕೆ ಮಾಡುತ್ತಿದ್ದಳು. ಗಂಡ ಮತ್ತು ಹೆಂಡತಿ ಇಬ್ಬರೂ ದುಡಿಯಲೇ ಬೇಕಾದ ಪರಿಸ್ಥಿತಿಯಿದ್ದರೆ ಹೀಗೆ ಮಕ್ಕಳನ್ನು ಇನ್ನೊಬ್ಬರ ಕೈಯಲ್ಲಿ ಬಿಟ್ಟು ಹೊರಡಬೇಕಾಗುತ್ತದೆ. ಈ ರೀತಿ ಗಜಿಬಿಜಿಯ ಜೀವನದ ಮಧ್ಯೆ ಪುರುಷನಾಗಿ ವಿಶೂ ತನಗೆ ತಾನು ಕೇಳಿಕೊಳ್ಳುವ ಪ್ರಶ್ನೆಗಳೆಂದರೆ "ದಿನಕ್ಕೆ 20 ಗಂಟೆ ನಾನು ದುಡಿಯುವುದಾದರೂ ಯಾರಿಗೆ? ನಾನು ದುಡಿಯದಿದ್ದರೆ ಮನೆ ನಡೆಯುವಂತಿಲ್ಲ ಎಂಬ ಸ್ಥಿತಿಯಲ್ಲಿಲ್ಲ" (ಬದುಕು ಕಾಯುವುದಿಲ್ಲ. ಪುಟ 76) ಇದು ಪುರುಷನೇ ಮನೆಯ ಆಧಾರ ಎನ್ನುವ ನಂಬಿಕೆಯ

ಕಾಲಘಟ್ಟವು ಮುಗಿದುಹೋಗಿರುವ ಸೂಚನೆ. ಹೆಣ್ಣೂ ಸಹ ಮನೆಗೆ ಆಧಾರವಾಗಿ ನಿಲ್ಲಬಲ್ಲಳು ಎಂಬುದನ್ನು ಇಲ್ಲಿ ಕಾಣುತ್ತೇವೆ. ಇದರಿಂದ ಗಂಡಸಿನ ಅಹಮ್ಮಿಗೂ ಮಿತಿ ಬೀಳುತ್ತದೆ ಮತ್ತು ಹೆಣ್ಣಿಗೆ ತನ್ನ ಮೇಲೆ ನಂಬಿಕೆಯನ್ನೂ ಸಹ ಮೂಡಿಸುತ್ತದೆ.

ವೃತ್ತಿ ನಿರತ ಹೆಣ್ಣಿಗೆ ಎದುರಾಗುವ ದೊಡ್ಡ ಸಮಸ್ಯೆಯೆ ಇದು. ಮಗುವನ್ನು ನೋಡಿಕೊಳ್ಳುವುದು. ಗಂಡಸಿನಷ್ಟು ಸುಲಭವಾಗಿ ಮಕ್ಕಳ ಪಾಲನೆಯಿಂದ ಹೆಣ್ಣು ಜಾರಿಕೊಳ್ಳಲು ಸಾಧ್ಯವಿಲ್ಲ. ಇತ್ತ ಮನೆ–ಮಕ್ಕಳ ಜವಾಬ್ದಾರಿ. ಮತ್ತೊಂದೆಡೆ ಕಛೇರಿ. ಈ ಸ್ಥಿತಿಯಲ್ಲಿ ಓಲಾಡುವ ಮಹಿಳೆಯರು ಮಗುವಿನ ಪಾಲನೆಗಾಗಿ, ಮಕ್ಕಳನ್ನು ನೋಡಿಕೊಳ್ಳುವ ಮಂದಿರಗಳಲ್ಲಿ ಬಿಡಬೇಕಾಗುತ್ತದೆ. ಕೂಡು ಕುಟುಂಬವಿದ್ದರೆ ಸಮಸ್ಯೆಯಾಗದು. ಅಲ್ಲಿ ಮನೆಯ ಯಾರಾದರೂ ಸದಸ್ಯರು ಮಗುವನ್ನು ನೋಡಿಕೊಳ್ಳುತ್ತಾರೆ. ಆದರೆ ಬಿಡಿ ಕುಟುಂಬದ ಪ್ರಶ್ನೆಬಂದಾಗ ಇದು ದೊಡ್ಡ ಸಮಸ್ಯೆಯಾಗುತ್ತದೆ. ಹೀಗೆ ಮಕ್ಕಳನ್ನು ನೋಡಿಕೊಳ್ಳುವ ಜಾಗಗಳಿಗೆ ಕಳಿಸುವುದು ದುಬಾರಿಯೂ, ಅಷ್ಟೊಂದು ಅನುಕೂಲವಾಗಿಲ್ಲದೂ ಹೌದು. ಅದಕ್ಕೆಂದೇ ಸಾಮಾನ್ಯವಾಗಿ ಮಕ್ಕಳನ್ನು ನೋಡಿಕೊಳ್ಳಲು ಮನೆಯಲ್ಲಿಯೇ ಒಬ್ಬರನ್ನು ನೇಮಿಸಿಕೊಳ್ಳುವುದುಂಟು.

ಇಲ್ಲಿ ಹೇಳಿರುವಂತವು ಕೆಲವು ಕತೆಗಳಷ್ಟೆ. ಇಂತಹದ್ದೇ ಹಂದರವುಳ್ಳ ಹಲವಾರು ಕತೆಗಳು ಕನ್ನಡ ಕಥಾ ಸಾಹಿತ್ಯದಲ್ಲಿ ಬರೆಯಲ್ಪಟ್ಟಿವೆ. ಅವುಗಳು ಹೆಣ್ಣಿಗೆ ಸಿಗಬೇಕಾದ ಸ್ವಾತಂತ್ರ್ಯವನ್ನೂ, ಸಮಾನತೆಯನ್ನು ಹಕ್ಕುಗಳನ್ನೂ ಪ್ರತಿಪಾದಿಸಿ ಮಾದರಿ ಸಮಾಜವೊಂದರ ನಿರ್ಮಾಣದ ಆಶಯವನ್ನು ಉಳ್ಳವಾಗಿವೆ. ಗಂಡಿನ ಅಧೀನವಾಗಿ ಬದುಕುವ ಹೆಣ್ಣಿನ ಪರಿಸ್ಥಿತಿಯು ಇನ್ನೂ ತೀವ್ರತರವಾಗಿ ಬದಲಾಗಬೇಕಿದೆ. ಗಂಡಿನಂತೆಯೇ ಹೆಣ್ಣು ಆರ್ಥಿಕವಾಗಿ ಸ್ವಾವಲಂಬನೆಯನ್ನು ಸಾಧಿಸಬೇಕಾಗಿದೆ. ಈ ಮೂಲಕ ಗಂಡಿಗಿಂತಲೂ ತಾನು ಯಾವುದರಲ್ಲೂ ಕಡಿಮೆ ಇಲ್ಲ ಎನ್ನುವುದನ್ನು ಹೆಣ್ಣು ಸಾಧಿಸಿತೋರಿಸಬೇಕಿದೆ. ಆದರೆ ಈ ಕ್ರಿಯೆಯು ಕೇವಲ ಹೆಣ್ಣಿನಿಂದ ಮಾತ್ರ ಸಾಧ್ಯವಿಲ್ಲ. ಅದಕ್ಕೆ ಗಂಡಿನ ಪಾಲು ಬೇಕಾಗುತ್ತದೆ. ಆಗ ಮಾತ್ರ ಉತ್ತಮ ಸಮಾಜವೊಂದರ ನಿರ್ಮಾಣವು ಸಾಧ್ಯವಾಗುತ್ತದೆ.

ಆಕರ ಗ್ರಂಥ

1. ನೇಮಿಚಂದ್ರ. 2016. ಇಲ್ಲಿಯವರೆಗಿನ ನೇಮಿಚಂದ್ರರ ಕತೆಗಳು. ಅಂಕಿತ ಪುಸ್ತಕ, ಬೆಂಗಳೂರು

ಪರಾಮರ್ಶನ ಗ್ರಂಥಗಳು

1. ಗೋವಿಂದರಾಜ ಗಿರಡ್ಡಿ. 2009. ಕಲ್ಪಿತ ವಾಸ್ತವ ಕನ್ನಡ ಸಣ್ಣಕತೆ. ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ
2. ಆಮೂರ ಜಿ. ಎಸ್. 2003. ಕನ್ನಡ ಕಥನ ಸಾಹಿತ್ಯ: ಸಣ್ಣಕಥೆ. ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು.
3. ಆಮೂರ ಜಿ.ಎಸ್. 2016. ಕನ್ನಡ ಕಥನ ಸಾಹಿತ್ಯ; ಕಾದಂಬರಿ. ಸಪ್ನ ಬುಕ್ ಹೌಸ್ ಬೆಂಗಳೂರು.
4. ಉಷಾರಾಣಿ ಟಿ. ಎಂ. 2016. ಮಹಿಳಾ ಸಾಹಿತ್ಯ ಅಭಿವ್ಯಕ್ತಿವಾದ ತಾತ್ವಿಕ ಸ್ವರೂಪ. ಪಲ್ಲವ ಪ್ರಕಾಶನ ಚನ್ನಪಟ್ಟಣ.
5. ದೇಶಮಾನೆ ಸಮತಾ ಬಿ. 2003. ಸಮಾಜ ಶಾಸ್ತ್ರ ಮತ್ತು ಮಹಿಳೆ. ಚೇತನ್ ಬುಕ್ ಹೌಸ್ ಮೈಸೂರು.

***

ಮಾಸ್ತಿಯವರ 'ಕಾಮನಹಬ್ಬದ ಒಂದು ಕತೆ'ಯ ಒಳನೋಟಗಳು

1
ಡಾ. ಸರ್ವೇಶ ಬಿ.ಎಸ್.
ಮುಖ್ಯಸ್ಥರು, ಕನ್ನಡ ವಿಭಾಗ,
ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ
ವಿಶ್ವವಿದ್ಯಾಲಯ, ಬೆಂಗಳೂರು.
sarvesh.bs@kristujayanti.com

'ಕಾಮನ ಹಬ್ಬದ ಒಂದು ಕತೆ'ಯಲ್ಲಿ ಮಾಸ್ತಿಯವರು ಸರಳ ಗ್ರಾಮೀಣ ಹಿನ್ನೆಲೆಯಲ್ಲಿ ಅರಳುವ ಮಾನವೀಯ ಸಂಬಂಧಗಳ ನಾಜೂಕನ್ನು ಅತ್ಯಂತ ಮೃದುವಾಗಿ ಚಿತ್ರಿಸಿದ್ದಾರೆ. ಈ ಕಥೆಯು ಕೇವಲ ಕಾಮ ದಹನದ ಧಾರ್ಮಿಕ ಆಚರಣೆಯನ್ನು ವಿವರಿಸುವುದಕ್ಕಿಂತ, ಹಬ್ಬದ ಸಂಭ್ರಮದ ನಡುವೆಯೂ ಪಾತ್ರಗಳ ಒಳನೋಟದ ಸಂಘರ್ಷ ಮತ್ತು ನಿಷ್ಕಪಟ ಪ್ರೇಮದ ತುಡಿತಗಳನ್ನು ಅನಾವರಣಗೊಳಿಸುತ್ತದೆ. ಗ್ರಾಮೀಣ ಬದುಕಿನ ಚಿತ್ರಣ ಜೊತೆಗೆ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯ ಭಾವನೆಗಳಿಗೆ ಸಿಗದ ಮಾನ್ಯತೆಯ ಕುರಿತು ಚಿಂತಿಸುವಂತೆ ಮಾಡುತ್ತದೆ.

ಕಥೆಯು ಹಬ್ಬದ ವಾತಾವರಣ, ಯುವಜನರ ಉತ್ಸಾಹ, ಮತ್ತು ಹಿರಿಯರ ಸಂಪ್ರದಾಯಬದ್ಧ ಮನೋಭಾವದ ನಡುವಿನ ಸಣ್ಣ ಘರ್ಷಣೆಗಳನ್ನು

ನಿರೂಪಿಸುತ್ತದೆ. ಕಾಮದಹನವು ಆಸೆ, ಮೋಹ ಮತ್ತು ಮನಸ್ಸಿನ ಕಲ್ಮಶಗಳನ್ನು ಸುಡುವ ಸಂಕೇತವಾದರೂ, ಕಥೆಯಲ್ಲಿನ ಮುಖ್ಯ ಪಾತ್ರವು ಆಸೆಗಳನ್ನು ಹತ್ತಿಕ್ಕುವ ಬದಲು, ಪ್ರೀತಿ ಮತ್ತು ವಾತ್ಸಲ್ಯದ ಶುದ್ಧ ರೂಪವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತದೆ. ಮಾಸ್ತಿಯವರ ನಿರೂಪಣಾ ಶೈಲಿಯು ಕನ್ನಡ ಸಣ್ಣಕಥೆಗಳಿಗೆ ಒಂದು ವಿಶಿಷ್ಟ ನೆಲೆ ನೀಡಿದೆ. ಈ ಕಥೆಯ ಮೂಲಕ ಅವರು ಜೀವನದ ಸತ್ಯ ಮತ್ತು ಸೌಂದರ್ಯವನ್ನು ಕಟ್ಟಿಕೊಡುತ್ತಾರೆ.

ಪ್ರಮುಖ ಪದಗಳು : ನೀಳ್ಗತೆ, ಕಾಮದಹನ, ಬಾಲ್ಯವಿವಾಹ, ಶಿವಪುರಾಣ, ವೇಷಭೂಷಣ, ಕಾಲ್ಪನಿಕ ಕಥೆ, ಕೌಟುಂಬಿಕ ಮೌಲ್ಯಗಳು, ಜಾತ್ರಾ ಮಹೋತ್ಸವ, ಧರ್ಮನಿಷ್ಠೆ, ಕುಚೇಷ್ಟೆ, ಕನಿಕರ.

ಮಾಸ್ತಿ ಕನ್ನಡದ ಆಸ್ತಿ ಎನ್ನುವಂತೆ ಮನೆಮಾತಾಗಿರುವ ಸಣ್ಣ ಕತೆಗಳ ಜನಕ ನಮ್ಮ ಮಾಸ್ತಿ ವೆಂಕಟೇಶ ಐಯ್ಯಂಗಾರ್. ಜೂನ್ 6, 1891ರಲ್ಲಿ ಮಾಲೂರು ತಾಲ್ಲೂಕಿನ ಹೊಂಗೇನಹಳ್ಳಿಯಲ್ಲಿ ತಮ್ಮ ತಾಯಿಯ ಮನೆಯಲ್ಲಿ ಜನಿಸಿದ ಇವರು ಮಾಸ್ತಿ ಊರಿನವರು. 'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಸಾಹಿತ್ಯ ಕೃಷಿ ಮಾಡಿದ ಇವರು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದು ಕನ್ನಡದ ಹಿರಿಮೆಯನ್ನು ಹೆಚ್ಚಿಸಿದವರು. ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಅವರಿಗೆ ರಾಜಸೇವಾಸಕ್ತ ಎಂಬ ಬಿರುದು ನೀಡಿ ಗೌರವಿಸಿದ್ದರು. ಜಿಲ್ಲಾಧಿಕಾರಿಯಾಗಿ, ಪ್ರೊಫೆಸರ್ ಆಗಿ, ಲೇಖಕರಾಗಿ ಅವರು ಮಾಡಿರುವ ಕನ್ನಡದ ಸೇವೆ ಅನನ್ಯವಾದದ್ದು. ಪೂರ್ವಿಕರು ಶ್ರೀಮಂತಿಕೆಯಲ್ಲಿ ಬದುಕಿದ್ದರಾದರೂ ಇವರ ಬಾಲ್ಯದ ಕಾಲಕ್ಕೆ ಮನೆಯಲ್ಲಿ ಬಡತನ ಕಾಡುತ್ತಿತ್ತು. ಹಾಗಾಗಿ ವಾರದ ಹುಡುಗರಾಗಿ ಇತರರ ಮನೆಯಲ್ಲಿ ಊಟಮಾಡಿ ತಮ್ಮ ವಿದ್ಯಾಭ್ಯಾಸವನ್ನು ಮಾಡುತ್ತಾರೆ. ಅವರಿಗೆ ಶಿಕ್ಷಣದ ಕುರಿತಾಗಿ ಇದ್ದ ಆಸ್ತೆಯನ್ನು ಇಲ್ಲಿ ನಾವು ತಿಳಿಯಬಹುದು. ಹೊಂಗೇನಹಳ್ಳಿ, ಯಲಂದೂರು, ಶಿವಾರಪಟ್ಟಣ, ಮಳವಳ್ಳಿ, ಮೈಸೂರು, ಮದರಾಸು ಹೀಗೆ ನಾನಾ ಕಡೆಗಳಲ್ಲಿ ತಮ್ಮ ಬಂಧುಗಳ ನೆರವಿನೊಂದಿಗೆ ವಿದ್ಯಾಭ್ಯಾಸವನ್ನು ಮುಗಿಸುತ್ತಾರೆ. ಎಂ.ಎ. ಪದವಿಯನ್ನು ಗಳಿಸುತ್ತಾರೆ. ಇವರ ವಿಶೇಷತೆ ಓದಿನ ಕಾಲದಲ್ಲಿ ಯಾವ ಹಂತದಲ್ಲಿಯೂ ಇವರು ಮತ್ತೊಬ್ಬರಿಗೆ ಪ್ರಥಮ ಸ್ಥಾನವನ್ನು ಬಿಟ್ಟುಕೊಟ್ಟವರಲ್ಲ. ಆಂಗ್ಲಬಾಷೆಯಲ್ಲಿ ಎಂ.ಎ. ಮಾಡಿ ಚಿನ್ನದ ಪದಕ ಗೆದ್ದಿದ್ದ ಇವರು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಅಲ್ಪಾವಧಿಗೆ ಉಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಾರೆ. ಈ ಸಮಯದಲ್ಲಿ ಬೆಂಗಳೂರಿಗೆ ಬಂದು ಸಿವಿಲ್ ಪರೀಕ್ಷೆ ಕುಳಿತು ಅಲ್ಲಿಯೂ ಪ್ರಥಮರಾಗಿ ತೇರ್ಗಡೆಹೊಂದುತ್ತಾರೆ. ಅಸಿಸ್ಟೆಂಟ್ ಕಮೀಶನರ್

ಆಗಿ ಸೇವೆಗೆ ಸೇರಿಕೊಳ್ಳುತ್ತಾರೆ. ಸಾರ್ಥಕ ಸೇವೆಯನ್ನೂ ಮಾಡುತ್ತಾರೆ. 1914 ರಿಂದ 1983ರ ವರೆಗೆ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿ ನಿವೃತ್ತರಾಗುತ್ತಾರೆ. ಅವರ ಮೊದಲ ಸಾಹಿತ್ಯ ಕೃತಿ 1920ರಲ್ಲಿ ಕೆಲಸವು ಸಣ್ಣ ಕಥೆಗಳು ಪ್ರಕಟಗೊಂಡಿತು. ನೀಳ್ಗತೆ, ಕಾದಂಬರಿ, ಕಾವ್ಯ, ನಾಟಕ, ಜೀವನ ಚರಿತ್ರೆ, ಪ್ರಬಂಧ, ವಿಮರ್ಶೆ, ಸಂಪಾದನೆ, ಅನುವಾದ ಹೀಗೆ ಹಲವು ಕ್ಷೇತ್ರಗಳಲ್ಲಿ ಮಾಸ್ತಿಯವರು ಕೆಲಸ ಮಾಡಿದ್ದಾರೆ. 1983ರಲ್ಲಿ ಅವರ ಚಿಕ್ಕವೀರ ರಾಜೇಂದ್ರ ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಸಾಹಿತಿಗಳು ಕನಿಷ್ಠ ನೆಮ್ಮದಿಯ ಬದುಕನ್ನು ನಡೆಸಲು ಹೆಣಗುತ್ತಿದ್ದ ಕಾಲದಲ್ಲಿ ಆದರ್ಶ ಬದುಕನ್ನು ಬದುಕಿ ತೋರಿಸಿದವರು ಮಾಸ್ತಿಯವರು. ತುಂಬಾ ಕ್ಲಿಷ್ಟಕರ ಬದುಕಿನ ಸಂದರ್ಭದಲ್ಲೂ ಅವರು ಬದುಕನ್ನು ಎದುರಿಸಿದ ರೀತಿ ಎಲ್ಲರೂ ಪಾಲಿಸಬಹುದಾದಂತದ್ದು. ಸಾಹಿತ್ಯ ಸೇವೆ ಮಾಡುತ್ತಲೇ ಸಾಹಿತ್ಯ ಪೋಷಕರಾಗಿಯೂ ಕಾರ್ಯ ನಿರ್ವಹಿಸಿದವರು. ದ. ರಾ. ಬೇಂದ್ರೆ, ರಾಜರತ್ನಂ ಅಂತವರಿಗೆ ಆದರ್ಶರಾಗಿದ್ದರು. 1910ರಲ್ಲಿ ಅವರು ಬರೆದ ರಂಗನ ಮದುವೆಯಿಂದ ಮೊದಲುಗೊಂಡು ಅವರು ಕೊನೆಗಾಲದಲ್ಲಿ ಬರೆದ ಮಾತುಗಾರ ರಾಮಣ್ಣನ ವರೆಗು ಸುಮಾರು 123 ಕೃತಿಗಳನ್ನು ರಚಿಸಿದ್ದಾರೆ. ಆ ಕಾಲಕ್ಕೆ ಅಂತಹ ಪೋಷಣೆಯಿಲ್ಲದಿದ್ದರೂ ಇವರು ಮಾಡಿರುವ ಸಾಧನೆ ಮಹತ್ತರವಾದುದು. ಸಣ್ಣ ಕಥೆಗಳ ಪ್ರಕಾರ ಅವರ ಅತ್ಯಾಪ್ತ ಸಾಹಿತ್ಯ ಕೃಷಿಯ ಪ್ರಕಾರ. ಈ ಪ್ರಕಾರದಲ್ಲಿ ಅವರು ನೂರಕ್ಕೂ ಹೆಚ್ಚು ಕಥೆಗಳನ್ನು ರಚಿಸಿದ್ದಾರೆ. ಡಾ. ಸತ್ಯನಾರಾಯಣ ಅವರು ಉಲ್ಲೇಖಿಸಿರುವಂತೆ "ಸರಿಯಾಗಿ ನೂರು ಕಥೆಗಳನ್ನು ಪ್ರಕಟಿಸಿರುವ ಖ್ಯಾತಿ ಮಾಸ್ತಿಯವರದ್ದು" ಎನ್ನುತ್ತಾರೆ. ಮಾಸ್ತಿಯವರು ಕಥೆಯನ್ನು ಪ್ರಾರಂಭಮಾಡುವ ವಿಧಾನವೇ ವಿಶೇಷ ಎನ್ನುತ್ತಾರೆ ಪ್ರಾಜ್ಞರು. ಯಾರೋ ಯಾರಿಗೋ ಹೇಳಿದ ಕಥೆ ಎನ್ನುವಂತೆ ಪ್ರಾರಂಭಿಸಿಬಿಡುತ್ತಾರೆ ಕೆಲವು ಕಥೆಗಳನ್ನು. ಕೆಲವು ತಾವೇ ನೋಡಿದ ಕಥೆಯೆಂಬಂತೆ, ಮತ್ತೆ ಕೆಲವು ಸಹಜವಾಗಿ ರೂಪ ತಾಳುತ್ತವೆ. ಕಥೆಯ ಹಂದರದಷ್ಟೇ ಸಹಜವಾಗಿ ಹಾಗೂ ಓದುಗರನ್ನು ಮುಟ್ಟುವ ಶೈಲಿಯನ್ನು ತಮ್ಮದಾಗಿಸಿಕೊಂಡಿದ್ದ ಕಥೆಗಾರರು ಮಾಸ್ತಿ. ಮೊಸರಿನ ಮಂಗಮ್ಮನ ಕಥೆಯನ್ನು ಕನ್ನಡದ ಓದುಗರು ಮರೆಯುವಂತಿಲ್ಲ. ಅವರ ಕಥೆಗಳು ನಮ್ಮ ಬದುಕಿನ ಭಾಗಗಳಂತೇ ಕಾಣುವುದು ನಮ್ಮನ್ನು ಸೆಳೆದು ನಿಲ್ಲಿಸಲು ಅವರಿಗಿರುವ ಶಕ್ತಿ. ಸಾಮಾನ್ಯವಾಗಿ ಆಚರಣೆಯಲ್ಲಿರುವ ಕೆಲವು ಪದ್ಧತಿಗಳೊಂದಿಗೆ ಮೊದಲುಗೊಂಡು ಒಬ್ಬ ವ್ಯಕ್ತಿಯ ವೈಯಕ್ತಿಕ ಬದುಕಿನ ಮೇಲೆ ಆಗಬಹುದಾದ

ಪರಿಣಾಮವನ್ನು ಹೇಳುತ್ತಲೇ ಅತ್ಯಂತ ಸೂಕ್ಷ್ಮವಾಗಿ ಸಮಾಜವನ್ನು ಮಾತನಾಡಿಸುತ್ತಿರುತ್ತಾರೆ ಮಾಸ್ತಿ. ಅಂತಹುದೇ ಒಂದು ಕಥೆ ಈ 'ಕಾಮನಹಬ್ಬದ ಒಂದು ಕಥೆ'.

ಭಾರತದಾದ್ಯಂತ ಆಚರಣೆಯಲ್ಲಿರುವ ಕಾಮದಹನ ಪದ್ಧತಿಯನ್ನು ಪ್ರಾಂತೀಯವಾರು ಭಿನ್ನವಾಗಿ ಆಚರಿಸುವುದನ್ನು ನೋಡುತ್ತೇವೆ. ಪ್ರಧಾನ ಆಚರಣೆ ಒಂದೇ ಆದರು ಅದರ ನೆಪದಲ್ಲಿ ಭಿನ್ನ ಭಿನ್ನವಾಗಿ ಆಯಾ ಪ್ರದೇಶಗಳಲ್ಲಿ ಅವರವರ ನಂಬಿಕೆಗಳಂತೆ ನಡೆಯುತ್ತವೆ. ಅದೇ ಕಥಾವಸ್ತುವನ್ನು ಕೇಂದ್ರವಾಗಿಸಿಕೊಂಡು ಪ್ರಾರಂಭವಾಗುವ ಕಥೆ ಸಾವಿತ್ರಿಯ ಬದುಕಿನ ಕಥೆಯನ್ನೇ ಹೇಳಿಬಿಡುತ್ತದೆ. ಚಿಕ್ಕ ವಯಸ್ಸಿನಲ್ಲಿಯೇ ಗಂಡನಿಂದ ದೂರಾಗಿ, ಅವನು ಸತ್ತೇ ಹೋದನೆಂದು ಸ್ವಯಂ ವಿಧುವೆಯಾಗಿ ಬದುಕು ಸಾಗಿಸುತ್ತಿದ್ದ ಸಾವಿತ್ರಿಗೆ ಈ ಕಾಮನ ಹಬ್ಬ ತುಂಬಾ ವಿಶೇಷ. ಯಾವುದೋ ನಂಬಿಕೆಯಂತೆ ಕಾಮ ದಹನದ ನಂತರ ಉಳಿಯುವ ಬೂದಿಯನ್ನು ಮೈಮೇಲೆ ಹಾಕಿಸಿಕೊಂಡು ಬೈಸಿಕೊಂಡರೆ ಮುಂದಿನ ಜನ್ಮದಲ್ಲಿ ಅಥವಾ ಸತ್ತ ನಂತರ ತಾನು ತನ್ನ ಗಂಡನನ್ನು ಕೂಡಿಕೊಂಡು ಸುಖವಾಗಿ ಬದುಕುತ್ತೇನೆಂಬ ನಂಬಿಕೆಯಲ್ಲಿ ತಾನೇ ಸ್ವತಃ ಮುಂದೆ ಬಂದು ಇತರರು ಅವಮಾನಕ್ಕೆ ಹೆದರಿದರೂ ಈಕೆ ತೋರುವ ದಿಟ್ಟತನ ಆಕೆಗೆ ಗಂಡನ ಮೇಲಿದ್ದ ಅಪಾರ ಒಲವನ್ನು ಸೂಚಿಸುತ್ತದೆ. ಕೊನೆಯಲ್ಲಿ ಎಲ್ಲೋ ಕಳೆದುಹೋಗಿದ್ದ ಶೀನೀ ಮುಂದೆ ಬಂದು ನಿಂತಾಗ ಆಕೆ ಪ್ರಜ್ಞೆ ತಪ್ಪಿ ಬೀದ್ದುಬಿಡುವ ಸನ್ನಿವೇಶವೂ ಆಕೆಯಲ್ಲಿ ಭಾವೋದ್ವೇಗದ ತೀವ್ರತೆಯನ್ನು ತಿಳಿಸುತ್ತದೆ. ಇವುಗಳ ಮಧ್ಯೆ ಕೌಟುಂಬಿಕ ಬಿಕ್ಕಟ್ಟುಗಳು, ಆಸ್ತಿಯ ಕಲಹಗಳು, ಹೆಣ್ಣಿನ ಶೋಷಣೆಯ ಚಿತ್ರಣಗಳು ಪ್ರಕಟವಾಗಿವೆ. ಕಥೆ ಕೇವಲ ಕಾಮನ ಹಬ್ಬದ ಕಾವಲ್ಲೇ ಇರದೆ ಸಾಮಾಜಿಕ ಚಿತ್ರಣವನ್ನೂ ನಿರೂಪಿಸುತ್ತದೆ. ಬಾಲ್ಯವಿವಾಹದ ಕರಾಳತೆ ಇಲ್ಲಿ ಕಾಣುತ್ತದೆ. ಕೇವಲ ಇಪ್ಪತ್ತೆರಡು ವರ್ಷಕ್ಕೆ ವಿಧುವೆಯಾಗುವ ಸಾವಿತ್ರಿ ಮುಂದೆ ಹತ್ತು ವರ್ಷಗಳವರೆಗೂ ಪ್ರತಿ ವರ್ಷದಂತೆ ಈ ಕಾಮನ ಹಬ್ಬದ ಬೂದಿಯನ್ನು ತನ್ನ ಮೇಲೆ ಸುರಿಯಿಸಿಕೊಂಡು ತನ್ನ ಗಂಡನಲ್ಲಿ ಸುಖವಾಗಿರವ ಕಲ್ಪನೆ ಅಥವಾ ನಂಬಿಕೆಯ ನೆರಳಲ್ಲಿ ಕಾಲ ತಳ್ಳುತ್ತಿರುತ್ತಾಳೆ. ಅರಿಯದ ಹುಡುಗರ ಗುಂಪಿನ ಹುಡುಗನೊಬ್ಬ ಇಲ್ಲಿ ನಿರೂಪಕನಾಗಿ ಇಡೀ ಕಥೆಯನ್ನು ಚಿತ್ರಿಸಿರುವುದು ಕಥೆಗಾರರ ಚಾಣಾಕ್ಷತೆಯನ್ನು ಪ್ರಕಟಿಸುತ್ತದೆ.

ಕಾಮ ದಹನವು ಭಾರತದಾದ್ಯಂತ ಆಚರಿಸಲಾಗುವ ಒಂದು ಸಾಂಕೇತಿಕ ಹಬ್ಬ. ಇದನ್ನು ಹೋಳಿ ಹುಣ್ಣಿಮೆಯ ಹಿಂದಿನ ದಿನ ಆಚರಿಸಲಾಗುತ್ತದೆ. ಈ

ಹಬ್ಬವು ಶಿವ ಪುರಾಣದಲ್ಲಿನ ಒಂದು ಪ್ರಮುಖ ಘಟನೆಯನ್ನು ಆಧರಿಸಿದೆ. ಪುರಾಣದ ಪ್ರಕಾರ, ತಾರಕಾಸುರ ಎಂಬ ರಾಕ್ಷಸನು ತನ್ನ ತಪಸ್ಸಿನ ಬಲದಿಂದ ಇಡೀ ವಿಶ್ವವನ್ನೇ ನಿಯಂತ್ರಿಸುತ್ತಿದ್ದನು. ಆತನನ್ನು ಶಿವನ ಮಗನಿಂದ ಮಾತ್ರ ಕೊಲ್ಲಲು ಸಾಧ್ಯ ಎಂದು ವರ ಪಡೆದಿದ್ದನು. ಆ ಸಮಯದಲ್ಲಿ ಶಿವನು ತಪಸ್ಸಿನಲ್ಲಿ ನಿರತನಾಗಿದ್ದರಿಂದ, ತಾರಕಾಸುರನ ಅಂತ್ಯಕ್ಕೆ ಕೊನೆಯಿಲ್ಲದಂತಾಗಿತ್ತು. ಆಗ ದೇವತೆಗಳು ಶಿವನನ್ನು ತಪಸ್ಸಿನಿಂದ ಎಬ್ಬಿಸಲು ಕಾಮ ದೇವನ ಸಹಾಯ ಕೋರಿದರು. ಕಾಮ ದೇವನು ಶಿವನ ಮೇಲೆ ಪ್ರೇಮ ಬಾಣವನ್ನು ಪ್ರಯೋಗಿಸಿದಾಗ, ಕೋಪಗೊಂಡ ಶಿವನು ತನ್ನ ಮೂರನೇ ಕಣ್ಣನ್ನು ತೆರೆದನು. ಆ ಕಣ್ಣಿನಿಂದ ಹೊರಬಂದ ಅಗ್ನಿಯು ಕಾಮ ದೇವನನ್ನು ಸುಟ್ಟು ಭಸ್ಮ ಮಾಡಿತು. ನಂತರ ರತಿ ದೇವಿಯ ಪ್ರಾರ್ಥನೆಯ ಮೇರೆಗೆ ಶಿವನು ಕಾಮ ದೇವನಿಗೆ ಮತ್ತೆ ಜೀವ ನೀಡುತ್ತಾನೆ. ಈ ಘಟನೆಯ ನೆನಪಿಗಾಗಿ ಪ್ರತಿ ವರ್ಷವೂ ಹೋಳಿ ಹಬ್ಬದ ಮೊದಲು ಕಾಮ ದಹನವನ್ನು ಆಚರಿಸಲಾಗುತ್ತದೆ. ಜನರು ಕಟ್ಟಿಗೆಗಳನ್ನು, ಕಸಗಳನ್ನು ಒಟ್ಟುಗೂಡಿಸಿ ಅದಕ್ಕೆ ಬೆಂಕಿ ಹಚ್ಚುತ್ತಾರೆ. ಇದು ನಮ್ಮೊಳಗಿರುವ ಕೆಟ್ಟ ಆಲೋಚನೆಗಳು, ಆಸೆಗಳನ್ನು ಸುಟ್ಟುಹಾಕಿ, ಹೊಸ ಜೀವನವನ್ನು ಆರಂಭಿಸುವ ಸಂಕೇತವಾಗಿದೆ. ಈ ಹಬ್ಬವು ಕೆಟ್ಟದರ ಮೇಲೆ ಒಳ್ಳೆಯದರ ವಿಜಯವನ್ನು ಸೂಚಿಸುತ್ತದೆ.

ಕಾಮ ದಹನ ಅಥವಾ ಕಾಮಣ್ಣನ ಹಬ್ಬವನ್ನು ದಕ್ಷಿಣ ಭಾರತದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಈ ಹಬ್ಬವು ವಸಂತಕಾಲದ ಆಗಮನವನ್ನು ಸೂಚಿಸುತ್ತದೆ. ಜನರು ಈ ಸಮಯದಲ್ಲಿ ದೇವಸ್ಥಾನಗಳಿಗೆ ಭೇಟಿ ನೀಡುತ್ತಾರೆ, ಹಣ್ಣು, ಹೂವುಗಳಿಂದ ಕಾಮಣ್ಣನನ್ನು ಪೂಜಿಸುತ್ತಾರೆ. ಕರ್ನಾಟಕ ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳಲ್ಲಿ ಜನರು ಕಾಮನ ಪೂಜೆಗಾಗಿ ಬಿದಿರಿನಿಂದ ಒಂದು ವಿಗ್ರಹವನ್ನು ನಿರ್ಮಿಸುತ್ತಾರೆ. ಪೂಜೆಯ ನಂತರ, ಆ ವಿಗ್ರಹವನ್ನು ಬೆಂಕಿಗೆ ಹಾಕಿ ಸುಟ್ಟು ಹಾಕುತ್ತಾರೆ. ಕೇರಳದಲ್ಲಿ ಈ ಹಬ್ಬವನ್ನು ಓಣಂ ಹಬ್ಬದೊಂದಿಗೆ ಆಚರಿಸುತ್ತಾರೆ. ಕಾಮ ದಹನದ ನಂತರ ಬಣ್ಣದ ಆಟವನ್ನು ಆಡಲಾಗುತ್ತದೆ. ಈ ಆಚರಣೆಗಳು ದುಷ್ಟ ಶಕ್ತಿಗಳ ನಾಶ ಮತ್ತು ಸತ್ಯದ ವಿಜಯವನ್ನು ಸೂಚಿಸುತ್ತವೆ. ಕಾಮದಹನವು ದಕ್ಷಿಣ ಭಾರತದಲ್ಲಿ ಸಾಮಾಜಿಕ ಬಂಧಗಳನ್ನು ಬಲಪಡಿಸುವ ಮತ್ತು ಸಂಭ್ರಮವನ್ನು ಹಂಚಿಕೊಳ್ಳುವ ಒಂದು ಪ್ರಮುಖ ಸಂದರ್ಭವಾಗಿದೆ.

ಕಾಮ ದೇವನನ್ನು ಶಿವನು ಸುಟ್ಟು ಭಸ್ಮ ಮಾಡಿದ ಕಥೆಯು ಶಿವ ಪುರಾಣದ ಪ್ರಮುಖ ಭಾಗವಾಗಿದೆ. ಕಾಮ ದೇವನು ಶಿವನನ್ನು ತಪಸ್ಸಿನಿಂದ ಎಬ್ಬಿಸಲು

ಪ್ರಯತ್ನಿಸಿದಾಗ ಏನಾಗುತ್ತದೆ ಎಂಬುದನ್ನು ಇದು ವಿವರಿಸುತ್ತದೆ.

ಸ್ಕಂದ ಪುರಾಣದಲ್ಲಿಯೂ ಹೋಳಿ ಮತ್ತು ಕಾಮ ದಹನದ ಕುರಿತು ಉಲ್ಲೇಖಗಳಿವೆ. ಇದರ ಮೂಲಕ ಹಬ್ಬದ ಮೂಲ ಮತ್ತು ಹಿನ್ನೆಲೆಯನ್ನು ತಿಳಿಯಬಹುದು.

ಸ್ತ್ರೀ ಸಂವೇದನೆ

'ಕಾಮನಹಬ್ಬದ ಒಂದು ಕತೆ'ಯಲ್ಲಿ ಪ್ರಧಾನ ಪಾತ್ರದಲ್ಲಿ ಕಾಣುವುದು ಸಾವಿತ್ರಮ್ಮ. ಚಿಕ್ಕ ವಯಸ್ಸಿನಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡು ಗಂಡನಾಗಬೇಕಾಗಿದ್ದವನ ಮನೆಯಲ್ಲಿ ತನ್ನ ಹತ್ತನೇ ವಯಸ್ಸಿನ ಆಸುಪಾಸಿನಲ್ಲಿಯೇ ಬಂದು ನೆಲೆಸಿದವಳು. ಅವಳಿಗೆ ಗಂಡನೆಂದರೆ ಅಪಾರ ಪ್ರೀತಿ ಹಾಗೂ ಗೌರವ. ಅವನು ಜವಾಬ್ದಾರಿಯುತ ಗಂಡಸಲ್ಲದಿದ್ದರೂ ಅವನನ್ನು ಸದಾ ನೋಡುತ್ತಾ ಕಾಲ ಕಳೆಯುವ ಹಾಗೂ ಅವನಿಲ್ಲದಿದ್ದಾಗ ಅವನ ಕುರಿತೇ ಯೋಚಿಸುವ ಪ್ರವೃತ್ತಿಯನ್ನು ತನ್ನ ಚಿಕ್ಕವಯಸ್ಸಿನಿಂದಲೇ ರೂಢಿಸಿಕೊಂಡಿದ್ದ ಮುಗ್ಧ ಹೆಣ್ಣುಮಗಳು. ಆಕೆಯ ಗಂಡ ಶ್ರೀನಿವಾಸ ಶಾಸ್ತ್ರಿ. ಆತನನ್ನು ಎಲ್ಲರೂ ಶೀನೀ ಎಂದು ಕರೆಯುತ್ತಿರುತ್ತಾರೆ. ಆತ ಈಕೆಯನ್ನು ಸಾತೀ ಎಂದು ಪ್ರೇಮದಿಂದಲೇ ಕರೆಯುತ್ತಾನೆ. ನೆಮ್ಮದಿಯ ಬದುಕಿಗೆ ಇಂತಹ ಕನಸುಗಳು ನನಸಾದರೆ ಅಷ್ಟೇ ಸಾಕಾಗಿಬಿಡುತ್ತವೆ. ಆದರೆ ಗಂಡನಾಗಿದ್ದ ಶೀನೀ ಊರಿನ ಉಸಾಬರಿಗಳಲ್ಲೇಲ್ಲ ತಲೆತೂರಿಸುವ ಪ್ರವೃತ್ತಿಯವನು. ಒಂದೋ ಇವನು ಗಲಾಟೆಯ ಭಾಗವಾಗಬೇಕು, ಇಲ್ಲ ಇವನು ಗಲಾಟೆಯನ್ನು ಬಿಡಿಸುವ ಭಾಗವಾದರೂ ಆಗಬೇಕು. ಇಂತಹ ಪ್ರವೃತ್ತಿಯ ಗಂಡನೊಂದಿಗೆ ಬಾಳುವುದು ಸ್ವಲ್ಪ ಕಷ್ಟದ ಕೆಲಸವೇ ಸರಿ ಹೆಣ್ಣುಮಕ್ಕಳಿಗೆ. ಇವನು ಮಾಡುತ್ತಿದ್ದ ಒಂದೇ ಒಂದು ಒಳ್ಳೆಯ ಕೆಲಸ ದೇವರ ಪೂಜೆಯ ಸಂದರ್ಭದಲ್ಲಿ, ಉತ್ಸವದ ಸಂದರ್ಭದ್ಲಲ್ಲಿ ಗಂಟೆ ಬಾರಿಸುವುದು. ಅದಕ್ಕೆ ಪ್ರತಿಯಾಗಿ ಎರಡು ಕಾಯಿ ಹೋಳು ವಸೂಲುಮಾಡುವುದು. ಗಂಡನಾಗಿದ್ದ ಅವನನ್ನು ನಿಭಾಯಿಸುವುದು ಕಷ್ಟವಾಗದೇ ಇರುತ್ತದೆಯೇ ಹೀಗಿದ್ದರೆ. ಜೊತೆಗೆ ಊರಿನಲ್ಲಿ ಮೊದಲ ಉಪ್ಪಿನ ಕಾಯಿ ಇವರ ಮನೆಯಲ್ಲಿಯೇ. ಅದಕ್ಕೆ ತಯಾರಿಯಷ್ಟೇ ಹೆಣ್ಣುಮಕ್ಕಳು ಮಾಡಬೇಕಿತ್ತು. ಆದರೆ ಅದಕ್ಕೆ ಬೇಕಾಗುವ ಮಾವಿನ ಮಿಡಿಗಳನ್ನು ಕದ್ದು ಸಂಗ್ರಹಿಸುವುದೋ, ಕಿತ್ತು ತರುವುದೋ ಇವನ ಕಾಯಕವಾಗಿತ್ತು. ಅಕ್ಕ ಪಕ್ಕದವರ ದೂರೆನೆಂದರೆ ತಮ್ಮ ಗಿಡಗಳಲ್ಲಿ ಬಿಟ್ಟ ಮಾವಿನ ಕಾಯಿಯೋ, ದಾಳಿಂಬೆಯೋ ಯಾವುದಾದರೂ ಅದರ ಮೊದಲ ಫಲವನ್ನು ಹಾರಿಸಿಬಿಡುತ್ತಿದ್ದ ಶೀನೀ. ಆತನ ಈ ಪ್ರವೃತ್ತಿಯನ್ನು ಸಹಿಸಿಕೊಳ್ಳುತ್ತಿದ್ದ ಸಹನಾ

ಮೂರ್ತಿಗಳಾಗಿ ಕಾಣೀಸುತ್ತಾರೆ ಮನೆಯ ಹೆಣ್ಣುಮಕ್ಕಳು.

ಸಾವಿತ್ರಮ್ಮ ತಂದೆ ತಾಯಿಗಳನ್ನು ಚಿಕ್ಕಂದಿನಲ್ಲಿಯೇ ಕಳೆದುಕೊಂಡ ಹೆಣ್ಣಿ ಮಗಳು. ಗಂಡನನ್ನು ಸದಾ ಧ್ಯಾನಿಸುತ್ತಲೇ ಜೀವನ ಕಳೆಯುತ್ತಿದ್ದ ಹೆಣ್ಣುಮಗಳು. ಊರಿಗೆ ಬಂದ ಯಾವುದೋ ಗುರುಗಳಿಂದ ಹೊರಟು ಹೋದ ಗಂಡನ್ನು ಎಷ್ಟು ಗಾಢವಾಗಿ ಧ್ಯಾನಿಸಿರಬಹುದು. ಇಲ್ಲಿ ಅಷ್ಟೇ ಗಾಢವಾಗಿ ಧ್ಯಾನಿಸುವ ಮತ್ತೊಂದು ಜೀವ ಶೀನಿಯ ತಾಯಿ. ಆದರೆ ಇಬ್ಬರಿಗೂ ಯಾವುದೇ ಗೌರವವಿರುವುದಿಲ್ಲ. ವಿಶೇಷವಾಗಿ ಶೀನಿಯ ಒಡಹುಟ್ಟಿದ ನಾಲ್ಕುಜನ ಅಣ್ಣತಮ್ಮಂದಿರು ಅವನು ಸತ್ತೇ ಹೋದನೆಂದು ಭಾವಿಸಿ ಆಸ್ತಿಯನ್ನು ಹಂಚಿಕೆ ಮಾಡಿಕೊಳ್ಳುವ ಸಂದರ್ಭ ಬಂದಾಗ ತನ್ನ ಸಹೋದರನ ಮಡದಿಯೆಂದಾಗಲಿ, ಜನ್ಮ ನೀಡಿದ ತಾಯಿಯೆಂದಾಗಲಿ ಯಾವುದೇ ಸ್ಥಾನ ಕೊಡದೆ ಅವರಿಬ್ಬರಿಗೂ ಸೇರಿ ಜೀವನಾಂಶಕ್ಕೆಂದು ಒಂದಿಷ್ಟು ಜಾಗವನ್ನು ಕೊಟ್ಟು ಅಣ್ಣತಮ್ಮಂದಿರೇ ಆಸ್ತಿ ಹಂಚಿಕೆ ಮಾಡಿಕೊಳ್ಳುತ್ತಾರೆ. ಅಲ್ಲಿಯೂ ಹೆಣ್ಣಿನ ಕಡೆಗಣನೆ ಸ್ಪಷ್ಟವಾಗಿ ಚಿತ್ರಿತವಾಗುತ್ತದೆ.

ಗಂಡ ಗುರುಗಳೊಂದಿಗೆ ಹೋದವನು ಮತ್ತೆ ಬರುತ್ತಾನೋ ಇಲ್ಲವೋ ಎಂಬ ಗೊಂದಲದಲ್ಲಿಯೇ ಇದ್ದ ಸಾವಿತ್ರಮ್ಮ ಆಸ್ತಿ ಹಂಚಿಕೆಯ ಹಂತಕ್ಕೆ ಆಸೆಯನ್ನು ತ್ಯಜಿಸಿ ವಿಧುವೆಯಂತೆ ವೇಷಭೂಷಣಗಳಲ್ಲಿ ಸೀಮಿತಳಾಗುತ್ತಾಳೆ. ಎಲ್ಲರೂ ಕೇಳಿದರೂ ಅವರಿಲ್ಲದ ತನಗೆ ಅಲಂಕಾರ ಹಾಗೂ ಕೇಶರಾಶಿ ಏತಕ್ಕೆನ್ನುವಂತೆ ಪ್ರಶ್ನೆ ಮಾಡುತ್ತಾಳೆ. ಕಾಮದಹನದ ಸಂದರ್ಭದಲ್ಲಿ ಉರಿದು ಉಳಿದ ಬೂದಿಯನ್ನು ಮೈಮೇಲೆ ಸುರದರೆ ಮುಂದಿನ ಜನ್ಮದಲ್ಲಿ ಅಥವಾ ಸ್ವರ್ಗದಲ್ಲಿ ನಿನ್ನ ಗಂಡನನ್ನು ಕೂಡಿಕೊಳ್ಳುವೆ ಎಂಬ ಕಾಲ್ಪನಿಕ ಕಥೆಯನ್ನು ನಂಬಿಕೊಂಡ ಸಾವಿತ್ರಮ್ಮ ಆ ಪದ್ಧತಿಗೆ ತಲೆಬಾಗುತ್ತಾಳೆ. ಊರಿನ ಇತರೆ ವಿಧುವೆಯರು ಅದರಲ್ಲಿ ಯಾವ ಉರುಳಿಲ್ಲವೆಂದು ಹೇಳಿದರೂ ಸ್ವತಃ ಅತ್ತೆಯೇ ಬೇಡವೆಂದರೂ ಕೇಳದೆ ಗಂಡನೊಂದಿಗೆ ಕೂಡಿಕೊಳ್ಳುವ ಕಾಲ್ಪನಿಕ ಮಾತಿಗೆ ತಲೆಬಾಗಿ ಸತತವಾಗಿ ಬೂದಿಯನ್ನು ಹುಯ್ಸಿಕೊಳ್ಳುವ ಹಾಗೂ ಕೆಟ್ಟ ಮಾತುಗಳಿಂದ ಹಂಗಿಸಿಕೊಳ್ಳುವ ಜೊತೆಗೆ ಉಗುಳಿಸಿಕೊಳ್ಳುವ ಕೆಲಸಕ್ಕೆ ಸಿದ್ಧವಾಗುತ್ತಾಳೆ. ಮೊದಲನೇ ವರ್ಷ ಖುಷಿಯಿದ್ದರೂ ನಂತರದ ವರ್ಷಗಳಲ್ಲಿ ಊರಿನ ಹುಡುಗರಿಗೇ ಇದು ಅನ್ಯಾಯವೆನಿಸುತ್ತದೆ. ಅದನ್ನು ತಡೆಯಲು ಹೇಳಿದರೂ ಸಾವಿತ್ರಮ್ಮನೇ ಕೇಳದಾಗುತ್ತಾಳೆ. ಹೀಗೇ ತನ್ನ ಸ್ತ್ರೀ ಪ್ರೇಮದ ತೀವ್ರತೆಯನ್ನು ತೋರ್ಪಡಿಸುತ್ತಾಳೆ. ಹತ್ತನೇ ವರ್ಷ ಇಂತಹ ಸಂದರ್ಭದಲ್ಲಿ ಸತ್ತೇ ಹೋಗಿದ್ದನೆನ್ನುವ ಗಂಡ ಪ್ರತ್ಯಕ್ಷನಾದಗ ಮೂರ್ಛೆಹೋಗಿಬಿಡುತ್ತಾಳೆ. ಯಾರ ಬದುಕಿಗಾದರೂ ಸ್ವೀಕರಿಸಲು ಕಷ್ಟವಾಗುವ

ಸಂದರ್ಭ. ಸತ್ತ ಗಂಡ ಪ್ರತ್ಯಕ್ಷನಾದರೆ ಆ ಹೆಣ್ಣಿನ ಮನಸ್ಸು ಪಡುವ ಯಾತನೆಯನ್ನು ಇಲ್ಲಿ ಕಥೆಗಾರು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಸಹಜವಾಗಿಯೇ ಹೆಣ್ಣು ಕುಟುಂಬದ ಕಣ್ಣು. ಕುಟುಂಬದ ಸಂಸ್ಕಾರವನು ಕಾಪಾಡುವುದು ಆಕೆಯೆ. ಇಲ್ಲಿ ಪ್ರಧಾನವಾಗಿ ಕಾಣಿಸುವು ಎರಡೂ ಪಾತ್ರಗಳು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಈ ಅಂಶಗಳನ್ನು ಬಿಂಬಿಸುತ್ತವೆ. ಸಾವಿತ್ರಮ್ಮನ ಪಾತ್ರದ ವಿಚಾರದಲ್ಲಿ ಕಥೆಗಾರರು ಸೋತು ಗೆದ್ದವರಂತೆ ಕಾಣಿಸುತ್ತಾರೆ.

ಕೌಟುಂಬಿಕ ಕಟ್ಟುಪಾಡುಗಳು

ಕಾಮನಬ್ಬದ ಕಥೆಯಲ್ಲಿ ಎರಡು ಕುಟುಂಬಗಳು ಕೇಂದ್ರ ಸ್ಥಾನದಲ್ಲಿ ಕಾಣಿಸುತ್ತವೆ. ಒಂದು ಸಾವಿತ್ರಮ್ಮನದ್ದು, ಮತ್ತೊಂದು ಶ್ರೀನಿವಾಸ ಶಾಸ್ತ್ರಿಗಳದ್ದು. ಸಾವಿತ್ರಮ್ಮನ ಕುಟುಂಬ ಅಂದರೆ ಅವರ ತಂದೆ ತಾಯಿಗಳು ಆಕೆಯ ಚಿಕ್ಕ ವಯಸ್ಸಿನಲ್ಲಿಯೇ ದೂರವಾಗಿಬಿಡುತ್ತದೆ. ಆ ಕುಟುಂಬ ಶ್ರೀನಿವಾಸ ಶಾಸ್ತ್ರಿಗಳ ಕುಟುಂಬದೊಂದಿಗೆ ಬೆರೆತುಹೋಗುತ್ತದೆ. ಶ್ರೀನಿವಾಸ ಶಾಸ್ತ್ರಿಗಳ ಕುಟುಂಬವೇ ವಿಚಿತ್ರವಾಗಿ ಕಾಣಿಸುತ್ತದೆ. ಅದು ನರಸಿಂಹಶಾಸ್ತ್ರಿಗಳ ಮನೆ. ಅವರು ಶ್ರೀನಿಯವರ ತಂದೆ ಹಾಗೂ ಮನೆಯ ಯಜಮಾನರು. ಆದರೆ ವಯಸ್ಸಾಗಿದ್ದವರು. ಅವರ ನಾಲ್ಕು ಜನ ಮಕ್ಕಳಲ್ಲಿ ಶ್ರೀನೀ ತುಂಟ. ಉಳಿದ ನಾಲ್ಕು ಜನ ಅಣ್ಣಂದಿರು ತಕ್ಕಮಟ್ಟಿಗಿದ್ದರೂ ಶ್ರೀನೀ ಓದು ಬರಹ ಕಡಿಮೆ ಇದ್ದ ಹಳ್ಳಿ ಹುಡುಗ. ಕೊನೆಯ ಹುಡುಗ ತುಂಟತನದಿಂದ ಪ್ರತಿನಿತ್ಯವೂ ಊರಿನ ಸಮಸ್ಯೆಗಳ ಭಾಗವಾಗುವುದನ್ನು ಪೋಷಕರು ತಡೆಯುವುದೇ ಇಲ್ಲ. ಒಂದು ರೀತಿಯಲ್ಲಿ ಬಿಟ್ಟ ಗಾಳೀಪಟದ ಹಾಗೆ ಬೆಳೆದವನು. ಯಾರ ಮಾತೂ ಕೇಳದವನಿಗೆ ಮದುವೆ ಮಾಡಿದರೆ ಸರಿಯಾಗುತ್ತಾನೆಂದು ಅವನಿಗೆ ಮದುವೆ ಮಾಡುತ್ತಾರೆ. ಇದೊಂದು ಕಟ್ಟ ಪದ್ದತಿ ಹಳ್ಳಿಗಳಲ್ಲಿ. ಅಂತಹ ವ್ಯಕ್ತಿಯನ್ನು ಮದುವೆಯಾಗುವ ಹುಡುಗಿಯ ಬದುಕಿನ ಕುರಿತಾಗಿ ಯಾರೂ ಯೋಚಿಸುವುದಿಲ್ಲ. ಬಹುಶಃ ಗಂಡಿಗೆ ಎಲ್ಲ ರೀತಿಯಲ್ಲೂ ಸೇವೆ ಮಾಡುವುದೇ ಹೆಣ್ಣಿನ ಕೆಲಸವೆನ್ನುವ ಪುರಾತನ ಚಿಂತನೆಯ ಫಲವೆಂದರೂ ತಪ್ಪಾಗುವುದಿಲ್ಲ. ಐದು ಜನರಲ್ಲಿ ಒಬ್ಬ ಜವಾಬ್ದಾರಿ ಇಲ್ಲದೆ ಸುತ್ತುತ್ತಿರುವುದುನ್ನು ಯಾರೊಬ್ಬರೂ ಸರಿಪಡಿಸುವ ಗೋಜಿಗೆ ಹೋಗುವುದಿಲ್ಲ. ಯಾರೋ ಗುರುಗಳು ಬಂದು ಅವರೊಂದಿಗೆ ತಾನೂ ಕೆಲದಿನಗಳ ಮಟ್ಟಿಗೆ ಹೋಗಿ ಬರುತ್ತೇನೆಂದು ಹೇಳಿ ಹೋಗೇ ಬಿಡುವುದಿದಿಯಲ್ಲ ಇದು ಅವನ ಮನಸ್ಥಿತಿಯನ್ನು ತಿಳಿಸುತ್ತದೆ. ಇಂತಹ ವ್ಯಕ್ತಿಗೆ ವಿವಾಹವೆನ್ನುವ ಬಂಧವನ್ನ ಕಟ್ಟಿದೆ ತಪ್ಪೇನೋ ಎನ್ನಿಸುತ್ತದೆ. ತಮ್ಮನಾದವನು ಮರಳಿ

ಬರದೇ ಇದ್ದಾಗ ಅದರ ಮೂಲದ ಕುರಿತು ಹುಡುಕದೆ ಅವನನ್ನು ಬಿಟ್ಟು ಉಳಿದವರು ಆಸ್ತಿ ಹಂಚಿಕೆಯ ಪ್ರಕ್ರಿಯೆ ಮಾಡುವುದು ಜೊತೆಗೆ ಅಲ್ಲಿ ತಮ್ಮ ನಾದಿನ ಹಾಗೂ ತಾಯಿಯನ್ನು ಕಡೆಗಣಿಸುವುದು ಪುರುಷ ಪ್ರಧಾನ ಸಮಾಜದ ಸಾಕ್ಷಿಗಳಂತೆ ಕಾಣಿಸುತ್ತದೆ. ಒಬ್ಬ ಅಣ್ಣ ತಾನೂ ಉತ್ತರಕ್ಕೆ ಪ್ರವಾಸ ಮಾಡಿ, ಅಲ್ಲಿ ತಮ್ಮ ತಮ್ಮ ಶ್ರೀನೀ ಸತ್ತನೆಂಬ ಸುದ್ದಿಯನ್ನು ಪಸರಿಸುವುದೂ ಕೂಡ ಅವರ ಮನಸ್ಥಿತಿಯನ್ನು ಪರಿಚಯಿಸುತ್ತದೆ. ಒಟ್ಟಾರೆಯಾಗಿ ಅವರಿಗೆ ಆಸ್ತಿಯೇ ಮುಖ್ಯವಾಗಿಬಿಡುತ್ತದೆ. ಮರಳಿ ಬಂದ ಶ್ರೀನೀ ಅವರಿಂದ ಮತ್ತೆ ಆಸ್ತಿಯನ್ನು ಮರಳಿ ಪಡೆಯುವುದೂ ಕೂಡ ವಿಚಿತ್ರವಾಗಿ ಕಾಣುತ್ತದೆ. ಇದೊಂದು ರೀತಿಯ ಕೌಟುಂಬಿಕ ಮೌಲ್ಯಗಳ ಅಧಃಪತನದ ಹಾಗೆ ಕಾಣಿಸುತ್ತದೆ.

ಧಾರ್ಮಿಕ ನಿಷ್ಠೆಗಳು

ಊರಿನಲ್ಲಿ ಸಿಗುವ ಯಾವುದೇ ಹಣ್ಣು ಕಾಯಿಗಳನ್ನು ಬಿಡದೆ ಕದಿಯುತ್ತಿದ್ದ ಶ್ರೀನೀ ಧರ್ಮ ನಿಷ್ಠನಾಗಿದ್ದ. ಅದು ಅವನ ಖುಷಿಯಾಗಿತ್ತು. ಜಾತ್ರಾ ಮಹೋತ್ಸವಗಳಲ್ಲಿ ಗಂಟೆ ಬಾರಿಸುವುದು ಅವನಿಗೆ ಸಂತೋಷವನ್ನು ನಿಡುತ್ತಿದ್ದ ಕೆಲಸ. ಅದಕ್ಕೆ ಪ್ರತಿಯಾಗಿ ಅವನು ಪಡೆಯುತ್ತಿದ್ದುದೂ ಕೂಡ ಎರಡು ಹೋಳು ತೆಂಗಿನ ಕಾಯಿಯನ್ನಷ್ಟೇ ಪಡೆಯುತ್ತಿದ್ದ. ಅವನನ್ನು ಯಾರೂ ಆ ಕಾರ್ಯಕ್ಕೆ ನೇಮಿಸದೇ ಹೋದರೂ ಕೂಡ ತಾನೇ ಸ್ವಯಂ ಪ್ರೇರಣೆಯಿಂದ ಮಾಡುತ್ತಿರುತ್ತಾನೆ. ಜೊತೆಗೆ ಆ ಊರಿಗೆ ಬಂದ ಒಬ್ಬ ಗುರುವಿನ ಹಿಂದ ಅವರ ಸೇವೆಗೆಂದು ಹೋಗುವುದು ಅವನ ಧರ್ಮ ನಿಷ್ಠೆಯನ್ನು ತೋರಿಸುತ್ತದೆ. ಕೆಲವು ದಿನಗಗಳು ಹೋಗಿ ಬರುತ್ತೇನೆಂದವನು ವರ್ಷಾನುಗಟ್ಟಲೆ ಹೋಗೇ ಬಿಡುವುದಿದಿಯಲ್ಲ ಅದು ಅವನ ಗುರುಸೇವೆಯ ಸ್ವರೂಪ. ಅವನು ಸತ್ತೇ ಹೋದನೆಂದಿದ್ದರೂ ಹತ್ತು ವರ್ಷಗಳ ನಂತರ ಅವನು ಮರಳಿ ಬಂದನೆಂದರೆ ಅವನು ಯಾವುದೋ ಧಾರ್ಮಿಕ ಬದುಕಿನಲ್ಲೇ ಕ್ಷೇತ್ರ ಪರ್ಯಟನೆ ಮಾಡಿಯೇ ಬಂದಿರುವುದು ನಿಜ ಸತ್ಯ. ದಕ್ಷಿಣದಿಂದ ಹೊರಟ ಅವನು ಕಲ್ಕತ್ತಾದ ಪ್ರದೇಶದಲ್ಲಿ ಅನಾರೋಗ್ಯಕ್ಕೆ ತುತ್ತಾಗವುದು ಅದಾದ ನಂತರ ಅದರಿಂದ ಹೊರಬಂದು ಉತ್ತರದ ತೀರ್ಥ ಯಾತ್ರೆಗಳನ್ನು ಮಾಡುವುದು ಅವನ ಧರ್ಮಶ್ರದ್ಧೆಯನ್ನು ತೋರಿಸುತ್ತದೆ. ಅದಕ್ಕಿಂತ ವಿಶೇಷವಾಗಿ ಕಾಣುವುದು ನಮಗೆ ಶ್ರೀನೀಯ ಮಡದಿ ಸಾವಿತ್ರಮ್ಮ. ಗಂಡ ಕಾಣದಾಗಿರುವು ಯಾತನೆಯನ್ನು ತನ್ನೊಳಗೇ ಜೀವಂತವಾಗಿರಿಸಿಕೊಂಡು ಅತ್ಯಂತ ಶ್ರದ್ಧಾಭಕ್ತಿಗಳಿಂದ ಗಂಡನ ಕಾರಣಕ್ಕೆ ಸತತವಾಗಿ ಅತ್ಯಂತ ಹೀನ ರೀತಿಯಲ್ಲಿ ತನ್ನ ಮೇಲೇ ತಾನೆ ನಿಂದನೆಗಳನ್ನು ಕಷ್ಟಗಳನ್ನೂ ಹೇರಿಕೊಳ್ಳುತ್ತಾಳೆ. ಮನುಷ್ಯ ಸಮಾಜದಲ್ಲಿ ಧಾರ್ಮಿಕ ಶ್ರದ್ಧೆಯೆಂಬುದು ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದೆ.

ಈ ಕಥೆಯಲ್ಲಿಯೂ ಕೂಡ ಧಾರ್ಮಿಕ ಅಂಶ ಚಾಲಕ ಶಕ್ತಿಯಾಗಿ ಕಾಣಿಸುತ್ತದೆ.

ಗ್ರಾಮ ಸೂಕ್ಷ್ಮಗಳು

ಗ್ರಾಮಗಳು ಬದುಕುಗಳನ್ನು ಕಟ್ಟುವ, ಕೆಲವೊಮ್ಮೆ ಮನಸುಗಳನ್ನು ಮುರಿಯುವ ಕೆಲಸಗಳನ್ನು ಮಾಡುತ್ತವೆ. ಈ ಕಥೆಯಲ್ಲಿ ಮಾಸ್ತಿಯವರು ಎರಡೂ ನೋಟ ಕ್ರಮಗಳನ್ನು ಪರಿಚಯಿಸುತ್ತಾರೆ. ತನ್ನ ಅಣ್ಣಂದಿರ ಸ್ವಾರ್ಥದಿಂದಾಗಿ ತಾನು ಆಸ್ತಿ ಕಳೆದುಕೊಳ್ಳುವ ವಿಚಾರ ಹಾಗೂ ಹೆಣ್ಣು ಎನ್ನುವ ಕಾರಣಕ್ಕೆ ಅವರಿಗೆ ಯಾವುದೇ ಬದುಕಿನ ಬದ್ರತೆಯನ್ನು ನೀಡದೇ ಮಾಡುವ ಸನ್ನಿವೇಶಗಳು ಮನಸುಗಳನ್ನು ಮುರಿಯುವ ಕೆಲಸವನ್ನು ಮಾಡುತ್ತವೆ. ಅದೇ ಗ್ರಾಮ ಅಪಹಾಸ್ಯ ಮಾಡುತ್ತಿದ್ದ ಗ್ರಾಮ ತಮ್ಮ ತಪ್ಪಿನ ಅರಿವಾಗಿ ಬದಲಾವಣೆಯನ್ನು ಕಾಣಿಸುವಂತದ್ದು. ಅಂದರೆ, ನೆಪಮಾತ್ರಕ್ಕೆ ಒಂದು ಚಿಟಿಕೆಯಷ್ಟು ಬೂದಿಯನ್ನು ಹಾಕಿ ಒಮ್ಮೆ ಬಾಯಿ ಬಡಿದುಕೊಳ್ಳುವುದು. ಇವು ಗ್ರಾಮಗಳ ಸೂಕ್ಷ್ಮತೆಯನ್ನು ಪರಿಚಯಿಸುತ್ತವೆ.

ಕಥೆಯಲ್ಲಿ ಪ್ರಾರಂಭದಿಂದಲೇ ಕಾಣಿಸುವುದು ಆ ಊರಿನ ಸಮಾಜ. ಹೇಗೆ ಕಾಮನಹಬ್ಬದಂತಹ ಆಚರಣೆಗಳನ್ನು ಒಟ್ಟಿಗೆ ಆಚರಿಸುತ್ತಾರೆ, ತನ್ಮೂಲಕ ಜೀವನ ಪ್ರೀತಿಯನ್ನು ಹೆಚ್ಚಿಕೊಳ್ಳುತ್ತಾರೆಂಬುದನ್ನು ಕಾಣಿಸುತ್ತಾರೆ. ನಮ್ಮ ನಿರೂಪಕರು ಅತ್ಯಂತ ಚಿಕ್ಕವರಿದ್ದಾಗ ಆ ಊರಿನ ಯುವಕರನ್ನು ನೋಡಿ ಕಲಿತಿರುವ ಆಚರಣೆ ಇವರೇ ಆ ಹಂತಕ್ಕೆ ಹೋದಾಗ ಅವರಿಗೆ ಹೇಗೆ ಕಾಣಿಸುತ್ತದೆ ಎಂಬುದರ ಸೂಕ್ಷ್ಮಗಳನ್ನು ತಿಳಿಸುತ್ತಾರೆ. ಸಾವಿತ್ರಮ್ಮ ತಾವೇ ತಾವಾಗಿ ಬೂದಿ ಹುಯ್ಸಿಕೊಳ್ಳಲು ಬರುವ ಪ್ರಾರಂಭದಲ್ಲಿ ಇದ್ದ ಉತ್ಸಾಹ ಸಮಾಜಕ್ಕೆ ನಂತರದ ವರ್ಷಗಳಲ್ಲಿ ಮಾಯವಾಗುತ್ತದೆ. ಅವರಲ್ಲಿದ್ದ ಆ ಕುಚೇಷ್ಟೆಯ ಅಥವಾ ಅಪಹಾಸ್ಯದ ಸ್ವಭಾವ ಮಾಯವಾಗಿ ಅವರ ಬಗ್ಗೆ ಕನಿಕರ ಮೂಡುತ್ತದೆ. ಕಾಮನ ಹುಣ್ಣಿಮೆಯ ದಿನ ಕಾಮನದಹನಕ್ಕೆ ಊರಿನ ಹಳೆಯ ಸಾಮಾನುಗಳನ್ನು ತಂದು ಸುಡುವ ಪದ್ಧತಿಗೆ ಹೆಗ್ಗೆಲ್ಲ ಊರು ಸಹಕರಿಸುತ್ತಿತ್ತೆಂದು ಇಲ್ಲಿ ತಿಳಿಯಬಹುದು. ಕೆಲವೊಮ್ಮೆ ಅಮೂಲ್ಯವಾದುದೆಂದು ತಿಳಿದೂ ಅವರನ್ನು ಕಾಲೆಳೆಯಲು ಹೇಗೆ ಕದ್ದು ಆಪೋಷಣ ಮಾಡಲಾಗುತ್ತಿತ್ತೆಂದು ತಿಳಿಸುತ್ತಾರೆ. ಇಷ್ಟವಿಲ್ಲದಿದ್ದರೂ, ತನ್ನ ಬೆಲೆ ಬಾಳುವ ಮರಮುಟ್ಟುಗಳು ಸುಡಲ್ಪಡುತ್ತಿವೆ ಎಂದು ಗೊತ್ತಿದ್ದರೂ ಕೊನೆಗೆ ಮನ ಕರಗಿ ತಾವೂ ಬಂದು ಆ ಸನ್ನಿವೇಶವನ್ನು ಆಸ್ವಾದಿಸುವ ಸಂದರ್ಭಗಳೂ ಕೂಡ ಕಾಣಸಿಗುತ್ತವೆ. ಚಿಟಿಕೆಯಷ್ಟನ್ನೇ ಸಾವಿತ್ರಮ್ಮನ ತಲೆಯ ಮೇಲೆ ಹಾಕಿ ಒಂದೆರಡು ಬಾರಿಯಷ್ಟೇ ಬಾಯಿ ಬಡಿದುಕೊಂಡು ಹೊರಬಂದು ತಲೆತಗ್ಗಿಸುತ್ತಿದ್ದ ಊರು ಸುಸಂಸ್ಕೃತ ಸಮಾಜದಂತೆ ಕಾಣುತ್ತದೆ.

ಕಾಮ ಹಬ್ಬದ ಒಂದು ಕಥೆ ಮಾಸ್ತಿಯವರ ಕಥೆಗಳ ಅಧ್ಯಯನದ ಹಾದಿಯಲ್ಲಿ ಸಿಗುವ ಮಹತ್ವದ ಕಥೆ. ಇಲ್ಲಿ ಸಮಾಜದ ಸ್ಪಷ್ಟ ಚಿತ್ರಣವನ್ನು ಸೂಕ್ಷ್ಮ ನೆಲೆಗಳಲ್ಲಿ ಕಟ್ಟಿಕೊಡುವ ಕೆಲಸವನ್ನು ಅವರು ಮಾಡಿದ್ದಾರೆ. ಸಾವಿತ್ರಮ್ಮನ ಪಾತ್ರವನ್ನು ಕೇಂದ್ರವಾಗಿಸಿಕೊಂಡು ಕಾಮನ ಹಬ್ಬದ ಆಚರಣೆಯು ಸಂದರ್ಭದಲ್ಲಿ ನಡೆಯಬಹುದಾಗಿರುವ ಅಂಶಗಳನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿ ನಡೆದಿದೆ. ಆಚರಣೆ ಹಾಗೂ ನಂಬಿಕೆಗಳು ನಮ್ಮ ಮೇಲೆ ಎಂದಿಗೂ ಸವಾರಿ ಮಾಡದ ಹಾಗೆ ಇರಬೇಕೆನ್ನುವ ಅಂಶಗಳನ್ನು ಇಲ್ಲಿ ಅತ್ಯಂತ ಸೂಕ್ಷ್ಮ ನೆಲೆಯಲ್ಲಿ ವಿವರಿಸಿದ್ದಾರೆ. ಗ್ರಾಮೀಣ ಕಟ್ಟು ಪಾಡುಗಳು, ಜನರ ಧಾರ್ಮಿಕ ನಂಬಿಕೆಗಳು ಓದುಗರನ್ನು ಕಟ್ಟಿಹಾಕುತ್ತವೆ. ಜೊತೆಗೆ ತೀಕ್ಷ್ಣವಾಗಿ ಯೋಚಿಸುವಂತೆ ಮಾಡುತ್ತವೆ. ಇಲ್ಲಿನ ಪಾತ್ರಗಳೂ ಕೂಡ ನಮ್ಮ ಬದುಕಿನಲ್ಲಿ ಎದುರುಗೊಂಡ ಎಷ್ಟೋ ಪಾತ್ರಗಳ ಹಾಗೆ ಕಾಣಿಸುತ್ತವೆ. ಕಥೆ ಹಾಗೂ ಕಥೆಗಾರ ಉಳಿಯುವುದು ಇದೇ ಪದ್ಧತಿಯಿಂದಲ್ಲವೇ.!

ಪರಾಮರ್ಶನ ಗ್ರಂಥಗಳು :

1. ಮಾಸ್ತಿಯವರ ಸಣ್ಣ ಕಥೆಗಳು (ಸಮಗ್ರ)
2. ಭಾರತೀಯರ ಹಬ್ಬ ಹರಿದಿನಗಳು – ಶ್ರೀ ಶ್ರೀ ರಂಗಪ್ರಿಯ
3. ಬಾಗಲಕೊಟೆ ಹೋಲಿ: ಒಂದು ಸಂಸ್ಕೃತಿಕ ಅಧ್ಯಯನ – ಡಾ. ಪ್ರಕಾಶ ಖಾಡೆ
4. https://archive.org/details/nsk_20220326/page/n5/mode/2up
5. https://kn.wikipedia.org/wiki/ಮಾಸ್ತಿ_ವೆಂಕಟೇಶ_ಅಯ್ಯಂಗಾರ್

***

ಜನಪದ ಲಾವಣಿ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಚಿತ್ರಣ

1
ಡಾ. ಸಂಗಮೇಶ ಎಸ್. ಗಣಿ
ಕನ್ನಡ ಪ್ರಾಧ್ಯಾಪಕರು,
ಮಾನವಿಕ ವಿಭಾಗ
ಹೆಚ್.ಕೆ.ಬಿ.ಕೆ ತಾಂತ್ರಿಕ ಮಹಾವಿದ್ಯಾಲಯ,
ಬೆಂಗಳೂರು

ಜನಬದುಕಿನಿಂದ ಹುಟ್ಟು ಪಡೆದ ಜನಪದ ಸಾಹಿತ್ಯ ಸಮೃದ್ಧವಾಗಿದ್ದು, ಶ್ರೀಮಂತವಾಗಿದೆ. ಜನರು ತಮ್ಮ ದೈನಂದಿನ ಜನಜೀವನದ ಆಗು–ಹೋಗುಗಳಿಗೆ ಹಾಗೂ ಕೌಟುಂಬಿಕ ಸಾಮಾಜಿಕ ರಾಜಕೀಯ ವಿದ್ಯಮಾನಗಳಿಗೆ ದನಿಯಾದವರು. ಅನುಭವಜನ್ಯ ಅಭಿವ್ಯಕ್ತಿಯಾಗಿರುವ ಜನಪದ ಸಾಹಿತ್ಯವು ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ತನ್ನದೆಯಾದ ಪಾತ್ರ ವಹಿಸಿದೆ. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನು–ಮನಗಳಿಂದ ಹೋರಾಡಿ ಮಡಿದ ಮಹನೀಯರ ಕೊಡುಗೆ ಸ್ಮರಣೀಯ. ಇಂಥ ತ್ಯಾಗಜೀವಿಗಳ ಕೊಡುಗೆಯನ್ನು ನೆನಪಿಸಿಕೊಳ್ಳುವುದರ ಮೂಲಕ ಜನಪದ ಲಾವಣಿ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಸ್ವಾತಂತ್ರ್ಯ ಹೋರಾಟದ ಚಿತ್ರಣವನ್ನು ಅವಲೋಕಿಸುವುದು ಮುಖ್ಯವೂ ಮಹತ್ವದ್ದೂ ಆಗಿದೆ.

ವ್ಯಾಪ್ತಿ ಮತ್ತು ಉದ್ದೇಶ :

ಜನಪದ ಸಾಹಿತ್ಯದಲ್ಲಿ ಹಲವು ಪ್ರಕಾರಗಳಿವೆ. ಕತೆ ಕವಿತೆ ಗಾದೆ ಒಗಟು ಕೋಲಾಟ ಭಜನಾ ಪದ ಗೀಗೀ ಪದ ಹಾಗೂ ಲಾವಣಿ ಇತ್ಯಾದಿ ಪ್ರಕಾರಗಳಿದ್ದು, ಎಲ್ಲವೂ ಆಯಾಯ ಕಾಲಘಟ್ಟದ ಜೀವನಾನುಭವಗಳ ಸಾಮಾಜಿಕ ವಿದ್ಯಮಾನಗಳ ಒಟ್ಟು ಅಭಿವ್ಯಕ್ತಿಯಾಗಿರುತ್ತವೆ. ಜನಪದ ಲಾವಣಿ ಸಾಹಿತ್ಯವನ್ನು ಬಹುತೇಕವಾಗಿ ಕೇಂದ್ರೀಕರಿಸಿಕೊಂಡು ಸ್ವಾತಂತ್ರ್ಯ ಹೋರಾಟದ ಸ್ಥಿತಿ–ಗತಿಯನ್ನು ಅರಿಯಲು ಇಲ್ಲಿ ಪ್ರಯತ್ನಿಸಲಾಗಿದೆ. ದೇಶದ ಇತಿಹಾಸದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಅವಿಸ್ಮರಣೀಯವಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಸ್ಥಳೀಯವಾಗಿ ಅನೇಕ ಜನ ಪಾಲ್ಗೊಂಡು ಮನೆ–ಮಠ, ಬಂಧು–ಬಾಂಧವರನ್ನೂ ತೊರೆದು ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ್ದಾರೆ. ಅಂಥ ಅಪರೂಪದ ವ್ಯಕ್ತಿಗಳು ಮಾಡಿದ ತ್ಯಾಗ–ಬಲಿದಾನಗಳ ಕುರಿತು ಪ್ರಸ್ತಾಪಿಸುವ ಮೂಲಕ ಸಮಗ್ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನಪದ ಸಾಹಿತ್ಯ ತೋರಿದ ಪ್ರಜ್ಞೆ ಮತ್ತು ಪ್ರಭಾವವನ್ನು ಗುರುತಿಸುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ. ಅಲ್ಲದೆ, ಅಂದಿನ ಸ್ವಾತಂತ್ರ್ಯ ಹೋರಾಟದ ಚಿತ್ರಣದ ಜೊತೆಗೆ ಇಂದಿನ ರಾಷ್ಟ್ರೀಯ ಪ್ರಜ್ಞೆಯ ಸ್ವರೂಪವನ್ನು ಸಮೀಕರಿಸಿ ನೋಡುವ ಉದ್ದೇಶವೂ ಈ ಲೇಖನದ್ದಾಗಿದೆ.

ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ :

ಜನಬದುಕೇ ಜಾನಪದ. ಹೋರಾಟದಿಂದ ಎಂದಿಗೂ ಮುಕ್ತವಾಗಿಲ್ಲ ಈ ಜನ–ಜೀವನ. ಹೊಟ್ಟೆ ಹೊರೆದುಕೊಳ್ಳಲು ನಿತ್ಯವೂ ಹೋರಾಟ ನಡೆಸಬೇಕಾದ ಅನಿವಾರ್ಯತೆ ಇದ್ದೇ ಇದೆ. ಆದರೆ, ಅದು ವ್ಯಕ್ತಿನಿಷ್ಠ, ತೀರ ಸಂಕುಚಿತ; ಸೀಮಿತ. ತಮಗಾಗಿ ಮತ್ತು ತನ್ನವರಿಗಾಗಿ ತನ್ನ ನೆಲ–ಜಲಕ್ಕಾಗಿ ಬದುಕಿದ ಜನಪದರ ಬಾಳು ಸಮಷ್ಟಿನಿಷ್ಠ. ಅಲ್ಲದೆ ತಮಗೆ ತೊಂದರೆ ಕೊಟ್ಟವರಿಗೆ, ನಾಡದ್ರೋಹಿಗಳಿಗೆ ಹಾಗೂ ದೇಶದ ಮೇಲಿನ ಆಕ್ರಮಣಕಾರರಿಗೆ, ಬ್ರಿಟೀಷರಿಗೆ ತಕ್ಕ ಪಾಠ ಕಲಿಸುತ್ತ ನಾಡರಕ್ಷಣೆಗೂ ನಿಂತವರು. ತನ್ಮೂಲಕ ಈ ಸಮಾಜಕ್ಕೂ, ನಾಡಿಗೂ, ದೇಶಕ್ಕೂ ಹಾಗೂ ಈ ರಾಷ್ಟ್ರದ ಐಕ್ಯತೆ ಮತ್ತು ಘನತೆಗಾಗಿಯೂ ದುಡಿದು ಮಡಿದವರು. ದೇಶದ ಸ್ವಾತಂತ್ರ್ಯಕ್ಕಾಗಿ ಜೈಲು ಕಂಡು ಜೀವನ ಕಳೆದುಕೊಂಡವರಿದ್ದಾರೆ. ಮನೆ–ಮಠ, ಹೆಂಡತಿ ಮಕ್ಕಳು, ಬಂಧು–ಬಾಂಧವರನ್ನು ಬಿಟ್ಟು ಚಳವಳಿಯ ದಾರಿಯಲ್ಲಿ ನಡೆದವರಿದ್ದಾರೆ. ಐಕ್ಯತೆಯ ಕೂಗಿಗೆ ಅದೆಷ್ಟೋ ಜನ ದನಿಗೂಡಿಸಿದ್ದಾರೆ. ಹೋರಾಟದ ಹಾದಿಗೆ ಹೆಜ್ಜೆ ಹಾಕಿದವರಿದ್ದಾರೆ. ತ್ಯಾಗ–ಬಲಿದಾನಗಳ ಮೂಲಕ ದೇಶಕ್ಕಾಗಿ ದೇಹವನ್ನೇ ತೊರೆದವರಿದ್ದಾರೆ. ನಾಡಿನ ಸಂರಕ್ಷಣೆಗಾಗಿ ಹೆಣ್ಣು– ಗಂಡು ಭೇಧವಿದಲ್ಲದೇ ಹೋರಾಡಿ

ವೀರಮರಣವನ್ನಪ್ಪಿದವರಿದ್ದಾರೆ. ಇಂಥ ವೀರ–ಶೂರ, ಸಾಹಸಮಯ ಯಶೋಗಾಥೆಗಳು ಜನಪದ ಸಾಹಿತ್ಯದಲ್ಲಿ ಹೇರಳವಾಗಿವೆ. ತಮ್ಮ ದೈನಂದಿನ ಜೀವನದಲ್ಲಿ ನಡೆಯುವ ಘಟನೆಗಳನ್ನು ಕಂಡು ಹಾಡು ಕಟ್ಟಿ ಹಾಡಿದ ಜನಪದರು ದೇಶದ ಸ್ವಾತಂತ್ರ್ಯಕ್ಕಾಗಿ ನೀಡಿದ ಕೊಡುಗೆ ಅನುಪಮವಾದುದು, ಅನನ್ಯವಾದುದು.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಕುರಿತು ಜನಪದರ ದೃಷ್ಟಿ–ಧೋರಣೆ, ನಿಲುವು–ನೋಟಗಳು ವಿಶಿಷ್ಟ. ಹೋರಾಟದ ಪ್ರಸಂಗಗಳನ್ನು ಸ್ಥಳೀಕರಿಸುವ ಜನಪದರ ಗೀತೆಗಳು ಅನನ್ಯ. ತಮ್ಮ ದೈನಂದಿನ ಜನಜೀವನದ ಘಟನೆಗಳೊಂದಿಗೆ ಸ್ವಾತಂತ್ರ್ಯ ಹೋರಾಟದ ಸನ್ನಿವೇಶಗಳನ್ನು ಸಮೀಕರಿಸಿ; ಹಾಡುವ ಜನಪದರ ಪ್ರತಿಭೆಯೇ ಪ್ರಶಂಸನೀಯ. ಜನಪದ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಸ್ವಾತಂತ್ರ್ಯ ಹೋರಾಟದ ಬಗೆಗಿನ ಚಿತ್ರಣ ಕಂಡುಬರುತ್ತದೆ. ಯಕ್ಷಗಾನ, ಕೋಲಾಟ, ಲಾವಣಿ, ಗೀಗೀ ಪದ, ತ್ರಿಪದಿ, ಸೋಬಾನೆ, ಡೊಳ್ಳಿನ ಪದ ಮುಂತಾದ ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯಪೂರ್ವದ ಭಾರತದ ಸಾಮಾಜಿಕ–ರಾಜಕೀಯ–ಐತಿಹಾಸಿಕ ಸನ್ನಿವೇಶಗಳು ಹಾಗೂ ಬ್ರಿಟೀಷರ ದಬ್ಬಾಳಿಕೆ, ಸ್ವಾತಂತ್ರ್ಯ ಸೇನಾನಿಗಳ ತ್ಯಾಗ–ಬಲಿದಾನಗಳು ಚಿತ್ರಿತಗೊಂಡಿವೆ. ಬ್ರಿಟೀಷರ ವಿರುದ್ಧ ಬಂಡೆದ್ದ ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ, ಕಿತ್ತೂರು ರಾಣಿ ಚೆನ್ನಮ್ಮ, ವೀರವನಿತೆ ವನಕೆ ಓಬವ್ವ, ರಾಣಿ ಅಬ್ಬಕ್ಕ, ಕೆಳದಿ ಚೆನ್ನಮ್ಮ, ಟೀಪು ಸುಲ್ತಾನ್, ಮೈಲಾರ ಮಹಾದೇವಪ್ಪ, ಮಹಾತ್ಮ ಗಾಂಧೀ, ಜವಾಹರಲಾಲ್ ನೆಹರೂ, ಸುಭಾಸ್ ಚಂದ್ರಬೋಸ್, ಲಾಲ್ ಬಹದ್ದೂರ್ ಶಾಸ್ತ್ರೀ ಮುಂತಾದವರ ಹೋರಾಟದ ಚಿತ್ರಣವನ್ನು ಜನಪದರು ಕಂಡು ಹಾಡಿನ ಮೂಲಕ ಕಾಣಿಸಿದ್ದಾರೆ.

ಲಾವಣಿ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಚಿತ್ರಣ :

ಜನಪದ ಸಾಹಿತ್ಯ ಪ್ರಕಾರಗಳಲ್ಲಿ 'ಲಾವಣಿ' ಪ್ರಕಾರವೂ ಒಂದು. ಲಾವಣಿ ಪ್ರಮುಖವಾಗಿ ಶೃಂಗಾರಪ್ರಧಾನವಾದ ಗೀತಪ್ರಕಾರ. ಮರಾಠಿಯಿಂದ ಗುಳೆ ಬಂದು 'ದಕ್ಷಿಣ ಮಹಾರಾಷ್ಟ್ರವೇ' ಆಗಿದ್ದ ಉತ್ತರ ಕರ್ನಾಟಕದ ಗಡಿಯಲ್ಲಿ ಲಾವಣಿಯ ಲಾವಣ್ಯ ರಸಬಳ್ಳಿಯಂತೆ ಹಬ್ಬಿದೆ (ಗ್ರಾಮ್ಯ– ಪುಟ– 146) ಅದರ ಚರಿತ್ರೆಯು ಪೇಶ್ವೆಯವರ ಕಾಲಕ್ಕೆ ಹೋಗುತ್ತದೆ. ಭಾರತದ ಸ್ವಾತಂತ್ರ್ಯ ಆಂದೋಲನದಲ್ಲಿ ಲಾವಣಿಗಳು ಪ್ರಮುಖ ಪಾತ್ರ ವಹಿಸಿವೆ. "ಮರಾಠಿ ಮತ್ತು ಕನ್ನಡ ಸಾಹಿತ್ಯದ ಆದಾನ ಪ್ರದಾನದ ಮಹತ್ವದ ಕೊಂಡಿ ಲಾವಣಿ" (ಅದೇ, ಪುಟ– 146) ಎಂಬ ವಾಮನ ಬೇಂದ್ರೆಯವರ ಮಾತನ್ನು ಉಲ್ಲೇಖಿಸುವ ಪ್ರಕಾಶ ಖಾಡೆಯವರ ಅಭಿಪ್ರಾಯ ಲಾವಣಿಯ ಸಾಹಿತ್ಯದ

ಮೂಲವನ್ನು ಶೋಧಿಸುವಲ್ಲಿ ಮುಖ್ಯವೆನಿಸುತ್ತದೆ. ಲಾವಣಿಯ ಮೂಲ ಮರಾಠಿ. ಲಾವಣಿ ಸಾಹಿತ್ಯ ನಾಡಿನ ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಪಾತ್ರ ಮನನೀಯವಾಗಿದೆ. ಕ್ರಿ.ಶ. 1799 ರಲ್ಲಿ ನಡೆದ ಶ್ರೀರಂಗಪಟ್ಟಣ ಕಾಳಗವು ನಾಡಿನ ಜನಮಾನಸದಲ್ಲಿ ಸ್ವಾತಂತ್ರ್ಯದ ಕಿಚ್ಚು ಹೊತ್ತಿಸಿತು. ಹೈದರನ ಮಗ ಟೀಪು ಸ್ವಾತಂತ್ರ್ಯಪೂರ್ವದಲ್ಲಿಯೇ ಬ್ರಿಟೀಷರಿಗೆ ಬಿಸಿ ತಾಕಿಸಿದ ವೀರಕನ್ನಡಿಗ. ಲಾವಣಿಕಾರ **ಬಿ. ನೀಲಕಂಠಯ್ಯ ಅವರ ಲಾವಣಿಯು ;**

“ಹರಾಮಖೋರನ ಖರಾಮತ್ತರಿತನು
ಟೀಪು ಸುಲ್ತಾನನು ನಿಮಿಷದಲಿ
ಅರೆ ಹಮಾರೆ ನಮ್ಮಿಬ್ಬರಾಮ ಕರೇಸೊ
ಕಾಮ್ಮೆಂದ ಮನಸಿನಲಿ
ಸ್ವರಾಜ್ಯ ರಕ್ಷಣೆಗೋಸ್ಕರ ಸುಲ್ತಾನ
ರಣಾಗ್ರಕ್ಕೊರಟನು ರೋಷದಲಿ
ಫರಂಗಿ ಸೋಲ್ಜರ್ ತರಂಗ ಮಧ್ಯದಲಿ
ತುರಂಗ ಬಿಟ್ಟನು ತ್ವರಿತದಲಿ
...ಫರಂಗಿ ಫೌಜಿನ ತುರಂಗ ನುಗ್ಗಿತು
ಶ್ರೀರಂಗಧಾಮನ ಪಟ್ಣದಲಿ”

ಟೀಪು ಆಂಗ್ಲರ ವಿರುದ್ಧ ಹೋರಾಡಿ ವೀರಮರಣವನ್ನಪ್ಪಿದ ಸಾಹಸಮಯ ಪ್ರಸಂಗವನ್ನು ಈ ಲಾವಣಿ ಪದ್ಯ ಪ್ರಸ್ತಾಪಿಸತ್ತದೆ.

“ಹುಲಿ ಸೀಳಿದ ದೊರೆ ಅಳಿದೊಡೆ ಮೇಲೆ ರಣದಲಿ
ಗಲಭೆಯು ಎದ್ದಿತು ಶ್ರೀರಂಗಪಟ್ಟಣದಲಿ
ಸುಲಿಗೆಯನೆ ಮಾಡಿದರು ಶತ್ರು ಜನರು ಬರದಲ್ಲಿ
ಬಳಿಕಾರದ ವೀರರ ಬರದೇನು ಫಲ”

ಎಂಬ ಮಾತು ಶ್ರೀರಂಗಪಟ್ಟಣದಲ್ಲಿನ ಟೀಪುವಿನ ಮರಣ ಮತ್ತು ಆ ಬಳಿಕ ನಡೆದ ಘೋರ ಪರಿಣಾಮವನ್ನು ಕುರಿತು ತಿಳಿಸುತ್ತದೆ. ನಾಡಪ್ರೇಮಿ ಟೀಪುವಿನ ಮೇಲೆ ಪ್ರೇಮ, ಆಂಗ್ಲರ ಮೇಲೆ ಆಕ್ರೋಶ ಉಂಟಾಗಿ ಜನರಲ್ಲಿ ಸ್ವಾತಂತ್ರ್ಯದ ಹಂಬಲವು ಉದ್ದೀಪನಗೊಂಡಿತು. ಜಾನಪದ ವಿದ್ವಾಂಸರಾದ ಜೀಶಂಪ, ಮಳಲಿ ವಸಂತಕುಮಾರ್ ಅವರು ಸಂಗ್ರಹಿಸಿದ ಲಾವಣಿಗಳಲ್ಲಿ ಟೀಪುವಿನ ಸಾಹಸ, ವೀರತ್ವ ಕುರಿತು ವರ್ಣಿಸಲಾಗಿದೆ.

“ ಕೂಗ ಹೊಡೆದೊ ರಾಯಣ್ಣ ಅವನ ದಂಡು ಬಂತೋವರ್ಯಾಗಿ
ಎಳ ಎಳದ ಕೊಂದಾರಣ್ಣ ಇಂಗ್ರೇಜಿಯವರನ್ನಾ
ತುಳ ತುಳದ ಒಬ್ಬೊಬ್ಬರನ್ನ ಹೊರಹೊರಳಿಸಿ ತರದಾರೋ
ನಿತ್ತ ಚಿತ್ತರ ಬಲ್ಲಾಂಗ ಕತ್ತೀಲಿ ರಾಯಣ್ಣ ಕಡದಾನೋ
ಸತ್ತ ಬಿದ್ದಾವ ಹೆಣಾ ರಕ್ತ ಹರಿದಿತೋ ಧರಿಗಿ
ಸುತ್ತ ಗಟ್ಟಿ ಹೊಡೆದಾರೊ ಒಬ್ಬರು ಹೋಗಲಿಲ್ಲ ತಿರುಗಿ”

ವೀರ ಸಂಗೊಳ್ಳಿ ರಾಯಣ್ಣ ಬ್ರೀಟಿಷರ ವಿರುದ್ಧ ಹೋರಾಡಿ ಕ್ರಾಂತಿಕಿಡಿಯನ್ನು ಹೊತ್ತಿಸಿ ದೇಶಪ್ರೇಮವನ್ನು ಮೆರೆದುದನ್ನು ಈ ಪದ್ಯ ದಾಖಲಿಸುತ್ತದೆ.

“ಬಂದ ಜನಾ ಕೇಳಿರಿ ಇಂದು ನಾನು ಹೇಳತಿನಿ
ಚಂದದಿ ಸ್ವಾತಂತ್ರ್ಯ ಹೋರಾಟಗಾರರ ಕಥೆಯನ್ನ
ಚೆನ್ನಮ್ಮನ ಕಾಳಗವನ್ನ ಸಿಂಧೂರ ಲಕ್ಷ್ಮಣನ ಯುದ್ಧವನ್ನ
ಸ್ವಾತಂತ್ರ್ಯಕ್ಕ ನೀಡಿದ ಕೊಡುಗೆಯನ
ಚಿತ್ತವಿಟ್ಟು ಕೇಳಿರಪ್ಪೊ/ಕೇಳಿರವ್ವ ಸಂಪೂರಣ...”

“...ಚಂಡಿಯೋ ಚಾಮುಂಡಿಯೋ ಕಿತ್ತೂರು
ಚೆನ್ನಮ್ಮ ಸುತ್ತೂರು ಒಡತ್ಯಾಗಿ
ಹತ್ತು ಸಾವಿರ ದಂಡು...”

“ಹುಟ್ಟಬೇಕು ಲಕ್ಷ್ಮಣನಂಥವರಾ
ಭಪ್ಪರೇ ಮಗಾ ಬಹದ್ದೂರಾ...”

ಎಂಬ ಲಾವಣಿಗಳು ಕಿತ್ತೂರರಾಣಿ ಚೆನ್ನಮ್ಮ ಹಾಗೂ ವೀರ ಸಿಂಧೂರ ಲಕ್ಷ್ಮಣರ ರೊಚ್ಚು-ಕೆಚ್ಚು, ಶೌರ್ಯ ಸಾಹಸ, ವೀರತ್ವ ಎಲ್ಲವನ್ನೂ ವಿವರಿಸುತ್ತವೆ. ನಮ್ಮ ಜನಪದರು ಈ ವೀರರ ತ್ಯಾಗ ಬಲಿದಾನ, ಹೋರಾಟಗಳನ್ನು ಕುರಿತು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಕನ್ನಡ ನಾಡಿನಾದ್ಯಂತ ನಡೆದ ಕಿತ್ತೂರು ಕಾಳಗ, ನರಗುಂದ ಬಂಡಾಯ, ಹಲಗಲಿ ಬೇಡರ ಹೋರಾಟ, ಶಿವಪುರ ಮತ್ತು ಈಸೂರು ಧ್ವಜ ಸತ್ಯಾಗ್ರಹ ಮುಂತಾದ ಹೋರಾಟಗಳಲ್ಲಿ ಬ್ರಿಟೀಷರ ವಿರುದ್ಧ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಮಡಿದ ಮಹನೀಯರ ಕುರಿತು ಜನಪದರು ಹಾಡಿ ಹೊಗಳಿದ್ದಾರೆ. ಜಲಿಯನ್ ವಾಲಬಾಗ್ ಹತ್ಯಾಕಾಂಡ (1919), ಅಸಹಕಾರ ಚಳವಳಿ (1920), ಚಲೇಜಾವ್ ಚಳವಳಿ (1930-1942) ಗಾಂಧೀಜಿಯವರ ‘ಮಾಡು ಇಲ್ಲವೇ ಮಡಿ’, ತಿಲಕರು “ಸ್ವಾತಂತ್ರ್ಯವೇ ನನ್ನ ಜನ್ಮಸಿದ್ಧ ಹಕ್ಕು, ನಾನು ಅದನ್ನು

ಪಡೆದೇ ತೀರುತ್ತೇನೆ" ಎಂಬ ಸಿಂಹವಾಣಿಗಳು ದೇಶದ ಜನಮಾನಸದಲ್ಲಿ ಸ್ವಾತಂತ್ರ್ಯ ಕಹಳೆ ಮೊಳಗಿಸಿತು. ಹೋರಾಟಕ್ಕೆ ಧುಮುಕುವಂತೆ ಉತ್ತೇಜಿಸಿತು. ಈ ಎಲ್ಲ ಘಟನೆಗಳಿಗೆ ನಮ್ಮ ನಾಡಿನ ಜನಪದರು ಸ್ಪಂದಿಸಿ, ಪ್ರತಿಕ್ರಿಯಿಸಿರುವುದು ವಿಶೇಷವಾಗಿದೆ.

"ಪುಣ್ಯಭೂಮಿ ಎಂದರೆ ಹಿಂದುಸ್ಥಾನ
ಕೇಳರಿ ಸರ್ವಜನ ಹೇಳುವೆನು ಪೂರ್ಣ
ಇರಲಿ ನಿಮ್ಮ ಚಿತ್ತ
ಧನಧಾನ್ಯ ತುಂಬಿ ತುಳುಕುವುದು ಸರ್ವಸಂಪತ್ತ..."

ಹುಲಕುಂದ ಭೀಮಕವಿಯ ಈ ಹಾಡು ಭರತಭೂಮಿಯ ಸ್ವಾತಂತ್ರ್ಯದ ಸಾರ್ಥಕತೆಯನ್ನು ಸಾರುತ್ತದೆ. ಅಲ್ಲದೆ ರಾಣಿಬೆನ್ನೂರಿನ ಸಮ್ಮದ್ ಸಾಬ್, ಮಾರನಬಸರಿಯ ಮೋದಿನ ಸಾಬ್, ಕಲಾದಗಿಯ ಇಮಾಮ್‌ಸಾಬ್‌ರೂ ಪದಗಳನ್ನು ಕಟ್ಟಿ ಸ್ವಾತಂತ್ರ್ಯದ ಕನಸಿಗೆ ನೀರೆರದರು. ರಾಷ್ಟ್ರದ ಜನರನ್ನು ಜಾಗೃತಿಗೊಳಿಸುವ ನಿಟ್ಟಿನಲ್ಲಿ ಮಹಾತ್ಮ ಗಾಂಧೀಜಿಯವರು ಮಾಡಿದ ಪ್ರಯತ್ನ ಯಾವ ಕಾಲಕ್ಕೂ ಉಲ್ಲೇಖನೀಯ.

"ಗಾಂಧಿ ಹುಟ್ಯಾನ ತೊಟ್ಟಾನ ಕೃಷ್ಣನವತಾರ
ಕೊಟ್ಟಿ ಬ್ರಿಟೀಷರನ ಇಲ್ಲಿಂದ ಅಟ್ಯಾನ ಬಹುದೂರ"

ಎಂಬ ಭೀಮಸಿಂಹ ಕವಿಯ ಹಾಡು ಹಾಗೂ ಬೀ. ನೀಲಕಂಠಯ್ಯನವರ

"...ಸತ್ಯ–ಶಾಂತಿ ಸಂಗ್ರಾಮದ ಶೂರ
ಸತ್ಯ ಪ್ರತಾಪ ಪ್ರದೀಪ ಪ್ರಚಾರ
ಮಿಥ್ಯಕರ್ಮಕುಲಮೂಲ ಸಂಹಾರಾ ನೀನೆಲೆ..."

ಪದಗಳಲ್ಲಿ ಮಹಾತ್ಮ ಗಾಂಧೀಜಿಯವರ ಅವಿರತ ಹೋರಾಟ ಹಾಗೂ ಜನಸಾಮಾನ್ಯರಲ್ಲಿ ಉಂಟುಮಾಡಿದ ಅವರ ವ್ಯಕ್ತಿತ್ವದ ಪ್ರಭಾವ ಮತ್ತು ತ್ಯಾಗ ವ್ಯಕ್ತವಾಗಿದೆ. ಜನಪದರ ನಾಲಿಗೆಯ ಮೇಲೆ ಗಾಂಧಿ ಹಾಡಾಗಿದ್ದಾರೆ. 'ಸ್ವಾತಂತ್ರ್ಯ ವಿಜಯ' ಎಂಬ ಯಕ್ಷಗಾನ ಪ್ರಸಂಗವನ್ನೂ ರಚಿಸಿ, ಕರಾವಳಿ ಪ್ರದೇಶದಲ್ಲಿ ಹೆಚ್ಚಾಗಿ ಪ್ರದರ್ಶಿಸಿ ದೇಶ ಬಾಂಧವರಲ್ಲಿ ಹೋರಾಟದ ಮನೋಭಾವನೆಯನ್ನು ಬಿತ್ತಲಾಯಿತು ಎಂಬುದು ಮನನೀಯ.

"ಆಂಗ್ಲರು ಅನ್ನವರು ಇಂಗ ಮಾರುದಕ ಬಂದವರ
ದಂಗು ದುಲಿದಾರ ತಿಳಿಲಿಲ್ಲ ! ದೇಶದ
ದಣಿಯರನ ಹಾಳ ಮಾಡ್ಯಾರ

ಜಗಳವಾಡುತ ಬಂದು ಜಗಳಕ ನಿಂತಾರ
ಜಗಕ ಮಾಯೆ ತೋರ್ಯಾರ / ಆಂಗ್ಲರು
ಜಾತಿಯ ಬೀಜ ಬಿತ್ಯಾರ'

ಎಂಬುದಾಗಿ ಪದ ಕಟ್ಟಿ ಹಾಡಿದ ನಮ್ಮ ಜನಪದರು, ಬ್ರಿಟೀಷರ ಒಡೆದಾಳುವ ನೀತಿಯನ್ನು ಬಯಲು ಮಾಡಿದ್ದಾರೆ. ವ್ಯಾಪಾರಕ್ಕೆಂದು ಭಾರತಕ್ಕೆ ಬಂದ ಬ್ರಿಟೀಷರ ದುರುಳತನ, ಕಪಟತನವನ್ನು ಕಂಡ ನಮ್ಮ ಜನಪದರು ಪದ್ಯಗಳ ಮೂಲಕವೇ ಅಸಮಾಧಾನ ಮತ್ತು ಆಕ್ರೋಶ ಹೊರಹಾಕಿದ್ದಾರೆ. ಸ್ವಾತಂತ್ರ್ಯ ಚಳವಳಿಯ ನೇತೃತ್ವ ವಹಿಸಿಕೊಂಡಿದ್ದ ಮಹಾತ್ಮ ಗಾಂಧೀಜಿಯವರನ್ನೂ ಒಳಗೊಂಡಂತೆ ಅಪಾರ ಸಂಖ್ಯೆಯ ಜನರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಾಣ ಪಣಕ್ಕಿಟ್ಟು ಜೀವತೆತ್ತರು. ತ್ಯಾಗ ಬಲಿದಾನಗಳ ಫಲವಾಗಿ ಭಾರತ 1947ರಲ್ಲಿ ಸ್ವತಂತ್ರವಾಯಿತು. ಸಂಗ್ರಾಮದ ಅನಂತರದ ಸಂಭ್ರಮವನ್ನು ಕುರಿತು ;

"...ದೊರಕಿತು ಭಾರತದ ಸ್ವಾತಂತ್ರ್ಯ
ಹರದ ಹೋತು ಪಾರತಂತ್ರ್ಯ
ಹಳ್ಳಿಗಳ ಸಡಗರ ನಗರಗಳ ಶೃಂಗಾರ
ಮಕ್ಕಳು ಮುದುಕರು ನಾರಿ ಪುರುಷರೆಲ್ಲಾ
ಧರಿಸ್ಯಾರ ಹೊಸವಸ್ತ್ರ ತರಿಸಿ ಪುಷ್ಪದ ಹಾರ
ಕುಸುಮದ ಮಳೆ ಸುರಿಸ್ಯಾರ ಊರೂರ..."

ಎಂಬುದಾಗಿ ಗೀಗೀ ಪದವೊಂದು ವರ್ಣಿಸಿರುವುದನ್ನು ಕಾಣಬಹುದು. ಸತ್ಯ ಅಹಿಂಸೆ ತ್ಯಾಗ ಬಲಿದಾನಗಳಿಂದ ಭಾರತ ಮಾತೆಯನ್ನು ಬಿಡುಗಡೆ ಮಾಡಿದ ಮಹಾನ್ ನಾಯಕರನ್ನು, ಪುಣ್ಯ ಪುರುಷರನ್ನು ಸ್ಮರಿಸಿಕೊಳ್ಳುವ ಜನಪದ ಕವಿಗಳು, ಸ್ವಾತಂತ್ರ್ಯಾನಂತರದ ಭಾರತದ ವಸ್ತುಸ್ಥಿತಿಯನ್ನೂ ಮನವರಿಕೆ ಮಾಡಿಕೊಡುತ್ತಾರೆ. ಅಲ್ಲದೆ, ಪ್ರಜಾತಾಂತ್ರಿಕ ಸಾರ್ವಭೌಮ ವ್ಯವಸ್ಥೆಯಲ್ಲಿ ಅಧಿಕಾರಶಾಹಿ ಮತ್ತು ಆಡಳಿತಶಾಹಿಯ ಜನವಿರೋಧೀ ನಿಲುವುಗಳನ್ನು ಟೀಕಿಸುವ ನಿಟ್ಟಿನಲ್ಲಿ ಪದ ಕಟ್ಟಿ ಹಾಡಿರುವುದು ಜನಪದರ ಸಾಮುದಾಯಿಕ ಪ್ರಜ್ಞೆಯ ಪ್ರತೀಕವಾಗಿದೆ.

"...ಇದೊಂದು ಕೇಳಿ, ಜನರೆಲ್ಲ ಪೂರ್ಣ ಕಿವಿಗೊಟ್ಟು
ಅಧಿಕಾರ ಲಾಲಸೆ ಎಂಬುದ ಕೆಟ್ಟದ್ದು
ಮುದದಿಂದ ಲಂಚ ಮೇಣ್ ಕಾಳಸಂತೆಯನು ಸುಟ್ಟು
ಒದಗಿರುವ ಸ್ವಾತಂತ್ರ್ಯವನು ಉಳಿಸಿಕೊಳ್ಳಿ ಶ್ರಮಪಟ್ಟು..."

ಹೀಗೇ ಲಾವಣಿಕಾರರು ರಾಷ್ಟ್ರೀಯ ಚಳವಳಿಯ ಸ್ವರೂಪವನ್ನು ತಿಳಿಸುವುದಲ್ಲದೇ, ದೇಶದ ಸಂರಕ್ಷಣೆಗೆ ಸಂಕಲ್ಪ ತೊಡಬೇಕಾದ ಅಗತ್ಯತೆಯನ್ನೂ ಮನಗಾಣಿಸಿರುವುದು ಗಮನಾರ್ಹ.

ಉಪಸಂಹಾರ :

ಜನಪದ ಸಾಹಿತ್ಯ ಮಾನವ ಬದುಕಿನ ಸಮಸ್ತವನ್ನೂ ಒಳಗೊಂಡಿದೆ. ಅದರಲ್ಲೂ ಲಾವಣಿ ಪ್ರಕಾರವು ಭಾರತದ ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯಪೂರ್ವದ ಚಿತ್ರಣವನ್ನು ಪರಿಣಾಮಕಾರಿಯಾಗಿ ಹಿಡಿದಿಟ್ಟಿದೆ. ಇಂದಿನ ದಿನಗಳಲ್ಲಿ ಅಧಿಕಾರಲಾಲಸೆ, ಸ್ವಾರ್ಥ, ದ್ವೇಷಾಸೂಯೆ, ಲಂಚುಗುಳಿತನ, ಜಾತಿ ಮತ ಪಂಥ ಪ್ರದೇಶ ಪಂಗಡ ಭಾಷೆ ಧರ್ಮಗಳ ಹೆಸರಿನಲ್ಲಿ ವಿಭಜಕತೆ ಹೆಚ್ಚುತ್ತಿರುವ ಸ್ವಾತಂತ್ರ್ಯೋತ್ತರ ಇಂದಿನ ಭಾರತದಲ್ಲಿ ಪ್ರಜಾಪ್ರಭುತ್ವ, ಜಾತ್ಯಾತೀತ, ಸಂವಿಧಾನದ ಆಶಯಗಳ ಅನುಷ್ಠಾನಕ್ಕೆ ಜನಪದ ಸಾಹಿತ್ಯ ತುಡಿದಿರುವುದು ವೇದ್ಯ ಸಂಗತಿ. ಅಲ್ಲದೆ, ಸ್ವಾತಂತ್ರ್ಯ ಸಂಗ್ರಾಮದ ಸಂಘರ್ಷ, ಸಂಭ್ರಮಗಳೆರಡನ್ನೂ ಕಾಣಿಸಿರುವುದಲ್ಲದೇ, ಭಾರತದ ಸಂಕೀರ್ಣತೆ, ಸಮಸ್ಯೆ–ಸವಾಲು, ಸೌಹಾರ್ದತೆ, ಸಾಮರಸ್ಯವನ್ನು ಕುರಿತು ಮನವರಿಕೆ ಮಾಡಿಕೊಡುವ ಆಶಯವನ್ನು ಉದ್ದಕ್ಕೂ ಪ್ರಕಟಿಸುತ್ತ ಬಂದಿರುವ ಜನಪದ ಸಾಹಿತ್ಯವು ಜನಮುಖಿಯಾಗಿ, ಸಮಾಜಮುಖಿಯಾಗಿ ಅಭಿವ್ಯಕ್ತಗೊಂಡಿರುವುದು ಗಮನೀಯ, ಮನನೀಯ.

ಪರಾಮರ್ಶನ ಗ್ರಂಥಗಳು :

1. ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಗಳು : ಡಾ. ನಿಂಗಣ್ಣ ಸಣ್ಣಕ್ಕಿ, 2003, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
2. ಗ್ರಾಮ್ಯ : ಡಾ. ಪ್ರಕಾಶ ಗ. ಖಾಡೆ, 2025, ಕಾವ್ಯಸ್ಪಂದನ ಪಬ್ಲಿಕೇಷನ್, ಬೆಂಗಳೂರು
3. ಸ್ವಾತಂತ್ರ್ಯ ಹೋರಾಟ ಮತ್ತು ಲಾವಣಿ ಸಾಹಿತ್ಯ : ಬಸವರಾಜ ಮಲಶೆಟ್ಟಿ 2017, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

***

ರಾಷ್ಟ್ರಕವಿ ಕುವೆಂಪು ಮತ್ತು ಭೂದಾನ ಚಳುವಳಿ ನೇತಾರ ಸಂತ ವಿನೋಬಾಭಾವೆ

1
ಡಾ. ಉಮೇಶ
ಕನ್ನಡ ಸಹ ಪ್ರಾಧ್ಯಾಪಕ
ಸರ್ಕಾರಿ ಪ್ರಥಮದರ್ಜೆಕಾಲೇಜು
ಹೊಳೆನರಸೀಪುರ –573211
ಹಾಸನ ಜಿಲ್ಲೆ.

ಪ್ರಸ್ತಾವನೆ :

ಕುವೆಂಪು ಅವರು ಕವಿಯಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ, ವಿಮರ್ಶಕರಾಗಿ ಮತ್ತು ದಾರ್ಶನಿಕರಾಗಿ ಕನ್ನಡ ಸಾಹಿತ್ಯ ವಲಯದಲ್ಲಿ ಪ್ರಸಿದ್ಧ ಸಾಹಿತಿಯಾಗಿದ್ದಾರೆ. ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮ ಕೃತಿಗಳ ಮೂಲಕ ಅಮೂಲ್ಯವಾದ ಕೊಡುಗೆಯನ್ನು ನೀಡಿ ಮೊಟ್ಟಮೊದಲಿಗೆ ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ನೀಡಿದ ಶ್ರೇಷ್ಠತೆ ಕುವೆಂಪು ಅವರಿಗೆ ಸಲ್ಲುತ್ತದೆ. ಅದೇ ರೀತಿ ವಿನೋಬಾಭಾವೆ ಅವರು ಸ್ವಾತಂತ್ರ ಚಳವಳಿಯ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರ ನಿಕಟ ಸಂಪರ್ಕದಲ್ಲಿದ್ದರು. ಅಲ್ಲದೆ ಸ್ವಾತಂತ್ರ್ಯ ಚಳುವಳಿಯು ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ವಿನೋಬಾಭಾವೆ ಅವರು ಸ್ವಾತಂತ್ರ ಚಳವಳಿಯ ನಂತರ ಭೂದಾನ ಚಳವಳಿಯ ಮುಂದಾಳತ್ವ

ವಹಿಸಿಕೊಂಡು ಭಾರತದಾದ್ಯಂತ ಪ್ರವಾಸ ಮಾಡಿ 'ಭೂದಾನ ಚಳುವಳಿಯ ನೇತಾರ' ಎಂದು ಪ್ರಸಿದ್ಧರಾಗಿದ್ದಾರೆ. ಅಲ್ಲದೆ ತಮ್ಮದೇ ಆದ ತತ್ವ, ಸಿದ್ಧಾಂತ ಮತ್ತು ಆದರ್ಶಗಳ ಮೂಲಕ ಜೀವನವನ್ನು ನಡೆಸಿ ಸಂತ ಎಂದು ಕರೆಸಿಕೊಂಡಿದ್ದಾರೆ. ಈ ದೃಷ್ಟಿಯಿಂದ ಕುವೆಂಪು ಮತ್ತು ವಿನೋಬಾಭಾವೆ ಇಬ್ಬರು ಮಹಾಪುರುಷರು ಪರಸ್ಪರ ಭೇಟಿಯಾಗಿದ್ದು ಕನ್ನಡ ನಾಡು ಮತ್ತು ಕನ್ನಡ ಸಾಹಿತ್ಯ ವಲಯದಲ್ಲಿ ಮರೆಯಲಾಗದ ಒಂದು ಐತಿಹಾಸಿಕ ಘಟನೆಯಾಗಿದೆ. ಆದ್ದರಿಂದ ಪ್ರಸ್ತುತ ಲೇಖನದಲ್ಲಿ ಕುವೆಂಪು ಮತ್ತು ವಿನೋಬಾಭಾವೆ ಅವರು ಪರಸ್ಪರ ಭೇಟಿಯಾದಾಗ ನಡೆದ ಪ್ರಮುಖ ಸನ್ನಿವೇಶಗಳನ್ನು, ಘಟನೆಗಳನ್ನು ದಾಖಲಿಸಲಾಗಿದೆ.

ಆ ಕಾಲಘಟ್ಟದ ಸಂಸ್ಕೃತಿ ಮತ್ತು ಪರಂಪರೆ : ಕೃಷಿ ಭೂಮಿಯನ್ನು ಜಮೀನ್ದಾರರಿಂದ ದಾನ ಪಡೆದು ಭೂಮಿ ಇಲ್ಲದ ಬಡರೈತರಿಗೆ ಹಂಚಿದ ಭೂದಾನ ಚಳುವಳಿಯ ನೇತಾರ ಆಚಾರ್ಯ ವಿನೋಬಾಭಾವೆ ಅವರು. "ಹದಿನಾಲ್ಕು ವರ್ಷ ಭಾರತದಾದ್ಯಂತ ಪಾದಯಾತ್ರೆ ನಡೆಸಿ ನಲವತ್ತೇಳು ಎಕರೆ ಕೃಷಿ ಭೂಮಿಯನ್ನು ಜಮೀನ್ದಾರರಿಂದ ದಾನ ಪಡೆದು ಭೂಮಿ ಇಲ್ಲದ ರೈತರಿಗೆ ನೀಡಿದ ಮಹಾನ್ ಸಾಧಕ ಆಚಾರ್ಯ ವಿನೋಬಾಭಾವೆ"[1] ಅವರು. ವಿನೋಬಾಜಿ ತಮ್ಮ ಕುಟುಂಬದ ಧಾರ್ಮಿಕ ಹಾಗೂ ಸಂಸ್ಕೃತಿ ಹಿನ್ನೆಲೆಯಿಂದಲೇ ಪ್ರಭಾವಿತರಾಗಿ ಬೆಳೆದವರು. ಇದಲ್ಲದೆ ಗೌತಮಬುದ್ಧ, ಸಮರ್ಥರಾಮದಾಸ, ಶಂಕರಾಚಾರ್ಯ ಮುಂತಾದ ಧಾರ್ಮಿಕ ಮಹಾಚೇತನಗಳಿಂದ ಪ್ರಭಾವಿತರಾಗಿದ್ದ ವಿನೋಬಾ ಅವರು ಬ್ರಹ್ಮಚಾರಿ ಆಗಬೇಕೆಂದು ಬಾಲ್ಯದಲ್ಲೇ ನಿರ್ಧರಿಸಿದ್ದರು. ಬಾಲ್ಯದಿಂದಲೂ ಆಧ್ಯಾತ್ಮ ಜೀವನದ ಕಡೆಗೆ ಆಸಕ್ತರಾಗಿದ್ದ ವಿನೋಬಾಜೀ ಗಾಂಧೀಜಿಯವರ ಒಡನಾಟದಲ್ಲಿ 1923 ರಿಂದ 1942ರವರೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ ಹಲವಾರು ಬಾರಿ ಜೈಲುವಾಸ ಅನುಭವಿಸಿದ್ದರು. ವಿನೋಬಾ ಅವರ ಬಾಲ್ಯದ ಹೆಸರು 'ವಿನಾಯಕ' ಎಂದು. ಗಾಂಧೀಜಿ 'ವಿನೋಬಾ' ಎಂದು ಪ್ರೀತಿಯಿಂದ ಕರೆದ ಫಲವಾಗಿ ಅದೇ ಹೆಸರೇ ಪ್ರಚಲಿತವಾಯಿತು. ಶ್ರಮದ ಜೀವನದಿಂದ ಮಾತ್ರ ವ್ಯಕ್ತಿ ಮತ್ತು ದೇಶದ ಉದ್ಧಾರವಾಗುತ್ತದೆ ಎನ್ನುವುದರಲ್ಲಿ ನಂಬಿಕೆಯಿದ್ದ ವಿನೋಬಾಜಿ ಖುದ್ದು ಶ್ರಮಜೀವನ ಮಾಡಿ ಇತರರಿಗೆ ಮಾದರಿಯಾಗಿದ್ದಾರೆ. ಗಾಂಧೀಜಿ ಅವರ ಮರಣಾನಂತರ ಕಾಲದಲ್ಲಿ ಅವರ ಉತ್ತರಾಧಿಕಾರಿ ಎನ್ನುವಂತೆ ವಿನೋಬಾ ಅವರು 'ಸರ್ವೋದಯ' ಪರಿಕಲ್ಪನೆಯ ನಾಯಕರೆಂದು ಹೆಸರು ಪಡೆಯುತ್ತಾರೆ.

ಎರಡನೆಯ ಮಹಾಯುದ್ಧದಲ್ಲಿ ಭಾರತವನ್ನು ಒತ್ತಾಯ ಪೂರ್ವಕವಾಗಿ ಯುದ್ಧದಲ್ಲಿ ತೊಡಗಿಸಲು ಬ್ರಿಟಿಷ್ ಸರ್ಕಾರ ಹವಣಿಸುತ್ತಿತ್ತು. ಯುದ್ಧ ವಿರೋಧಿಯಾಗಿದ್ದ ಗಾಂಧೀಜಿ ಇದರ ವಿರುದ್ಧ ಸತ್ಯಾಗ್ರಹದ ಕಹಳೆ ಊದಿದರು. ಈ ಸತ್ಯಾಗ್ರಹಕ್ಕೆ ನಿಷ್ಠಾವಂತ, ಸಚಾರಿತ್ರ್ಯ ವ್ಯಕ್ತಿಗಳನ್ನು ಆರಿಸಿ ಗಾಂಧೀಜಿ ಕಳುಹಿಸಬೇಕಾಗಿತ್ತು. ಈ ಸತ್ಯಾಗ್ರಹದ ಪ್ರಥಮ ಸತ್ಯಾಗ್ರಹಿಯನ್ನಾಗಿ ವಿನೋಬಾ ಅವರನ್ನು ಆಯ್ಕೆ ಮಾಡಿದಾಗ ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಗಾಂಧೀಜಿ ಅವರ ಮೇಲಿನ ನಿರ್ಧಾರದಿಂದ ಕೆಲವರಿಗೆ ಆಶ್ಚರ್ಯವಾದರೂ ಅದರ ಹಿಂದಿರುವ ತಾತ್ವಿಕ ಗ್ರಹಿಕೆಯನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ವಿನೋಬಾ ಅವರ ತಾತ್ವಿಕ ಶಕ್ತಿಯನ್ನು ಹಾಗೂ ಅವರ ವ್ಯಕ್ತಿ ವಿಶಿಷ್ಟತೆಯನ್ನು ಗಾಂಧೀಜಿಯವರು ಹತ್ತಿರದಿಂದ ಬಲ್ಲವರಾಗಿದ್ದರಿಂದ ಬೇರೆ ಪ್ರಮುಖ ವ್ಯಕ್ತಿಗಳನ್ನು ಬದಿಗಿಟ್ಟು ವಿನೋಬಾ ಅವರನ್ನು ಆರಿಸಿರುತ್ತಾರೆ. ಈ ಕಾರಣದಿಂದ ವಿನೋಬಾಭಾವೆ ಅವರ ಹೆಸರು ಒಮ್ಮೆಲೇ ರಾಷ್ಟ್ರವ್ಯಾಪಿಯಾಗಿ ಖ್ಯಾತಿ ಪಡೆಯುತ್ತದೆ. ಯಾವುದೇ ದೇಶವನ್ನು ಶಸ್ತ್ರಾಸ್ತ್ರಗಳಿಂದ ಕಾಪಾಡುವ ಬದಲು ನೈತಿಕ ಮೌಲ್ಯಗಳಿಂದ ಕಾಪಾಡುವುದು ಸರಿಯಾದ ಮಾರ್ಗ ಎಂಬ ತಾತ್ವಿಕ ರೇಖೆ ವಿನೋಬಾ ಅವರದಾಗಿತ್ತು. ವಿನೋಬಾ ಅವರು ಪವನಾರ್ ಆಶ್ರಮದಿಂದ ಸತ್ಯಾಗ್ರಹ ಆರಂಭಿಸಿ ಬಂಧನಕ್ಕೆ ಒಳಗಾಗಿ ಜೈಲು ಸೇರುತ್ತಾರೆ. ಮೂರು ವರ್ಷಗಳ ವೆಲ್ಲೂರು ಜೈಲುವಾಸದಲ್ಲಿ ವಿನೋಬಾಜೀ ದಕ್ಷಿಣ ಭಾರತದ ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂ ಈ ನಾಲ್ಕು ಭಾಷೆಗಳನ್ನು ಕಲಿಯುತ್ತಾರೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತು ಗಾಂಧೀಜಿಯ ಹತ್ಯೆಯಾದ ನಂತರ ವಿನೋಬಾಜೀ ಸರ್ವೋದಯ ಚಳವಳಿಯ ಮೂಲಕ ಮತ್ತೆ ಸಾಮಾಜಿಕ ಕ್ಷೇತ್ರಕ್ಕೆ ಬರುತ್ತಾರೆ. ಅಲ್ಲಿಯವರೆಗೆ ಗಾಂಧೀಜಿ ಅವರ ಅನುಯಾಯಿಯಾಗಿ ರಚನಾತ್ಮಕ ಕಾರ್ಯಗಳಲ್ಲಿ ತಲ್ಲೀನರಾಗಿದ್ದ ವಿನೋಬಾಜೀ ಸರ್ವರ ಉದಯದಲ್ಲಿ ಭಾರತ ದೇಶದ ಅಭಿವೃದ್ಧಿ ಅಡಗಿದೆ ಎನ್ನುವ ತತ್ವ ಹಿಡಿದು ಅದಕ್ಕಾಗಿ ಭಾರತದಾದ್ಯಂತ ಪಾದಯಾತ್ರೆ ನಡೆಸುತ್ತಾರೆ. ಹೈದರಾಬಾದ್‌ನ ತೆಲಂಗಾಣ ಪ್ರಾಂತ್ಯದಲ್ಲಿ ಇವರ ಸರ್ವೋದಯ ಯಾತ್ರೆ ನಡೆಯುತ್ತಿರುತ್ತದೆ. ಅಲ್ಲಿ ಕೃಷಿ ಜಮೀನಿಗಾಗಿ ಜಮೀನ್ದಾರರ ಹತ್ಯೆ ನಡೆಯುತ್ತಿದ್ದ ಸಂದರ್ಭದಲ್ಲಿ ಶ್ರೀ ರಾಮಚಂದ್ರರೆಡ್ಡಿ ಎಂಬುವರು ನೂರು ಎಕರೆ ಜಮೀನನ್ನು ತಮ್ಮದೇ ಊರಿನ ಹರಿಜನ ಸೋದರರಿಗೆ ದಾನವಾಗಿ ನೀಡುವ ನಿರ್ಧಾರ ಮಾಡುತ್ತಾರೆ. ಈ ಘಟನೆ ವಿನೋಬಾಜೀ ಅವರ ಐತಿಹಾಸಿಕ ಭೂದಾನ ಚಳವಳಿಗೆ ಬಿತ್ತನೆಯ ಬೀಜವಾಗುತ್ತದೆ. ಮರುದಿನದಿಂದಲೇ ವಿನೋಬಾಜೀ ತಮ್ಮ

ಪಾದಯಾತ್ರೆಯಲ್ಲಿ ಜಮೀನುದಾರರಿಂದ ಜಮೀನು ದಾನ ಪಡೆದು ಭೂರಹಿತರಿಗೆ ಹಂಚುವ ಭೂದಾನ ಚಳುವಳಿಯನ್ನು ಆರಂಭಿಸುತ್ತಾರೆ. ಹದಿನಾಲ್ಕು ವರ್ಷ ಭಾರತಾದ್ಯಂತ ಅರವತ್ತೈದು ಸಾವಿರ ಕಿ.ಮೀ. ಪಾದಯಾತ್ರೆ ನಡೆಸಿದ ವಿನೋಬಾಜೀ ನಲವತ್ತೆಂಟು ಲಕ್ಷ ಎಕರೆ ಜಮೀನನ್ನು ದಾನವಾಗಿ ಪಡೆದು ಭೂರಹಿತರಿಗೆ ಹಂಚುತ್ತಾರೆ. ಇದು ಭಾರತದ ಇತಿಹಾಸದಲ್ಲಿ ವಿನೋಬಾಜೀ ಅವರ ಹೆಸರನ್ನು ಚಿರಸ್ಥಾಯಿಗೊಳಿಸಿದೆ. ವಿನೋಬಾ ಅವರ ಭೂದಾನಯಾತ್ರೆ ಅಹಿಂಸಾತ್ಮಕವೂ, ಪರಿಣಾಮಕಾರಿಯೂ ಆದ ಒಂದು ಮೌನಕ್ರಾಂತಿ ಆಗಿದೆ.

ಮೇಲಿನ ವಿನೋಬಾಜೀ ಅವರ ಭೂದಾನಯಾತ್ರೆ ಒಮ್ಮೆ ಕರ್ನಾಟಕವನ್ನು ಪ್ರವೇಶಿಸುತ್ತದೆ. ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ಹಾಗೂ ಇಲ್ಲಿನ ಸಮಕಾಲೀನ ಕವಿಗಳ ಸಾಧನೆಯನ್ನು ಬೇರೆ ಭಾಷೆ ಮತ್ತು ಇತರರ ಮೂಲಕ ವಿನೋಬಾಜೀ ತಿಳಿದವರಾಗಿರುತ್ತಾರೆ. ಏಕೆಂದರೆ ವಿನೋಬಾಜೀ ಮತ್ತು ಕರ್ನಾಟಕದ ನಡುವೆ ಬಿಡಿಸಲಾಗದ ನಂಟಿದೆ. ಅವರ ತಾಯಿ ರುಕ್ಮಿಣಿದೇವಿ ಕರ್ನಾಟಕದ ಜಮಖಂಡಿಯವರು. ಕರ್ನಾಟಕದ ಈ ತಾಯಿಯ ಮೂಲಕವೇ ವಿನೋಬಾಜೀ ಅವರ ವಿಶಿಷ್ಟ ವ್ಯಕ್ತಿತ್ವ ರೂಪುಗೊಂಡಿತ್ತು. ವಿನೋಬಾಜೀ ಅವರ ಮಹತ್ವಾಕಾಂಕ್ಷೆಯ ಹೋರಾಟಗಳೆಂದರೆ ಭೂದಾನ ಮತ್ತು ಗ್ರಾಮದಾನ ಚಳವಳಿಗಳು. ಇವರ ಮೇಲಿನ ಚಳವಳಿಗಳ ಬಗ್ಗೆ ರಾಷ್ಟ್ರಮಟ್ಟದ ಚರ್ಚೆ ನಡೆಸಲು 1957 ರಲ್ಲಿ ಕರ್ನಾಟಕದ ಮೈಸೂರು ಬಳಿಯ ಇಲವಾಲ ಗ್ರಾಮದಲ್ಲಿ ರಾಷ್ಟ್ರೀಯ ಪರಿಷತ್ ಸಮ್ಮೇಳನ ಸಂಘಟಿಸಲಾಗಿತ್ತು. ಈ ಸಮ್ಮೇಳನದಲ್ಲಿ ಜವಾಹರಲಾಲ್ ನೆಹರು, ಬಾಬು ರಾಜೇಂದ್ರಪ್ರಸಾದ್, ಮೊರಾರ್ಜಿದೇಸಾಯಿ, ಕಾಮರಾಜ ನಾಡಾರ್, ನಂಬೂದರಿ ಪಾಟ್, ನಿಜಲಿಂಗಪ್ಪ, ಸೃಚೇತಾ ಕೃಪಲಾನಿ ಮುಂತಾದ ರಾಷ್ಟ್ರನಾಯಕರುಗಳೆಲ್ಲಾ ಭಾಗವಹಿಸಿದ್ದರು.

ವಿನೋಬಾ ಅವರು ಕರ್ನಾಟಕದಲ್ಲಿ ಭೂದಾನಯಾತ್ರೆ ನಡೆಸುತ್ತಿದ್ದ ಸಂದರ್ಭದಲ್ಲಿ ಕೊಡಗು ಜಿಲ್ಲೆಯ ಆನೆಚೌಕೂರಿನ ಪಾರೆಸ್ಟ್‌ಲಾಡ್ಜ್‌ನಲ್ಲಿ ಬೀಡು ಬಿಟ್ಟರುತ್ತಾರೆ. ಈ ವಿಷಯವನ್ನು ತಿಳಿದ ಕುವೆಂಪು ಅವರು 13–09–1957ರಂದು ಸಂಸಾರ ಸಮೇತರಾಗಿ ವಿನೋಬಾ ಅವರನ್ನು ಕಾಣಲು ಹೋಗುತ್ತಾರೆ. “ಸಂತ ವಿನೋಬಾಭಾವೆಯುವರೆಂದರೆ ಕುವೆಂಪು ಅವರಿಗೆ ಅತ್ಯಾಕರ್ಷಣೆ: ಇದಕ್ಕೆ ಕಾರಣವುಂಟು. ಅವರು ಮಹಾತ್ಮ ಗಾಂಧೀಜಿ ಯುವರ ಅಪ್ಪಟ ಅನುಯಾಯಿಯೆಂಬುದು ಒಂದು ಕಾರಣವಾದರೆ ಅವರ ಜೀವನ ತ್ಯಾಗಮಯವಾದದ್ದೆಂಬುದು ಇನ್ನೊಂದು ಕಾರಣ.”[2] ಈ ದೃಷ್ಟಿಯಿಂದ ವಿನೋಬಾ

ಅವರು ಆನೆಚೌಕೂರಿನ ಬಳಿ ಉಳಿದುಕೊಂಡಿದ್ದ ವಿಷಯವನ್ನು ತಿಳಿದುಕೊಂಡ ಕುವೆಂಪು 13–09–1957 ರಂದು ಸಂಸಾರ ಸಮೇತವಾಗಿ ಕಾಣಲು ಹೋಗುತ್ತಾರೆ. "ಚಿಕ್ಕವಳಾದ ನನಗೆ ವಿನೋಬಾ ಅವರನ್ನು ನೋಡಿದ್ದು ಚೆನ್ನಾಗಿ ನೆನಪಿದೆ" ಎಂಬ ತಾರಿಣಿ ಅವರ ಮಾತುಗಳು ಮೇಲಿನ ಸಂದರ್ಭದ ನೈಜತೆಯನ್ನು ಪ್ರದರ್ಶಿಸುತ್ತವೆ. ವಿನೋಬಾ ಅವರು ಕುವೆಂಪುರವರನ್ನು ಆತ್ಮೀಯವಾಗಿ ಬರಮಾಡಿಕೊಂಡು, 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯದ ದರ್ಶನ, ಧ್ವನಿಯ ಬಗ್ಗೆ ಚರ್ಚೆ ನಡೆಸುತ್ತಾರೆ. ಆಗ ಕುವೆಂಪು ತಮ್ಮ ಮಹಾಕಾವ್ಯದಲ್ಲಿನ ಕೆಲವು ಆಯ್ದ ಭಾಗಗಳನ್ನು ಓದಿ ಅದರ ಮಹತ್ವವನ್ನು ವಿವರಿಸುತ್ತಾರೆ.

ಈ ಸಂದರ್ಭದಲ್ಲಿ ಸಂತರಾದ ವಿನೋಬಾಭಾವೆ ಅವರಿಗೆ ಕುವೆಂಪು ಕಾಣಿಕೆಯಾಗಿ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯದ ಒಂದು ವಿಶೇಷ ಪ್ರತಿಯನ್ನು, 'ಜನಪ್ರಿಯ ವಾಲ್ಮೀಕಿ ರಾಮಾಯಣ' ಮತ್ತು 'ಇಕ್ಷುಗಂಗೋತ್ರಿ' ಕೃತಿಗಳ ಒಂದೊಂದು ಪ್ರತಿಯನ್ನು ನೀಡುತ್ತಾರೆ. 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯದ ವಿಶೇಷ ಪ್ರತಿಯಲ್ಲಿ ಒಂದು ಕವನವನ್ನು ಕುವೆಂಪು ಬರೆದುಕೊಟ್ಟಿರುವುದು ವಿಶೇಷ ಸಂಗತಿಯಾಗಿದೆ. ಆ ಕವನ ಈ ಕೆಳಕಂಡಂತೆ ಇದೆ.

ಮನುಜರೂಪವ ಧರಿಸಿ ಧರೆಗಿಳಿದು ಬಂದಿರುವ

ದೇವ ಸೂರ್ಯಕರುಣ :

ಕವಿದಿರುವ ಕತ್ತಲೆಯೊಳೊಂದೆ ಸಂಚರಿಸುತಿದೆ

ಅಮೃತಚಂದ್ರಕಿರಣ

ಪಾದಯಾತ್ರೆಯೊಳಿರುವ ಶ್ರೀ ವಿನೋಬನ ಅಮರ

ಅಗ್ನಿಶೀತ ಕಿರಣ !

ಇಂದು ವಾಮನಂತೆ ಬಂದೀತ್ರಿಕ್ರಮಗೆ

ಕವಿಯ ನಮನ ಅನೃಣ[3]

ವಿನೋಬಾಭಾವೆ ಅವರನ್ನು ಕುರಿತು "ಪ್ರಪಂಚದ ಸಂತರೆಲ್ಲ ಒಂದಲ್ಲ ಒಂದು ರೀತಿಯಿಂದ ಮಾನವ ಕಲ್ಯಾಣ ಸಾಧನೆಗೆ ದುಡಿದಿದ್ದಾರೆ ನಿಜ. ಆದರೆ ಈ ಪ್ರಕಾರದಲ್ಲಿ, ಈ ಪ್ರಮಾಣದಲ್ಲಿ ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯಗಳೆಲ್ಲವನ್ನೂ ಸಮನ್ವಯಗೊಳಿಸಿ ಸರ್ವೋದಯ ಸಾಧನೆಗೆ ತೊಡಗಿದವರಲ್ಲಿ ಇವರೇ ಮೊತ್ತಮೊದಲಿಗರೆಂದು ಕಾಣುತ್ತದೆ"[4] ಎಂಬ ಕುವೆಂಪು ಅವರ ಮಾತುಗಳು ಸಮರ್ಥನೀಯವಾಗಿವೆ. ಶ್ರೀ ವಿನೋಬಾಜಿಯಲ್ಲಿ ಭಾರತೀಯ ಪರಂಪರೆಯ ಪ್ರಾಚೀನ

ತಪಸ್ವಿಯೂ ಅತ್ಯಂತ ಕ್ರಾಂತಿಕಾರನಾದ ಆಧುನಿಕ ರಾಜಕೀಯಾರ್ಥಿಕ ವಿಜ್ಞಾನಿಯೂ ಒಟ್ಟುಗೂಡಿದಂತಿದೆ. ಕನ್ನಡದ ರಾಷ್ಟ್ರಕವಿ ಮತ್ತು ಸ್ವಾತಂತ್ರ್ಯ ಹೋರಾಟಗಾರ, ಭೂದಾನ ಚಳುವಳಿಯ ನೇತಾರ ವಿನೋಬಾಭಾವೆ ಅವರು ಪರಸ್ಪರ ಭೇಟಿಯಾಗಿ, ಕನ್ನಡ ಸಾಹಿತ್ಯದ ಬಗ್ಗೆ ಚರ್ಚೆ ನಡೆಸಿದ್ದು ಐತಿಹಾಸಿಕ ಘಟನೆಯಾಗಿದೆ. ಅಲ್ಲದೆ ಕುವೆಂಪು ಅವರ ಕೋರಿಕೆ ಮೇರೆಗೆ ಅವರ ಮನೆಗೆ ವಿನೋಬಾಭಾವೆ ಹುಣಸೂರಿನ ರಸ್ತೆಯ ಮೂಲಕ ಕಾಲ್ನಡಿಗೆಯ ಮೂಲಕ ಭೇಟಿ ನೀಡಿದ್ದು ಗಮನಾರ್ಹ ಸಂಗತಿಯಾಗಿದೆ. ಆದುದರಿಂದಲೇ ಮೈಸೂರಿನ ಹುಣಸೂರು ರಸ್ತೆಗೆ ವಿನೋಬಾಭಾವೆ ರಸ್ತೆ ಎಂದು ನಾಮಕರಣ ಮಾಡಿರುವುದು ಇದಕ್ಕೆ ಪ್ರಮುಖ ಐತಿಹಾಸಿಕ ಸಾಕ್ಷಿಯಾಗಿದೆ.

ಅಡಿ ಟಿಪ್ಪಣಿಗಳು :

1. ವಿಶುಕುಮಾರ್ : ಕನ್ನಡಪ್ರಭ (ಭಾನುಪ್ರಭ) 13ನೇ ಸೆಪ್ಟೆಂಬರ್ 2020, ಭಾನುವಾರ. ಪುಟ ಸಂಖ್ಯೆ :08
2. ನಾಗಣ್ಣ. ಸಿ. : 2009: ಅಕ್ಷಯದ್ರವ್ಯ : ವಿಸ್ಮಯ ಪ್ರಕಾಶನ ಮೈಸೂರು.ಪುಟ ಸಂಖ್ಯೆ :44
3. ಜವರೇಗೌಡ .ದೇ.: 2004: ಕುವೆಂಪು ಮತ್ತು ವಿಭೂತಿ ಪುರುಷರು : ತಳುಕಿನ ವೆಂಕಣ್ಣಯ್ಯ ಸ್ಮಾರಕಗ್ರಂಥ ಮಾಲೆ, ಮೈಸೂರು, ಪುಟ ಸಂಖ್ಯೆ : 182
4. ಕುವೆಂಪು ಸಮಗ್ರಗದ್ಯ ಸಂಪುಟ–2 : 2013 : ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ. ಪುಟ ಸಂಖ್ಯೆ : 248

ಪರಾಮರ್ಶನ ಕೃತಿಗಳು :

1. ಚಿಂತಾಮಣಿ ಕೊಡ್ಲೆಕೆರೆ : 2013 : ವಿನೋಬಾಭಾವೆ : ರಾಷ್ಟ್ರೋತ್ಥಾನ ಸಾಹಿತ್ಯ ಬೆಂಗಳೂರು.
2. ಪೂರ್ಣಚಂದ್ರತೇಜಸ್ವಿ ಕೆ. ಪಿ. : 1996 : ಅಣ್ಣನ ನೆನಪು : ಪುಸ್ತಕ ಪ್ರಕಾಶನ, ಮೈಸೂರು.
3. ತಾರಿಣಿ ಚಿದಾನಂದ : 2006 : ಮಗಳು ಕಂಡ ಕುವೆಂಪು : ಪುಸ್ತಕ ಪ್ರಕಾಶನ, ಮೈಸೂರು.

***

ಹೈದರ್ ಮತ್ತು ಟಿಪ್ಪು ಕಾಲದ ಅಂತರ್ ರಾಜ್ಯ ಹಾಗೂ ವಿದೇಶಿ ವರ್ತಕ ಸಮುದಾಯಗಳು

1

ಡಾ. ಕುಮಾರ ಎನ್.

ಉಪನ್ಯಾಸಕರು
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹೊಸಬಂಡಿ ಹರ್ಲಾಪುರ.
ಕೊಪ್ಪಳ(ತಾ) ಕೊಪ್ಪಳ(ಜಿಲ್ಲೆ) 583234
kumaradasanayakanahatty@gmail.com

ಮಾನವ ಸ್ಥಿರ ಜೀವನವನ್ನು ಎಂದು ಕಂಡುಕೊಂಡನೋ ಅಂದೇ ಆರ್ಥಿಕತೆಯ ಪರಿಕಲ್ಪನೆ ಹುಟ್ಟಿಕೊಂಡಿತು. ಹೀಗೆ ಮಾನವ ಜನಾಂಗದ ಆರ್ಥಿಕ ಬದುಕನ್ನು ರೂಪಿಸಿದ ಹಲವಾರು ಅಂಶಗಳಲ್ಲಿ ವರ್ತಕರು ಸಹ ಒಬ್ಬರು. ಅವರು ರೂಪಿಸಿಕೊಂಡ ಸಂಘಗಳು ವ್ಯಾಪಾರ–ವಹಿವಾಟಿನಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ. ವ್ಯಾಪಾರ ವೃತ್ತಿಯಿಂದ ಸಮಾಜದ ಜೀವನ ಸ್ಥಿತಿ, ನಾಡಿನ ಕೊಡುಕೊಳ್ಳುವಿಕೆಯ ಪರಿಸ್ಥಿತಿಗಳು ಒಂದು ರೂಪ ಪಡೆಯುತ್ತವೆ. ಯಾವುದೇ ಪ್ರದೇಶವು ಹಳ್ಳಿಯ ಸ್ವರೂಪದಿಂದ ಪೇಟೆ–ಪಟ್ಟಣಗಳು ನಗರಗಳಾಗಿ ಗುರುತಿಸಿಕೊಳ್ಳುವಲ್ಲಿ ವರ್ತಕ ಸಮುದಾಯದ ಪಾತ್ರ ಮುಖ್ಯವಾಗಿರುತ್ತದೆ. ಭಾರತದ ವ್ಯಾಪಾರ–ವಾಣಿಜ್ಯದಲ್ಲಿ ಆರಂಭದಿಂದಲೂ ಈ ವರ್ತಕರ ಸಮುದಾಯವು ಕಂಡುಬರುತ್ತದೆ. ಕೃಷಿ ಉತ್ಪನ್ನಗಳ ವ್ಯಾಪಕ ಹೆಚ್ಚುವರಿಯಿಂದ ವ್ಯಾಪಾರವು ಉಗಮವಾಗಿ ಪಟ್ಟಣಗಳು

ಕೂಡ ಬೆಳವಣಿಗೆ ಹೊಂದಿದವು. ಆಗ ತನ್ನಷ್ಟಕ್ಕೆ ತಾನೇ ನಗರ ಆರ್ಥಿಕತೆಯು ಅಸ್ತಿತ್ವಕ್ಕೆ ಬಂದು ಸ್ಥಳೀಯ ಮತ್ತು ದೂರದ ಮಾರುಕಟ್ಟೆಗಳಿಗೆ ಸರಕುಗಳನ್ನು ಮಾರಾಟಮಾಡುವಲ್ಲಿ ವ್ಯಾಪಾರಿ ಸಮುದಾಯಗಳು ಗುರುತಿಸಿಕೊಂಡವು. ಭಾರತದ ಕೃಷಿ ಉತ್ಪನ್ನಗಳಾದ ಹತ್ತಿ, ಇಂಡಿಗೋ, ಮೆಣಸು, ಅಕ್ಕಿ, ರೇಷ್ಮೆ ಮೊದಲಾದ ವಸ್ತುಗಳ ಉತ್ಪಾದನೆ ಹೆಚ್ಚಿದ್ದರಿಂದ ವಿಜಯನಗರೋತ್ತರಕಾಲದಲ್ಲಿ ವರ್ತಕ ಸಮುದಾಯಗಳು ಸ್ಥಿತ್ಯಂತರಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಹೊಸ ವರ್ತಕ ಸಮುದಾಯಗಳು ಮಧ್ಯ ಕಾಲದಲ್ಲಿಯೇ ಕರ್ನಾಟಕಕ್ಕೆ ವಲಸೆ ಬಂದವು. ವರ್ತಕರ ವ್ಯಾಪಾರದ ಅಭಿವೃದ್ಧಿಯಿಂದ ವಿಶ್ವಕ್ಕೆ ಭಾರತದ ಮಾರುಕಟ್ಟೆಯು ತೆರೆಯುವ ಮೂಲಕ ವರ್ತಕರು ಗುರುತಿಸಿಕೊಂಡರು. ಹಾಗಾಗಿ ಪಾಶ್ಚಿಮಾತ್ಯ ಯುರೋಪಿನ ವ್ಯಾಪಾರದೊಂದಿಗೆ ಭಾರತವು ವ್ಯಾಪಾರ ವಾಣಿಜ್ಯದಲ್ಲಿ ತೊಡಗಿ ಅಂತರ್‌ರಾಜ್ಯ ವರ್ತಕ ಸಮುದಾಯಗಳ ಉಗಮಕ್ಕೂ ಕಾರಣವಾಯಿತು.

ವ್ಯಾಪಾರದ ದೃಷ್ಟಿಯಿಂದ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವಲಸೆ ಬಂದಂತಹ ಹೊರರಾಜ್ಯದ ವರ್ತಕರು ವ್ಯಾಪಾರವನ್ನೇ ತನ್ನ ಮೂಲ ವೃತ್ತಿಯನ್ನಾಗಿಸಿಕೊಂಡಿದ್ದರು. ಇಡೀ ಕುಟುಂಬವೇ ವಲಸೆ ಬಂದು ವ್ಯಾಪಾರದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಿತ್ತು. ಅಂತಹ ಪ್ರಮುಖ ಹೊರ ರಾಜ್ಯದ ವರ್ತಕ ಸಮುದಾಯಗಳು ವಿಜಯನಗರೋತ್ತರಕಾಲದಲ್ಲಿ ವಲಸೆ ಬಂದು ನೆಲೆಸಿರುವುದನ್ನು ಕಾಣಬಹುದು. ಅಂತಹ ವರ್ತಕ ಸಮುದಾಯಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಗೌಡ ಸಾರಸ್ವತರು

ಕರ್ನಾಟಕದ ಕರಾವಳಿಯಲ್ಲಿ ವಿಜಯನಗರೋತ್ತರ ಕಾಲದಲ್ಲಿ ಸಾಗರೋತ್ತರ ವ್ಯಾಪಾರ ವಾಣಿಜ್ಯದಲ್ಲಿ ಗುರುತಿಸಿಕೊಂಡಂಥ ಒಂದು ಸಮುದಾಯವೆಂದರೆ ಗೌಡ ಸಾರಸ್ವತರು. ಈ ಗೌಡ ಸಾರಸ್ವತ ಸಮುದಾಯದವರು ಕ್ರಿ.ಶ.1498ರ ನಂತರ ವ್ಯಾಪಾರ ವಾಣಿಜ್ಯದಲ್ಲಿ ಗುರುತಿಸಿಕೊಂಡಂಥ ಸಮುದಾಯವಾಗಿದೆ. ಇವರು ಮೂಲತಃ ಗೋವಾ ಮೂಲದವರಾಗಿದ್ದು ಕರ್ನಾಟಕದ ಕರಾವಳಿಯ ಭಾಗಕ್ಕೆ ವಲಸೆ ಬಂದವರಾಗಿದ್ದಾರೆ. ಪೋರ್ಚುಗೀಸರು ಕ್ರಿ.ಶ.1510ರಲ್ಲಿ ಬಿಜಾಪುರದ ಯೂಸುಫ್ ಆದಿಲ್‌ಷಾನ ಅಧೀನದಲ್ಲಿದ್ದ ಗೋವಾವನ್ನು ವಶಪಡಿಸಿಕೊಂಡು ಧರ್ಮ ಪ್ರಚಾರ ಮಾಡುವಂತಹ ಸಂದರ್ಭದಲ್ಲಿ ಗೋವಾದಿಂದ ಹಲವು ಕಡೆ ವಲಸೆ ಹೋಗಲಾರಂಭಿಸಿದರು. ಆಗ ಕರ್ನಾಟಕದ ಕರಾವಳಿ ಭಾಗಗಳಿಗೆ ವಿಜಯನಗರ ಕಾಲದಲ್ಲಿ ವಲಸೆ ಬಂದು

ಮಂಗಳೂರು, ಭಟ್ಕಳ, ಬಸ್ರೂರು ಮೊದಲಾದ ಕಡೆ ನೆಲೆಸಿದ ಸಮುದಾಯವೆಂದರೆ ಗೌಡ ಸಾರಸ್ವತರು ಆದರೆ ವಿಜಯನಗರ ಕಾಲದ ವ್ಯಾಪಾರ–ವಾಣಿಜ್ಯದಲ್ಲಿ ಇತರ ಬಗೆಗೆ ಹೆಚ್ಚಿನ ಉಲ್ಲೇಖಗಳಿಲ್ಲ.

ಗೋವಾದಲ್ಲಿ ಪೋರ್ಚುಗೀಸರ ದಬ್ಬಾಳಿಕೆ, ಮತಾಂತರ ಪ್ರಕ್ರಿಯೆಯು, ಸ್ಥಳೀಯ ವ್ಯಾಪಾರ ಸಮುದಾಯಗಳಿಗೆ ಹೆಚ್ಚಾದುದು ಕರ್ನಾಟಕದ ಕಡೆ ಗೌಡ ಸಾರಸ್ವತರು ವಲಸೆ ಬರಲು ಬಹುಮುಖ್ಯ ಕಾರಣವಾಯಿತು. ಕ್ರಿ.ಶ. 1541ರಿಂದ 1561ರ ಕಾಲಘಟ್ಟದಲ್ಲಿ ಗೋವಾದಿಂದ ಸಾರಸ್ವತರ ವಲಸೆಯ ಪ್ರಮಾಣ ಹೆಚ್ಚಾಯಿತು. ಈ ಗೌಡ ಸಾರಸ್ವತರು ವಿಜಯನಗರ ಕೆಳದಿ, ಮತ್ತು ಸೋಂದೆ ಅರಸರ ಆಸ್ಥಾನಗಳಲ್ಲಿ ಆಡಳಿತಾಧಿಕಾರಿಗಳಾಗಿ ಸೇನಾ ನಾಯಕರಾಗಿ ರಾಯಭಾರಿಗಳಾಗಿ ವ್ಯಾಪಾರ ವಾಣಿಜ್ಯದಲ್ಲಿ ಸ್ಥಳೀಯ ಪ್ರತಿಸ್ಪರ್ಧಿಗಳಾದ ಮುಸ್ಲಿಂ (ನವಾಯತ್, ಮಾಪಿಳ್ಳೆ), ಜೈನ ವ್ಯಾಪಾರಿಗಳೊಂದಿಗೆ ಪೈಪೋಟಿ ನಡೆಸಿ ಯಶಸ್ವಿಯಾದರು. ವಿಜಯನಗರ ಕಾಲದಲ್ಲಿ ಕುಂಬಳೆ, ಉಲ್ಲಾಳ, ಮಂಗಳೂರು, ಬಸ್ರೂರು, ಭಟ್ಕಳ, ಗಂಗೊಳ್ಳಿ, ಹೊನ್ನಾವರ ಮೊದಲಾದ ಭಾಗಗಳಲ್ಲಿ ಬಂದು ನೆಲೆಸಿದರು. ಗೇರುಸೊಪ್ಪೆಯ ರಾಣಿ ಚೆನ್ನಭೈರಾದೇವಿಯು ಈ ಸಾರಸ್ವತ ಬ್ರಾಹ್ಮಣರಿಗೆ ಆಶ್ರಯ ನೀಡಿದ್ದಳು.[1] ಭಟ್ಕಳ ಬಂದರು ವಿಜಯನಗರ ಕಾಲದಿಂದಲೂ ಒಂದು ಮುಖ್ಯ ವ್ಯಾಪಾರಿ ಬಂದರು ಕೇಂದ್ರವಾಗಿತ್ತು. ಬೆನ್ನವರದ ಶೇತ ಪೈ ಎಂದು ಹೆಸರಾದ ಈ ಸಾರಸ್ವತ ಬೇತಪ್ಪಯ್ಯನಾರಾಯಣ ದೇವಾಲಯ ನಿರ್ಮಿಸಿದರು. ರಾಣಿ ಚೆನ್ನಾಭೈರದೇವಿಯು ಈ ದೇವಾಲಯಕ್ಕೆ ಉಂಬಳಿಯನ್ನು ಕೊಟ್ಟಳು. ಕೆಳದಿಯ ವೀರಭದ್ರಪ್ಪ ನಾಯಕನ ಕಾಲದಲ್ಲಿ ರಾಮಕೃಷ್ಣ ಪ್ರಭು ಮಂತ್ರಿಯಾಗಿದ್ದು, ಕಾರ್ಕಳದ ಭೈರವರಸರು ಗೌಡ ಸಾರಸ್ವತ ವ್ಯಾಪಾರಿಗಳಿಗೆ ಆಶ್ರಯ ನೀಡಿದ್ದನು.[2] ಗೌಡ ಸಾರಸ್ವತರು ಕರ್ನಾಟಕದ ಕರಾವಳಿ ಭಾಗದಲ್ಲಿ ನಡೆಯುವ ವಿದೇಶಿ ವ್ಯಾಪಾರದಲ್ಲಿ ಬಹುಮುಖ್ಯವಾಗಿ ಗುರುತಿಸಿಕೊಳ್ಳುತ್ತಾರೆ. ಗೌಡ ಸಾರಸ್ವತರ ಬ್ರಾಹ್ಮಣರು ತಮ್ಮ ಸಂಪೂರ್ಣ ಸಾಂಸ್ಕೃತಿಕತೆಯನ್ನು ಕರ್ನಾಟಕದ ಕರಾವಳಿ ಭಾಗದಲ್ಲಿ ನಿರ್ಮಿಸಿದರೆಂದರೆ ತಪ್ಪಾಗಲಾರದು. ಅವರ ಆರಾಧ್ಯ ದೈವಗಳು ಪೋರ್ಚುಗೀಸರಿಂದ ತೊಂದರೆಗೆ ಒಳಗಾದ ಕಾರಣ ಅವರ ದೈವಗಳನ್ನು ಕರಾವಳಿ ಭಾಗದಲ್ಲಿ ಹೊಸ ಸ್ಥಿತ್ಯಂತರದಿಂದ ತಮ್ಮ ಹುಟ್ಟನ್ನು ಮತ್ತೆ ಕರಾವಳಿ ಭಾಗದಲ್ಲಿ ಕಂಡುಕೊಂಡರು. ಪೋರ್ಚುಗೀಸರೊಂದಿಗೆ ವ್ಯಾಪಾರದಲ್ಲಿ ಗೌಡ ಸಾರಸ್ವತರೇ ಮುಖ್ಯವಾಗಿ ಗುರುತಿಸಿಕೊಳ್ಳುತ್ತಾರೆ. ಕೆಳದಿಯ ನಾಯಕರ ಕಾಲದಲ್ಲಿ 12 ಜನ ಗೌಡ ಸಾರಸ್ವತರ ಉಲ್ಲೇಖವನ್ನು ನೀಡುವಂತಹ

ಒಂದು ದಾಖಲೆಯನ್ನು ಕೆಳದಿಯ ವೆಂಕಟೇಶ ಜೋಯಿಸರು ಶೋಧಿಸಿದ್ದಾರೆ. ಇವರು ಸಂಸ್ಥಾನದ ನಿಯೋಗಿಗಳಾಗಿ ಅಧಿಕಾರಿಗಳಾಗಿ ಮಂತ್ರಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಅದರಲ್ಲಿ ನಾರಾಯಣ ಮಲ್ಯ ಎಂಬುವನು 1664–69ರ ಕಾಲಘಟ್ಟದಲ್ಲಿ ಸಂಸ್ಥಾನದ ನಿಯೋಗಿ ಹಾಗೂ ವರ್ತಕನಾಗಿ ಕಾರ್ಯನಿರ್ವಹಿಸಿದ್ದಾನೆ. ನಾರಾಯಣ ಮಲ್ಯನು ಕೆಳದಿ ಅರಸ ಹಿರಿಯ ಸೋಮಶೇಖರ ನಾಯಕನ ಆಪ್ತನಾಗಿದ್ದಕ್ಕೆ ಕೆಳದಿ ಆಡಳಿತದಲ್ಲಿ ಅಧಿಕಾರ ದೊರೆತಿದ್ದು ಕಾರಣವಾಗಿರಬಹುದು. ಸಾರಸ್ವತರಲ್ಲಿ 1570–80ರ ದಶಕದಲ್ಲಿ ಈ ಸಾರಸ್ವತ ಸಗಟು ವ್ಯಾಪಾರಿ ರಫ್ತುದಾರರು ಪೋರ್ಚುಗೀಸರಿಂದ ತೀವ್ರ ಪೈಪೋಟಿಯನ್ನು ಎದುರಿಸಬೇಕಾಯಿತು. ಈ ಸ್ಥಳೀಯ ಸಾರಸ್ವತ ವರ್ತಕರ ಒತ್ತಡಕ್ಕೆ ಮಣಿದ ಪೋರ್ಚುಗೀಸರಿಗೆ ಸರಿಸಮನಾದ ಭತ್ತ ವ್ಯಾಪಾರದ ವಹಿವಾಟಿನಲ್ಲಿ ಪಾಲ್ಗೊಂಡಿದ್ದರು.[3] ಭಟ್ಕಳ ಬಂದರಿನಿಂದ ಪರ್ಶಿಯನ್ ಕೊಲ್ಲಿ ಮತ್ತು ಕೆಂಪು ಸಮುದ್ರದ ಮೂಲಕ ವ್ಯಾಪಾರ ಸಂಬಂಧವನ್ನು ಕಲ್ಪಿಸುತ್ತದೆ. ಬಂದರು ಪ್ರದೇಶದಲ್ಲಿ ಜೈನರು ಮತ್ತು ಸಾರಸ್ವತರು ನೆಲೆಸಿದ್ದರು. ಇವರು ವಿದೇಶಿ ವ್ಯಾಪಾರವನ್ನು ನಿರ್ವಹಿಸುವವರಾಗಿದ್ದು ಇದಕ್ಕೂ ಪೂರ್ವದಲ್ಲಿ ನವಾಯತ್ ಮುಸ್ಲಿಂ ಪರದೇಶಿ ಮುಸ್ಲಿಮರು ವಿದೇಶಿಯ ವ್ಯಾಪಾರ ನಡೆಸುತ್ತಿದ್ದರು. ಈ ಸಮುದಾಯಗಳ ವಿರುದ್ಧ ಪರಸ್ಪರ ವಿದೇಶಿಯ ವ್ಯಾಪಾರಕ್ಕೆ ಸಂಬಂಧಿಸಿದಂತೆ ಘರ್ಷಣೆಗಳು ನಡೆದದ್ದೂ ಉಂಟು. ವಿಜಯನಗರ ಕಾಲದಲ್ಲಿ ಹೆಚ್ಚಾಗಿ ವಿದೇಶಿಯ ವ್ಯಾಪಾರದಲ್ಲಿ ಗುರುತಿಸಿಕೊಂಡಿದ್ದ ನವಾಯತ್‌ಗಳೆಂಬ ಮುಸ್ಲಿಮರು ಹೈದರ್ ಮತ್ತು ಟಿಪ್ಪುಕಾಲದಲ್ಲಿ ಸ್ಥಿತ್ಯಂತರಕ್ಕೆ ಒಳಪಟ್ಟು ಕಂಪನಿಯ ಆಳ್ವಿಕೆಯ ಅಧೀನದಲ್ಲಿ ವ್ಯಾಪಾರ ವಾಣಿಜ್ಯದಲ್ಲಿ ಗುರುತಿಸಿಕೊಂಡರು. ಮುಸ್ಲಿಮರ ಅಧೀನದಲ್ಲಿದ್ದ ವಿದೇಶಿಯ ವ್ಯಾಪಾರವು ಜೈನರು ಮತ್ತು ಸಾರಸ್ವತ ಬ್ರಾಹ್ಮಣರಲ್ಲಿ ವರ್ಗಾಯಿಸಿದ ಆರ್ಥಿಕ ಸ್ಥಿರತೆಯನ್ನು ಗುರುತಿಸಬಹುದು. ಕ್ರಿ.ಶ.1748ರ ಏಪ್ರಿಲ್ 5ನೇ ತಾರೀಖಿನ ಪೋರ್ಚುಗೀಸ್ ದಾಖಲೆಯೊಂದು ನಾರಾಯಣ ಪ್ರಭು ಎನ್ನುವವನು ಅಂಕೋಲದ ವ್ಯಾಪಾರಿಯಾಗಿದ್ದು, ಇವನು ಗೋವಾದಲ್ಲಿದ್ದ ಪೋರ್ಚುಗೀಸರಿಗೆ ಅಕ್ಕಿಯನ್ನು ಪೂರೈಸುತ್ತಿದ್ದನು ಎಂಬುದಾಗಿ ತಿಳಿಸುತ್ತದೆ. ಅಂತೆಯೇ 1742ರ ಅಪ್ರಕಟಿತ ದಾಖಲೆಯೊಂದು ತಿಳಿಸುವಂತೆ ಹೊನ್ನಾವರ ಮತ್ತು ಮಂಗಳೂರಿನ ನಡುವೆ ದರ್ ಸಮಿತಿ (ಹರಿಕಾಮತ್) ಒಬ್ಬ ಪ್ರಮುಖ ವ್ಯಾಪಾರಿಯಾಗಿದ್ದ. ಕೆ.ಜಿ.ವಸಂತ ಮಾಧವ ಅವರು ಇವರನ್ನು ಸಾರಸ್ವತ ವ್ಯಾಪಾರಿಯೆಂದು ಪರಿಗಣಿಸಿದ್ದಾರೆ.[4] ಇನ್ನೂ ಕೆಲವು ವಿದ್ವಾಂಸರು ಗೌಡ ಸಾರಸ್ವತರನ್ನು ಕೊಮಟಿಗರೆಂದು ಗುರುತಿಸಿದ್ದಾರೆ. ಆದರೆ ಈ ಕಾಲದಲ್ಲಿ ಕರಾವಳಿಯ ವ್ಯಾಪಾರ

ವಾಣಿಜ್ಯದಲ್ಲಿ ಹೆಚ್ಚಾಗಿ ದಾಖಲೆಗಳಲ್ಲಿ ಗೌಡ ಸಾರಸ್ವತರ ಉಲ್ಲೇಖಗಳೇ ಇರುವುದರಿಂದ ಇವರು ಕೊಮಟಿಗರಲ್ಲ ಗೌಡ ಸಾರಸ್ವತರೆಂದು ವಸಂತಮಾಧವ ಅವರ ಹೇಳಿಕೆಯನ್ನು ಪುರಸ್ಕರಿಸಬಹುದಾಗಿದೆ. ಕೆಳದಿ ನಾಯಕರ ವ್ಯಾಪಾರ ವಾಣಿಜ್ಯದಲ್ಲಿ ಪ್ರಮುಖವಾಗಿ ಗುರುತಿಸಿಕೊಂಡಿದ್ದ ಗೌಡ ಸಾರಸ್ವತರು ಹೈದರ್ ಮತ್ತು ಟಿಪ್ಪು ಆಳ್ವಿಕೆಯ ಕಾಲದಲ್ಲಿಯೂ ಕಂಡುಬರುತ್ತಾರೆ. ಟಿಪ್ಪುಸುಲ್ತಾನನು ವ್ಯಾಪಾರದಲ್ಲಿ ಹೊಸ ನಾವಿನ್ಯತೆಯನ್ನು ಹೊಂದಿದ್ದರಿಂದ ಆರ್ಥಿಕ ಪಲ್ಲಟಕ್ಕೆ ಕಾರಣವಾಗಿರಬಹುದು. ಅವನ ವ್ಯಾಪಾರ ನೀತಿಯು ಬ್ರಿಟಿಶ್ ಮತ್ತು ಫ್ರೆಂಚರಿಗೆ ವಿರುದ್ಧವಾಗಿತ್ತೇ ವಿನಃ ಸ್ಥಳೀಯ ವ್ಯಾಪಾರಿಗಳಿಗಲ್ಲ. 17ನೇ ಶತಮಾನದಲ್ಲಿ ಪೋರ್ಚುಗೀಸ್ ವ್ಯಾಪಾರ ವಾಣಿಜ್ಯದಲ್ಲಿ ಗುಜರಾತಿನಲ್ಲಿ ಬನಿಯಾ ಎಂಬ ವ್ಯಾಪಾರಿ ಸಮುದಾಯ ಗುರುತಿಸಿಕೊಂಡಂತೆ ಕರ್ನಾಟಕ ಮತ್ತು ಗೋವಾದ ವ್ಯಾಪಾರ ವಾಣಿಜ್ಯದಲ್ಲಿ ಗೌಡ ಸಾರಸ್ವತರು ಗುರುತಿಸಿಕೊಳ್ಳುತ್ತಾರೆ. ಪೋರ್ಚುಗೀಸರ ಕಂದಾಯ ದಾಖಲೆಗಳಲ್ಲಿ ರ‍್ಯಾಂಡಸ್ ಎಂದೇ ಕರೆದಿರುವ ಬಲವಂತದ ವ್ಯಾಪಾರ–ವಾಣಿಜ್ಯ ಮತ್ತು ಮತಾಂತರದ ಪ್ರಕ್ರಿಯೆ ನಡೆಯಿತು. ಈ ಪ್ರಕ್ರಿಯೆಗೊಳಪಟ್ಟವರಲ್ಲಿ ಗೌಡ ಸಾರಸ್ವತರು ಸುಮಾರು 50%ಇತರೆ ಹಿಂದೂ 30% (ಗುಜರಾತಿನ ಬನಿಯಾಸ್, ಒಂದು ಭಾಗ) ಮತ್ತು ಕ್ರೈಸ್ತ ಪೋರ್ಚುಗೀಸ್ ಸ್ಥಳೀಯರು ಮತಾಂತರಕ್ಕೆ ಒಳಪಟ್ಟಿದ್ದರು. ಸಾಗರೋತ್ತರ ವ್ಯಾಪಾರ ಹಾಗೂ ಪೋರ್ಚುಗೀಸರ ಆರ್ಥಿಕ ಅಭಿವೃದ್ಧಿಯಲ್ಲಿ ಗೌಡ ಸಾರಸ್ವತರ ಪಾತ್ರ ಗಮನಾರ್ಹವಾದದು.[5] ಒಂದರ್ಥದಲ್ಲಿ ಪೋರ್ಚುಗೀಸರೆಂದರೆ ಗೌಡ ಸಾರಸ್ವತರು ಎಂದು ವಿವರಿಸುವ ರೀತಿಯಲ್ಲಿಯೇ ಅವರು ಗುರುತಿಸಿಕೊಂಡಿದ್ದರು. ಕರ್ನಾಟಕದ ಕರಾವಳಿಯಲ್ಲಿ ಪೋರ್ಚುಗೀಸರ ವ್ಯಾಪಾರದಲ್ಲಿ ಗುರುತಿಸಿಕೊಂಡಿದ್ದ ಗೌಡ ಸಾರಸ್ವತರು ವಸಾಹತು ಕರ್ನಾಟಕದ ಆಳ್ವಿಕೆಯ ವೇಳೆಗೆ ಕಂದಾಯ ಆಡಳಿತದಲ್ಲಿ ಗುರುತಿಸಿಕೊಳ್ಳುತ್ತಾರೆ. ಬ್ರಿಟಿಶರು ಕಂದಾಯ ನೀತಿಯನ್ನು ಪರಿಚಯಿಸಿದಾಗ ಅದರ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಸ್ಥಳೀಯ ವೈಶಿಷ್ಟ್ಯಗಳನ್ನು ಚೆನ್ನಾಗಿ ಅರಿತಿದ್ದ ಜನರ ಅವಶ್ಯಕತೆ ಇತ್ತು. ಹಾಗಾಗಿ ಕಂಪನಿಗೆ ಸಾರಸ್ವತ ಬ್ರಾಹ್ಮಣರು ಮತ್ತು ಬಂಟ ಸಮುದಾಯದವರು, ಕೃಷಿ ಚಟುವಟಿಕೆಯನ್ನು ತಿಳಿದವರಾಗಿದ್ದರಿಂದ ಇವರನ್ನು ನೇಮಕ ಮಾಡಿದರು. ಈ ಮೂಲಕ ವರ್ತಕರಾಗಿದ್ದವರು ಅಧಿಕಾರಶಾಹಿ ನೆಲೆಯ ಮೂಲಕ ಬ್ರಿಟಿಶ್ ಈಸ್ಟ್ ಇಂಡಿಯಾ ಕಂಪನಿಯ ಮಧ್ಯಸ್ಥಗಾರರಾಗಿ ತಮ್ಮ ಸ್ಥಾನವನ್ನು ಗುರುತಿಸಿಕೊಂಡರು. ಈ ಮೇಲ್ಕಂಡ ಹೇಳಿಕೆಗೆ ಪೂರಕವೆಂಬಂತೆ ಸೂರ್ಯನಾಥ್ ಕಾಮತ್ ಅವರು ಈ ಸಮುದಾಯದ ಜನರು ಕೆನರಾ ಕರಾವಳಿಯಲ್ಲಿ ಉಳಿದೆಲ್ಲಾ

ಸಮುದಾಯಗಳಿಗಿಂತ ಮುಂಚೆಯೇ ಶಿಕ್ಷಣವನ್ನು ಪಡೆದಿದ್ದರಿಂದ ಬ್ರಿಟಿಶರ ಸೇವೆಯಲ್ಲಿ ಪ್ರಾಬಲ್ಯ ಮೆರೆದರು ಎಂದು ಅಭಿಪ್ರಾಯಪಡುತ್ತಾರೆ. ಆ ಸಂದರ್ಭದಲ್ಲಿ ಉನ್ನತ ಸಮುದಾಯದವರು ಮಾತ್ರ ಶಿಕ್ಷಣ ಪಡೆದಿದ್ದರು. ಗೌಡ ಸಾರಸ್ವತ ಬ್ರಾಹ್ಮಣರ ಬಗ್ಗೆ ಸ್ವರ್ರಾಕ್‌ನನ್ನು ಉಲ್ಲೇಖಿಸುತ್ತಾ ಸೂರ್ಯನಾಥ ಕಾಮತ್ ಅವರು ಕೊಡುವ ಈ ವಿವರಣೆ; ಅರೆ ಊಳಿಗಮಾನ್ಯತೆಯ ಭೂ ಮಾಲೀಕರು, ಬಡ್ಡಿ ವ್ಯಾಪಾರಿಗಳು ಮತ್ತು ಅಧಿಕಾರಿಗಳ ನಡುವಿನ ಸಂಬಂಧವನ್ನು ತಿಳಿಸಿಕೊಡುತ್ತದೆ. ಕೊಂಕಣಿಗಳಲ್ಲಿ ನೇಕಾರರು ಮಳಿಗೆಗಳನ್ನು ಸ್ಥಾಪಿಸಿ ಮತ್ತು ಜಿಲ್ಲೆಯ ಪ್ರತಿ ಜಿಲ್ಲೆಯಲ್ಲಿಯೂ ಸಹ ಗೌಡ ಸಾರಸ್ವತರಿದ್ದರು. ಚಿತ್ರದುರ್ಗವು ಇದಕ್ಕೆ ಹೊರತಾಗಿರಲಿಲ್ಲ. ಇವರು ಜಿಲ್ಲೆಯ ಶ್ರೀಮಂತ ಭೂ ಮಾಲೀಕರಾಗಿದ್ದು, ಕೆಲವರು ಸರಕಾರಿ ನೌಕರಿಯಲ್ಲಿ ಉನ್ನತ ಹುದ್ದೆಯಲ್ಲಿದ್ದರು.[6] ಈ ಮೂಲಕ ಕರ್ನಾಟಕದ ಕರಾವಳಿಯಲ್ಲಿ ಗೌಡ ಸಾರಸ್ವತರು ಪೋರ್ಚುಗೀಸರ ಆಗಮನದಿಂದ ವಸಾಹತು ಕರ್ನಾಟಕದ ಆಳ್ವಿಕೆಯವರೆಗೆ ಗುರುತಿಸಿಕೊಂಡಿದ್ದರು.

ಕರಾವಳಿ ಕರ್ನಾಟಕದಲ್ಲಿ ಗೌಡ ಸಾರಸ್ವತರು ಮತ್ತೊಂದು ಬಗೆಯ ಸ್ಥಿತ್ಯಂತರಕ್ಕೆ ಒಳಪಟ್ಟಿದ್ದರು. ಕರಾವಳಿ ಭಾಗದಲ್ಲಿ ರೈತವಾರಿ ಪದ್ಧತಿಯನ್ನು 1820ರ ನಂತರ ಜಾರಿ ಮಾಡಿದ್ದ ಪರಿಣಾಮವಾಗಿ ರೈತರು ಅನೇಕ ಸ್ಥಿತ್ಯಂತರಕ್ಕೆ ಒಳಪಟ್ಟರು. ಈ ಪದ್ಧತಿಯ ಪ್ರಕಾರ ಕಟಾವಿಗೆ ಮೊದಲೇ ಸರ್ಕಾರಕ್ಕೆ ಹಣ ಪಾವತಿಸಬೇಕಾಗಿತ್ತು. ಆದ್ದರಿಂದ ಭೂಮಿಯನ್ನು ಹೊಂದಿ ಭೂಮಾಲೀಕರಾಗಿ ಮತ್ತು ವರ್ತಕರಾಗಿ ಗುರುತಿಸಿಕೊಂಡಿದ್ದ ಗೌಡ ಸಾರಸ್ವತರು ಬಡ್ಡಿ ವ್ಯಾಪಾರಿಗಳಾಗಿ ಪರಿವರ್ತಿತರಾದರು. ಇದು ಅವರ ಆರ್ಥಿಕ ಸ್ಥಿತ್ಯಂತರದ ಕಾಲವೆಂದು ಗುರುತಿಸಬಹುದು. ಪ್ರಭುತ್ವಗಳಿಗೆ ಹಣವನ್ನು ಬಡ್ಡಿಗೆ ಸಾಲಕೊಡುವ ಹಂತಕ್ಕೆ ಈ ಗೌಡ ಸಾರಸ್ವತರು ಬೆಳೆದಿದ್ದರೆಂದು ಹೇಳಬಹುದು. 1826ರಲ್ಲಿ ಮೈಸೂರಿನ ರಾಜ ಈ ಬಡ್ಡಿ ವ್ಯಾಪಾರಿಗಳಿಂದ 4 ಲಕ್ಷ ಕೆ.ಪಿ.(ಕಂಠೀರಾಯ ಪಗೋಡ) ಸಾಲ ಪಡೆದುಕೊಂಡಿದ್ದನೆಂಬುದಕ್ಕೆ ದಾಖಲೆ ಇದೆ.[7] 1630ರ ವೇಳೆಯಲ್ಲಿ ಬಸ್ರೂರಿನಿಂದ ಅಕ್ಕಿಯು ಗೋವಾಕ್ಕೆ ರಫ್ತಾಗುತ್ತಿತ್ತು. ಆ ವೇಳೆಯಲ್ಲಿ ಬೆಂಗಾವಲು ಪಡೆಗಳಾಗಿ ಈ ಸಮುದಾಯದವರು ಕಾರ್ಯನಿರ್ವಹಿಸುತ್ತಿದ್ದರೆಂಬುದಾಗಿ ಸಂಜಯ್ ಸುಬ್ರಮಣ್ಯಂ ಅವರು ಅಭಿಪ್ರಾಯಿಸಿದ್ದಾರೆ. ಆಹಾರ ಸರಬರಾಜಿನ ಕೊರತೆ ಕುರಿತಂತೆ ತನಿಖೆ ನಡೆಸಿದಾಗ 1646ರಲ್ಲಿ ಇದರಲ್ಲಿ ಬಸ್ರೂರಿನಿಂದ ಹೊರದೂಡಿದ ತಪ್ಪಿಗೆ ಹೊರಹೋಗುವಂತೆ ಶಿಕ್ಷಿಸಲಾದ ವಿಚಾರವನ್ನು ತಿಳಿಸಿದ್ದಾರೆ. ಗೌಡ ಸಾರಸ್ವತರು ಬಸ್ರೂರಿನ ಅಕ್ಕಿ ವ್ಯಾಪಾರದಲ್ಲಿ ಗುರುತಿಸಿಕೊಂಡಿದ್ದು, ಮಾಡಿದ ತಪ್ಪಿಗೆ

ಆರಂಭದಿಂದಲೂ ನಿರ್ವಹಿಸಿಕೊಂಡು ಬಂದ ವ್ಯಾಪಾರವನ್ನು ತೊರೆದಿದ್ದು ಹಾಗೂ ಒಬ್ಬ ಮಹಿಳೆಯು ಗಂಡ ನಿರ್ವಹಿಸುವ ವಿದೇಶಿಯ ವ್ಯಾಪಾರದಲ್ಲಿ ಭಾಗವಹಿಸಿದ್ದಳೆಂಬ ವಿಚಾರವನ್ನು ತಿಳಿಯಬಹುದು.[8] ಒಟ್ಟಾರೆಯಾಗಿ ಹೇಳುವುದಾದರೆ ಹೈದರ್ ಮತ್ತು ಟಿಪ್ಪು ಕಾಲದಲ್ಲಿ ಪ್ರಮುಖ ವರ್ತಕ ಸಮುದಾಯವಾಗಿ ಗುರುತಿಸಿಕೊಂಡಿದ್ದ ಗೌಡ ಸಾರಸ್ವತರು ಇತರೆ ಹೊರ ರಾಜ್ಯಗಳೊಡನೆ ವ್ಯಾಪಾರ ವಾಣಿಜ್ಯದಲ್ಲಿ ಗುರುತಿಸಿಕೊಂಡಿದ್ದರು. ನಂತರ ಬ್ರಿಟಿಶರ ಆಳ್ವಿಕೆಯಲ್ಲಿ ಯಾವ ರೀತಿ ಅಧಿಕಾರ ಸ್ಥಿತ್ಯಂತರವನ್ನು ಕಂಡುಕೊಂಡರು ಎಂಬುದನ್ನು ಇಲ್ಲಿ ಪ್ರಮುಖವಾದುದಾಗಿದೆ.

ಕೋಮಟಿಗರು

ತೆಲುಗು ಪ್ರದೇಶದಿಂದ ಮೈಸೂರು ರಾಜ್ಯಕ್ಕೆ ಹಲವಾರು ಜಾತಿ ಸಮುದಾಯಗಳು ವಲಸೆ ಬಂದವು. ಅವುಗಳಲ್ಲಿ ಕೋಮಟಿಗರು ಒಬ್ಬರು. ಕರ್ನಾಟಕದಲ್ಲಿ ಕೋಮಟಿಗರೆಂಬ ಇವರು ವೈಶ್ಯ ಸಮುದಾಯಕ್ಕೆ ಸೇರಿದವರು. ಬೆಂಗಳೂರು ಪ್ರದೇಶವು ಪ್ರಾಚೀನ ಕಾಲದಿಂದಲೂ ವ್ಯಾಪಾರ ವಾಣಿಜ್ಯದಲ್ಲಿ ಗುರುತಿಸಿಕೊಂಡಿದ್ದು ಮೈಸೂರಿನ ಕೆಂಪೇಗೌಡನ ಆಳ್ವಿಕೆಯಿಂದಲೇ ವ್ಯಾಪಾರದಲ್ಲಿ ಬೆಂಗಳೂರು ಪ್ರಸಿದ್ಧಿಯನ್ನು ಪಡೆದಿತ್ತು. ಬೆಂಗಳೂರು ಪ್ರದೇಶದ ರಂಗನಾಥ ದೇವಾಲಯದಲ್ಲಿರುವ ಶಾಸನದ ಪ್ರಕಾರ ಬೆಂಗಳೂರಿನ ಪೇಟೆಯ ನಾಲ್ಕು ಜನ ಶೆಟ್ಟರುಗಳಾದ ಪೆದ್ದ ಚಿಕ್ಕಣ್ಣ ಸೆಟ್ಟಿ, ತಿರುಮಲ ಸೆಟ್ಟಿ, ದಾನಣ್ಣ ಸೆಟ್ಟಿ ಮೊದಲಾದವರ ಹೆಸರುಗಳಿದ್ದು ಇವರು ದೇವರ ನಿತ್ಯಕರ್ಮಕ್ಕೆ ದಾನಕೊಟ್ಟ ವಿವರವಿದೆ.[9] ಚಿಕ್ಕ ದೇವರಾಜ ಒಡೆಯರು ವಿಜಯನಗರ ಸಾಮ್ರಾಜ್ಯ ಅವನತಿಯ ನಂತರ ಉಂಟಾದ ಸ್ಥಿತ್ಯಂತರದಲ್ಲಿ ಪೇಟೆ ಪಟ್ಟಣಗಳ ನಿರ್ಮಾಣ ಪುನಶ್ಚೇತನದ ಕಾರ್ಯವನ್ನು ನಿರ್ವಹಿಸಿ ಮಾರುಕಟ್ಟೆಗಳ ಹೆಚ್ಚಿನ ನಿರ್ಮಾಣಕ್ಕೆ ವರ್ತಕ ಸಮುದಾಯವನ್ನು ಬಳಸಿದರು. ಆಗ ಕೋಮಟಿಗರೆಂಬ ಸಮುದಾಯದವರು ಬೆಂಗಳೂರು, ಮೈಸೂರು ಭಾಗಕ್ಕೆ ಆಗಮಿಸಿ ವ್ಯಾಪಾರದಲ್ಲಿ ನಿರತರಾಗಿದ್ದರು.[10] ಕೋರಮಂಡಲ ಕರಾವಳಿ ಪ್ರದೇಶದಲ್ಲಿ ಚಿಲ್ಲರೆ ವ್ಯಾಪಾರಿಗಳಾಗಿ, ಸಾಗರೋತ್ತರ ಸ್ಥಳೀಯ ವ್ಯಾಪಾರಿಗಳಾಗಿ, ಯೂರೋಪಿಯನ್ನರ ಕಂಪನಿಗಳಲ್ಲಿ ದಲ್ಲಾಳಿಗಳಾಗಿ, ಬ್ಯಾಂಕಿಂಗ್ ಉದ್ಯಮದಾರರಾಗಿ, ದಕ್ಷಿಣ ಭಾರತದ ವ್ಯಾಪಾರ ವಾಣಿಜ್ಯದಲ್ಲಿ ಈ ಸಮುದಾಯವನ್ನು ಗುರುತಿಸಬಹುದು. ಕರ್ನಾಟಕದ ಕರಾವಳಿಯಲ್ಲಿ ಗೌಡ ಸಾರಸ್ವತರು ಮತ್ತು ಬನಿಯಾಗಳನ್ನು ಅವರು ಚಿಟ್ಟೀಸ್ ಎಂದು ಗುರುತಿಸಿಕೊಂಡಂತೆ ಕೋರಮಂಡಲ ಕರಾವಳಿಯಲ್ಲಿ ಗುರುತಿಸಿಕೊಂಡಿದ್ದಾರೆ. ಇವರು ಮೂಲತಃ ವ್ಯಾಪಾರ ವೃತ್ತಿಯನ್ನು ನಿರ್ವಹಿಸುವವರಾಗಿದ್ದರು. ಕಾಳು, ತುಪ್ಪ, ಬೆಣ್ಣೆಗಳ

ಮಾರಾಟ, ಚಿಕ್ಕತಕ್ಕಡಿ ಅಂಗಡಿ, ಅರಿವೆಯ ಅಂಗಡಿ ಇವೇ ಮುಖ್ಯ ಮಳಿಗೆಗಳನ್ನು ಹೊಂದಿದ್ದರು. ಕೊಮ್ಮಟಿಗರು ವಿಶೇಷವಾಗಿ ಧಾರವಾಡ ಜಿಲ್ಲೆಯವರು, ತಂತ್ರಗಾರರೆಂತಲೂ, ಧೂರ್ತರೆಂತಲೂ ಹೆಸರಾಗಿದ್ದಾರೆ.[11] ಕೊಮ್ಮಟಿಗರು ಕರ್ನಾಟಕದ ಎಲ್ಲಾ ಭಾಗದಲ್ಲಿದ್ದು ಚಿತ್ರದುರ್ಗದಲ್ಲಿಯೂ ಸಹ ಇದ್ದರು. ಮೂಲತಃ ಇವರು ತೆಲುಗು ಮಾತನಾಡುವ ಜನಾಂಗದವರಾಗಿದ್ದಾರೆ. ಪ್ರಸ್ತುತ ವ್ಯಾಪಾರ ವೃತ್ತಿಯನ್ನು ನಿರ್ವಹಿಸುವ ಇವರು, ಚಿತ್ರದುರ್ಗವೂ ಸೇರಿದಂತೆ, ವಿಜಾಪುರ, ಕೆನಡಾ ಮೊದಲಾದ ಭಾಗದಲ್ಲಿ ಹೆಚ್ಚು ಸಂಖ್ಯೆಯಲ್ಲಿ ವಸಾಹತು ಕರ್ನಾಟಕದಲ್ಲಿ ನೆಲೆಸಿದ್ದರೆಂಬುದಕ್ಕೆ ಗೆಜೆಟಿಯರ್‌ನಲ್ಲಿ ಅಂಕಿಅಂಶಗಳಿವೆ. ಮೈಸೂರು ಸಂಸ್ಥಾನದ ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದೊಡ್ಡಬಳ್ಳಾಪುರ, ತುಮಕೂರು ಭಾಗಗಳಲ್ಲಿ ಈ ಸಮುದಾಯದವರು ಹೆಚ್ಚಾಗಿ ಕಂಡುಬರುತ್ತಾರೆ. ಬಟ್ಟೆ ನೇಕಾರಿಕೆ ಇವರ ಮುಖ್ಯ ಕಸುಬಾಗಿದೆ. ಈ ಸಮುದಾಯದ ಹೆಚ್ಚು ಜನ ಬಟ್ಟೆ ಅಂಗಡಿಯಲ್ಲಿ ವ್ಯಾಪಾರ ಮಾಡುವುದನ್ನು ಇಂದಿಗೂ ಸಹ ಕಾಣಬಹುದಾಗಿದೆ.

ಗುಜರಾತಿಗಳು

ವಿಜಯನಗರೋತ್ತರಕಾಲಘಟ್ಟದ ವ್ಯಾಪಾರ–ವಾಣಿಜ್ಯದಲ್ಲಿ ಪ್ರಮುಖವಾಗಿ ಗುರುತಿಸಿಕೊಂಡವರಲ್ಲಿ ಗುಜರಾತಿಗಳು ಪ್ರಮುಖರಾಗಿದ್ದಾರೆ. 1510ರಲ್ಲಿ ಗೋವಾವನ್ನು ವಶಪಡಿಸಿಕೊಂಡಾಗ ಗೋವಾ ಭಾಗದಿಂದ ಕರಾವಳಿ ಭಾಗಕ್ಕೆ ಈ ಗುಜರಾತಿ ವ್ಯಾಪಾರಿಗಳು ವಲಸೆ ಬಂದಿದ್ದರು. ಬೆಂಗಳೂರು ಪ್ರದೇಶದಲ್ಲಿರುವ ಗುಜರಾತಿ ಸಮುದಾಯದವರು ಗುಜರಾತಿನ ವಿವಿಧ ಪ್ರದೇಶಗಳಿಂದ ಬಂದವರಾಗಿದ್ದರು. ಗುಜರಾತಿಗಳಲ್ಲಿ ಮುಖ್ಯವಾಗಿ ಪಟೇಲ್, ವಣಿಯಾ, ಬ್ರಾಹ್ಮಣ, ಬನಿಯಾ, ಷಾ, ಅಂಬಾನಿ, ಗಾಮಿ ಮತ್ತು ಗಡವಿಗಳು ಪ್ರಮುಖರು.[12] ಈ ಸಮುದಾಯದವರು ವ್ಯಾಪಾರ ಉದ್ದಿಮೆಗಳಲ್ಲಿ ನಿಪುಣರು. ಗುಜರಾತಿಯರು ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಬೆಂಗಳೂರು ಪ್ರದೇಶಕ್ಕೆ ಬಂದು ನೆಲೆಸಿದರು. ಇದಕ್ಕೆ ಪೂರಕವೆಂಬಂತೆ ಬೆಂಗಳೂರು ಪೇಟೆಯಲ್ಲಿರುವ ಕಾಶಿ ವಿಶ್ವೇಶ್ವರ ದೇವಾಲಯವನ್ನು ಗೂರ್ಜರ ಬ್ರಾಹ್ಮಣರು ಕಟ್ಟಿಸಿದರೆಂದು ಹೇಳಲಾಗಿದೆ.[13] ಟಿಪ್ಪು ತನ್ನ ಕಾಲಾವಧಿಯಲ್ಲಿ ಈ ವರ್ತಕ ಸಮುದಾಯದವರನ್ನು ಆಹ್ವಾನಿಸಿ ಅನೇಕ ರೀತಿಯ ಸೌಲಭ್ಯಗಳನ್ನು ಮತ್ತು ರಿಯಾಯಿತಿಗಳನ್ನು ಒದಗಿಸಿದನು. ವಿದೇಶಿ ವರ್ತಕರಾದ ಬ್ರಿಟಿಶರಿಗೆ ವ್ಯಾಪಾರದಲ್ಲಿ ಹಾನಿ ಉಂಟುಮಾಡುವ ಉದ್ದೇಶದಿಂದ ದೇಶೀಯ ವ್ಯಾಪಾರಿಗಳನ್ನು ಪ್ರೋತ್ಸಾಹಿಸಲು ಮಾಡಿದ ಪ್ರಯತ್ನವಾಗಿತ್ತು. ತಂಜಾವೂರಿನಲ್ಲಿದ್ದ ಗುಜರಾತ್ ಪ್ರದೇಶದ ಖತ್ರಿ

ಸಮುದಾಯದವರಲ್ಲಿ ನೇಯ್ಗೆಯವರು ಪ್ರಸಿದ್ಧರಾಗಿದ್ದು ಟಿಪ್ಪು ಅವರನ್ನು ಬೆಂಗಳೂರು ಅಲ್ಲದೇ ಇತರೆ ಸಂಸ್ಥಾನಗಳಿಗೆ ಆಹ್ವಾನಿಸಿದ್ದನು. ಆದರೆ ಮುಂದೆ ಗುಜರಾತಿ ವರ್ತಕ ಸಮುದಾಯದವರು ಬ್ರಿಟಿಶರು, ಹೈದರಾಬಾದ್ ನಿಜಾಮ ಹಾಗೂ ಆರ್ಕಾಟ್‌ರೊಂದಿಗೆ ಮಧ್ಯವರ್ತಿ ವರ್ತಕರಾಗಿ ಕಾರ್ಯನಿರ್ವಹಿಸಲು ತೊಡಗಿದರು. ಆಗ ಈ ವರ್ತಕ ಸಮುದಾಯದವರ ವಾಣಿಜ್ಯ ಚಟುವಟಿಕೆಯನ್ನು ಮೈಸೂರು ಸಂಸ್ಥಾನದಾದ್ಯಂತ ನಿಷೇಧಿಸಿದನು. ಇದರಿಂದ ಈ ವ್ಯಾಪಾರಿ ವರ್ಗದವರು ಕಂಗಾಲಾದರು. ಟಿಪ್ಪುವಿನ ಮರಣದ ನಂತರ ಹೈದರಾಬಾದ್ ಮತ್ತು ಗುಜರಾತ್‌ನಿಂದ ಪುನಃ ಬೆಂಗಳೂರಿಗೆ ಬಂದು ನೆಲೆಸಿದರು.[14] ಗುಜರಾತಿ ಸಮುದಾಯದ ವರ್ತಕರು ಬೆಂಗಳೂರು ಪ್ರದೇಶದ ಶ್ರೀಮಂತರು ಮತ್ತು ಮುಸ್ಲಿಂ ಅಧಿಕಾರಿಗಳಿಗೆ ಬೆಲೆ ಬಾಳುವ ಬಟ್ಟೆಯನ್ನು ಮಾರಾಟ ಮಾಡುತ್ತಿದ್ದರು. ಇವರು ಲೇವಾದೇವಿದಾರರಾಗಿ ಕಾರ್ಯನಿರ್ವಹಿಸುತ್ತಿದ್ದರು. ಹೀಗೆ ಗುಜರಾತಿಗಳು ಬ್ರಿಟಿಶರ ಕಾಲದಲ್ಲಿ ಶ್ರೀಮಂತ ವರ್ತಕರಾಗಿ, ಮಧ್ಯವರ್ತಿಗಳಾಗಿ ಹಾಗೂ ಲೇವಾದೇವಿದಾರರಾಗಿದ್ದರು. ಈ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬರಲು ಪ್ರಮುಖ ಕಾರಣ ಗುಜರಾತಿನಲ್ಲಿದ್ದ ಬರಗಾಲದ ಪರಿಸ್ಥಿತಿ ಎನ್ನಬಹುದು. ಈ ರೀತಿಯಾಗಿ ಟಿಪ್ಪುವಿನ ಮರಣದ ನಂತರ ಚಿತ್ರದುರ್ಗವೂ ಸೇರಿದಂತೆ ಇತರೆ ಪ್ರದೇಶಗಳಲ್ಲಿ ನೆಲೆಸಿದರು.

ರಾಜಸ್ಥಾನಿಗಳು

ರಾಜಸ್ಥಾನಿಗಳು ಭಾರತದ ವಿವಿಧ ಪ್ರದೇಶಗಳಲ್ಲಿ ನೆಲೆನಿಂತು ವಿಶಾಲವಾದ ವ್ಯಾಪಾರ ಸಂಬಂಧವನ್ನು ಹೊಂದಿದ ವರ್ತಕ ಸಮುದಾಯದವರಾಗಿದ್ದಾರೆ. ಚಿತ್ರದುರ್ಗ ಪ್ರದೇಶದಲ್ಲಿಯೂ ಈ ವರ್ತಕ ಸಮುದಾಯವು ಮುಖ್ಯ ಪಾತ್ರವಹಿಸಿರುವುದನ್ನು ಗುರುತಿಸಬಹುದು. ಇವರು ಇಲ್ಲಿಗೆ ವಲಸೆ ಬರುವ ಕಾರಣಗಳು ಈ ಕೆಳಕಂಡಂತಿವೆ. ರಾಜಸ್ಥಾನ ಹೆಚ್ಚಾಗಿ ಮರುಭೂಮಿ ಪ್ರದೇಶವನ್ನು ಹೊಂದಿದ್ದು ನೀರಿನ ಅಭಾವ ಹಾಗೂ ಉತ್ತಮ ಸಾರಿಗೆ ವ್ಯವಸ್ಥೆಯ ಕೊರತೆ ಇದೆ. ವ್ಯವಸಾಯ ಮಾಡಲು ಯೋಗ್ಯವಾದ ವಾತಾವರಣವಿಲ್ಲದಿರುವುದು. ಅಲ್ಲದೇ ಬ್ರಿಟಿಶ್ ವರ್ತಕ ಕಂಪನಿಯು ಜೋಧ್‌ಪುರವನ್ನು ಒಳಗೊಂಡಂತೆ ಕೆಲವು ಮುಖ್ಯ ಪ್ರದೇಶಗಳನ್ನು ವಶಪಡಿಸಿಕೊಂಡರು. ಇದರಿಂದಾಗಿ ಪ್ರಮುಖ ವ್ಯಾಪಾರ–ವಾಣಿಜ್ಯ ಚಟುವಟಿಕೆಗಳು ಕಂಪನಿಯ ಅಧೀನಕ್ಕೆ ಒಳಪಟ್ಟಿತು. ಸ್ಥಳೀಯವಾಗಿ ರಾಜಸ್ಥಾನದಲ್ಲಿ ವ್ಯಾಪಾರ ಸಮುದಾಯದಲ್ಲಿ ಉಂಟಾದ ಪೈಪೋಟಿ ಇದು ವ್ಯಾಪಾರದ ಉದ್ದೇಶದಿಂದ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗಲು ಪ್ರೋತ್ಸಾಹಿಸಿತು.[15] ಈ ಸಮುದಾಯವು

ಟಿಪ್ಪು ಕಾಲದಲ್ಲಿ ಕರ್ನಾಟಕಕ್ಕೆ ವಲಸೆ ಬಂದ ಸಮುದಾಯವಾಗಿದೆ. ಈ ಸಮುದಾಯವು ವಸಾಹತು ಕರ್ನಾಟಕದಲ್ಲಿ ಮಧ್ಯವರ್ತಿ ವರ್ತಕ ಸಮುದಾಯವಾಗಿ ಗುರುತಿಸಿಕೊಂಡಿತು. ಇವರು ಚಿತ್ರದುರ್ಗದಿಂದ ಮಂಗಳೂರಿಗೆ ಅಕ್ಕಿ, ಕಬ್ಬು, ತೆಂಗು, ಕರಿಮೆಣಸು ಮುಂತಾದ ವಸ್ತುಗಳೊಂದಿಗೆ ವ್ಯಾಪಾರ ಮಾಡುವ ಪ್ರಮುಖ ವರ್ತಕರಾಗಿದ್ದರು. ಈ ಸಮುದಾಯವು ಎಷ್ಟು ಪ್ರಬಲವಾಗಿತ್ತೆಂದರೆ ಪ್ರಭುತ್ವಕ್ಕೆ ಸಾಲಕೊಡುವಷ್ಟು ಬೃಹತ್ ಸಮುದಾಯವಾಗಿತ್ತು.

ಜಗತ್‌ಸೇಠರು 1782ರಲ್ಲಿ ಕಂಪನಿಯ ಬ್ಯಾಂಕರ್‌ಗಳಾಗಿದ್ದರು. ಅವರ ಜಾಗಕ್ಕೆ ಅಗರ್‌ವಾಲ್ ಸಮುದಾಯದ ದೊಡ್ಡ ಮಾರ್ವಾಡಿ ಬ್ಯಾಂಕರ್‌ನಾದ ಗೋಪಾಲ್ ದಾಸ್ ಮಾರ್ವಾಡಿ ಬ್ಯಾಂಕ್ ಬಂದಿತು. ಇವನ ಸಹೋದರ ಭವಾನಿ ದಾಸ್ ಟಿಪ್ಪುವನ್ನು ಹತ್ತಿಕ್ಕಲು ಮತ್ತು ಶ್ರೀರಂಗಪಟ್ಟಣ ವಶಪಡಿಸಿಕೊಳ್ಳಲು ಬ್ರಿಟಿಶರಿಗೆ ಸಹಕರಿಸಿದ್ದ.[16] ಈ ಸಮುದಾಯದವರು ವಸಾಹತು ಕರ್ನಾಟಕದಲ್ಲಿ ಬ್ರಿಟಿಶರ ಮಧ್ಯವರ್ತಿ ವ್ಯಾಪಾರಿ ವರ್ತಕರಾಗಿ ಗುರುತಿಸಿಕೊಂಡರು. ಇದರಿಂದ ಸ್ಥಳೀಯವಾಗಿ ಗುರುತಿಸಿಕೊಂಡಿದ್ದ ವ್ಯಾಪಾರಿ ಸಮುದಾಯಗಳು ಕ್ಷೀಣಿಸಿ, ವಸಾಹತೋತ್ತರ ಕರ್ನಾಟಕದ ವ್ಯಾಪಾರ ವಾಣಿಜ್ಯದಲ್ಲಿ ಮತ್ತು ಆಡಳಿತದಲ್ಲಿ ಗುರುತಿಸಿಕೊಂಡಿರುವುದನ್ನು ನೋಡಬಹುದು. ಬ್ರಿಟಿಶರೊಂದಿಗೆ ಆತ್ಮೀಯತೆಯ ಭಾವನೆಯೊಂದಿಗೆ ಅವರ ವ್ಯಾಪಾರ ಮತ್ತು ವ್ಯವಹಾರದಲ್ಲಿ ಕೈಜೋಡಿಸಿ ಕೆಲಸ ಮಾಡದೇ ಇವರು ಮಧ್ಯವರ್ತಿ ಭೂಮಾಲೀಕರಾಗಿ ಮುಂದುವರೆಯಲು ಸಾಧ್ಯವಾಯಿತು. ಟಿಪ್ಪು ನಾಶಮಾಡಿದ ಭೂಮಾಲೀಕತ್ವವನ್ನು ವಸಾಹತು ಕರ್ನಾಟಕದಲ್ಲಿ ಪುನಃ ಮುಂದುವರೆಸಿತ್ತೆಂದು ಹೇಳಬಹುದು. ಈ ರೀತಿಯಾಗಿ ಹೈದರ್ ಮತ್ತು ಟಿಪ್ಪುಕಾಲದ ಚಿತ್ರದುರ್ಗ ಪ್ರದೇಶಕ್ಕೆ ವಲಸೆ ಬಂದ ರಾಜಸ್ಥಾನಿಗಳು ಚಿನ್ನ, ಬಟ್ಟೆ, ಕಿರಾಣಿ, ಅಂಗಡಿ ಮುಂತಾದ ವ್ಯಾಪಾರಗಳನ್ನು ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ, ಜಗಳೂರು, ದಾವಣಗೆರೆ, ಹರಿಹರ, ಹರಪನಹಳ್ಳಿ ಮುಂತಾದ ಕಡೆಗಳಲ್ಲಿ ಪ್ರಸ್ತುತ ದಿನಗಳಲ್ಲಿಯೂ ಸಹ ಈ ಸಮುದಾಯಗಳು ತಮ್ಮ ವ್ಯಾಪಾರ ವಹಿವಾಟನ್ನು ನಡೆಸುತ್ತಲಿವೆ.

ತಿಗಳರು

ವಿಜಯನಗರೋತ್ತರಕಾಲದಲ್ಲಿ ವರ್ತಕ ಸಮುದಾಯಗಳಲ್ಲಿ ತಿಗಳ ಸಮುದಾಯವು ಪ್ರಮುಖವಾಗಿದೆ. ಇವರ ಪ್ರಧಾನ ವೃತ್ತಿ ತೋಟಗಾರಿಕೆಯಾಗಿದೆ. ಕರ್ನಾಟಕದಲ್ಲಿ ಗುರುತಿಸಿಕೊಂಡಿರುವ ತಿಗಳ ಸಮುದಾಯವು ತೋಟಗಾರಿಕೆ ಬೆಳೆ

ಎಲ್ಲಿ ಇರುತ್ತದೆಯೋ ಆ ಭಾಗಗಳಲ್ಲಿ ನೆಲೆಸಿರುವುದನ್ನು ಕಾಣಬಹುದು. ಟಿಪ್ಪು ಸುಲ್ತಾನ್ ಹಣ್ಣು, ತರಕಾರಿ, ತೋಟಗಾರಿಕಾ ಬೆಳೆಗಳನ್ನು ಅಭಿವೃದ್ಧಿ ಪಡಿಸಿದ್ದರಿಂದ ಈ ಸಮುದಾಯ ಟಿಪ್ಪುವಿನ ಕಾಲದಲ್ಲಿ ಹೆಚ್ಚು ವಲಸೆ ಬಂದಿರಬಹುದು.[17] ಈ ಸಮುದಾಯದ ಒಳಪಂಗಡಗಳು ಸಹ ಕೃಷಿ ಆಧಾರಿತ ಉತ್ಪನ್ನಗಳಿಂದ ಗುರುತಿಸಿಕೊಂಡಿರುವುದನ್ನು ಕಾಣಬಹುದು. ಇವರಲ್ಲಿ ಹೊರಳ ತಿಗಳರು, ಎಲೆತಿಗಳರು, ಅರವು ತಿಗಳರು, ಮುಳ್ಳು ತಿಗಳರು ಎಂಬ ಪಂಗಡಗಳಿವೆ.[18] ಕೆಳದಿ ನಾಯಕರ ಕಾಲದಲ್ಲಿ ಈ ಸಮುದಾಯದ ಉಲ್ಲೇಖವಿದ್ದು, ಇವರು ಅಲ್ಲಿನ ತೋಟಗಾರಿಕೆಯಲ್ಲಿ ಗುರುತಿಸಿಕೊಂಡಿದ್ದರು. ಕೆಳದಿಯ ನಾಯಕರು ಈ ಸಮುದಾಯಕ್ಕೆ ತೆರಿಗೆಯಿಂದ ವಿನಾಯಿತಿ ನೀಡಿದ್ದರು.[19] ಈ ಜನಾಂಗದವರು ತೋಟಗಾರಿಕೆಯಲ್ಲಿ ಹೆಚ್ಚಿನ ಒಲವನ್ನು ಹೊಂದಿದ್ದರಿಂದ ಕೆಳದಿಯಲ್ಲಿ ಶಿವಪ್ಪನಾಯಕನು ತೋಟಗಾರಿಕೆ ಬೆಳೆಯನ್ನು ಅಭಿವೃದ್ಧಿ ಪಡಿಸಿದ್ದರಿಂದ ಅಲ್ಲಿ ಕರಾವಳಿ ತೋಟಗಾರಿಕೆಯಲ್ಲಿ ಗುರುತಿಸಿಕೊಂಡಿದ್ದರು. ಚಿತ್ರದುರ್ಗ ಮತ್ತು ಹೊಸದುರ್ಗ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಈ ಸಮುದಾಯವು ಜೀವಿಸಿದೆ.

ನಗರ್ತಕರು

ವಿನಿಮಯ ವರ್ತಕ ಸಮುದಾಯಗಳಲ್ಲಿ ನಗರ್ತರು ಬಹು ಮುಖ್ಯವಾದಂತಹ ವ್ಯಾಪಾರಿ ಸಮುದಾಯದವರು. ನಗರ ಪಟ್ಟಣಗಳಲ್ಲಿ ನೆಲೆಸಿರುವುದರಿಂದಾಗಿ ನಗರ್ತ ಎಂದು ಕರೆಯುತ್ತಾರೆ. 1800ರಲ್ಲಿ ಬುಕಾನನ್ ತನ್ನ ವರದಿಯಲ್ಲಿ ಈ ಸಮುದಾಯದವರು ಬೆಂಗಳೂರು, ಚಿಕ್ಕಬಳ್ಳಾಪುರ ಮತ್ತು ದೊಡ್ಡಬಳ್ಳಾಪುರ ಪ್ರದೇಶದಲ್ಲಿ (ಭೇರಿ) ನಗರ್ತಕರನ್ನು ನೋಡಿರುವುದಾಗಿ ದಾಖಲಿಸಿದ್ದಾನೆ. ಭೇರಿ ಜನಾಂಗದವರು ವ್ಯಾಪಾರಿಗಳಾಗಿದ್ದು ಅವರು ತಮ್ಮನ್ನು ನಗರ್ತರು ಎಂದು ಕರೆದುಕೊಳ್ಳುತ್ತಾರೆ. ಈ ನಗರ್ತರಲ್ಲಿ ಎರಡು ಪಂಗಡಗಳಿವೆ. ಶಿವನ ಆರಾಧಕರು ಮತ್ತು ವಿಷ್ಣುವಿನ ಆರಾಧಕರು, ಔಷಧಿಗಳು, ಹತ್ತಿ, ದವಸ, ದಾನ್ಯಗಳು, ಬಟ್ಟೆ ಮೊದಲಾದ ವ್ಯಾಪಾರ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.[20] ಚಿತ್ರದುರ್ಗದ ನಗರ ಪ್ರದೇಶ ಸೇರಿದಂತೆ ಚಳ್ಳಕೆರೆ ತಾಲ್ಲೂಕಿನ ನಗರಂಗೆರೆಯಲ್ಲಿ ನಗರೇಶ್ವರ ದೇವಾಲಯಗಳನ್ನು ಇಂದಿಗೂ ಕಾಣಬಹುದು. ಅಲ್ಲದೇ ಚಿತ್ರದುರ್ಗದ ಬಟ್ಟೆ ವ್ಯಾಪಾರಿಗಳಲ್ಲಿ ಬಹುತೇಕರು ನಗರ್ತಕರೇ ಆಗಿದ್ದಾರೆ. ಬಟ್ಟೆ ವ್ಯಾಪಾರಿಗಳಾದ ನಗರ್ತಕರು ಚಿತ್ರದುರ್ಗ ಪರಿಸರದಲ್ಲಿ ದೂರದಿಂದ ಭಾರೀ ಬೇಡಿಕೆ ಇಲ್ಲವಾದಲ್ಲಿ ನೇಯ್ಗೆಯವರಿಗೆ ಮುಂಗಡ ಕೊಡುವ ಪರಿಪಾಠವಿರಲಿಲ್ಲ.

ಬೇಡಿಕೆ ಇದ್ದಾಗ ಬಟ್ಟೆಯ ಬೆಲೆಯ ಅರ್ಧದಷ್ಟು ಮುಂಗಡ ಕೊಡುತ್ತಿದ್ದರು. ಸಾಲದ ಅವಧಿ ಮೂರು ತಿಂಗಳು ಇದಕ್ಕೆ ಬಡ್ಡಿ ಇರಲಿಲ್ಲ. ಇಲ್ಲಿನ ಬಟ್ಟೆ ನಗರ, ಶ್ರೀರಂಗಪಟ್ಟಣ, ಚನ್ನರಾಯಪಟ್ಟಣ, ಸಿರಾ, ಮಧುಗಿರಿ, ದೇವನಹಳ್ಳಿಗೆ ಹೋಗುತ್ತಿತ್ತು. ಸ್ವಲ್ಪ ಪ್ರಮಾಣದ ರೇಷ್ಮೆ, ಹತ್ತಿ ಬಟ್ಟೆ ಹಾಗೂ ಕುಪ್ಪಸದ ಅರಿವೆ ದಕ್ಷಿಣ ಕರ್ನಾಟಕ, ತಮಿಳುನಾಡುಗಳಿಗೆ ಹೋಗುತ್ತಿತ್ತು. ಎಲ್ಲಾ ರೀತಿಯ ಬಟ್ಟೆಗಳಿಗೂ ಮಂಗಳೂರಿನ ವ್ಯಾಪಾರಿಗಳಿಂದ ತುಂಬಾ ಬೇಡಿಕೆ ಇತ್ತು.[21] ಹೈದರ್ ಮತ್ತು ಟಿಪ್ಪು ಕಾಲದಲ್ಲಿ ನಗರ್ತಕರು ಸಂತೆ–ಪೇಟೆಗಳಿಗೆ ಬಂದ ವಿವಿಧ ಸರಕುಗಳನ್ನು ಖರೀದಿಸಿ ಬಯಲು ಅಂಗಡಿ ಹಾಗೂ ಮಳಿಗೆಗಳಲ್ಲಿ ಮಾರಾಟಮಾಡುತ್ತಿದ್ದರು ಎಂದು ತಿಳಿಯುತ್ತದೆ. ಈ ಮೂಲಕ ಕರ್ನಾಟಕದ ವಿವಿಧ ಭಾಗಗಳಲ್ಲಿ ಈ ಸಮುದಾಯದವರು ಕಂಡುಬರುತ್ತಾರೆ.[22] ಹೈದರ್ ಮತ್ತು ಟಿಪ್ಪುಕಾಲದ ಕರ್ನಾಟಕದ ಕರಾವಳಿ ಮತ್ತು ದೇಶಿಯ ಮತ್ತು ವಿದೇಶಿಯ ವ್ಯಾಪಾರದಲ್ಲಿ ಅಂತರ್ ರಾಜ್ಯ ವ್ಯಾಪಾರಿಗಳು ಪ್ರಮುಖ ಪಾತ್ರವಹಿಸುತ್ತಿದ್ದರು. ಭಾರತಕ್ಕೆ ಯುರೋಪಿಯನ್ನರು ಬಂದಾಗ ಅಕ್ಷರ ಕಲಿತ ಈ ಸಮುದಾಯಗಳು ವ್ಯಾಪಾರವಾಣಿಜ್ಯದಲ್ಲಿ ಪ್ರಧಾನವಾಗಿ ಗುರುತಿಸಿಕೊಂಡರು.

ಪಟ್ಟೆಗಾರರು ಮತ್ತು ಖತ್ರಿ ವರ್ತಕರು

ಈ ಸಮುದಾಯದವರು ಗುಜರಾತಿನ ಸೌರಾಷ್ಟ್ರದಿಂದ ವಲಸೆ ಬಂದವರಾಗಿದ್ದರು. ಇವರು ಹೆಚ್ಚು ನಯವಾದ ಬಟ್ಟೆಯನ್ನು ಉತ್ಪಾದಿಸುವ ಸಮುದಾಯದವರಾಗಿದ್ದರು. ಮೈಸೂರು ಅರಸರ ಕಾಲದಲ್ಲಿ ಇವರು ಹೆಚ್ಚಾಗಿ ಕಂಡುಬರುತ್ತಾರೆ. ಅರಮನೆಯ ವಸ್ತ್ರಗಳು, ಪೇಟೆ, ಅಲಂಕಾರಿಕಾ ವಸ್ತ್ರಗಳನ್ನು ನೇಯುತ್ತಿದ್ದರು. ಇವರು ರೇಷ್ಮೆ ಅಂಚಿನ ವಸ್ತ್ರಗಳನ್ನು ತಯಾರಿಸುತ್ತಿದ್ದರು. ಮೊಳಕಾಲ್ಮೂರಿನಲ್ಲಿ ಈ ಸಮುದಾಯದವರಿದ್ದು ಇವರು ಮೈಸೂರು ಅರಸರ ಕಾಲದಲ್ಲಿ ಅರಮನೆಯಲ್ಲಿ ನೇಕಾರಿಕೆಯನ್ನು ಮಾಡುತ್ತಿದ್ದರು. ರೇಷ್ಮೆ ಅಂಚಿನ ಮಸ್ಲಿನ್ ಬಟ್ಟೆಗಳನ್ನು ತಯಾರಿಸುತ್ತಿದ್ದರು. 235 ಪಟ್ಟೆಗಾರರು ಮುಸ್ಲಿಮರಾಗಿದ್ದು ಶ್ರೀಮಂತವಾದ ಜರಿಯ ವಸ್ತ್ರಗಳನ್ನು ನೇಯುತ್ತಿದ್ದರು. ಪಟ್ಟೆಗಾರರು ವಿವಿಧ ಬಗೆಯ ವಸ್ತ್ರಗಳನ್ನು ತಯಾರಿಸುತ್ತಿದ್ದರು. ಬೆಂಜಮಿನ್ ಹೈನೆಯವರು ಬೆಂಗಳೂರಿನಲ್ಲಿ 5000ದಷ್ಟು ಮಗ್ಗಗಳಿದ್ದವೆಂದು ತಿಳಿಸಿದ್ದಾರೆ.[23] ಶ್ರೀರಂಗ ಪಟ್ಟಣ ಸಮೀಪದ ನೆಲಘಟ್ಟವು ಜವಳಿ ಉದ್ಯಮದ ಕೇಂದ್ರವಾಗಿತ್ತು. ಇಲ್ಲಿ ಸದಾಶಿಲೆ ಎಂಬ ಬಟ್ಟೆ ತಯಾರಾಗುತ್ತಿತ್ತು. ಹರಿಹರವು ಹತ್ತಿ ನೂಲಿಗೆ ಹೆಸರಾಗಿತ್ತು.[24] ಪಟ್ಟೆಗಾರರು ರೇಷ್ಮೆಗೆ ರಂಗನ್ನು ಹಾಕುತ್ತಿದ್ದರು. ಹಳದಿ ರೇಷ್ಮೆಯನ್ನು ನೀಲಗಾರರು ನೀಲಿ ವರ್ಣಕ್ಕೆ ಹೊಂದಿಸುತ್ತಿದ್ದರು. ಅದನ್ನು ಒಗೆದು

ಪಟ್ಟೆಗಾರರು ಹುಣಸೆಯನ್ನು ಬೆರಸುತ್ತಿದ್ದರು. ಆನಂತರದಲ್ಲಿ ಇದು ಶುದ್ಧ ಹಸಿರು ಬಣ್ಣಕ್ಕೆ ತಿರುಗುತ್ತಿತ್ತು. ಕೆಲವು ನೇಯ್ಗೆಕಾರರು ಇದನ್ನು ಕಲ್ವೇರಿ ಎಂದು ಕರೆಯುತ್ತಿದ್ದರು.[25] ವಸ್ತ್ರಗಳನ್ನು ದೇವಾಂಗರು, ತೋಟಗರು ಹಾಗೂ ವಲ್ಲಿಯರು ತಯಾರಿಸುತ್ತಿದ್ದರು. ದೇವಾಂಗ ಸಮುದಾಯದವರು ಹೊಸದುರ್ಗ ಸೇರಿದಂತೆ ಚಿತ್ರದುರ್ಗದ ಹಲವು ಪ್ರದೇಶಗಳಲ್ಲಿದ್ದರು. ಈ ರೀತಿಯಾಗಿ ಈ ವರ್ತಕ ಸಮುದಾಯವು ವ್ಯಾಪಾರದಲ್ಲಿ ತನ್ನನ್ನು ತೊಡಗಿಸಿಕೊಂಡು ಆರ್ಥಿಕತೆ ವೃದ್ಧಿಸುವಲ್ಲಿ ಸಹಕಾರಿಯಾಯಿತು.

ವಿದೇಶಿ ವರ್ತಕರು

ವ್ಯಾಪಾರ ಉದ್ದೇಶದಿಂದ ಬೇರೆ ಬೇರೆ ದೇಶದಿಂದ ವಲಸೆ ಬಂದ ವರ್ತಕ ಸಮುದಾಯಗಳನ್ನು ವಿದೇಶಿ ವರ್ತಕರು ಎಂದು ಹೆಸರಿಸಬಹುದಾಗಿದೆ. ವಿದೇಶಿ ವರ್ತಕ ಸಮುದಾಯದ ಕುರಿತಂತೆ ಪ್ರಾಚೀನ ಕಾಲದಿಂದಲೂ ನಮಗೆ ಮಾಹಿತಿ ದೊರೆಯುತ್ತದೆ. ಅನೇಕ ಪ್ರವಾಸಿಗರ ವರದಿಗಳು ಇದಕ್ಕೆ ಸಾಕ್ಷ್ಯದಂತಿವೆ. ಹೈದರ್ ಮತ್ತು ಟಿಪ್ಪು ಕಾಲವು ಯುರೋಪಿಯನ್ನರ ಆಗಮನದ ಕಾಲವಾದ್ದರಿಂದ ಈ ಕಾಲದಲ್ಲಿ ಅರಬ್ಬರು, ಪೋರ್ಚುಗೀಸರು, ಫ್ರೆಂಚರು, ಬ್ರಿಟಿಶರು, ಡಚ್ಚರು ಮುಂತಾದವರು ವ್ಯಾಪಾರದಲ್ಲಿ ಗುರುತಿಸಿಕೊಂಡರು.

ಅರಬ್ಬರು

ಪ್ರಾಚೀನ ಕಾಲದಿಂದಲೂ ಅರಬ್ಬರು ದಕ್ಷಿಣ ಭಾರತದ ಕರಾವಳಿ ಪ್ರದೇಶದಲ್ಲಿ ವ್ಯಾಪಾರ ನಡೆಸುತ್ತಿದ್ದರು. ಈ ವ್ಯಾಪಾರದಿಂದ ಹೇರಳವಾದ ಲಾಭಗಳಿಸುತ್ತಿದ್ದರು. ಪೋರ್ಚುಗೀಸರ ಆಗಮನದಿಂದ ಇವರ ವ್ಯಾಪಾರ ಕುಸಿಯಿತು. ಮಧ್ಯಕಾಲೀನ ಆರಂಭದಲ್ಲಿ ಕುದುರೆ ವ್ಯಾಪಾರದಲ್ಲಿ ಪ್ರಸಿದ್ಧಿಯನ್ನು ಪಡೆದ ವರ್ತಕರು ಹೈದರ್ ಮತ್ತು ಟಿಪ್ಪುಕಾಲದಲ್ಲಿ ನಿರ್ಗಮಿಸಿದರೆಂದು ಹೇಳಬಹುದು. ಆದರೆ ಟಿಪ್ಪುವಿನ ಕಾಲದಲ್ಲಿ ಮೈಸೂರು ಪ್ರಾಂತ್ಯದಲ್ಲಿ ಇವರು ವ್ಯಾಪಾರ ನಡೆಸುತ್ತಿದ್ದುದರ ಮಾಹಿತಿ ದೊರೆಯುತ್ತದೆ. ವ್ಯಾಪಾರ ಮಾಡುವ ಮೈಸೂರು ಪ್ರಾಂತ್ಯದ ವ್ಯಾಪಾರಿಗಳಿಗೆ ಶೇ.8% ಅರಬ್ಬರು ಮತ್ತು ಪರ್ಶಿಯಾದ ವ್ಯಾಪಾರಸ್ಥರ ಮೇಲೆ ಶೇ.6/2ರಷ್ಟು ಸುಂಕವನ್ನು ವಿಧಿಸುತ್ತಿತ್ತು.[26] ಮೈಸೂರು ಸಂಸ್ಥಾನದಲ್ಲಿ ಸಣ್ಣಗಾತ್ರದ ಮತ್ತು ಶ್ರೀಗಂಧದ ಚೂರುಗಳಿಂದ ತಯಾರಿಸಿದ ಗಂಧದೆಣ್ಣೆಗೆ ಅರೇಬಿಯಾದಲ್ಲಿ ಬೇಡಿಕೆ ಇದ್ದುದರಿಂದ ಅರೇಬಿಯಾಕ್ಕೆ ರವಾನಿಸಲಾಗುತ್ತಿತ್ತು.[27] ಲವಂಗ ಬೆಳೆಗೆ ಡಚ್ ಮತ್ತು ಅರಬ್ ತೀರದ ಮಾರುಕಟ್ಟೆಗಳಲ್ಲಿ ಬೇಡಿಕೆ ಯಾವಾಗಲೂ ಅಧಿಕವಾಗಿತ್ತು. ಇನ್ನು ಕರಿಮೆಣಸು ಇಂಗ್ಲೆಂಡಿಗೆ ರವಾನೆಯಾಗುತ್ತಿತ್ತು. ಬ್ರಿಟಿಶರು ಮತ್ತು ಫ್ರೆಂಚರನ್ನು ವ್ಯಾಪಾರದಿಂದ ನಿಯಂತ್ರಿಸಲು

ಮಲಬಾರ್ ತೀರದ ಮಸ್ಕತ್ ಮತ್ತು ಪರ್ಶಿಯಾ ಹಾಗೂ ಅರಬ್ ರಾಷ್ಟ್ರಗಳ ನಡುವೆ ವ್ಯಾಪಾರ ಉತ್ತಮವಾಗಿ ನಡೆದು ಅರಬ್ ರಾಷ್ಟ್ರಗಳಿಂದ ಉತ್ತಮ ಕುದುರೆಗಳನ್ನು ರವಾನಿಸಿ ಇದಕ್ಕೆ ಪ್ರತಿಯಾಗಿ ಮಲಬಾರ್ ತೀರದಿಂದ ಹೇರಳ ಪ್ರಮಾಣದ ಅಕ್ಕಿಯನ್ನು ಈ ಪ್ರದೇಶಗಳಿಗೆ ರಫ್ತು ಮಾಡುತ್ತಿದ್ದರು. ಬಿಜಾಪುರದ ಸುಲ್ತಾನರು ಅರೇಬಿಯಾ ಮತ್ತು ಪರ್ಷಿಯಾದ ವರ್ತಕರ ಜೊತೆ ವ್ಯಾಪಾರ ಸಂಬಂಧ ಹೊಂದಿದ್ದರು. ಹೈದರ್ ಮತ್ತು ಟಿಪ್ಪುಕಾಲದಲ್ಲಿಯೂ ಸಹ ಇವರ ವ್ಯಾಪಾರ ವಾಣಿಜ್ಯ ಮುಂದುವರೆದಿತ್ತು.

ನವಯತ್ ಮುಸ್ಲಿಮರು

ನವಯತ್ ಎಂದರೆ ಅರೇಬಿಕ್ ಭಾಷೆಯಲ್ಲಿ ನಾವಿಕ ಎಂದರ್ಥ. ಇವರನ್ನು 'ಮುಸ್ಲಿಂ ಕೊಂಕಣಿ'ಗಳೆಂದು ಸಹ ಕರೆಯುವುದುಂಟು. ಈ ಸಮುದಾಯವು ವಿಜಯನಗರ ಕಾಲದಲ್ಲಿಯೇ ಪ್ರಮುಖವಾದ ಸಮುದಾಯವಾಗಿ ಗುರುತಿಸಿಕೊಂಡಿತು. ಅರಬ್‌ನೊಂದಿಗೆ ಹಾಗೂ ವಿಜಯನಗರದೊಂದಿಗೆ ಕುದುರೆಯ ವ್ಯಾಪಾರವನ್ನು ನಿರ್ವಹಿಸುತ್ತಿದ್ದರು. ವಿಜಯನಗರಕ್ಕೆ ಬೇಕಾದ ಕುದುರೆಗಳನ್ನು ಗೋವಾದ ಮೂಲಕ ವಿಜಯನಗರ ಮತ್ತು ಬಹುಮನಿ ಸಾಮ್ರಾಜ್ಯಕ್ಕೆ ರವಾನಿಸುತ್ತಿದ್ದರು. ಪೋರ್ಚುಗೀಸರು ಗೋವಾ ಮತ್ತು ಕರ್ನಾಟಕದ ಕರಾವಳಿ ಪ್ರದೇಶವನ್ನು ವಶಪಡಿಸಿಕೊಂಡಾಗ ಅವರ ಮೇಲೆ ಹಿಂಸಾಚಾರದಿಂದ ಅವರು ವ್ಯಾಪಾರ ವೃತ್ತಿಯನ್ನು ತೊರೆದು ಬೇರೊಂದು ಕಡೆಗೆ ವಲಸೆ ಹೋಗುವಂತೆ ಮಾಡಿದರು. ವಿಜಯನಗರ ಸಾಮ್ರಾಜ್ಯದಲ್ಲಿದ್ದ ನಯವತ್ ಮುಸ್ಲಿಮರು 1565ರ ನಂತರ ವಿಜಯನಗರದಿಂದ ಬಿಜಾಪುರದ ಕಡೆ ಈ ಸಮುದಾಯವು ವಲಸೆ ಹೋಯಿತೆಂದು ಹೇಳಬಹುದು. ಹೈದರ್ ಮತ್ತು ಟಿಪ್ಪು ಕಾಲಾವಧಿಯಲ್ಲಿ ಪುನಃ ವ್ಯಾಪಾರ ಚಟುವಟಿಕೆಗಳು ಚುರುಕುಗೊಂಡಿದ್ದರಿಂದ ಮೈಸೂರು ಸಂಸ್ಥಾನದಲ್ಲಿ ಇವರನ್ನು ಗುರುತಿಸಬಹುದಾಗಿದೆ. ಒಟ್ಟಾರೆಯಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ಇದ್ದ ಈ ಸಮುದಾಯವು ನಂತರ ಸ್ಥಿತ್ಯಂತರಕ್ಕೆ ಒಳಪಟ್ಟಿತೆಂದು ಹೇಳಬಹುದು.[28]

ಕೊಂಕಣಿ ಕ್ರೈಸ್ತರು

ಕರ್ನಾಟಕದ ಕರಾವಳಿ ಭಾಗದಲ್ಲಿ ಕೊಂಕಣಿ ಕ್ರೈಸ್ತರು ಹೆಚ್ಚಿನ ಸಂಖ್ಯೆಯಲ್ಲಿ 1500ರ ನಂತರ ಕಂಡುಬರುತ್ತಾರೆ. ಜೋನ್ ಪರಾಯರ್ ಎಂಬ ಕ್ರೈಸ್ತ ಪ್ರವಾಸಿ ಕೆಳದಿ ರಾಜ್ಯದಲ್ಲಿ ಪ್ರವಾಸ ಕೈಗೊಂಡನು. ಅವನ ಪ್ರಕಾರ ಕೆಳದಿ ರಾಜ್ಯದಲ್ಲಿ ಅನೇಕ ಕ್ರೈಸ್ತರಿದ್ದರು. ಕೆಳದಿಯ ಚೆನ್ನಮ್ಮಾಜಿ ಕ್ರೈಸ್ತರಿಗೆ ಪ್ರೋತ್ಸಾಹವನ್ನು ನೀಡಿದ್ದಳು. ದೇಶಿಯ ಕ್ರೈಸ್ತ ಅಧಿಕಾರಿಗಳೇ ಧಾರ್ಮಿಕ ವ್ಯವಹಾರ ನಡೆಸಬೇಕೆಂಬ ಅಭಿಪ್ರಾಯ

ರಾಣಿಯದಾಗಿತ್ತು. ಮಂಗಳೂರಿನಲ್ಲಿ ಅಂದಿನ ಮಿಲಾಗ್ರೀಸ್ ಇಗರ್ಜಿಯನ್ನು ಕಟ್ಟಲು ಕ್ರೈಸ್ತ ಅಧಿಕಾರಿಗಳಾಗಿದ್ದ ಬಿಷಪ್ ಥಾಮಸ್ ಡಿ ಕ್ರಾಸ್ಟೋ ಅವರಿಗೆ ಸೂಕ್ತವಾದ ಸ್ಥಳವನ್ನು ನೀಡಿದಳು. ಬುಕಾನನ್ ತನ್ನ ವರದಿಯಲ್ಲಿ ಕೊಂಕಣಿ ಕ್ರೈಸ್ತರ ಬಗ್ಗೆ ಅಂಕಿ ಅಂಶಗಳನ್ನು ನೀಡಿದ್ದಾನೆ. ಅವನ ಪ್ರಕಾರ ಇಂದಿನ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಸುತ್ತಮುತ್ತಲ ಭಾಗದಲ್ಲಿ ಒಟ್ಟು 2,545 ಕ್ರೈಸ್ತರ ಮನೆಗಳಿದ್ದವು. ಅವರ ಪೈಕಿ 3701 ಪುರುಷರು, 3603 ಸ್ತ್ರೀಯರು, 1968 ಬಾಲಕರಿದ್ದರು. ಇವರು ಪ್ರಧಾನವಾಗಿ ಕೃಷಿಕರು ಮತ್ತು ವ್ಯಾಪಾರಿಗಳಾಗಿದ್ದರು ಎಂದು ತಿಳಿಸಿದ್ದಾನೆ. ಕೆಳದಿಯ ಕರಾವಳಿಯ ಬಂದರುಗಳಾದ ಮಂಗಳೂರು, ಬಾರಕೂರು, ಬಸ್ರೂರು, ಮತ್ತು ಹೊನ್ನಾವರಗಳ ಮೂಲಕ ನಡೆಯುತ್ತಿದ್ದ ಹೊರ ದೇಶದ ವ್ಯಾಪಾರದಲ್ಲಿ ಇವರದ್ದೇ ಪ್ರಾಯಶಃ ಹೆಚ್ಚು ಇದ್ದಿತು. ಕೃಷಿಕರಾಗಿ ಇವರು ಭತ್ತ, ತೆಂಗು, ಅಡಿಕೆ, ಮೊದಲಾದವುಗಳನ್ನು ಬೆಳೆಯುತ್ತಿದ್ದರು. ಕೆಳದಿ ಸರಕಾರಕ್ಕೆ ಶಿಸ್ತನ್ನು ಕೊಡುತ್ತಿದ್ದರು. ಒಟ್ಟಿನಲ್ಲಿ ಆರ್ಥಿಕ ಕ್ಷೇತ್ರದಲ್ಲೂ ಇವರ ಪಾತ್ರ ಪ್ರಧಾನವಾಗಿದೆ.[29] ಈ ಮೂಲಕ ಕರ್ನಾಟಕದಲ್ಲಿ ಕೊಂಕಣಿ ಕ್ರೈಸ್ತರು ಕರಾವಳಿ ಕರ್ನಾಟಕದ ವ್ಯಾಪಾರ-ವಾಣಿಜ್ಯದಲ್ಲಿ ಮುಖ್ಯಪಾತ್ರವನ್ನು ವಹಿಸಿದರು. ಹೈದರ್ ಮತ್ತು ಟಿಪ್ಪುಕಾಲದಲ್ಲಿಯೂ ಸಹ ಇವರು ವ್ಯಾಪಾರ ವಹಿವಾಟನ್ನು ಮುಂದುವರೆಸಿದ್ದರು.

ಒಟ್ಟಾರೆಯಾಗಿ ಹೇಳುವುದಾದರೆ ಹೈದರ್ ಮತ್ತು ಟಿಪ್ಪು ಕಾಲವು ವ್ಯಾಪಾರ ಮತ್ತು ವಾಣಿಜ್ಯದಲ್ಲಿ ತನ್ನದೇ ಆದಂತಹ ಹೆಗ್ಗುರುತನ್ನು ಮೂಡಿಸಿದಂತಹ ಕಾಲವಾಗಿದೆ. ವರ್ತಕರು ಮತ್ತು ವರ್ತಕರ ಶ್ರೇಣಿಗಳನ್ನು ಅವರು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಅನೇಕ ರೀತಿಯ ಆರ್ಥಿಕ ಸಂಚಲನಗಳನ್ನು ಮೂಡಿಸಿದರು. ಬ್ಯಾಂಕಿಂಗ್ ವ್ಯವಸ್ಥೆ, ತಖಾವಿಸಾಲ ಮುಂತಾದ ಸಾಲಭ್ಯಗಳನ್ನು ಒದಗಿಸಿದರು. ವರ್ತಕರು ಪ್ರಭುತ್ವಕ್ಕೆ ಸಾಲವನ್ನು ನೀಡುತ್ತಿದ್ದರಲ್ಲದೇ ಅನೇಕ ದೇವಾಲಯಗಳ ನಿರ್ಮಾಣ, ದಾನದತ್ತಿಗಳು, ಪ್ರಜಾಹಿತ ಕಾರ್ಯಗಳನ್ನು ಮಾಡಿದರು. ವರ್ತಕರು ಮತ್ತು ವರ್ತಕ ಶ್ರೇಣಿಗಳು ವ್ಯಾಪಾರ-ವಾಣಿಜ್ಯದಲ್ಲಿ ತನ್ನದೇ ಆದಂತಹ ಪ್ರಾಮುಖ್ಯತೆ ಪಡೆದವು. ಆರ್ಥಿಕ ವ್ಯವಸ್ಥೆಯನ್ನು ಬಲಗೊಳಿಸುವುದರೊಂದಿಗೆ ಪ್ರಭುತ್ವದ ಜೊತೆ ಜನಸ್ನೇಹಿಯಾದರು ಎಂದು ಹೇಳಬಹುದು.

ಕೊನೆ ಟಿಪ್ಪಣಿಗಳು

1. ಕೃಷ್ಣಮೂರ್ತಿ ಕೆ., ವಸಂತ ಲಕ್ಷ್ಮಿ, ಮತ್ತು ಸೂರ್ಯಕೀರ್ತಿ, ಸೂರ್ಯನಾಥ ಕಾಮತ್ ಅಭಿನಂದನಾ ಸಮಿತಿ, ಬೆಂಗಳೂರು, 2000, ಪು.ಸಂ.304
2. ಅದೇ.,
3. ನಿರ್ಮಲ ಎಂ., ವಿಜಯನಗರೋತ್ತರ ಕಾಲದ ವ್ಯಾಪಾರ–ವಾಣಿಜ್ಯದಲ್ಲಿ ಗೌಡ ಸಾರಸ್ವತರು: ಚಾರಿತ್ರಿಕ ಅಧ್ಯಯನ, ಕರ್ನಾಟಕ ಹಿಸ್ಟರಿ ಕಾಂಗ್ರೇಸ್, ಸಂಪುಟ 29, ಪು.ಸಂ.339
4. ಚಂದ್ರಶೇಖರ್ ಎಸ್.(ಸಂ)., ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, 2016, ಸಂಪಟ–6, ಪು.ಸಂ.81
5. ನಿರ್ಮಲ ಎಂ., ಪೂರ್ವೋಕ್ತ, ಪು.ಸಂ.340
6. ಸಾಕಿ., ಮೇಕಿಂಗ್ ಹಿಸ್ಟರಿ ಕರ್ನಾಟಕಾಸ್ ಪೀಪಲ್ ಆ್ಯಂಡ್ ದೈರ್ ಪಾಸ್ಟ್, ಸಂಪುಟ–1, ವಿಮುಕ್ತಿ ಪ್ರಕಾಶನ, ಬೆಂಗಳೂರು, 1998, ಪು.ಸಂ.35
7. ಅದೇ., ಪು.ಸಂ.355
8. ಅದೇ., ಪು.ಸಂ.71–72
9. ಸಂಜಯ್ ಸುಬ್ರಮಣ್ಯಂ, ಮರ್ಚೆಂಟ್ಸ್ ಆ್ಯಂಡ್ ದಿ ಸ್ಟೇಟ್ ಇನ್ ಅರ್ಲಿ ಮಾಡರ್ನ್ ಇಂಡಿಯಾ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಮದ್ರಾಸ್, 1990, ಪು.ಸಂ.44
10. ವಸು ಎಂ.ವಿ., ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, 2001, ಪು.ಸಂ.105
11. ಸಾಕಿ., ಪೂರ್ವೋಕ್ತ, ಪು.ಸಂ.368
12. ವೆಂಕಟ ರಂಗೊಕಟ್ಟಿ., ಮುಂಬೈ ಇಲಾಖೆಗೆ ಸೇರಿದ್ದ ಗೆಜೆಟಿಯರ್, 1892, ಪು.ಸಂ.108
13. ಯಶೋಧ ಪಿ., ಬೆಂಗಳೂರು ವರ್ತಕ ಸಮುದಾಯಗಳು ವಸಾಹತು ಕಾಲಘಟ್ಟದ ಅಧ್ಯಯನ (1799–1947), ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, 2016, ಪು.ಸಂ.150
14. ಜಮುನ ಎಂ., ಬೆಂಗಳೂರಿನ ಬಖೈರುಗಳು, ಬೆಂಗಳೂರು ವಿಶ್ವವಿದ್ಯಾಲಯ, 2006, ಪು.ಸಂ.44

15. ಫ್ರಾನ್ಸಿಸ್ ಬುಕಾನನ್, ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು ಕೆನರಾ ಆ್ಯಂಡ್ ಮಲಬಾರ್ ಸಂಪುಟ–3, ಗೆಜೆಟಿಯರ್ ಇಲಾಖೆ ಬೆಂಗಳೂರು, ಪು.ಸಂ.199
16. ಯಶೋಧ ಪಿ., ಪೂರ್ವೋಕ್ತ, ಪು.ಸಂ.116
17. ಅದೇ., ಪು.ಸಂ.117
18. ಅರುಣ್ ಹೆಚ್.ಬಿ., ಕೆಳದಿ ನಾಯಕರ ಕಾಲದ ತೆರಿಗೆ ಪದ್ಧತಿ, ಅಪ್ರಕಟಿತ ಪಿಎಚ್.ಡಿ., ಮಹಾಪ್ರಬಂಧ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ, 2002, ಪು.ಸಂ.10
19. ಬುಕಾನನ್., ಪೂರ್ವೋಕ್ತ, ಸಂಪುಟ–3, ಪು.ಸಂ.159
20. ಶಿವರಾಜ ಜಿ.ಓ., ಚಿತ್ರದುರ್ಗ ನಾಯಕರ ಆಳ್ವಿಕೆಯ ಕಾಲದಲ್ಲಿ ಕೃಷಿ ಹಾಗೂ ವ್ಯಾಪಾರ ಸಂಬಂಧಗಳು, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2020, ಪು.ಸಂ.228
21. ಚಂದ್ರಶೇಖರ್ ಎಸ್., ಮತ್ತು ಸುರೇಂದ್ರರಾವ್ ಬಿ.(ಸಂ)., ಪೂರ್ವೋಕ್ತ, ಸಂಪುಟ–8, ಪು.ಸಂ.61
22. ಷೇಕ್ ಅಲಿ ಬಿ.(ಪ್ರ.ಸಂ)., ಕರ್ನಾಟಕ ಚರಿತ್ರೆ ಸಂಪುಟ–4, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2016, ಪು.ಸಂ.697
23. ಸಾಕಿ, ಪೂರ್ವೋಕ್ತ, ಪು.ಸಂ.479
24. ಅದೇ., ಪು.ಸಂ.472
25. ಚಂದ್ರಶೇಖರ್ ಎಸ್., ಸುರೇಂದ್ರರಾವ್ ಬಿ.(ಸಂ)., ಪೂರ್ವೋಕ್ತ, ಪು.ಸಂ.63
26. ಬುಕಾನನ್, ಪೂರ್ವೋಕ್ತ, ಸಂಪುಟ–2, ಪು.ಸಂ.132
27. ಷೇಕ್ ಅಲಿ ಬಿ., ಪೂರ್ವೋಕ್ತ, ಸಂಪುಟ–3, ಪು.ಸಂ.288
28. ಅದೇ.,
29. ಬುಕಾನನ್, ಪೂರ್ವೋಕ್ತ, ಸಂಪುಟ–3, ಪು.ಸಂ.23
30. ಅದೇ.,

***

ಕಂಬಳಿ ನೇಕಾರರ ಪಾರಂಪರಿಕ ವೃತ್ತಿ ಸಂಸ್ಕೃತಿ ಮತ್ತು ಸ್ಥಿತಿಗತಿ

1
ಡಾ ಮೇಘನ ಜಿ
ಸಮಾಜಶಾಸ್ತ್ರ ಸಂಶೋಧಕರು ಮತ್ತು ಉಪನ್ಯಾಸಕರು
ಜುಮ್ಮೋಬನಹಳ್ಳಿ, ಕೂಡ್ಲಿಗಿ ತಾ, ವಿಜಯನಗರ ಜಿ
meghashreeg034@gmail.com

ಪೀಠಿಕೆ

ಭಾರತೀಯ ಸಮಾಜವು ಬಹು ಸಂಸ್ಕೃತಿಗಳ ತವರೂರು. ಅದೆಷ್ಟೋ ಭಾಷೆ, ಧರ್ಮ, ಸಮುದಾಯ, ಜಾತಿ, ಬುಡಕಟ್ಟುಗಳನ್ನು ತನ್ನೊಡಲೊಳಗೆ ಅಡಗಿಸಿಕೊಂಡಿರುವ ಅಗರ್ಭ ವಿವಿಧ ಸಂಸ್ಕೃತಿಗಳ ನಾಡು ನಮ್ಮ ಭಾರತೀಯ ಸಮಾಜ. ಭಾರತೀಯ ಸಮಾಜದ ಪ್ರತಿ ಜಾತಿ, ಸಮುದಾಯಗಳು ತನ್ನದೇ ಆದ ಸಂಸ್ಕೃತಿ, ಆಚಾರ-ವಿಚಾರಗಳೊಂದಿಗೆ ಇಂದಿಗೂ ಹೆಜ್ಜೆ ಹಾಕುತ್ತಿರುವುದನ್ನ ಅಲ್ಲಗಳೆಯುವಂತಿಲ್ಲ. ಏನೆಲ್ಲ ಬದಲಾದ ಯುಗದಲ್ಲಿಯೂ ಸಾಂಸ್ಕೃತಿಕ ರಾಯಭಾರತ್ವವನ್ನು ಉಳಿಸಿಕೊಂಡಿರುವ ಭರತ ಭೂಮಿಯು ಸಾಂಪ್ರದಾಯಿಕತೆಯನ್ನು ಉಳಿಸಿಕೊಂಡಿದೆ. ಅಂತಹ ಸಾಂಪ್ರದಾಯಿಕತೆಯನ್ನು ಉಳಿಸಿಕೊಂಡಿರುವ ಸಮುದಾಯಗಳಲ್ಲಿ ನೇಕಾರ ಸಮುದಾಯವು ಒಂದು. ನೇಕಾರಿಕೆಯಲ್ಲಿ ಕಂಬಳಿ ನೇಕಾರರು, ನೂಲು

ನೇಕಾರರು, ಎಂದು ವಿಭಾಗಿಸಬಹುದು. ಕಂಬಳಿಯಲ್ಲಿ ಕರಿಕಂಬಳಿ, ಬಿಳಿಕಂಬಳಿ, ಗದ್ದಿಗೆ ಕಂಬಳಿ ಹೀಗೆ ವಿಶೇಷವಾಗಿ ಕಂಬಳಿಗಳನ್ನು ನೇಕಾರರು ನೇಯುತ್ತಿದ್ದರು. ವಿವಾಹ, ದೇವರ ಕಾರ್ಯ, ಸಾಂಸ್ಕೃತಿಕ ಕಾರ್ಯಭಾರವನ್ನು ಮುಂದುವರೆಸುತ್ತಿತ್ತು ಈ ಕಂಬಳಿ. ಆದರೆ ಇತ್ತೀಚಿನ ವರ್ಷಗಳಲ್ಲಿ ಯಂತ್ರ ಮಾದರಿ ಉತ್ಪನ್ನಗಳು, ಆಧುನಿಕ ಬಟ್ಟೆಗಳ ಬಳಕೆಯಿಂದಾಗಿ ಈ ವೃತ್ತಿಗೆ ಅಪಾಯ ಎದುರಾಗಿ ನಿಂತಿದೆ. ಆದ್ದರಿಂದ ಈ ವೃತ್ತಿಯ ಉಳಿವು ಹಾಗೂ ಅಭಿವೃದ್ಧಿಗೆ ಸರ್ಕಾರದ ಬೆಂಬಲ, ಜನರ ಜಾಗೃತಿ ಮತ್ತು ಮಾರುಕಟ್ಟೆ ಸಹಕಾರ ಅಗತ್ಯವಾಗಿದೆ. ಈ ಪೈಕಿ ಕಂಬಳಿ ನೇಕಾರರು ಕನ್ನಡ ನಾಡು-ನುಡಿಯು ಪರಂಪರೆಗೂ ಪ್ರತಿಬಿಂಬವಾಗಿ ಉಳಿದುಕೊಂಡಿದ್ದಾರೆ. ಪಾರಂಪರಿಕವಾಗಿ ಈ ವೃತ್ತಿ ಜೀವಿಸುತ್ತಿತ್ತು. ಒಂದು ಕಾಲಕ್ಕೆ ಚಳಿಗಾಲದಲ್ಲಿ ಬೆಚ್ಚಗೆಯ ಅಪ್ಪುಗೆ ನೀಡಿ ಚಳಿಯ ಅನುಭವವೇ ಆಗದಂತೆ ನಿದ್ರೆಗೆ ಜಾರಿಸುವ ಗುಣ ಕಂಬಳಿಗೆ ಇತ್ತು. ಆ ಕಾರಣದಿಂದಲೇ ಕಂಬಳಿ ನೇಕಾರರು ಒಂದು ಕಾಲದಲ್ಲಿ ಸಾಕಷ್ಟು ಜನಪ್ರೀಯತೆಯನ್ನು ಹೊಂದಿದ್ದರು. ಕಂಬಳಿ ಎಂದರೆ ನೇಕಾರರು, ನೇಕಾರರು ಎಂದರೆ ಕಂಬಳಿ ಎನ್ನುವಷ್ಟರ ಮಟ್ಟಿಗೆ ಚಿರಪರಿಚಿತರಾಗಿದ್ದರು.

ಕಂಬಳಿಯ ಇತಿಹಾಸವು ಸಾಕಷ್ಟು ಪ್ರಾಚೀನವಾದುದು. "ಕ್ರಿ.ಶ. 3000 ವರ್ಷಗಳಷ್ಟು ಪ್ರಾಚೀನವಾದ ಒಂದು ಮಗ್ಗ ಮತ್ತು ಅದರಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರನ್ನು ಈಜಿಪ್ಟಿನ ಭಿತ್ತಿಚಿತ್ರವೊಂದರಲ್ಲಿ ಚಿತ್ರಿಸಲಾಗಿದೆ. ಒರಟು ಸಾಧನಗಳಿಂದ ನೇಯುವ ಕಲೆ ಈಜಿಪ್ಟಿನ ಜನಾಂಗಕ್ಕೆ ಇನ್ನೂ ಹಿಂದಿನಿಂದಲೇ ತಿಳಿದಿತ್ತೆಂದು ಇದರಿಂದ ಸ್ಪಷ್ಟವಾಗುವುದು. ಬಹುಶಃ ಅದು ಇರಾನ್, ಮೆಸೊಪೊಟೇಮಿಯಗಳಲ್ಲಿ ಆರಂಭವಾಗಿರಬೇಕು. ಮೊದಲನೆಯ ಉಣ್ಣೆಯ ಜಮಖಾನೆ ಬ್ಯಾಬಿಲೋನ್ ಅಥವಾ ನಿನೆವೆಯಲ್ಲಿ ಕ್ರಿ.ಶ. 5000 ವರ್ಷಗಳಿಗಿಂತ ಮೊದಲೇ ತಯಾರಾಗಿರಬೇಕು ಎಂಬುದು ಪಾಶ್ಚಾತ್ಯ ವಿದ್ವಾಂಸರ ಮತ. ಬ್ಯಾಬಿಲೋನಿಯನ್ನರು ಚತುರ ನೇಯ್ಗೆಯ ಕಲೆಗೆ ಹೆಸರಾದವರೆಂದು ರೋಮಿನ ಚರಿತ್ರಕಾರ ಪ್ಲಿನಿ ಹೇಳಿದ್ದಾನೆ."[1] ಇದನ್ನು ಗಮನಿಸಿದರೆ ಕಂಬಳಿಯು ಇತ್ತೀಚಿಗೆ ಜನ್ಮ ತಳೆದದ್ದಲ್ಲ, ನಮ್ಮ ಪೂರ್ವಜರು ಅದೆಷ್ಟೋ ಅವಶ್ಯಕತೆಯ ವಸ್ತುಗಳನ್ನು ತಾವೇ ತಮ್ಮ ಜ್ಞಾನದಿಂದ ಕಂಡುಕೊಂಡರು ಎನ್ನುವುದಕ್ಕೆ ಸಾಕ್ಷಿ. "19ನೆಯ ಶತಮಾನದ ಆದಿಭಾಗದಲ್ಲಿ ಫ್ರಾನ್ಸಿನ ಜೋಸೆಫ್ ಮೆರಿ ಜಾಕ್ವೆರ್ಡ್ ಎಂಬಾತ ಮೊದಲು ಯಂತ್ರಮಗ್ಗವನ್ನು ಕಂಡಿಹಿಡಿದ. ಅವನ ಈ ಸಂಶೋಧನೆ ತಮ್ಮ ಕೆಲಸಗಳಿಗೆ ಸಂಚಕಾರ ತಂದೀತೆಂಬ ಭಯದಿಂದ ಅವನ ಅಕ್ಕಪಕ್ಕದ ನೇಯ್ಗೆಯವರು ಫ್ರೆಂಚ್ನಗರ ಲೆಯೊನ್ಸಿನಿಂದ ಅವನನ್ನು ಕಲ್ಲುಗಳಿಂದ ಹೊಡೆದು ಹೊರಗಟ್ಟಿದರು.[2] ಈ ವಿಷಯವನ್ನು

ಗಮನಿಸಿದಾಗ ವೃತ್ತಿಮೂಲ ಸಮುದಾಯ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸೆಣೆಸಾಡಿರುವುದು ಯಂತ್ರಗಳು ಹುಟ್ಟು ಪಡೆಯುವ ಸಂಧರ್ಭಕ್ಕಾಗಲೇ ಇಂತಹ ಸಮುದಾಯಗಳು ಸತ್ತು ಬದುಕಿದ್ದವು ಎನ್ನಬಹುದು. ವೃತ್ತಿಯ ಮೇಲಿನ ಪ್ರೀತಿ, ಬದುಕು ಕಟ್ಟಿಕೊಡಬಲ್ಲದು ಎಂಬ ನಂಬಿಕೆಗಳನ್ನು ಆಧುನಿಕತೆ ತನ್ನ ತೆಕ್ಕೆಗೆ ಎಳೆದುಕೊಂಡು ಇಂತಹ ವೃತ್ತಿ ಮೂಲ ಸಮುದಾಯಗಳನ್ನು ಬಡಪಾಯಿಗಳನ್ನಾಗಿಸಿತು. ಕಂಬಳಿ ನೇಯುವಿಕೆಯನ್ನು ಜೀವಾಳವಾಗಿಸಿಕೊಂಡ ಈ ನೇಕಾರರು ತಬ್ಬಲಿಗಳಾಗುವ ಕಾಲವನ್ನು ಆಧುನಿಕತೆ ಹೊತ್ತು ತಂದಿತು ಎನ್ನಬಹುದು. ಹೀಗೆ ಒಂದು ವೃತ್ತಿ ಮೂಲ ಸಮುದಾಯವು ಉಪ್ಪರಿಗೆಯ ಮೇಲೆ ಇದ್ದಂತಹ ತನ್ನ ಒಟ್ಟು ಅಸ್ಥಿತ್ವವನ್ನು ನೇಕಾರಿಕೆ ವೃತ್ತಿ ಅದರಲ್ಲೂ ಕಂಬಳಿ ನೇಕಾರಿಕೆ ನೇಪತ್ಯಕ್ಕೆ ಸರಿಯಿತು. ಅದರ ನಡುವೆಯೂ ಇಂದಿಗೂ ಅಲ್ಲೊಂದು ಇಲ್ಲೊಂದು ಎಂಬಂತೆ ಕಂಬಳಿ ನೇಕಾರಿಕೆ ವೃತ್ತಿ ಉಳಿಸಿಕೊಂಡ ಈ ಸಮುದಾಯ ಮತ್ತು ನೈಸರ್ಗಿಕವಾಗಿ ಮಡಿಯಿಂದ ಮಾಡಿದ ಕಂಬಳಿಯನ್ನೇ ನೇಕಾರರ ಮನೆಯಿಂದಲೇ ಕೊಂಡು ಕಂಬಳಿ ಮನೆಗೆ ತರುವ ವಾಡಿಕೆಯನ್ನು ಸಹ ಉಳಿಸಿಕೊಂಡಿರುವುದೇ ಈ ಕಂಬಳಿ ನೇಕಾರಿಕೆ ಉಳಿಯಲು ಸಾಧ್ಯವಾಗಿದೆ ಎನ್ನಬಹುದು ಹಾಗಾಗಿ ಇಂದು ನೇಕಾರಿಕೆ ಸಮುದಾಯದ ವೃತ್ತಿ ಮತ್ತು ಸ್ಥಿತಿಗತಿ ಹೇಗಿದೆ ಎಂಬುದನ್ನು ನೋಡುವ ಅಧ್ಯಯನ ಜರೂರಾಗಿ ನಡೆಯಬೇಕಿದೆ.

ಅಧ್ಯಯನದ ಉದ್ದೇಶ

- ಕಂಬಳಿ ನೇಕಾರಿಕೆ ವೃತ್ತಿಯ ಪ್ರಸ್ತುತ ಸ್ಥಿತಿಗತಿ ಅರಿಯುವುದು
- ಕಂಬಳಿಯು ಸಾಂಸ್ಕೃತಿಕವಾಗಿ ಹೇಗೆ ಬಳಕೆಯಾಗುತ್ತಿತ್ತು ಎಂಬುದನ್ನು ಕಂಡುಕೊಳ್ಳುವುದು.

ವ್ಯಾಪ್ತಿ

ಬಟ್ಟೆ ನೇಯುವವರು, ಬಂಬಳಿನೇಯುವವರು ಎಂಬುದಾಗಿ ನೋಡಲಾಗಿ ಅದರಲ್ಲಿ ಕಂಬಳಿ ನೇಯ್ಗೆಗಾರರನ್ನು ಮಾತ್ರ ಇಲ್ಲಿ ಕೇಂದ್ರೀಕರಿಸಲಾಗಿದೆ. ವ್ಯಾಪ್ತಿ ಎಂದು ಬಂದಾಗ ಒಂದು ಅಧ್ಯಯನಕ್ಕೆ ಬಹು ಮುಖ್ಯವಾದುದು ಹಾಗಾಗಿ ಕೂಡ್ಲಿಗಿ ತಾಲೂಕಿನ ವಿಜಯನಗರ ಜಿಲ್ಲೆಯ ತಾಯಕನಹಳ್ಳಿ ಗ್ರಾಮದಲ್ಲಿನ 42 ಕಂಬಳಿ ನೇಕಾರಿಕೆ ಕುಟುಂಬಗಳ ಪೈಕಿ 20 ನೇಕಾರ ಕುಟುಂಬಗಳನ್ನು ವ್ಯಾಪ್ತಿಯನ್ನಾಗಿಸಿಕೊಳ್ಳಲಾಗಿದೆ.

ವಿಧಾನ

ಅಧ್ಯಯನಕ್ಕೆ ಮುಖ್ಯವಾಗಿ ಬೇಕಾಗಿರುವಂತದ್ದು ವಿಧಾನ ಹಾಗಾಗಿ ಪ್ರಶ್ನಾವಳಿ, ಸಂದರ್ಶನ, ಅವಲೋಕನ ವಿಧಾನಗಳ ಮೂಲಕ ಈ ಲೇಖನವನ್ನು ಸಿದ್ಧಪಡಿಸಲಾಗಿದೆ. ವೃತ್ತಿ ಮೂಲ ಸಮುದಾಯಗಳಲ್ಲಿ ಕಂಬಳಿ ನೇಕಾರ ಸಮುದಾಯದ ಕೊಡುಗೆ ಶ್ಲಾಘನೀಯವಾದುದು. ಇಂದಿನ ನಮ್ಮ ಸಮಾಜ ಸಂಕ್ರಮಣ ಸ್ಥಿತಿಯಲ್ಲಿದೆ. ಜಾತಿ, ವರ್ಗ ಸಮುದಾಯಗಳು ಹೊಸ ರೂಪ ಪಡೆದುಕೊಳ್ಳುತ್ತಿವೆ. ರೂಪಾಂತರಗೊಳ್ಳುತ್ತಿವೆ. ಕೆಲವು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗುತ್ತಿವೆ. ಈ ರೂಪಾಂತರದ ಜೊತೆಗೆ ಪ್ರತಿ ಸಮುದಾಯದ ಕುಲಕಸುಬು, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಬದುಕು ಕೂಡ ಅನೇಕ ಆಧುನಿಕ ಅಂಶಗಳಿಂದ ರೂಪುಗೊಳ್ಳುತ್ತಿದೆ. ಹೀಗೆ ಮರುರೂಪ ಪಡೆದುಕೊಳ್ಳುತ್ತಿರುವ ಸಂಕ್ರಮಣ ಸ್ಥಿತಿಯಲ್ಲಿರುವ ಸಮುದಾಯಗಳಲ್ಲಿ ಕಂಬಳಿ ನೇಕಾರ ಸಮುದಾಯವು ಒಂದಾಗಿದೆ. ಭಾರತೀಯ ಪರಂಪರೆಯಲ್ಲಿ ಕಂಬಳಿಗೆ ವಿಶೇಷ ಸ್ಥಾನವಿದೆ.

ಕಂಬಳಿಯ ಪ್ರಕಾರಗಳು: ಕರಿ ಕಂಬಳಿ, ಬಿಳಿ ಕಂಬಳಿ, ನೆರೆ ಕಂಬಳಿ, ನೆರೆ ಪಟ್ಟಿ ಕಂಬಳಿ, ಸಣ್ಣೆಳೆ ಕಂಬಳಿ, ದೊಡ್ಡೆಳೆ ಕಂಬಳಿ ಹೀಗೆ ಕಂಬಳಿಯಲ್ಲಿ ವಿವಿಧ ಪ್ರಕಾರಗಳಿವೆ. ಕರಿ ಕಂಬಳಿ ಮನೆಯಲ್ಲಿದ್ದರೆ ರೋಗರುಜನಿಗಳು ಬರುವುದಿಲ್ಲವೆಂಬ ನಂಬಿಕೆಯಿಂದ ಸಣ್ಣೆಳೆ ಕರಿ ಕಂಬಳಿಯನ್ನು ಪ್ರತಿ ಮನೆಯಲ್ಲಿ ಇಟ್ಟುಕೊಂಡಿರುತ್ತಿದ್ದರು. ಕಂಬಳಿಗಳಲ್ಲಿಯೇ ಕರಿ ಕಂಬಳಿಗೆ ಹೆಚ್ಚು ಬೇಡಿಕೆ ಇದೆ.

ಕಂಬಳಿ ತಯಾರಿಸಲು ಬಳಸುವ ಪ್ರಮುಖ ಪರಿಕರಗಳು : ಕುರಿ ಹುಣ್ಣೆ, ರಾಟಿ/ ಚರಕ, ಮಗ್ಗ, ಅರಗಣಿ, ನೂಲು, ಹುಣಸೆ ಬೀಜ, ಹಿರೇಕಸ ಈ ಪರಿಕರಗಳಿಲ್ಲದೆ ಕಂಬಳಿ ನೇಯುವಿಕೆ ಅಸಾಧ್ಯ.

ಈ ಮೊದಲು ಯಾವುದೇ ಮಂಗಲ ಕಾರ್ಯಕ್ಕೆ ಕಂಬಳಿಯನ್ನು ಕಡ್ಡಾಯವಾಗಿ ಬಳಸಲಾಗುತ್ತಿತ್ತು. ಕರಿ ಕಂಬಳಿ ಇರದಿದ್ದರೆ ಶುಭ ಕಾರ್ಯಗಳೇ ನಡೆಯುತ್ತಿರಲಿಲ್ಲ. ಅಲ್ಲದೆ ಕಂಬಳಿಯನ್ನು ಹೊದಿಕೆಯಾಗಿ, ಹಾಸಿಗೆಯಾಗಿ ಬಳಸಲಾಗುತ್ತಿತ್ತು. ಆದರೆ ಇಂದು ಆಧುನಿಕ ಯುಗದ ಭರಾಟೆಯಲ್ಲಿ ಹಾಗೂ ವಿದೇಶಿ ವಸ್ತುಗಳ ಪ್ರವೇಶದಿಂದಾಗಿ ಕಂಬಳಿಯನ್ನು ಕೊಳ್ಳುವವರೇ ಇಲ್ಲದಿರುವುದರಿಂದ ಕಂಬಳಿ ನೇಕಾರ ಕುಟುಂಬಗಳು ಸಂಕಷ್ಟದಲ್ಲಿವೆ. ಆದರೂ ಅನೇಕ ಕುಟುಂಬಗಳು ತಲೆತಲಾಂತರದಿಂದ ನಡೆಸಿಕೊಂಡು ಬಂದ ಕಂಬಳಿ ನೇಯುವ ಮೂಲ ಕಸುಬನ್ನು ಬಿಟ್ಟಿಲ್ಲ. ಈ ಹಿನ್ನೆಲೆಯಲ್ಲಿ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿ

ಕಂಬಳಿಗಳನ್ನು ಬಳಸಲಾಗುತ್ತಿತ್ತು. ಸಾಂಸ್ಕೃತಿಕವಾಗಿ ಕಂಬಳಿಯು ಇಂದಿಗೂ ತನ್ನದೇ ಆದ ಚಹರೆಯನ್ನು ಉಳಿಸಿಕೊಂಡಿದ್ದು, ಪ್ರತಿ ಮನೆಯ ಶುಭ ಕಾರ್ಯಗಳಲ್ಲಿ ಈ ಕಂಬಳಿಗಳಿಗೆ ಅಗ್ರ ಸ್ಥಾನವಿದೆ. ಆದರೆ ಈ ಕಂಬಳಿ ನೇಯುವ ನೇಕಾರರಿಗೆ ಮಾತ್ರ ಆ ಸ್ಥಾನ ಇಲ್ಲವಾಗಿದೆ. ಏಕೆಂದರೆ ಇಂದು ಬೃಹತ್ ಕಾರ್ಖಾನೆಗಳ ಸುಳಿಗೆ ಸಿಕ್ಕಂತಹ ಇವರ ಕಂಬಳಿ ನೇಯುವಿಕೆ ಮೂಲೆಗುಂಪಾಗಿ ಯಂತ್ರಗಳ ಕೈಚಳಕದಿಂದ ಇಂದು ಸವೆದು ಹೋಗಿದೆ ಎಂದು ಹೇಳಬಹುದು. ರೆಡಿಮೇಡ್ ಕಂಬಳಿ ತಯಾರಿಕಾ ಕಾರ್ಖಾನೆಗಳ ನಡುವೆ ಇವರ ಕೈಮಗ್ಗದ ಕಂಬಳಿ ಕೇಳದವರಾದರು. ಇವರಿಗೆ ಮಾರುಕಟ್ಟೆಯ ಸೌಲಭ್ಯ ಸಹ ಇಲ್ಲವಾಗಿದೆ, ಹಾಗಾಗಿ ಬಹುತೇಕ ನೇಕಾರರು ಈ ವೃತ್ತಿ ಕೈತೊರೆದಿದ್ದಾರೆ. ಅದನ್ನು ಈ ಕೆಳಗಿನ ಕೋಷ್ಟಕವನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ.

ಪ್ರಸ್ತುತ ಕುಟುಂಬವಾರು ತಾಯಕನಹಳ್ಳಿ ಗ್ರಾಮದಲ್ಲಿ ಕಂಬಳಿ ನೇಯುತ್ತಿರುವವರ ವಿವರ

ಕ್ರ. ಸಂ	ಗಂಡು	ಹೆಣ್ಣು	ಇತರೆ	ಒಟ್ಟು
೦೧	೦೩	೦೨	೦೪	೦೯%
೦೨	೨	೩	೨	೦೭%
೦೩	೨	೨	ಇಲ್ಲ	೦೪%
೦೪	೧	೨	ಇಲ್ಲ	೦೩%
೦೫	೦	೦	೦೧	೦೧%
೦೬	೦	೦	೦೧	೦೧%
ಒಟ್ಟು	**೦೮**	**೦೯**	**೦೮**	**೨೪%**

ಈ ಮೇಲಿನ ಕೋಷ್ಟಕವನ್ನು ಗಮನಿಸಿದರೆ ತಾಯಕನಹಳ್ಳಿ ಗ್ರಾಮದಲ್ಲಿನ ಒಟ್ಟು ಕುಟುಂಬಗಳಲ್ಲಿ ಸಂದರ್ಶಿಸಿದ ಇಪತ್ತು ಕುಟುಂಬಗಳ ಪೈಕಿ ಏಳು ಕುಟುಂಬಗಳು ಮಾತ್ರ ಈ ಕಂಬಳಿ ನೇಕಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಪೂರ್ಣ ಪ್ರಮಾಣದಲ್ಲಿ ಮಾತ್ರ ಒಂದು ಕುಟುಂಬ ತೊಡಗಿಕೊಂಡಿದೆ. ಏಳು ಕುಟುಂಬಗಳ ಪೈಕಿ ಒಟ್ಟು 7 ಗಂಡು ಹಾಗೂ 9 ಹೆಣ್ಣು ಕಂಡುಬರುತ್ತಿದ್ದು ಹೆಣ್ಣುಮಕ್ಕಳದ್ದು ಕಂಬಳಿ ನೇಯುವಿಕೆಯಲ್ಲಿ ಪ್ರಮುಖ ಪಾತ್ರವಿರುವುದನ್ನು ಅರಿಯಬಹುದು. ಏಕೆಂದರೆ ಕುರಿಯ ಕೂದಲನ್ನು ಬಿಡಿಸಿ ಶುಚಿ ಮಾಡಿ ನೂಲನ್ನು ತಯಾರಿಸುವಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿರುತ್ತದೆ. ಕೆಲವು ಸಮಯದಲ್ಲಿ ಮಹಿಳೆಯರು ಸಹ ನೇಯುವಿಕೆಯನ್ನು

ಮೈಗೂಡಿಸಿಕೊಂಡಿರುವುದುಂಟು. ಹಾಗಾಗಿ ಈ ನೇಯುವಿಕೆ ಅವರಿಗೆ ಜನ್ಮಗತವಾಗಿ ಬಾಲ್ಯದಿಂದಲೇ ಬಂದಿದೆ ಎಂಬುದನ್ನು ಮನಗಾಣಬಹುದು. ಇತರೆಯಲ್ಲಿ ಕಂಡು ಬರುವವರು ಒಂಟಿ ಕಂಬಳಿ, ಹೆಚ್ಚಾಗಿ ಗದ್ದಿಗೆ ಕಂಬಳಿ ನೇಯುವವರಾಗಿದ್ದಾರೆ. ಜಂಗಮರನ್ನು ಮನೆಯ ಶುಭ ಕಾರ್ಯಗಳಿಗೆ ಆಹ್ವಾನಿಸುವವರು ಹೆಚ್ಚಾಗಿ ಬಿಳಿಯ ಗದ್ದಿಗೆ ಕಂಬಳಿ ಖರೀದಿಸುತ್ತಾರೆ ಹಾಗಾಗಿ ಗದ್ದುಗೆ ಕಂಬಳಿಗೆ ಹೆಚ್ಚಿನ ಬೇಡಿಕೆ ಇದ್ದು ಹೀಗೆ ಒಟ್ಟು 24 ಪ್ರತಿಶತದಷ್ಟು ಈ ಗ್ರಾಮದಲ್ಲಿ ಕಂಬಳಿ ನೇಯುವವರು ಕಂಡುಬರುತ್ತಾರೆ. ಉಳಿದಂತೆ ಈ ವೃತ್ತಿ ಕೈ ತೊರೆದರು ಸಹ ಇದರಿಂದಲೇ ಒಂದು ಕಾಲಕ್ಕೆ ನಾವು ಬದುಕು ಕಂಡವರು ಎಂಬ ಕಾರಣಕ್ಕಾಗಿ ಸಮೀಕ್ಷೆಗೊಳಪಡಿಸಿದ 20 ಕುಟುಂಬಗಳಲ್ಲಿ ಉಳಿದ 13 ಕುಟುಂಬಗಳು ಈ ವೃತ್ತಿ ಮೇಲೆ ಪ್ರೀತಿ ಹೊಂದಿದ್ದು ಲಾಭವಿಲ್ಲದ ಕಾರಣ ಆರ್ಥಿಕವಾಗಿ ಪ್ರಸ್ತುತ ಅದರಿಂದ ಕುಟುಂಬ ನಿರ್ವಹಣೆ ಮಾಡಲು ಕಷ್ಟಸಾಧ್ಯವೆಂದು ಆ ಪರಿಕರಗಳನ್ನು ಮೂಲೆಗುಂಪಾಗಿಸದೆ ಪೂಜಿಸುತ್ತಾರೆ ಎಂಬುದಾಗಿ ಕಂಡುಬರುತ್ತದೆ.

ಒಂದು ಕಂಬಳಿ (6ಅಡಿ ಉದ್ದ ಹಾಗೂ 31/2 ಅಗಲ) ತಯಾರಿಸಲು ಸುಮಾರು 1,200 ರೂ. ಖರ್ಚಾಗುತ್ತದೆ. ಮಾರುಕಟ್ಟೆಯಲ್ಲಿ ರೆಡಿಮೇಡ್ ಆಗಿ ದೊರಕುವ ಇವು 1,500 ರೂ.ನಿಂದ 2,000 ರೂ.ಗಳಿಗೆ ಮಾರಾಟವಾಗುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಕಂಬಳಿ ಕಾಣಸಿಗುತ್ತದೆ. ಪಟ್ಟಣ ಪ್ರದೇಶದಲ್ಲಿ ಮಾಯವಾಗುತ್ತಿವೆ. ಒಬ್ಬ ನೇಕಾರ ಮೂರು ದಿನಕ್ಕೊಂದು ಕಂಬಳಿ ನೇಯುತ್ತಾನೆ. ಒಂದು ಕಂಬಳಿ ನೇಯ್ದರೆ ಆತನಿಗೆ ಸರಾಸರಿ 500 ರಿಂದ 800 ರೂ. ಸಂಬಳ ದೊರೆಯುತ್ತದೆ. ಕಂಬಳಿ ತಯಾರಿಸಲು ಕುಟುಂಬದ ಸದಸ್ಯರು (ಮಹಿಳೆಯರು) ನೂಲು ಸುತ್ತಿ ಕೊಡಲು ನೆರವಾದರೆ, ಪುರುಷರು ಕಂಬಳಿ ನೇಯುತ್ತಾರೆ. ಇಬ್ಬರ ಸಂಬಳ ಮಾತ್ರ 500 ರಿಂದ 800 ರೂ. ಸಿಗುತ್ತದೆ. ಇದರಿಂದ ಕುಟುಂಬ ನಿರ್ವಹಣೆ ಮಾಡಲು ತೊಂದರೆಯಾಗುತ್ತದೆ. ಈ ಹಿಂದೆ ಕುರಿ ಕಾಯುವವರು, ದನ ಕಾಯುವವರು ಕುರಿ ಕೂದಲಿನ ಟೊಪ್ಪಿಗೆ(ಟೋಪಿ, ಕುಲಾವಿ) ಹೊಲಿದು ಕೊಡಲು ಕೇಳುತ್ತಿದ್ದರು ಹಾಗಾಗಿ ಅದರಿಂದಲೂ ನಮಗೆ ಲಾಭವಿತ್ತು. ಚಳಿ ತಡೆಯುವ ಗುಣ ಅದಕ್ಕಿತ್ತು ಹಾಗಾಗಿ ಹೊರಗೆ ಅವುಗಳ ಲಾಲನೆ, ಪಾಲನೆ, ಪೋಷಣೆ ಮಾಡುವ ವ್ಯಕ್ತಿಗಳು ಅದನ್ನು ಬಳಸುತ್ತಿದ್ದರು ಆದರೆ ಇಂದು ರೆಡಿಮೇಡ್ ವಸ್ತುಗಳ ಬಳಕೆಯಿಂದ ನಮ್ಮ ಈ ಕಂಬಳಿಯಂತಹ ನೇಯ್ಗೆಯ ವಸ್ತುಗಳು ಪೈಪೋಟಿ ನೀಡಲಾಗದೆ ಮೂಲೆ ಸೇರಿದವು ಹಾಗಾಗಿ ನಾವು ಬೇರೆಯವರ ಹೊಲದಲ್ಲಿ ಕೂಲಿ ಕೆಲಸ ಮಾಡುತ್ತೇವೆ

ಎಂದು ತಾಯಕನಹಳ್ಳಿ ಗ್ರಾಮದ ನೇಕಾರರು(ಸಾಕಮ್ಮನ) ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಹಿರಿಯರೊಬ್ಬರು ಈ ವೃತ್ತಿಯ ಪ್ರಸ್ತುತ ಸ್ಥಿತಿಯನ್ನು ಹೀಗೆ ವಿವರಿಸಿದರು.

ಕಂಬಳಿ ನೇಕಾರರು ಒಂದು ಕಾಲಕ್ಕೆ ಕಂಬಳಿಯಷ್ಟೇ ಚಿರಪರಿಚಿತರು. ಈ ಹಿಂದೆ ಕಂಬಳಿಯನ್ನು ಊರೂರಿಗೂ ಹೋಗಿ ಮಾರಾಟ ಮಾಡಿ ಬರುವ ವಾಡಿಕೆಯಿತ್ತು. ಅಂದು ಕಂಬಳಿಗಳಿಗೆ ಅಷ್ಟು ಬೇಡಿಕೆ ಇತ್ತು. ಆದರೆ ಆಧುನಿಕತೆಯ ಬಿರುಗಾಳಿ ಬೀಸಿ ಈ ವೃತ್ತಿ ಹಿಂದೆ ಸರಿಯಿತು. ಈ ಹಿಂದೆ ತಾಯಕನಹಳ್ಳಿ ಗ್ರಾಮದಲ್ಲಿ 50–100 ಸಂಖ್ಯೆಯಲ್ಲಿದ್ದ ಕಂಬಳಿ ತಯಾರಿಸುವ ಮಗ್ಗಗಳು ಸರ್ಕಾರದ ನಿರ್ಲಕ್ಷ್ಯ ಹಾಗೂ ಜನಪ್ರತಿನಿಧಿಗಳ ಪ್ರೋತ್ಸಾಹದ ಕೊರತೆಯಿಂದ ಇಂದು ಕೇವಲ ಈ ಗ್ರಾಮದಲ್ಲಿ ನಲವತ್ತು ಕುಟುಂಬಗಳಿದ್ದರು 5–7 ಕುಟುಂಬಗಳು ಮಾತ್ರ ಈ ಕಂಬಳಿ ನೇಯುವಿಕೆಗೆ ಸೀಮಿತವಾಗಿದೆ. ಸದ್ಯ ಈಗ ಉಳಿದ 5–7 ಕುಟುಂಬಗಳು ಸಹ ಅವಸಾನದ ಹಂತವನ್ನು ತಲುಪಿದೆ. ಕಂಬಳಿ ನೇಕಾರರು ಎಂದರೆ ಸಾಕು ತಾಲೂಕಿನ ಯಾವುದೇ ಬ್ಯಾಂಕ್‌ಗಳಲ್ಲಿ ಸಾಲಸೌಲಭ್ಯ ದೊರೆಯುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಕಂಬಳಿ ನೇಕಾರರ ಕುಟುಂಬದವರು ವೃತ್ತಿಯ ಮೇಲೆ ವೈಷಮ್ಯ ತೋರಿ ಕುಲಕಸುಬು ಕೈ ಬಿಟ್ಟು, ನಮ್ಮ ವೃತ್ತಿಯನ್ನು ನಂಬಿದರೆ ಯಾವುದೇ ಪ್ರಯೋಜನವಿಲ್ಲ ಎಂದರಿತು ಬದುಕು ಹಸನಾಗಿಸಿಕೊಳ್ಳಲು ನಗರ ಪ್ರದೇಶಗಳಿಗೆ ವಲಸೆ ಹೋದರೆ, ಇನ್ನೂ ಕೆಲವರು ಕೃಷಿ, ಕೂಲಿ, ಹಸು ಸಾಕಾಣಿಕೆ ಹಾಗೂ ಗ್ರಾಮಗಳಲ್ಲಿಯೇ ಗಾರೆ ಕೆಲಸ ಸೇರಿದಂತೆ ಇತರ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಮಕ್ಕಳ ವಿದ್ಯಾಭ್ಯಾಸಕ್ಕೂ ಪರದಾಡುವಂತಾಗಿದೆ. ದಿನಪೂರ್ತಿ ದುಡಿದರೂ ತುತ್ತು ಅನ್ನ ಕೊಡದ ಕಂಬಳಿ ಕೈಮಗ್ಗ ನೇಕಾರರಿಗೂ ಸರಕಾರದ ಮೂಲಭೂತ ಸೌಲಭ್ಯಗಳು ಸಿಗಬೇಕಿದೆ. ಮಳೆಗಾಲ, ಚಳಿಗಾಲಕ್ಕೆ ಮೈಗೆ ಬಿಸಿ ಹಾಗೂ ಪೂಜೆ, ಪುನಸ್ಕಾರಕ್ಕೆ ಪಾವಿತ್ರ್ಯತೆ ಕೊಡುವ ಕುರಿಹುಣ್ಣೆ ಕಂಬಳಿ ಉದ್ಯಮದ ಬೇಡಿಕೆ ಆಧುನಿಕ ಯುಗದಲ್ಲಿ ಕುಸಿದುಹೋಗಿ ಒಂದು ಸಮುದಾಯ ಬಡವಾಗಿದೆ. ಕಂಬಳಿಯಲ್ಲಿ ವೈದ್ಯಕೀಯ ಗುಣಗಳಿವೆ ಎಂದು ಹೇಳಲಾಗುತ್ತದೆ. ಕಂಬಳಿ ನೇಕಾರರಿಗೆ ಸರಕಾರ ಆರ್ಥಿಕವಾಗಿ ಬಲ ಪಡಿಸುವ ಯೋಜನೆಗಳನ್ನು ರೂಪಿಸುವುದರ ಜೊತೆಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು. ಇದರಿಂದ ಕಂಬಳಿ ನೇಕಾರ ಕುಟುಂಬಗಳು ಆರ್ಥಿಕವಾಗಿ ಸಧೃಡವಾಗುವುದರ ಜೊತೆಗೆ ನಮ್ಮ ಸಂಸ್ಕೃತಿಯು ಗಟ್ಟಿಮುಟ್ಟಾಗಿ ನೆಲೆಯೂರಿ ನಿಲ್ಲುತ್ತದೆ. ಜೊತೆಗೆ ಒಂದು ಸಮುದಾಯದ ಉಳಿವಿಗೂ ಸಹಕಾರಿಯಾಗುತ್ತದೆ.

ಕಂಬಳಿ ನೇಯುವಿಕೆಯಲ್ಲಿ ಇರುವ ಸಮಸ್ಯೆಗಳು

♦ ಕಂಬಳಿ ಕೊಳ್ಳುವ, ಹೊದ್ದುಕೊಳ್ಳುವುದು ಗ್ರಾಮೀಣ ಪ್ರದೇಶದಲ್ಲಿ ಕಡಿಮೆಯಾಗುತ್ತಿರುವುದು.

♦ ರೆಡಿಮೇಡ್ ಕಂಬಳಿಗಳ ಹಾವಳಿ.

♦ ಕಂಬಳಿ ನೇಕಾರರ ದುಡಿಮೆಗೆ ತಕ್ಕ ವೇತನ ಸಿಗದಿರುವುದು.

♦ ಕುರಿಸಾಕಾಣಿಕೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿರುವುದರಿಂದ ಹುಣ್ಣೆಯ ಬೆಲೆ ಹಾಗೂ ನೂಲಿನ ಬೆಲೆ ತುಟ್ಟಿಯಾಗುತ್ತಿರುವುದು.

♦ ಈಗಿನ ಯುವಕರು ಕಂಬಳಿ ನೇಯಲು ಉತ್ಸಾಹ ತೋರಿಸದಿರುವುದು.

ಅಧ್ಯಯನದ ಫಲಿತಗಳು

♦ ಕಂಬಳಿ ನೇಯುವಾಗಲೇ ನೇಕಾರರ ಆರ್ಥಿಕ ಸ್ಥಿತಿ ಉತ್ತಮವಾಗಿದ್ದು ಪ್ರಸ್ತುತ ಅನಿವಾರ್ಯವಾಗಿ ಬೇರೆ ಬೇರೆ ವೃತ್ತಿಗಳ ಕಡೆ ಮುಖ ಮಾಡಿದ ಕಂಬಳಿ ನೂಲುವವರ ಆರ್ಥಿಕ ಸ್ಥಿತಿ ಹೇಳಿಕೊಳ್ಳುವಷ್ಟು ಉತ್ತಮವಾಗೇನು ಇಲ್ಲ.

♦ ಗುಡಿ ಕೈಗಾರಿಕೆಗಳಲ್ಲಿ ಒಂದಾದ ಈ ನೇಕಾರಿಕೆ ವೃತ್ತಿ ಮೂಲ ಸಮುದಾಯದವರಾದ ಇವರಿಗಾಗಿಯೇ ಇರುವ ಸೌಲಭ್ಯಗಳಿದ್ದರೂ ಇವರಿಗೆ ಕೈಗೆಟುಕುತ್ತಿಲ್ಲ.

♦ ಮಾರ್ಕೇಟ್‌ನಲ್ಲಿ ಸಿಗುವ ರೆಡಿಮೇಡ್ ಕಂಬಳಿಗಳ ಮುಂದೆ ಕೈಯಿಂದ ನೇಯ್ದ ಕಂಬಳಿಯನ್ನು ಕೇಳುವವರು ಯಾರೂ ಇಲ್ಲದಾಗಿ ಅನಿವಾರ್ಯವಾಗಿ ಈ ವೃತ್ತಿಯನ್ನು ತೊರೆದ ಕುಟುಂಬಗಳು ಸಂಕಷ್ಟವನ್ನು ಎದುರಿಸುತ್ತಿವೆ.

♦ ಕಂಬಳಿ ನೇಯುವಿಕೆಗೆ ಪ್ರೋತ್ಸಾಹ ನೀಡಿದರೆ ಮತ್ತು ಸರಕಾರದ ಕಡೆಯಿಂದ ಮಾರ್ಕೇಟ್(ಮಾರುಕಟ್ಟೆ) ಸೌಲಭ್ಯ ಒದಗಿಸಿ ಉತ್ತೇಜನ ನೀಡಿದರೆ ಮತ್ತೆ ಈ ವೃತ್ತಿ ಮಾಡಲು ಸಿದ್ಧರಿದ್ದೇವೆ ಎಂಬುದು ನೇಕಾರರ ಅಳಲಾಗಿದೆ.

ಅಧ್ಯಯನದ ಸಲಹೆಗಳು

♦ ಕಂಬಳಿ ನೇಕಾರರಿಗೆ ಸಾಲ ಸೌಲಭ್ಯಗಳು ಸಿಗುವಂತೆ ಮತ್ತು ಇರುವ ಸೌಲಭ್ಯಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದರ ಬಗ್ಗೆ ಗ್ರಾಮೀಣ ಭಾಗದ ಜನರಿಗೆ ಆಯಾ ಗ್ರಾಮ ಪಂಚಾಯತಿ ಮಟ್ಟದಲ್ಲಿ ಎರಡು ಅಥವಾ ಮೂರು ತಿಂಗಳಿಗೊಮ್ಮೆ ಕಾರ್ಯಕ್ರಮಗಳ ಅರಿವು ಮೂಡಿಸುವುದು.

♦ ನಿರುದ್ಯೋಗ ಯುವಕರಿಗೆ ಇಂತಹ ವೃತ್ತಿಯಲ್ಲಿ ತೊಡಗಿಸಿಕೊಳ್ಳುವ ಕುರಿತು ಕಾರ್ಯಗಾರ ಆಯೋಜಿಸಿ ಸರಕಾರವು ನೆರವು ನೀಡುವುದರಿಂದ ಯುವಕರಿಗೆ ಉದ್ಯೋಗ ಮತ್ತು ಗ್ರಾಮೀಣ ವೃತ್ತಿಗಳನ್ನು ಪ್ರೋತ್ಸಾಹಿಸಿದಂತಾಗುತ್ತದೆ.

♦ ಕರಿಕುರಿ ಸಾಕಾಣಿಕೆ ಇಳಿಮುಖವಾಗುತ್ತಿದ್ದು ಸರಕಾರ ಅವುಗಳ ಸಾಕಾಣಿಕೆಗೂ ಉತ್ತೇಜನ ನೀಡುವುದರಿಂದ ಕರಿಕಂಬಳಿ ನೇಯುವಿಕೆಗೆ ಮತ್ತು ಕರಿಕುರಿಗಳ ಸಂತತಿ ಹೆಚ್ಚಳಕ್ಕೆ ಸಹಕಾರಿಯಾಗುತ್ತದೆ.

ತಿಳುವಳಿಕೆದಾರರ ವಿವರ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಸ್ಥಳ	ತಾಲ್ಲೂಕು	ಜಿಲ್ಲೆ
೧	ಜ್ಯೋತೆಮ್ಮ	೫೫	ಕಂಬಳಿ ನೂಲುವುದು	ತಾಯಕನಹಳ್ಳಿ	ಕೂಡ್ಲಿಗಿ	ವಿಜಯನಗರ
೨	ಬೀರಪ್ಪ ದೊಡ್ಡನಿಂಗಪ್ಪ	೬೭	ಕಂಬಳಿ ನೇಯುವುದು	ತಾಯಕನಹಳ್ಳಿ	ಕೂಡ್ಲಿಗಿ	ವಿಜಯನಗರ
೩	ಶೇಖರಪ್ಪ ಬೀರಗೊಂಡ	೬೬	ಕಂಬಳಿ ನೇಯುವುದು	ತಾಯಕನಹಳ್ಳಿ	ಕೂಡ್ಲಿಗಿ	ವಿಜಯನಗರ
೪	ಮಂಗಳಮ್ಮ ದೊಡ್ಡಬಸಪ್ಪ	೬೬	ಕಂಬಳಿ ನೇಯುವುದು	ತಾಯಕನಹಳ್ಳಿ	ಕೂಡ್ಲಿಗಿ	ವಿಜಯನಗರ
೫	ಸಿದ್ಧಪ್ಪ ಟೋಪಿನ್	೬೫	ಕಂಬಳಿ ನೇಯುವುದು	ತಾಯಕನಹಳ್ಳಿ	ಕೂಡ್ಲಿಗಿ	ವಿಜಯನಗರ
೬	ಮಂಜಣ್ಣ	೩೭	ಕಂಬಳಿ ನೇಯುವುದು	ತಾಯಕನಹಳ್ಳಿ	ಕೂಡ್ಲಿಗಿ	ವಿಜಯನಗರ

ಛಾಯಾಚಿತ್ರಗಳು

ಕಂಬಳಿ ನೇಯುವ ಕೈಮಗ್ಗ(ಯಂತ್ರ)

ಕಂಬಳಿ ನೇಯುವಿಕೆಯಲ್ಲಿ ನಿರತವಾಗಿರುವ ಮಹಿಳೆ

ಕಂಬಳಿ ನೇಯಲು ಸಿದ್ದಡಿಸಿರುವ ಕುರಿಯ ತುಪ್ಪಲಿನ ನೂಲು ತಯಾರಿಸಿರುವುದು

ಕಂಬಳಿ ನೇಯಲು ಸಿದ್ಧಪಡಿಸಿದ ಉದ್ದನೆಯ ಜಡೆನೂಲು

ಮಾರಾಟಕ್ಕೆ ಸಿದ್ಧವಾಗಿರುವ ಕಂಬಳಿ ನೇಕಾರರ ಕಂಬಳಿ

ಮಾರಾಟಕ್ಕೆ ಸಿದ್ಧವಾದ ನೇಕಾರರು ನೇಯ್ದ ಕುಲಾವಿ(ಟೋಪಿ)ಗಳು

ಕೊನೆ ಟಿಪ್ಪಣಿಗಳು

1. https://kn.m.wikipedia.org/wiki/%E0%B2%95%E0%B2%82%E0%B2%AC%0%B2%B3%E0%B2%BF. ದಿನಾಂಕ : 11.3.2023, ಸಮಯ : 8.48.
2. https://kn.m.wikipedia.org/wiki/%E0%B2%95%E0%B2%82%E0%B2%AC%E0%B2%B3%E0%B2%BF. ದಿನಾಂಕ : 11.3.2023, ಸಮಯ : 8.55.

ಪರಮಾರ್ಶನ ಗ್ರಂಥಗಳು

1. ತಿಮ್ಮಾರೆಡ್ಡಿ ಎಸ್.ವೈ., 2010, ಕುಲಕಸುಬುಗಳು ಮತ್ತು ಆಧುನಿಕತೆ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ.
2. ವಿಜಯಶ್ರೀ ಇಟ್ಟಣ್ಣನವರ, 2014, ಕಂಬಳಿ ಸಾಂಸ್ಕೃತಿಕ ಅಧ್ಯಯನ, ವಿಕಾಸ ಪ್ರಕಾಶನ, ಹೊಸಪೇಟೆ.
3. ಅಂತರ್ಜಾಲ ಬಳಕೆ

***

ಶಿವಶರಣೆ ಅಕ್ಕಮ್ಮ

1
ಡಾ. ಪಿ. ನಾಗರಾಜ
ಸಹಾಯಕ ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
nagarajapranathi@gmail.com

ಕನ್ನಡನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನದ ಶರಣಕ್ರಾಂತಿಗೆ ಬಹುವಿಶಿಷ್ಟವಾದ ಸ್ಥಾನವಿದೆ. ಮೂಲಭೂತವಾಗಿ ಸಾಮಾಜಿಕ ಚಳುವಳಿಯಾಗಿ ತನ್ನನ್ನು ತಾನು ಪ್ರಕಟಿಸಿಕೊಂಡ ಈ ಕ್ರಾಂತಿಯು ತನ್ನ ನೆಲೆಗಳನ್ನು ವಿಸ್ತರಿಸಿಕೊಂಡು ಧಾರ್ಮಿಕ ಕ್ರಾಂತಿಯಾಗಿಯೂ ರೂಪುತಳೆಯಿತು. ಶರಣಕ್ರಾಂತಿಯ ಮೂಲಕ ವೀರಶೈವ ಧರ್ಮವು ಪ್ರವರ್ಧಮಾನಕ್ಕೆ ಬಂದಿತು, ವೀರಶೈವ ಧರ್ಮದ ತತ್ವ, ಸಿದ್ಧಾಂತಗಳು ಶರಣಕ್ರಾಂತಿಯ ಧಾರ್ಮಿಕ ನೆಲಗಳನ್ನು ರೂಪಿಸಿದವು. ಶರಣರಿಂದ ರಚಿತವಾದ ವಚನಸಾಹಿತ್ಯವು ಸಾಹಿತ್ಯಿಕ ನೆಲೆಯಲ್ಲಿ ಕ್ರಾಂತಿಯನ್ನು ತಂದಿತು. ರಾಜಾಶ್ರಯದ ಪಾಂಡಿತ್ಯಪೂರ್ಣತೆಯ ಮುಸುಕನ್ನು ಕೊಡವಿಕೊಂಡು ಕನ್ನಡ ಸಾಹಿತ್ಯವು ಮೊಟ್ಟಮೊದಲ ಬಾರಿಗೆ ಜನಸಾಮಾನ್ಯರನ್ನು ತಲುಪುವಂತಾದದ್ದು ವಚನಸಾಹಿತ್ಯದ

ಮೂಲಕವೇ. ಹೀಗೆ ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಿಕ ನೆಲೆಗಳಲ್ಲಿ ರೂಢಿಗತವಾದ ಮಾದರಿಗಳನ್ನು ಮೀರಿ ಹೊಸದನ್ನು ಮೂಡಿಸಲು ಶರಣಕ್ರಾಂತಿಯು ತವಕಿಸಿತು. ಅತ್ಯಂತ ಪ್ರಾಮಾಣಿಕ ಕಾಳಜಿಯು, ಪುರೋಗಾಮಿಯಾದ ಸಂವೇದನಶೀಲತೆಯ ಹಲವು ಮಂದಿ ಒಟ್ಟಿಗೆ ಸೇರಿ ಸಾಧ್ಯವಾದ ಈ ಕ್ರಾಂತಿಯ ಅನುರಣನಗಳು ಇಂದಿಗೂ ಸಹ ಕಿವಿಗೆ ಬೀಳುತ್ತಲೇ ಇವೆ ಎನ್ನುವುದು ಅದರ ಪ್ರಸ್ತುತತೆಗೆ ದ್ಯೋತಕವಾಗಿದೆ. ಯಾವುದೇ ಚಳುವಳಿಯ, ಸಾಹಿತ್ಯದ ಯಶಸ್ಸು ಕಾಲಾಂತರದಲ್ಲೂ ಅದು ಹೊಂದಿರುವ ಪ್ರಸ್ತುತತೆಯಲ್ಲಿರುತ್ತದೆ, ಸಮಕಾಲೀನ ಸಂದರ್ಭದಲ್ಲಿಯೂ ಅದು ಪ್ರಕಟಿಸುವ ಜೀವಂತಿಕೆಯ ಸ್ವರೂಪದಲ್ಲಿರುತ್ತದೆ. ಶರಣಕ್ರಾಂತಿಯು ಸಾರ್ವಕಾಲಿಕ ಪ್ರಸ್ತುತತೆಯ ಇತಿಹಾಸದ ಒಂದು ಅನನ್ಯವಾದ ಪರ್ವವಾಗಿದೆ.

ಶರಣಕ್ರಾಂತಿಯ ಬಹು ಮುಖ್ಯವಾದ ಆಯಾಮಗಳಲ್ಲಿ ಒಂದು ಸಮಾಜದ ಕೆಳವರ್ಗಗಳಿಗೆ ತಮ್ಮನ್ನು ತಾವು ಅಭಿವ್ಯಕ್ತಿಸಿಕೊಳ್ಳಲು ಅದು ಅವಕಾಶಗಳನ್ನು ಒದಗಿಸಿದ್ದು. ಭಾರತೀಯ ಸಮಾಜದ ಸಾಂಪ್ರದಾಯಿಕ ಚಹರೆಯ ಹಿನ್ನೆಲೆಯಲ್ಲಿ ನೋಡಿದಾಗ ತಿಳಿಯುವಂತೆ ಇದು ಅಷ್ಟು ಸುಲಭದ ಮಾತಾಗಿರಲಿಲ್ಲ. ಅದಕ್ಕಾಗಿಯೇ ಶರಣರು ಮೊದಲು ಸಮಾಜದ ಕೆಳವರ್ಗಗಳನ್ನು ತಮ್ಮನ್ನು ತಾವು ಅಭಿವ್ಯಕ್ತಿಸಿಕೊಳ್ಳಲು ಬೌದ್ಧಿಕವಾಗಿ, ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಸನ್ನದ್ಧಗೊಳಿಸಿದರು. ಸಮಾಜದಲ್ಲಿ ಯಾವುದೇ ಬಗೆಯ ಅಸಮಾನತೆಯನ್ನು ಬಹಳ ಪ್ರಬಲವಾಗಿ ವಿರೋಧಿಸಿದ ಶರಣರು ಸಹಜವಾಗಿಯೇ ಸ್ತ್ರೀ–ಪುರುಷ ಅಸಮಾನತೆಯನ್ನೂ ತೊಡೆದುಹಾಕುವತ್ತ ಶ್ರಮಿಸಿದರು. ಇದರ ನೇರವಾದ ಫಲವಾಗಿ ಶರಣಕ್ರಾಂತಿಯಲ್ಲಿ ಸ್ತ್ರೀಯರು ಪಾಲ್ಗೊಳ್ಳುವಂತಾಯಿತು. ತಮ್ಮ ರೂಢಿಗತ ಬದುಕಿನಾಚೆಗೆ ದೃಷ್ಟಿಬೀರಿ ಸಾರ್ಥಕ್ಯದ ಬೆಳಕಿನಿಂದ ತಮ್ಮ ಬದುಕುಗಳನ್ನು ದೀಪ್ತಗೊಳಿಸಿಕೊಂಡು ತಮ್ಮ ಸತ್ವಶೀಲತೆಯನ್ನು ಮೆರೆಯಲು ಶರಣಕ್ರಾಂತಿಯು ಸ್ತ್ರೀಯರಿಗೆ ವೇದಿಕೆಗಳನ್ನು ಒದಗಿಸಿತು. ಎಲ್ಲ ಬಗೆಯ ಅಸಮಾನತೆಗಳನ್ನೂ ನಿರಾಕರಿಸಿದ ಶರಣಕ್ರಾಂತಿಯು ಸ್ತ್ರೀ–ಪುರುಷ ಅಸಮಾನತೆಯನ್ನು ನಿರಾಕರಿಸಿದ್ದು ಅತ್ಯಂತ ಸಹಜವೂ, ಶರಣಕ್ರಾಂತಿಯ ಘನತೆಗೆ ಹಿಡಿದ ಕನ್ನಡಿಯೂ ಆಗಿ ಪ್ರಕಟವಾಗುತ್ತದೆ. ಇದಕ್ಕೆ ಪೂರಕವಾಗಿ ಶರಣೆಯರು ಅನನ್ಯಸದೃಶವಾದ ಮೌಲಿಕತೆಯನ್ನು ತಮ್ಮ ದೃಷ್ಟಿಯಲ್ಲಿ ಬಿಂಬಿಸಿ ಒಟ್ಟು ಶರಣಕ್ರಾಂತಿಗೆ ಮಹತ್ವಪೂರ್ಣವಾದ ಆಯಾಮವನ್ನು ಒದಗಿಸಿದರು.

ಮಹಿಳಾ ವಚನಕಾರ್ತಿಯರಲ್ಲಿ ಅಕ್ಕಮ್ಮನದು ವಿಶಿಷ್ಟವಾದ ಸ್ಥಾನ.

ಅಕ್ಕಮಹಾದೇವಿಯ ನಂತರ ಹೆಚ್ಚಿನ ಸಂಖ್ಯೆಯಲ್ಲಿ ವಚನರಚನೆ ಮಾಡಿದವರಲ್ಲಿ ಅಕ್ಕಮ್ಮ ಒಬ್ಬಳು. ಶರಣೆಯರಲ್ಲಿ 'ರೆಮ್ಮವ್ವೆ' ಎಂಬ ಹೆಸರಿನ ಐದು ಜನರಿದ್ದು, ಅವರೆಂದರೆ, ಕನ್ನಡಿ ಕಾಯಕದ ರೆಮ್ಮವ್ವೆ, ಕದಿರ ರೆಮ್ಮವ್ವೆ, ಕೃಷಿ (ಒಕ್ಕಲು) ಕಾಯಕದ ರೆಮ್ಮವ್ವೆ, 'ಆದಿಲಿಂಗ' ಎಂಬ ಅಂಕಿತವಿಟ್ಟುಕೊಂಡ ರೆಮ್ಮವ್ವೆ ಮತ್ತು ಅಕ್ಕಮ್ಮನೆಂದು ಪ್ರಸಿದ್ಧಳಾಗಿರುವ ರೆಮ್ಮವ್ವೆ. ಇವರಲ್ಲಿ ಒಬ್ಬ ಶರಣೆ ಮಾತ್ರ ಅಕ್ಕಮ್ಮ ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಾಳೆ, (ತಳಸ್ಥರದ ವಚನಕಾರ್ತಿಯರು ಪು.23).

ಅಕ್ಕಮ್ಮನು ತನ್ನ ವಚನಗಳಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಸಿದ್ಧರಾಮ, ಆಯ್ದಕ್ಕಿ ಮಾರಯ್ಯ, ಅಜಗಣ್ಣ, ಅಕ್ಕಮಹಾದೇವಿಯರನ್ನು ಉಲ್ಲೇಖಿಸುವುದರಿಂದ ಈಕೆಯ ಕಾಲವನ್ನು ಕ್ರಿ.ಶ. ಸುಮಾರು 1160 ಎಂದು ಕವಿಚರಿತ್ರೆಕಾರರು ಹೇಳಿದ್ದಾರೆ. ಸಾಮಾನ್ಯ ವರ್ಗದವಳಾದರೂ ವ್ರತ ಆಚರಣೆಗಳ ಕಾರಣಕ್ಕೆ ಅಕ್ಕಮ್ಮ ಪ್ರಸಿದ್ದಳು. ಈಕೆಯ ವಚನಗಳ ಅಂಕಿತ 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ'. ಇದೇ ಅಂಕಿತದ ಮೂರು ವಚನಗಳು ಗೊಗ್ಗವ್ವೆಯಿಂದ ಆರಂಭವಾಗುವ ಸಕಲ ಪುರಾತನರ ವಚನಗಳ ಕಟ್ಟಿನಲ್ಲಿ ಅಕ್ಕಮ್ಮ ಎಂಬ ಹೆಸರಿನಡಿ ದೊರೆಯುತ್ತವೆ.

ಇವುಗಳಲ್ಲಿ ಕವಿಚರಿತ್ರೆಕಾರರು ಉದಾಹರಿಸಿದ ಒಂದು ವಚನವು ಸೇರಿದೆ. ಇದರಿಂದ ರೆಮ್ಮವ್ವೆಗೆ ಅಕ್ಕಮ್ಮ ಎಂಬ ಇನ್ನೊಂದು ಹೆಸರು ಇರುವುದು ವ್ಯಕ್ತವಾಗುತ್ತದೆ (ಶಿವಶರಣೆಯರ ವಚನ ಸಂಪುಟ, ಪ್ರಸ್ತಾವನೆ, ಕ.ಪು.ಪ್ರಾ). ವ್ರತಾಚರಣೆ, ಮಾಹೇಶ್ವರ ಸ್ಥಲದ ಸಾಧಕಿಯಾಗಿ ವ್ರತಹೀನರನ್ನು ಭ್ರಷ್ಟರನ್ನು ತೀವ್ರವಾಗಿ ಖಂಡಿಸುವ ವಚನಗಳನ್ನು ಅಕ್ಕಮ್ಮ ರಚಿಸಿದ್ದಾಳೆ. ಶೀಲ, ವ್ರತ, ನೇಮ ಹಾಗೂ ಆಚಾರಗಳು ಮತ್ತು ಅವುಗಳ ಪರಿಪಾಲನೆಗೆ ಅಕ್ಕಮ್ಮ ಹೆಚ್ಚಿನ ಪ್ರಾಮುಖ್ಯವನ್ನು ಕೊಡುತ್ತಾಳೆ. ಇವನ್ನೇ ಪರಾತ್ಪರದ ಸಾಕಾರಕ್ಕೆ ಸಾಧನಗಳೆಂದು ಅಕ್ಕಮ್ಮ ಪರಿಗಣಿಸುತ್ತಾಳೆ. ಈ ಅಂಶಗಳಲ್ಲದೆ ಇವಳ ವಚನಗಳಲ್ಲಿ ಡಾಂಭಿಕತೆಯ ವಿರೋಧ ಮತ್ತು ಸಮಾಜದ ವಿಮರ್ಶೆಯೂ ಕಂಡುಬರುತ್ತದೆ. ವ್ರತಶೀಲತೆಯನ್ನು ಕುರಿತು ಅಕ್ಕಮ್ಮನ ವಿಚಾರಗಳನ್ನು ಮೊದಲಿಗೆ ಗಮನಿಸಬಹುದಾಗಿದೆ:

ವ್ರತವೆಂಬುದೇನು? ವಸ್ತುವ ಕಾಂಬುದಕ್ಕೆ ನಿಚ್ಚಣಿಕೆ
ವ್ರತವೆಂಬುದೇನು? ಇಂದ್ರಿಯಗಳ ಸಂದಮುರಿವ ಕುಲಕುಠಾರ
ವ್ರತವೆಂಬುದೇನು? ಸಕಲ ವ್ಯಾಪಕಕ್ಕೆ ದಾವಾನಳ
ವ್ರತವೆಂಬುದೇನು? ಸರ್ವದೋಷನಾಶನ

ವ್ರತವೆಂಬುದೇನು? ಚಿತ್ತ ಸುಯಿದಾನದಿಂದ
ವಸ್ತುವ ಕಾಂಬುದಕ್ಕೆ ಕಟ್ಟಿದ ಗುತ್ತಗೆ
ವ್ರತವೆಂಬುದೇನು? ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವು
ಅವರಿಗೆ ತತ್ತಲಮಗನಾಗಿಪ್ಪನು.

(ಸಮಗ್ರ ವಚನ ಸಂಪುಟ 5, 564)

ವ್ರತವೆಂದರೆ ಅದು ಪರಾತ್ಪರ ವಸ್ತುವನ್ನು ಕಾಣಲು ಒದಗುವ ಏಣಿಯಿದ್ದಂತೆ, ಇಂದ್ರಿಯಗಳ ಮೋಹವನ್ನು ಕತ್ತರಿಸಿಹಾಕು ಕೊಡಲಿಯಿದ್ದಂತೆ, ಆಂತರ್ಯವನ್ನು ಆವರಿಸಿ ಬುದ್ಧಿಯನ್ನು ಕೆಡಿಸುವ ಸಾಧನಗಳನ್ನು ಸುಟ್ಟುಹಾಕುವ ಕಾಳ್ಗಿಚ್ಚಿನಂತೆ, ಅದು ಎಲ್ಲ ದೋಷಗಳನ್ನೂ ನಾಶಗೊಳಿಸುವ ದಿವ್ಯಮಂತ್ರವಿದ್ದಂತೆ, ಮನಸ್ಸಿನ ಸ್ಥಿತಪ್ರಜ್ಞತೆಯಿಂದ ಪರಮೇಶ್ವರನನ್ನು ದಕ್ಕಿಸಿಕೊಳ್ಳುವುದಕ್ಕೆ ಸಹಾಯಕವಾಗುವ, ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವನ್ನು ಒಲಿಸಿಕೊಳ್ಳುವ ಸಾಧನವಿದ್ದಂತೆ ಎಂದು ಅಕ್ಕಮ್ಮನು ಇಲ್ಲಿ ಹೇಳುತ್ತಿದ್ದಾಳೆ. ವ್ರತವೆಂದರೆ ಪರಾತ್ಪರವನ್ನು ಕಾಣಲು ಆತ್ಮನು ಏರುವ ಏಣಿ. ಇಂದ್ರಿಯಗಳ ಅಪೇಕ್ಷೆಯನ್ನು ಕತ್ತರಿಸಿಹಾಕುವ ಕತ್ತಿ, ಸಕಲ ವ್ಯಾಪಾರಗಳಿಗೆ ದಾವಾನಲ ಮತ್ತು ಸರ್ವದೋಷಗಳನ್ನು ನಾಶಗೊಳಿಸುವ ಸಾಧನವಾಗಿದೆ. ವ್ರತವು ಮನವನ್ನು ಅಂಕೆಯಲ್ಲಿರಿಸಿ ಪರವಸ್ತುವನ್ನು ಸಾಕಾರಗೊಳಿಸಿಕೊಳ್ಳುವುದಕ್ಕೆ ಕಟ್ಟಿಕೊಂಡ ಗುತ್ತಗೆಯಾಗಿದೆ ಎಂದು ಅಕ್ಕಮ್ಮ ಹೇಳುತ್ತಿದ್ದಾಳೆ.

ವ್ರತವೆಂಬುದೇನು? ಮನವಿಕಾರಿಸುವುದಕ್ಕೆ ಕಟ್ಟಿದ ಗೊತ್ತು
ಜಗದ ಕಾಮಿಯಂತೆ ಕಾಮಿಸದೆ,
ಜಗದ ಕ್ರೋಧಿಯಂತೆ ಕ್ರೋಧಿಸದೆ,
ಜಗದ ಲೋಭಿಯಂತೆ ಲೋಭಿಸದೆ
ಮಾಯಾಮೋಹಂಗಳು ವರ್ಜಿತವಾಗಿ
ಮನಬಂದಂತೆ ಆಡದೆ, ತನುಬಂದಂತೆ ಕೂಡದೆ
ವ್ರತದಂಗಕ್ಕೆ ಸಂಗವಾಗಿ ನಿಂದ ಸದ್ಭಕ್ತನ ಅಂಗವೆ
ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗದಂಗ.

(ಸಮಗ್ರ ವಚನ ಸಂಪುಟ 5, 563)

ವ್ರತವೆಂಬುದೇನು? ಅದು ಮನದ ವಿಕಾರವನ್ನು ತಡೆಗಟ್ಟಲು ಇರುವ ಜೀವನ ನೆಲೆ. ಅರ್ಥಾತ್, ದನಕರುಗಳನ್ನು ಮನೆಯಲ್ಲಿ ಕಟ್ಟುವ ನೆಲಯಂತಹ ಒಂದು ನಿಯಂತ್ರಣ, ನಿಬಂಧನೆ. ವ್ರತವೆಂದರೆ ಕಾಮಕ್ರೋಧಾದಿಗಳನ್ನು,

ಅರಿಷಡ್ವರ್ಗಗಳನ್ನು ಗೆದ್ದು, ಮನಸ್ಸನ್ನು ನಿಯಂತ್ರಿಸಿ, ಶರೀರದ ಲಾಲಸೆಗಳನ್ನು ಹದ್ದಿನಲ್ಲಿ ಇರಿಸುವುದೇ ಆಗಿದೆ. ಅಕ್ಕಮ್ಮನ ಪ್ರಕಾರ ಅದುವೇ ಕಟ್ಟಳೆ. ಹೀಗೆ ಕಟ್ಟಳೆಯನ್ನು ಮೀರದೆ ವ್ರತಿಯಾಗುವವನು ಲಿಂಗಸ್ವರೂಪಿಯಾಗುತ್ತಾನೆ ಎನ್ನುತ್ತಾಳೆ ಅಕ್ಕಮ್ಮ.

ವ್ರತವೆಂಬ ಸೀಮೆಯ ವಿವರವೆಂತುಟೆಂದಡೆ;
ಬೀಗಿ ಬೆಳೆದ ಹೊಲಕ್ಕೆ ಬೇಲಿಯ ಕಟ್ಟಿದಡೆ ಚೇಗೆಯುಂಟೆ?
ಹಾವ ಪಶುವಿಂಗೆ ಮಾಣಿಸಿದಡೆ ದೋಷ ಉಂಟೆ?
ಗಾವಿಲಂಗೆ ಭಾವದ ಬುದ್ಧಿಯ ಹೇಳಿದವಂಗೆ ನೋವುಂಟೆ?
ಬೇವ ನೋವ ಕಾಯಕ್ಕೆ ಜೀವವೆಂಬ ಬೆಳಗೇ ವ್ರತ.
ಭಾವವೆಂಬ ಬೇಲಿಯ ಸಾಗಿಸಿಕೊಳ್ಳಿ.
ಲೂಟಿಗೆ ಮೊದಲೆ ಬಸವ ಚೆನ್ನಬಸವಣ್ಣ ಪ್ರಭುದೇವ ಮೊದಲಾಗಿ
ಶಂಕೆಗೆ ಮುನ್ನವೆ ಹೋದೆಹೆನೆಂಬ ಭಾವ ತೋರುತ್ತಿದೆ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗಕ್ಕೆ
ಏಲೇಶ್ವರದ ಗೊತ್ತು ಕೊಟ್ಟಿತ್ತು.
(ಸಮಗ್ರ ವಚನ ಸಂಪುಟ 5, 565)

ಆಚಾರವನ್ನು ಪ್ರಾಣವಾಗಿಸಿಕೊಂಡು ರಾಮೇಶ್ವರಲಿಂಗದೆದುರು ವ್ರತಾಚರಣೆಗಳನ್ನು ಭಂಗಿಸುವವರನ್ನು ಅಕ್ಕಮ್ಮ ನಾನಾರೀತಿಯಿಂದ ಹೇಗೆ ಖಂಡಿಸುತ್ತಾಳೆ ಹಾಗೂ ಅವುಗಳನ್ನು ಹೇಗೆ ಪಾಲಿಸಬೇಕೆಂಬುದರತ್ತ ಗಮನ ಸೆಳೆಯುತ್ತಾಳೆ ಎನ್ನುವ ಬಗ್ಗೆ ಡಾ. ಎಚ್.ಎಲ್. ಪುಷ್ಪಾ ಅವರ ಮಾತುಗಳನ್ನು ಈ ನಿಟ್ಟಿನಲ್ಲಿ ನೆನೆಯಬಹುದಾಗಿದೆ, "ವ್ರತಾಚಾರದ ವ್ಯಾಖ್ಯೆಗಳ ಬಗ್ಗೆ ನಿರರ್ಗಳವಾಗಿ ಮಾತನಾಡುವ ಅಕ್ಕಮ್ಮ ಅಷ್ಟೇ ನಿರರ್ಗಳವಾಗಿ ವ್ರತಾಚಾರಕ್ಕೆ ತಪ್ಪಿದ ಅನಾಚಾರಿಗಳನ್ನು ಕುರಿತು ಮಾತನಾಡುತ್ತಾಳೆ. ಹೆಣ್ಣು, ಹೊನ್ನು, ಮಣ್ಣಿಗಾಗಿ ವ್ರತವೆಂಬುವ ನೇಮಗಳನ್ನು ಮಾಡಬಹುದೆ, ಭಕ್ತಿಗಿಂತ ಕಾಯಕ ದೊಡ್ಡದು, ಕಾಯಕ ತೀರಿದ ಮೇಲೆ ಗುರು ಲಿಂಗ ಜಂಗಮ, ಪೂಜೆ, ಶಿವಭಕ್ತರೊಡನೆ ಒಡನಾಟ ಇವುಗಳನ್ನು ಮಾಡಬೇಕು. ಕಾಯಕದಿಂದ ಪಡೆದಿದ್ದನ್ನಷ್ಟೇ ಶರಣರಿಗೆ ಅರ್ಪಿಸಬೇಕು. ತನ್ನ ಕಾಯಕದ ದುಡಿಮೆಯನ್ನಲ್ಲದೆ ಬೇಡಿ ತಂದುದ್ದನ್ನು ಗುರುಲಿಂಗ ಜಂಗಮಕ್ಕೆ ಅರ್ಪಿಸಬಾರದು, ವೇಷಧಾರಿಗಳು ಹೊಟ್ಟೆಪಾಡಿಗಾಗಿ ವೇಷವನ್ನು ಧರಿಸುವುದು ಸಹಜವಾದರೂ ಭಕ್ತರು ಹೊಟ್ಟೆಪಾಡಿಗಾಗಿ ವೇಷ ಧರಿಸಬಾರದು, ಈ ವ್ರತಾಚಾರಗಳಿಗೆ ತಪ್ಪಿ ನಡೆದವರನ್ನು, ಬದುಕುವವರನ್ನು ಅಕ್ಕಮ್ಮ ತೀವ್ರವಾಗಿ ಖಂಡಿಸುವುದಲ್ಲದೆ ವ್ರತಾಚಾರವನ್ನು ಯಾವುದೇ

ಸಂದೇಹವಿಲ್ಲದೆ, ಚಿತ್ತಶುದ್ಧಿಯಿಂದ ಮಾಡಬೇಕೆಂದು ನಿರ್ದೇಶಿಸುತ್ತಾಳೆ, (ವಚನ ಚಿಂತನಮಾಲೆ 'ಅಕ್ಕಮ್ಮ' ಡಾ. ಎಚ್.ಎಲ್. ಪುಷ್ಪಾ, ಪು.40).

ಅಕ್ಕಮ್ಮ ಮಾಹೇಶ್ವರ ಸ್ಥಲದ ಸಾಧಕಿಯಾದ್ದರಿಂದ ಭಕ್ತಸ್ಥಲದಲ್ಲಿರಬಹುದಾದ ಮಾನಸಿಕ ತುಡಿತವಾಗಲಿ ತನ್ನ ಮನಸ್ಸನ್ನು ಗಟ್ಟಿಗೊಳಿಸುವಂತೆ ಪರಮಾತ್ಮನಲ್ಲಿ ನಿವೇದಿಸುವ ರೀತಿಯಾಗಲಿ, ಆಕೆಯ ವಚನಗಳಲ್ಲಿ ಕಂಡುಬರುವುದಿಲ್ಲ. ಆ ಸ್ಥಿತಿಯನ್ನು ಮೀರಿ ಸ್ಥಿತಪ್ರಜ್ಞಗೊಂಡಿರುವ ಶರಣೆಯ ಚಿತ್ತ ಆಕೆಯದ್ದು. ಹಾಗಾಗಿ ವ್ರತ ಆಚರಣೆಯ ಕಡೆಗೆ ಆಕೆಯ ತೀವ್ರವಾದ ಆಸಕ್ತಿ ಪ್ರವಹಿಸಿದೆ. ಶರಣರ ದೃಷ್ಟಿಯಲ್ಲಿ ವಸ್ತುವ ಕಾಂಬುದಕ್ಕೆ ನಿಚ್ಚಣಿಕೆ ಬೇಕು. 'ವಸ್ತುವ ಕಾಂಬುದಕ್ಕೆ ಕಟ್ಟಿದ ಗುತ್ತಗೆ' ಎಂಬ ಅರ್ಥದಲ್ಲಿ ನಿಚ್ಚಣಿಕೆ ಹತ್ತುವ ಸಾಧನವಾದ ಏಣಿ. ಆ ಮೂಲಕ ಗುತ್ತಗೆ ಏರುವುದರಲ್ಲಿ ಕಂಡುಕೊಂಡ ಸ್ಥಳ, ವೃತ್ತಿಯಾವುದಾದರೇನು, ಅದರಲ್ಲಿ ನಿಷ್ಠೆ, ಆತ್ಮತೃಪ್ತಿಯಿದ್ದರೆ ಸಾಕು, ಸಾಕಾರ ಸಾಧ್ಯ. ಮಾಡುವ ಕಾಯಕ ಸಫಲವಾಗುವುದಕ್ಕೆ ನಿಚ್ಚಣಿಕೆ ಬೇಕಾಗುತ್ತದೆ. ವ್ರತ–ನೇಮಗಳು ಲೋಪವಾಗಬಾರದು ಶರಣ–ಶರಣೆಯರಲ್ಲಿ ಅಂತರಂಗ ಮತ್ತು ಬಹಿರಂಗ ಶುದ್ಧವಾಗಿರಬೇಕು ಎನ್ನುವ ಅಕ್ಕಮ್ಮನ ಮಾತುಗಳು ಆಕೆಯು ಶರಣತತ್ವದ ನೆಲೆಯಲ್ಲಿ ಹೊಂದಿದ್ದ ಸ್ಥಾನವನ್ನು ನಿರ್ದೇಶಿಸುತ್ತದೆ.

ಶರಣಸ್ಥಲದಲ್ಲಿ ಶರಣರು ತಮ್ಮನ್ನು ಸತಿಗೂ, ಶಿವನನ್ನು ಪತಿಗೂ ಹೋಲಿಸಿಕೊಳ್ಳುವುದಲ್ಲದೆ ಸತಿ ಪತಿಗೆ ತನ್ನನ್ನು ಅರ್ಪಿಸಿಕೊಂಡಾಗ ತಾನು ಸುಖಪಡುವುದಲ್ಲದೆ ತನ್ನ ಪತಿಗೂ ಸುಖವುಂಟುಮಾಡುತ್ತಾಳೆ. ಈ ಅನುಭಾವದ ದಾಂಪತ್ಯದಲ್ಲಿ ಸತಿಯ ಸರ್ವಭರಿತಾರ್ಪಣ ಕ್ರಿಯೆ ವಿಶಿಷ್ಟವಾದದ್ದು. ಇಲ್ಲಿ ಭಕ್ತನೂ, ದೈವವೂ ಸಮಾನ ನೆಲೆಯಲ್ಲಿದ್ದು ಈ ಸಮಾನತೆಯಿದ್ದಾಗ ಮಾತ್ರ ಬೆರೆಯಬಲ್ಲರು. 'ಸಮಾನ'ಮನಸ್ಕತೆ ಬರುವುದು ದೈವದ ಎತ್ತರಕ್ಕೆ ಶರಣ ಏರಿದಾಗ ಮಾತ್ರ. ತಾರತಮ್ಯವಿಲ್ಲದ ಸಮಾನ ನೆಲೆಯಲ್ಲಿ ಚಿಂತಿಸುವ ಮನಸ್ಸು ಬಿಸಿಲು–ನೆರಳನ್ನು, ಸಿಹಿ–ಕಹಿಯನ್ನು ಸಮತಾ ಭಾವದಿಂದ ನೋಡಿ ದೇವನಿಗರ್ಪಿಸಿ ನಂತರ ಆ ಭಾವಗಳನ್ನು ತಾನು ಅನುಭವಿಸುತ್ತದೆ. ತನ್ನ ಅಂತಃಕರಣವನ್ನೇ ಶಿವನಿಗೆ ಅರ್ಪಿಸಿ, ಬೇಕು–ಬೇಡ, ಸುಖ–ದುಃಖ, ಚಿತ್ತ ಶಾಂತಿಯನ್ನು ಕಾಪಾಡಿಕೊಂಡ ಭಕ್ತ ಸಮತಾಭಾವದಿಂದ ಶಿವನಿಗರ್ಪಿಸುತ್ತಾನೆ. ಭಕ್ತನು ಶಿವನನ್ನು ಪ್ರೀತಿಸಿದಂತೆ ಶಿವ ಭಕ್ತನನ್ನು ಪ್ರೀತಿಸುತ್ತಾನೆ. ಇದು ಹೇಗೆಂದರೆ ನದಿಯ ನೀರೂ, ಸಮುದ್ರದ ನೀರೂ ಒಂದೇ ಆಗಿದ್ದು ನದಿ ಸಮುದ್ರದಲ್ಲಿ ಬೆರೆತು ಒಂದಾಗಲು ಸಾಧ್ಯ. ಶರಣನ ಜೀವಾತ್ಮಕ್ಕೂ ಪರಶಿವನೆಂಬ ಪರಮಾತ್ಮನಿಗೂ ಮೂಲವಾದ ಆತ್ಮ ಒಂದೇ ಆಗಿದ್ದು ಐಕ್ಯಭಾವ

ಸಾಧ್ಯ. ಇದನ್ನೇ ಅನುಭಾವದ ಪರಿಭಾಷೆಯಲ್ಲಿ ಸ್ವಪ್ರಜ್ಞೆಯನ್ನು ಕಳೆದುಕೊಂಡು ಪರಶಿವನಲ್ಲಿ ಒಂದಾಗುವುದು ಎಂಬ ಅರ್ಥವನ್ನು ಧ್ವನಿಸುತ್ತದೆ.

ಸಮಶೀಲ ನೇಮ ಒಂದಾದಲ್ಲಿ ಉಡುವ ತೊಡುವ ಕೊಡುವ ಕೊಂಬ
ಅಡಿಯೆಡೆ ಮುಂತಾಗಿ ಸಕ್ಕರೆಯ ಬುಡಶಾಖೆಯಂತೆ
ಮಧುರಕ್ಕೆ ಹೆಚ್ಚು ಕುಂದಿಲ್ಲದೆ ಇಪ್ಪ ನೇಮಕ ಕಟ್ಟಾಚಾರ ನಿಶ್ಚಯವಾದವಂಗೆ
ಅಂಗ ಹಲವಲ್ಲದೆ ಕುಂದಣ ಒಂದೆ ಭೇದ
ನೇಮ ಹಲವಲ್ಲದೆ ಜ್ಞಾನವೊಂದೆ ಭೇದ
ಭೂಮಿ ಹಲವಲ್ಲದೆ ಅಪ್ಪುವೊಂದೆ ಭೇದ, ಬಂದ ಯೋನಿ ಒಂದೆ
ತಾ ಮುಂದಿಕ್ಕುವ ಯೋನಿ ಒಂದಾದ ಕಾರಣ
ಹಿಟ್ಟು ಹಲವಾದಡೆ ಅಪ್ಪದಕಲ್ಲು ಒಂದೆಯಾದಂತೆ
ಇದು ತಪ್ಪದ ಆಚಾರ, ಇದಕ್ಕೆ ಮಿಥ್ಯ ತಥ್ಯವಿಲ್ಲ, ತಪ್ಪದು ನಿಮ್ಮಾಣೆ
ಆಚಾರಕ್ಕರ್ಹನಾದ ರಾಮೇಶ್ವರಲಿಂಗವ ನೀನೆ ಬಲ್ಲೆ.

(ಸಮಗ್ರ ವಚನ ಸಂಪುಟ 5, 574)

ಎನ್ನ ಸಮಗ್ರಾಹಕ ಶೀಲಸಂಪಾದಕರನ್ನಲ್ಲದೆ
ಎನ್ನ ಕಣ್ಣಿನಲ್ಲಿ ನೋಡೆ, ಜಿಹ್ವೆಯಲ್ಲಿ ನೆನೆಯೆ,
ಮಿಕ್ಕಾದ ತಟ್ಟುವ ಮುಟ್ಟುವ ತಾಗುವ ಸೋಂಕುವ
ನಾನಾ ಗುಣಂಗಳಲ್ಲಿ ಶೋಧಿಸಿಯಲ್ಲದೆ ಬೆರೆಯೆ
ಕೊಂಬಲ್ಲಿ ಕೊಡುವಲ್ಲಿ
ಎನ್ನ ವ್ರತಾಚಾರವ ಅಂಗೀಕರಿಸಿದವರಲ್ಲಿಗಲ್ಲದೆ ಹೋಗೆ
ಇದಕ್ಕೆ ದೃಷ್ಟವ ನೋಡಿಹೆನೆಂದಡೆ ತೋರುವೆ
ಶ್ರುತದಲ್ಲಿ ಕೇಳಿಹೆನೆಂದಡೆ ಹೇಳುವೆ
ಅನುಮಾನದಲ್ಲಿ ಅರಿದಿಹೆನೆಂದಡೆ
ಎನ್ನ ಆಚಾರದ ಆತ್ಮನ ಎನ್ನ ಕೈಯಲ್ಲಿ ಹಿಡಿದು
ನಿಮ್ಮ ಕೈಯಲ್ಲಿ ಕೊಡುವೆ.
ಈ ಭಾಷೆಗೆ ತಪ್ಪೆನೆಂದು ಕಟ್ಟಿದೆ ತೊಡರುವ.
ಆಚಾರವೆ ಪ್ರಾಣವಾದ ರಾಮಲಿಂಗೇಶ್ವರಾ,
ಎನಗೆ ಸರಿ ಇಲ್ಲ ಎಂದು ಎಲೆದೊಟ್ಟು ನುಂಗಿದೆ.

(ಸಮಗ್ರ ವಚನ ಸಂಪುಟ 5, 457)

ಮೇಲಿನ ವಚನದಲ್ಲಿ ಅಕ್ಕಮ್ಮ 'ಸಂಗ್ರಾಹಕ ಶೀಲಸಂಪಾದಕರನ್ನಲ್ಲದೆ' ಬೇರೆಯವರನ್ನು ನೋಡುವುದಿಲ್ಲ, ಬೆರೆಯುವುದಿಲ್ಲ ಎಂಬ ಭಾಷೆಯನ್ನು ಕೊಡುತ್ತಾಳೆ. ಇಂತಹ ಸರ್ವಸಂಗ ಶೀಲಸಂಪಾದಕರ ಪ್ರಸ್ತಾಪ ಮೇಲಿಂದ ಮೇಲೆ ಬರುವುದಲ್ಲದೆ ಅದು ಶರಣರೂ ಆಗಬಹುದು, ಪರಶಿವನೂ ಆಗಬಹುದು ಎಂಬಂತೆ ಇಲ್ಲಿ ಅರ್ಥೈಸಿಕೊಳ್ಳಬಹುದು, (ವಚನ ಚಿಂತನ ಮಾಲೆ, 'ಅಕ್ಕಮ್ಮ ಡಾ. ಎಚ್.ಎಲ್. ಪುಷ್ಪ ಪು.60–61). ಜೊತೆಗೆ, ಈ ಸಂದರ್ಭದಲ್ಲಿ "ಗಂಡಿನ ಸಂಬಂಧ ಮಾಡುವುದೆಂದರೆ ಅವಳಿಗೆ ಹಣವಿದ್ದವನನ್ನು, ಎಂಥವನನ್ನಾದರೂ ಸ್ವೀಕರಿಸುವುದು ಎಂಬ ಭಾವದ್ದಲ್ಲ. ಅವಳು ವಿಧಿಸುವ ವ್ರತನೇಮಗಳಿಗೆ ಅವನು ಸಮ್ಮತಿಸಬೇಕು. ಅವನನ್ನು ಸಮಗ್ರಾಹಕ ಶೀಲಸಂಪಾದಕ ಎಂದು ಕರೆಯುತ್ತಿದ್ದಾಳೆ. ದೇಹ ಸುಖವೆಂಬುದು ಪಡೆಯುವ ಕೊಡುವ ಮಾನಸಿಕ ಸಮ ಹಾಗೂ ಸಹಭಾಗುತ್ವದಲ್ಲಿದೆ. ಇದನ್ನು ಸಮಗ್ರಾಹಕ ಶಬ್ದ ಸೂಚಿಸುತ್ತಿದೆ, ಇದು ಶೀಲಸಂಪಾದಕ ಗುಣಿಯಾದವನನ್ನು ಕೂಡಿದಾಗ ಮಾತ್ರ ತನ್ನಲ್ಲಿ ಆಗುವ ದೇಹ ವ್ಯಾಪಾರ ಧರ್ಮ ಎಂದು ಹೇಳುತ್ತಿದ್ದಾಳೆ ಅಕ್ಕಮ್ಮ" ಎನ್ನುವ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅವರ ಮಾತುಗಳನ್ನು ಗಮನಿಸಬಹುದಾಗಿದೆ, (ಪು. 38, ವಚನ ಸಂಸ್ಕೃತಿ – ಸಾಹಿತ್ಯ ಸಂಗಾತಿ).

ಸಮಕಾಲೀನ ಸಮಾಜದ ಅತಿ ದೊಡ್ಡ ಪಿಡುಗಾಗಿದ್ದ ಡಾಂಭಿತೆಯನ್ನು ಹೀಗಳೆಯುತ್ತ ಅಕ್ಕಮ್ಮ ಹಲವು ವಚನಗಳನ್ನು ರಚಿಸಿದ್ದಾಳೆ. ಕೆಲವು ವಚನಗಳನ್ನು ಗಮನಿಸಬಹುದಾಗಿದೆ:

ಹೋತಿನ ಗಡ್ಡದಂತೆ ಹಿರಿಯರ ಗಡ್ಡ ನೋಡಾ.
ಬಿಡಾರ ಬಿಡಾರವೆಂದು ಹಿರಿಯತನಕ್ಕೆ ಅಹಂಕರಿಸಿ,
ಆಚಾರವಂ ಬಿಟ್ಟು ಅನಾಚಾರವಂ ಸಂಗ್ರಹಿಸಿ,
ಭಕ್ತರೊಳು ಕ್ರೋಧ, ಭ್ರಷ್ಟರೊಳು ಮೇಳ
ಇವರು ನರಕಕ್ಕೆ ಯೋಗ್ಯರು,
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ.

(ಸಮಗ್ರ ವಚನ ಸಂಪುಟ 5, 588

ವಯಸ್ಸಾದವರು ಹಿರಿಯರೆಂದು ಹಿರಿತನಕ್ಕೆ ಅಹಂಕರಿಸಿ ಅನಾಚಾರಿಗಳಾಗಿ ಭಕ್ತರಲ್ಲಿ ಕೋಪವನ್ನು ವ್ಯಕ್ತಪಡಿಸುತ್ತಾ ಭ್ರಷ್ಟರೊಂದಿಗೆ ಸಂಗವನ್ನು ಮಾಡುತ್ತಾ ಹಾದಿ ತಪ್ಪಿ ನರಕಕ್ಕೆ ಯೋಗ್ಯರಾಗುತ್ತಾರೆ ಎನ್ನುವುದು ಅಕ್ಕಮ್ಮನ ಮಾತಾಗಿದೆ. ಇಂತಹವರ

ಹಿರಿಯತನವೆನ್ನುವುದು ಕೇವಲ ಡಂಭಾಚಾರವೆನ್ನುವುದು ಅಕ್ಕಮ್ಮನ ಅಭಿಪ್ರಾಯವಾಗಿದೆ. ವೇಷಗಾರರನ್ನು ಕುರಿತು ಅಕ್ಕನು ಹೇಳಿರುವುದಿದು

ವೇಷ ಎಲ್ಲಿರದು?
ಸೂಳೆಯಲ್ಲಿ, ದೊಂಬನೆಲ್ಲಿ, ಭೈರೂಪನಲ್ಲಿರದೆ?
ವೇಷವ ತೋರಿ ಒಡಲ ಹೊರೆವ
ದಾಶಿ ವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದೊ?
ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ.

(ಸಮಗ್ರ ವಚನ ಸಂಪುಟ 5, 557)

ವೇಶ್ಯೆಯರಲ್ಲಿ, ದೊಂಬರಲ್ಲಿ, ಬಹಿರೂಪಿಗಳಲ್ಲಿ ವೇಷವಿರುತ್ತದೆ. ಆದರೆ ಭಕ್ತರಂತೆ ನಟಿಸಿ ತೋರಿಕೆಯ ಜೀವನ ನಡೆಸುವವರಿಗೆ ನಿಜವಾದ ಭಕ್ತಿಯು ಇರುವುದಿಲ್ಲ. ಈ ರೀತಿಯಲ್ಲಿ ನಿಜವಾದ ಭಕ್ತಿ ಇಲ್ಲದ, ಆದರೆ ಭಕ್ತಿಯನ್ನು ನಟಿಸುವ ಮಂದಿಯನ್ನು ಅಕ್ಕಮ್ಮ ದಾಸಿ ಮತ್ತು ವೇಶ್ಯೆಯರಿಗೆ ಹೋಲಿಸುತ್ತಾಳೆ. ಅಕ್ಕಮ್ಮ ಹೇಳುವಂತೆ ಡಾಂಭಿಕರ ಭಕ್ತಿಯು ದುಷ್ಟರಿಗೆ ಹೆದರಿ ವ್ರತವನ್ನು ಆಚರಿಸಿದ ರೀತಿಯಲ್ಲಿ ಇರುತ್ತದೆ, ಕತ್ತಿಯ ಅಲುಗಿನಲ್ಲಿ ಲೇಪಿತವಾಗಿರುವ ತುಪ್ಪದ ಆಸೆಗೆ ಕತ್ತಿಯನ್ನು ನೆಕ್ಕಿ ನಾಲಗೆಯನ್ನು ಕತ್ತರಿಸಿಕೊಂಡಂತೆ ಆಗುತ್ತದೆ. ಡಾಂಭಿಕರ ಭಕ್ತಿಯನ್ನು ಅಕ್ಕಮ್ಮ ವರ್ಣಿಸುವ ಬಗೆ ಹೀಗೆ:

ಒಲವಿರದ ಭಕ್ತಿ, ಛಲವಿಲ್ಲದ ನಿಷ್ಠೆ,
ಎಲವದ ಮರನ ಕಯ್ದು ವಿಹಂಗನಂತೆ.
ಇಂತೀ ಸಲೆ ನೆಲಯನರಿಯದವನ ವ್ರತಾಚಾರ
ಕೊಲೆ ಹೊಲೆ ಸೂತಕಕ್ಕೊಡಲಾಯಿತ್ತು.
ಆಚಾರವೆ ಪ್ರಾಣವಾದ ರಾಮಲಿಂಗೇಶ್ವರಕ್ಕೆ ಹರಗಾದ ನೇಮ.

(ಸಮಗ್ರ ವಚನ ಸಂಪುಟ 5, 558)

ಡಾಂಭಿಕರ ಭಕ್ತಿಯಲ್ಲಿ ಬಲವೆಲ್ಲಿಯದು? ಅವರ ನಿಷ್ಠೆಯಲ್ಲಿ ಛಲ ಎಲ್ಲಿಂದ ಬಂದೀತು? ಅವರು ಅರಿಷಡ್ವರ್ಗವನ್ನು, ಅಷ್ಟಮದಗಳನ್ನು ನಿಗ್ರಹಿಸಿದವರ ರೀತಿಯಲ್ಲಿ ನಟಿಸುವರೇ ಹೊರತು ಅವರಿಂದ ನಿಜವಾದ ನಿಗ್ರಹ ಸಾಧ್ಯವಿಲ್ಲ. ಇಂಥವರು ಕೊಲೆಗಡುಕರಿಗೆ, ಸೂತಕಿಗಳಿಗೆ ಸಮ ಎಂದು ಅಕ್ಕಮ್ಮ ಹೇಳುತ್ತಾಳೆ.

ಅಕ್ಕಮ್ಮನ ಅಂಕಿತ ಆಚಾರವೆ ಪ್ರಾಣವಾದ ರಾಮಲಿಂಗೇಶ್ವರ. ಅಂತೆಯೇ, ಅವಳ ಅಂಕಿತಕ್ಕೆ ಹೊಂದುವಂತೆ ಆಚಾರವನ್ನು ಕುರಿತಾಗಿಯೂ ಅಕ್ಕಮ್ಮನ ಖಚಿತವಾದ

ನಿಲುವುಗಳಿವೆ. ಒಂದು ವಚನವು ಕೆಳಗಿನಂತಿದೆ:

ಗುರುವಾದಡೂ ಆಚಾರಭ್ರಷ್ಟನಾದಡೆ ಅನುಸರಿಸಲಾಗದು,
ಲಿಂಗವಾದಡೂ ಆಚಾರದೋಹಳವಾದಲ್ಲಿ ಪೂಜಿಸಲಾಗದು,
ಜಂಗಮವಾದಡೂ ಆಚಾರ ಅನುಸರಣೆಯಾದಲ್ಲಿ ಕೂಡಲಾಗದು,
ಆಚಾರವೆ ವಸ್ತು, ವ್ರತವೆ ಪ್ರಾಣ, ಕ್ರಿಯೆಯೆ ಜ್ಞಾನ, ಜ್ಞಾನವೆ ಆಚಾರ
ಆಚಾರವೆ ಪ್ರಾಣವಾದ ರಾಮಲಿಂಗೇಶ್ವರವು ತಾನೆ.

(ಸಮಗ್ರ ವಚನ ಸಂಪುಟ 5, 481)

ಇಲ್ಲಿ ಆಚಾರದ ಅನುಸರಣೆಗೆ ವಿಶೇಷವಾದ ಮಹತ್ವವವು ಸಂದಿರುವುದು ಪ್ರಕಟವಾಗುತ್ತದೆ. ಗುರು, ಲಿಂಗ, ಜಂಗಮ – ಇವುಗಳಲ್ಲಿ ಯಾವುದರಲ್ಲಿಯಾಗಲೀ ಆಚಾರಭ್ರಷ್ಟತೆಯಾದಲ್ಲಿ ಅವುಗಳ ಸಂಗ ನಿಷಿದ್ಧ, ವರ್ಜ್ಯ. ನಿಜವಾದ ಶರಣನಿಗೆ ಆಚಾರವೇ ವಸ್ತು, ವ್ರತವೇ ಪ್ರಾಣ, ಕ್ರಿಯೆಯೇ ಜ್ಞಾನ, ಜ್ಞಾನವೇ ಆಚಾರವಾಗಿ ಇರಬೇಕೆಂದು ಅಕ್ಕಮ್ಮ ಭಾವಿಸುತ್ತಾಳೆ.

ವಚನಗಳಲ್ಲಿ ವೀರಶೈವ ಸಿದ್ಧಾಂತ ಮತ್ತು ತತ್ವಗಳ ಹೇಳುವಿಕೆ, ಸಮಾಜ ವಿಮರ್ಶೆ, ಡಾಂಭಿತೆಯ ಮತ್ತು ಆಷಾಢಭೂತಿತನದ ವಿಡಂಬನೆ, ಕಾಯಕ ಮತ್ತು ದಾಸೋಹಗಳ ಪುರಸ್ಕಾರ, ಭಕ್ತ–ಭಕ್ತಿ, ಜ್ಞಾನ, ವೇದಾಗಮಗಳು ಮತ್ತು ಕರ್ಮಠತೆಯ ತಿರಸ್ಕಾರ – ಇವೆಲ್ಲವೂ ವಚನಗಳಲ್ಲಿ ಸಾಮಾನ್ಯವಾಗಿ ಚರ್ಚಿತವಾಗಿರುವ ವಿಷಯಗಳೇ. ಶರಣೆಯರು ಇಲ್ಲಿಯೂ ಶರಣಕ್ರಾಂತಿಯ ಬೆಳಕಿನಿಂದ ತಮಗೆ ದತ್ತವಾದ ವೈಚಾರಿಕತೆಯ ಪ್ರಭೆಯಲ್ಲಿ ಮುಂದೆಸಾಗಿ ಅಭಿವ್ಯಕ್ತಿಯ ಅರ್ಥವಂತಿಕೆ ಮತ್ತು ಘನತೆಗಳನ್ನು ಸಾಧಿಸಿದ್ದಾರೆ. ಆದರೆ, ಮೇಲೆ ನೋಡಿದಂತೆ, ಅಕ್ಕಮ್ಮನ ವಚನಗಳಲ್ಲಿ ಶರಣೆಯರ ವೈಚಾರಿಕತೆಯ ಮತ್ತೊಂದು ಮುಖ್ಯವಾದ ಆಯಾಮ ಪ್ರಕಟಗೊಳ್ಳುವುದನ್ನು ಕಾಣುತ್ತೇವೆ. ಸಾಂಪ್ರದಾಯಿಕವಾದ ಹಾಗೂ ರೂಢಿಗತವಾದ ಭಾವನೆಗಳು, ಸಂವೇದನೆಗಳನ್ನು ಮೀರಿ ಅಕ್ಕಮ್ಮ ವಿಶಿಷ್ಟವಾದ ಧ್ವನಿಯನ್ನು ಇಲ್ಲಿ ಅಭಿವ್ಯಕ್ತಿಸಿದ್ದಾಳೆ. ಇಂತಹ ಎಡೆಗಳಲ್ಲಿ ಶರಣೆಯರು ಶರಣಕ್ರಾಂತಿಯ ಮೌಲಿಕತೆಯನ್ನು ಹೆಚ್ಚಿಸುವಂತೆ ಪ್ರಕಟವಾಗುತ್ತಾರೆ, ಸಮಕಾಲೀನ ನೆಲೆಗಳಲ್ಲಿ ಶರಣಕ್ರಾಂತಿಯ ಮತ್ತು ವಚನಸಾಹಿತ್ಯದ ಪ್ರಸ್ತುತತೆಯನ್ನು ಬಿಂಬಿಸುವಂತೆ ತೋರುತ್ತಾರೆ.

ಕಾಯಕನಿಷ್ಠೆ, ಗಂಡು–ಹೆಣ್ಣು ತರತಮಭಾವ, ಡಾಂಭಿಕ ಭಕ್ತಿ, ಆಡಂಬರ ಇವುಗಳ ಬಗ್ಗೆ ಚಿಕಿತ್ಸಕ ದೃಷ್ಟಿಯಿಂದ ಕೂಡಿದ ವಚನಗಳ ಮೂಲಕ ಅಕ್ಕಮ್ಮನು ಶರಣಕ್ರಾಂತಿಯ ಒಟ್ಟಾರೆ ಘನವಂತಿಕೆಗೆ ಅಪೂರ್ವವಾದ ಸಾಕ್ಷಿಯಾಗಿ ನಿಲ್ಲುತ್ತಾಳೆ.

ಪರಾಮರ್ಶನ ಗ್ರಂಥಗಳು:

1. ಅರಿವು ಮಿರಿದ ಘನ : ಪ್ರೊ. ಎಚ್. ಲಿಂಗಪ್ಪ, ರಶ್ಮಿ ಪ್ರಕಾಶನ, ಚಿತ್ರದುರ್ಗ, 2017
2. ಕನ್ನಡದ ವಚನಕಾರ್ತಿಯರು : ಡಾ. ಎ. ಗಾಯತ್ರಿ, ಕೀರ್ತನ್ ಗ್ರಾಫಿಕ್ಸ್, ಮೈಸೂರು, 2014
3. ವಚನ ಧರ್ಮ ಸಾರ : ಎಂ. ಆರ್. ಶ್ರೀನಿವಾಸಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, 2009
4. ವಚನ ಸಂಸ್ಕೃತಿ – ಸಾಹಿತ್ಯ ಸಂಗಾತಿ : ಪ್ರೊ. ಎಸ್. ಜಿ. ಸಿದ್ಧರಾಮಯ್ಯ, ಸಪ್ನ ಬುಕ್ ಹೌಸ್, 2013
5. ಚಿಂತನ ಲೇಖನಗಳು : ಡಾ. ಬಸವರಾಜ ಸಬರದ, ಕನ್ನಡ ಸಾಹಿತ್ಯ ಪರಿಷತ್ತು, 2017
6. ಶರಣ ಕ್ರಾಂತಿ – ವಿಭಿನ್ನ ಪ್ರತಿಕ್ರಿಯೆಗಳು : ಸಂ. ಬಸವರಾಜ ಸಾದರ, ಲಡಾಯಿ ಪ್ರಕಾಶನ, ಗದಗ, 2020
7. ವಚನ ಪ್ರತಿಭೆ ಮತ್ತು ಬೌದ್ಧಿಕ ಸ್ವಾತಂತ್ರ್ಯ : ಡಾ. ಎಸ್. ಎಂ. ಗಂಗಾಧರಯ್ಯ, ಪವಿತ್ರ ಸೆಲ್ಯೂಶನ್ಸ್, ಬೆಂಗಳೂರು, 2018
8. ಶಿವಶರಣೆಯರ ವಚನ ಸಂಪುಟ – ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗೂರು, 2001
9. ವಚನ ಚಳವಳಿ: ಬಸವರಾಜ ಸಬರದ, ಪಲ್ಲವಿ ಪ್ರಕಾಶನ, ಗುಲ್ಬರ್ಗಾ, 1992
10. ವಚನ ಸಾಹಿತ್ಯ – ವೈಚಾರಿಕ ಅಧ್ಯಯನ : ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪ್ರಸಾರಾಂಗ, ಕವಿವಿ, ಧಾರವಾಡ, 2004

***

ಚದುರಂಗರ ವೈಶಾಖ ಕಾದಂಬರಿ : ಭಾರತೀಯ ಜೀವನ ಸಂಕಥನ ವಿಮರ್ಶೆ

1

ಡಾ. ಆನಂದ ಎಸ್.ಎನ್.
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಅಜ್ಜಂಪುರ–577547
ಚಿಕ್ಕಮಗಳೂರು ಜಿಲ್ಲೆ.
anandajjampura@gmail.com

ಚದುರಂಗ ಅವರ 'ವೈಶಾಖ' ಕಾದಂಬರಿ ಎರಡು ಹಳಿಗಳ ಮೇಲೆ ಸಾಗುವ ಬಂಡಿಯಂತೆ. ಒಂದು ಹಳಿ ತಳ ಜಾತಿಯದಾದರೆ, ಇನ್ನೊಂದು ಹಳಿ ಮೇಲ್ಜಾತಿಯದು. ಕತೆ ಸಾಗುವುದೂ ಇದೇ ರೂಪದಲ್ಲಿ. ಸಮಾಜವೆಂಬ ಬಂಡಿ ಈ ಎರಡೂ ಹಳಿಗಳ ಮೇಲೆ ಸಾಗಬೇಕು. ಆದರೆ ಅವರೆಡೂ ಎಂದೂ ಕೂಡಬಾರದು. ಕೂಡಿದರೆ ಸಮಾಜದ ವ್ಯವಸ್ಥೆಯೇ ಹಳಿತಪ್ಪಿ ಬಿದ್ದುಬಿಡುತ್ತದೆ ಎಂಬುದನ್ನು ಶಿರಸಾವಹಿಸಿ ಪಾಲಿಸುವ ದರುಮನಹಳ್ಳಿಯ ಜನರ ಬದುಕನ್ನು ಚಿತ್ರಿಸುತ್ತಾ ಕಾದಂಬರಿ ಸೂಕ್ಷ್ಮವಾಗಿ ಚಿಂತನೆಗೊಡ್ಡುತ್ತದೆ. ಪ್ರಗತಿಶೀಲ ಬರಹಗಾರರಾದ ಚದುರಂಗರು ನಗರ ಮಧ್ಯಮ ವರ್ಗದ ಬದುಕಿನ ತಲ್ಲಣಗಳನ್ನು ಕಟ್ಟುವ ನೆಪದಲ್ಲಿ ತತ್ವಸಿದ್ಧಾಂತಗಳನ್ನು ಹೇರುವ ಬದಲು ಗ್ರಾಮೀಣ ಬದುಕಿನ ಮೂಲ ಸಮಸ್ಯೆಗಳ ಎಳೆಗಳನ್ನು ಹಿಡಿದಡುವುದರಲ್ಲಿ ಹೆಚ್ಚು ಶ್ರಮವಹಿಸಿದ್ದಾರೆ.

ಹಳ್ಳಿಯ ಜನರು ಮಾತನಾಡುವ ಭಾಷೆಯ ಸೊಗಡು, ಮಾತಿನ ಮಧ್ಯಮಧ್ಯೆ ಆಡುವ ಗಾದೆಮಾತು, ಸಂಬಂಧಗಳ ನಡುವಿನ ಆಪ್ತತೆ, ಮನುಷ್ಯತ್ವವನ್ನು ಮೀರಿ ಬೆಳೆದಿರುವ ಜಾತಿಯ ದಾರ್ಢ್ಯತೆ, ಉಳ್ಳವರ ಸೌಖ್ಯಕ್ಕಾಗಿ ಸಮಾಜದಲ್ಲಾಗುವ ಪಲ್ಲಟಗಳು, ಗಂಡು–ಹೆಣ್ಣಿನ ಸಂಬಂಧದ ಅಧಮ್ಯ ಸೆಳೆತ ಮೊದಲಾದವು ಕಾದಂಬರಿಯ ಲಕ್ಷಣಗಳು. ದಲಿತ–ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಬಂದ ವೈಶಾಖ ಕಾದಂಬರಿಯಲ್ಲಿ ಭಾರತೀಯ ಸಮಾಜದ ಒಳನೋಟಗಳು ಇಂದಿಗೂ ಪ್ರಸ್ತುತವಾಗಿರುವುದನ್ನು ಕಾಣಿಸುವ ಪ್ರಯತ್ನ ಈ ಲೇಖನದಲ್ಲಿದೆ.

ವೈಶಾಖ ಕಾದಂಬರಿ ಚದುರಂಗರ ಮಹತ್ವಪೂರ್ಣ ಕೃತಿ. ಮೈಸೂರು ಸೀಮೆಯ ಬದುಕನ್ನು ಕಟ್ಟಿಕೊಡಬಲ್ಲ ಈ ಕಾದಂಬರಿ ಸಾಮಾಜಿಕ ಬದುಕಿನೊಳಗಿನ ಮನುಷ್ಯ ಸಂಬಂಧಗಳ ಶೋಧನೆಗೆ ತೊಡಗುತ್ತದೆ. ಹಲವು ಜಾತಿಗಳು ನೆಲೆಯೂರಿರುವ ದರುಮನಹಳ್ಳಿ ಭಾರತದ ಹಳ್ಳಿಗಳ ಪ್ರತಿನಿಧಿಯಾಗಿದೆ. ಹೆಸರಿಗಷ್ಟೇ ಧರ್ಮವನ್ನು ಲೇಪನ ಮಾಡಿಕೊಂಡಿರುವ ಈ ಊರು ಉಳ್ಳವರ ವಶದಲ್ಲಿದೆ. ತಮ್ಮತಮ್ಮ ಅನುಕೂಲಕ್ಕನುಗುಣವಾಗಿ ಧರ್ಮವನ್ನು, ನ್ಯಾಯವನ್ನು ತಮ್ಮ ವಶ ಮಾಡಿಕೊಳ್ಳುವ ವ್ಯವಸ್ಥೆಯ ಮೇಲೆ ಕಾದಂಬರಿ ಬೆಳಕು ಚಲ್ಲುತ್ತದೆ. 'ಒಳ್ಳೆಯವರಿಗೆ ಕಾಲವಲ್ಲ' ಎಂಬ ಮಾತು ಕಾದಂಬರಿಯಲ್ಲಿ ಪದೇಪದೇ ಬರುವುದು ಮೇಲ್ಜಾತಿ, ಮೇಲ್ವರ್ಗದ ದುರ್ಜನರ ಅಟ್ಟಹಾಸದಡಿಯಲ್ಲಿ ದಲಿತರು, ದುರ್ಬಲರು ನಾಶವಾಗುತ್ತಿರುವುದನ್ನು ಸೂಚಿಸುತ್ತದೆ.

ಕಾದಂಬರಿಯಲ್ಲಿ ಬರುವ ಪ್ರಮುಖ ಕೇಂದ್ರ ಪಾತ್ರಗಳು ಲಕ್ಕ ಮತ್ತು ರುಕ್ಮಿಣಿ. ಲಕ್ಕ ಹೊಲೆಯರವನು. ರುಕ್ಮಣಿ ಬ್ರಾಹ್ಮಣ ವಿಧವೆ. ಇವರಿಬ್ಬರ ಸುತ್ತ ಸುತ್ತುವ ಕತೆ ಎಲ್ಲಾ ಬಗೆಯ ಮಾನವ ಸಂಬಂಧಗಳನ್ನು ಬಿಚ್ಚುತ್ತಾ ಸಾಗುತ್ತದೆ. ಈ ಮಾನವ ಸಂಬಂಧಗಳನ್ನು ನಿಯಂತ್ರಿಸುವ ಜಾತಿ, ನೀತಿ, ಪದ್ಧತಿಗಳ ಬಗ್ಗೆ ಜಿಜ್ಞಾಸೆಗೊಳಪಡಿಸುತ್ತದೆ. ರುಕ್ಮಿಣಿ ಮನೆ ಬಿಟ್ಟು ಕಣ್ಮರೆಯಾಗಲು ಹಾಗೂ ಲಕ್ಕ ಊರು ಬಿಟ್ಟು ಹೋಗಲು ಕಾರಣವಾಗುವುದೂ ಇವೇ. ಗಂಡು–ಹೆಣ್ಣಿನ ಸಂಬಂಧದಲ್ಲಿ ಜಾತಿಬೇಧ, ಲಿಂಗಬೇಧ ದಟ್ಟವಾಗಿರುವ ಸಮಾಜದ ಚಿತ್ರಣವನ್ನು ಕಾದಂಬರಿ ಕಟ್ಟಿಕೊಡುತ್ತದೆ. ತಳಜಾತಿಯ ಹುಡುಗಿ ಸಾವಂತ್ರಿಯ ಮೇಲೆ ಮೇಲ್ಜಾತಿಯ ಕೆಂಗಣ್ಣಪ್ಪ ಬಲಾತ್ಕರಿಸಿದಾಗ, ಇದನ್ನು ನ್ಯಾಯ ಪಂಚಾಯ್ತಿಗೆ ಹೇಳಲು ದ್ಯಾವಾಜಮ್ಮ ಹೋಗುತ್ತಾಳೆ. ಆಗ ನ್ಯಾಯ ಪಂಚಾಯ್ತಿ ಮುಖಂಡರಲ್ಲಿ ಒಬ್ಬನಾದ ನಂಜೇಗೌಡ ಆಡುವ ಮಾತುಗಳು ನ್ಯಾಯ ವ್ಯವಸ್ಥೆಯಲ್ಲಿರುವ ಜಾತಿಬೇಧವನ್ನು ಎತ್ತಿತೋರಿಸುತ್ತದೆ. ಹೊಲೆಯರ ಲಕ್ಕ ಬ್ರಾಹ್ಮಣ ಹೆಣ್ಣು ರುಕ್ಮಿಣಿಯನ್ನು ಬಸುರು ಮಾಡಿದ್ದಾನೆ ಎಂದು ನ್ಯಾಯ ಪಂಚಾಯ್ತಿಯು

ಸೇರಿ ಇದನ್ನು ಘೋರ ಅಪರಾಧವೆಂದು ಘೋಷಿಸಿ ಲಕ್ಕನಿಗೆ ಛಡಿ ಏಟಿಯ ಶಿಕ್ಷೆಯ ಜೊತೆಗೆ ಊರಿನಿಂದ ಬಹಿಷ್ಕಾರ ಹಾಕುವುದನ್ನು ಹೇಳಿದಾಗ ದ್ಯಾವಾಜಮ್ಮ, "ತೆಗೆ, ತೆಗಿ. ಇವುರದ್ಯಾವ ಸೀಮೆ ನ್ಯಾಯವ?–ಇನ್ನೂ ರುತುವಾಗ್ದೆ ಇದ್ದ ನಮ್ಮ ಕುಂಡಿಮಾದಿ ಎಣ್ಣು ಸಾವಂತ್ರಿಯ ಇಂದ್ಕೆ ಆ ಕೆಂಗಣ್ಣಪ್ಪ ಮ್ಯಾಲೆ ಬಿದ್ದು ವೊಸಿಕಾಡ್ದ ಇಚಾರ್ವ ನಿಮ್ಮ ಪಂಚಾತಿ ಮುಂದಿಡೀಂತ ಕೇಳಿದ್ಕೆ, ಇದೇ ನಂಜೇಗೌಡ, 'ವೋಗಮ್ಮಿ, ಇದ್ಯಾವ ದ್ವಡ್ಡ ಸಂಗ್ತೀಂತ ತಂದಿದ್ದೀಯೆ?... ಗಂಡಸ್ಗೆ ಯಾವ ಕಟ್ಟು? ದನ ಒಂಟಿ ಸಿಕ್ದಾಗ, ಅದರ ಮ್ಯಾಲೆ ಅತ್ತುಬ್ಯಾಡಾಂತ ಹೋರ್‍ಯ ಅದ್ಯಾರು ತಾನೆ ತಡಯಕ್ಕಾದಾತು? ಅಂದಿತ್ನಲ್ಲ!'... ಇವುರಿಗೊಂದು ನ್ಯಾಯ, ನಮಗೊಂದು ನ್ಯಾಯವ?" (ಪುಟ 257) ಎಂದು ಉಗ್ರವಾಗಿ ಪ್ರತಿಕ್ರಿಯಿಸುತ್ತಾಳೆ. ಕಾದಂಬರಿಯ ಕೊನೆಯಲ್ಲಿ ಅದೇ ಬ್ರಾಹ್ಮಣ ಮುಖಂಡ ಕೇಶವಯ್ಯ ಲಕ್ಕನ ತಂಗಿ ಸಿವುನಿಯ ಗುಡಿಸಲಲ್ಲಿ ಕೂಡುವುದು ಅಪರಾಧವೆನಿಸುವುದಿಲ್ಲ. ಭಾರತೀಯ ಸಮಾಜದಲ್ಲಿ ನ್ಯಾಯಸಮಾನತೆ ಇರಲಿಲ್ಲ ಎಂಬುದನ್ನು ಕಾದಂಬರಿ ಎತ್ತಿ ಹಿಡಿಯುತ್ತದೆ. ತನ್ನ ತಂಗಿಯ ಜೊತೆ ಕೇಶವಯ್ಯ ಮಲಗಿದ್ದನ್ನು ಕಂಡಾಗ ಲಕ್ಕನಿಗೆ ಮಚ್ಚಿನಿಂದ ಕೊಚ್ಚಾಕುವಷ್ಟು ಸಿಟ್ಟು ಬಂದರೂ ವ್ಯವಸ್ಥೆ ಅವನ ಕೈ ಕಟ್ಟಾಗಿದೆ. (ಬ್ರಾಹ್ಮಣ ಹತ್ಯೆ ಮಹಾಪಾಪ) ತಾವು ತಳಜಾತಿಯವರು ನಮ್ಮಿಂದ ಏನು ತಾನೇ ಸಾಧ್ಯ ಎಂಬ ಭಾವನೆ ಅವನಲ್ಲಿ ಬಲವಾಗಿ ಬೇರೂರಿದೆ. ಆದರೆ ಅವನು ಊರು ಬಿಟ್ಟು ನಾಯಿ ಬೊಡ್ಡನೊಡನೆ ಕಾಡಿನಲ್ಲಿ ನಡೆಯುತ್ತಿದ್ದಾಗ ನೂರಾರು ಗೊದ್ದಗಳು ಒಂದು ಸರ್ಪವನ್ನು ಕಚ್ಚಿ ಕಚ್ಚಿ ಕೊಂದದ್ದನ್ನು ಕಂಡಾಗ ಸೋಜಿಗವೆನಿಸುತ್ತದೆ. ಬಹುಸಂಖ್ಯೆಯಲ್ಲಿ ಇರುವೆಯಂತಿರುವ ತಳ ಸಮುದಾಯದವರು ಒಗ್ಗಟ್ಟಿನಿಂದ ಹೋರಾಡಿದರೆ ಜಯ ಶತಃಸಿದ್ಧ ಎಂಬುದನ್ನು ಕಾದಂಬರಿ ಸಾಂಕೇತಿಕವಾಗಿ ಚಿತ್ರಿಸುತ್ತಾ ಸಾಗುತ್ತದೆ.

'ವೈಶಾಖ' ಕಾದಂಬರಿ ಓದುವಾಗ ಮೈಶಾಖವಾಗುವುದು ಅದು ಚಿತ್ರಿಸುವ ವ್ಯವಸ್ಥೆಯೊಳಗಿನ ನ್ಯಾಯಪದ್ಧತಿಯನ್ನು ಕಂಡಾಗ. ಮಠದ ಸ್ವಾರ್ಥಕ್ಕೆ, ಕೆಂಗಣ್ಣಪ್ಪ, ಗಂಗಪ್ಪ, ಬೆಟ್ಟಯ್ಯ, ನಂಜೇಗೌಡನಂತಹ ಕುಳದ ಸುಖಕ್ಕೆ, ವೆಂಕಟ ಜೋಯಿಸರು, ಶಾನುಭೋಗರು, ಕೇಶವಯ್ಯನಂತಹವರ ಸ್ವಾರ್ಥಕ್ಕೆ ನ್ಯಾಯ ಪಲ್ಲಟವಾಗುವುದು ವಾಸ್ತವ ಬದುಕಿಗೆ ಹಿಡಿದ ಕನ್ನಡಿಯಾಗಿದೆ. 'ನ್ಯಾಯ ಯಾವತ್ತೂ ಉಳ್ಳವರ ಸೊತ್ತು ಆಗಿತ್ತು' ಎಂಬುದನ್ನು ಕಾದಂಬರಿ ಸೂಚಿಸುತ್ತದೆ. ಸ್ವತಂತ್ರ ಭಾರತದ ಸಂವಿಧಾನಬದ್ಧ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನ್ಯಾಯ ಯಾರ ಪಾಲಾಗಿದೆ ಎಂಬುದನ್ನು 1980ರಲ್ಲಿ ಪ್ರಕಟವಾದ ವೈಶಾಖ ಕಾದಂಬರಿ ಭಾರತ ಪ್ರಜಾಸತ್ತೆಯನ್ನು ಪ್ರಶ್ನಿಸುವಂತಿದೆ.

ಸಮಾಜದ ತಳಮಟ್ಟವನ್ನು ತಲುಪದ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕನ್ಯಾಯ ವ್ಯವಸ್ಥೆಯನ್ನು ಕಟ್ಟಿಕೊಡುವ ಕಾದಂಬರಿ ಸ್ವಾತಂತ್ರ್ಯೋತ್ತರ ಕಾಲದಲ್ಲಿಯೂ ಹಳ್ಳಿಗಳಲ್ಲಿ ನಡೆಯುವ ನ್ಯಾಯ ಪಂಚಾಯ್ತಿ ಪದ್ಧತಿಯ ಅಮಾನವೀಯತೆಯನ್ನು ತೆರೆದಿಟ್ಟಿದೆ. ಹೆಣ್ಣು ಸ್ವತಂತ್ರಳಾಗಿ ಬದುಕುವುದನ್ನು ಒಪ್ಪದ ಈ ಸಮಾಜ ಅವಳನ್ನು ತನ್ನ ವಶ ಮಾಡಿಕೊಳ್ಳುವ ಇಲ್ಲವೆ ಕ್ರೂರವಾಗಿ ಹಿಂಸಿಸುವ ಹುನ್ನಾರದಲ್ಲಿಯೇ ಸಾಗುತ್ತಿರುತ್ತದೆ. ಗಂಗಿಯ ವಿಷಯದಲ್ಲಿ ನಡೆದ ನ್ಯಾಯ ಪಂಚಾಯ್ತಿ ಅವಳನ್ನು ಅನುಭೋಗಿಸುವುದರಲ್ಲಿ ಅವಳ ಸ್ವಾತಂತ್ರ್ಯ ಮತ್ತು ನ್ಯಾಯವನ್ನು ಹರಣ ಮಾಡಿದರೆ, ರುಕ್ಮಣಿ–ಲಕ್ಕರ ವಿಷಯದಲ್ಲಿ ಕ್ರೂರವಾಗಿ ನಡೆದುಕೊಳ್ಳುತ್ತದೆ. ಕೃಷ್ಣಶಾಸ್ತ್ರಿಗಳು ತಪ್ಪನ್ನು ಒಪ್ಪಿಕೊಂಡರೂ ಅದನ್ನು ಸ್ವೀಕರಸದೆ, 'ಹುಚ್ಚು' ಎಂದು ಭಾವಿಸಿ ಲಕ್ಕನಿಗೆ ಛಡಿ ಏಟಿನ ಶಿಕ್ಷೆ ಮತ್ತು ಊರಿನಿಂದ ಗಡಿಪಾರು ಮಾಡಿದ್ದು, ರುಕ್ಮಿಣಿಯನ್ನು ಅವಳು ಜೀವಂತ ಇರುವಾಗಲೇ ಘಟಸ್ಫೋಟ ಮಾಡಿ, ತಲೆಬೋಳಿಸಿ ಕತ್ತೆ ಮೇಲೆ ಕೂರಿಸಿ ಊರಾಚೆಗೆ ಅಟ್ಟುವ ಶಿಕ್ಷೆ ವಿಧಿಸಿದ್ದು ನಿಜಕ್ಕೂ ಹೆಣ್ಣನ್ನು ಪೂಜಿಸುವ ನಾಡಿನಲ್ಲಿ ಮಾಡುವ ಕ್ರೂರತನಕ್ಕೆ ಸಾಕ್ಷಿ. ಬ್ರಾಹ್ಮಣ ಜಾತಿಯ ಹೆಣ್ಣು ಹೇಗಿರಬೇಕು ಎಂಬುದನ್ನು ಶಾಸ್ತ್ರಬದ್ಧವಾಗಿ ಮಾತನಾಡುವ ಸಮಾಜ ಅದೇ ಜಾತಿಯ ಗಂಡು ಮಾಡುವ ಲಂಪಟತನಕ್ಕೆ ಯಾವ ಶಾಸ್ತ್ರಾನ್ವಯ ಮಾಡದಿರುವುದು ಪುರುಷಪ್ರಧಾನ ವ್ಯವಸ್ಥೆಯ ಸವಾರಿ ಎಂಬುದನ್ನು ಮನಗಾಣಬಹುದಾಗಿದೆ. ಬ್ರಾಹ್ಮಣ ಸಮುದಾಯದೊಳಗಿನ ಹುಳುಕುಗಳನ್ನು ಸಾಹಿತ್ಯದ ಮೂಲಕ ಹೊರತಂದ ಯು.ಆರ್. ಅನಂತಮೂರ್ತಿಯವರ ಕತೆ ಕಾದಂಬರಿಗಳಂತೆ, ಚದುರಂಗರ 'ವೈಶಾಖ' ಕಾದಂಬರಿಯೂ ಮುಖ್ಯವಾದುದು. ಮಡಿ, ಶಾಸ್ತ್ರ, ಆಚಾರಗಳ ಆವರಣದೊಳಗೆ ಬ್ರಾಹ್ಮಣ ಸಮಾಜ ಕೊಳೆಯುತ್ತಿರುವುದು, ಪುರುಷಪ್ರಧಾನ ಬದುಕಿನೊಳಗೆ ಬ್ರಾಹ್ಮಣ ಮಹಿಳೆ ಸೇವಕಿಯಾಗಿ, ಶಾಸ್ತ್ರಾಚಾರಗಳಿಗೆ ಒಳಗಾಗುವ ಪ್ರಾಣಿಯಾಗಿ, ಮನೆಯಲ್ಲಿ ದುಡಿಯುವ ಆಳಾಗಿ ಹೆಣ್ಣು ಚಿತ್ರಣಗೊಂಡಿರುವುದು ಒಂದು ಮುಖವಾದರೆ, ಇತರೆ ಸಮುದಾಯಗಳಿಗಿಂತ ತಾವು ಶ್ರೇಷ್ಠ ಎಂಬುದನ್ನು ಪ್ರತಿ ಹಂತದಲ್ಲಿಯೂ ತೋರುವ ಸ್ವಭಾವ ಹಾಗೂ ತಳಸಮುದಾಯಗಳನ್ನು ತಮ್ಮ ಕೆಲಸಕಾರ್ಯಗಳಿಗೆ ಒಳಪಡಿಸಿಕೊಳ್ಳುವ ಕುತಂತ್ರ ಕಾದಂಬರಿಯಲ್ಲಿ ಚಿತ್ರಣಗೊಂಡಿದೆ.

ವೈಶಾಖ ಕಾದಂಬರಿ ಎರಡು ಹಳಿಗಳ ಮೇಲೆ ಸಾಗುವ ಬಂಡಿಯಂತೆ. ಒಂದು ಹಳಿ ತಳ ಜಾತಿಯದಾದರೆ, ಇನ್ನೊಂದು ಹಳಿ ಮೇಲ್ಜಾತಿಯದು. ಕತೆ ಸಾಗುವುದೂ ಇದೇ ರೂಪದಲ್ಲಿ. ಸಮಾಜವೆಂಬ ಬಂಡಿ ಈ ಎರಡೂ ಹಳಿಗಳ

ಮೇಲೆ ಸಾಗಬೇಕು. ಆದರೆ ಅವರೆಡೂ ಎಂದೂ ಕೂಡಬಾರದು. ಕೂಡಿದರೆ ಸಮಾಜದ ವ್ಯವಸ್ಥೆಯೇ ಹಳಿತಪ್ಪಿ ಬಿದ್ದುಬಿಡುತ್ತದೆ ಎಂಬುದನ್ನು ಶಿರಸಾವಹಿಸಿ ಪಾಲಿಸುವ ದರುಮನಹಳ್ಳಿಯ ಜನರ ಬದುಕನ್ನು ಚಿತ್ರಿಸುತ್ತಾ ಕಾದಂಬರಿ ಸೂಕ್ಷ್ಮವಾಗಿ ಚಿಂತನೆಗೊಡ್ಡುತ್ತದೆ.

ರುಕ್ಮಿಣಿ ಕನಸಿನಲ್ಲಿ ಕಾಣುವ ಚಿತ್ರಮೂಲನ ಕೋಟೆಯಲ್ಲಿ ತಾನು ಕಣ್ಮರೆಯಾಗುವ ದೃಶ್ಯದಂತೆ ಅವಳ ಅಂತ್ಯವೂ ಆದುದು ಘಟನೆಯ ಮುನ್ಸೂಚನೆಯಾಗಿದೆ. ಬ್ರಾಹ್ಮಣ ಸಮಾಜದಲ್ಲಿ ರುಕ್ಮಿಣಿ ಮಾನವೀಯ ವ್ಯಕ್ತಿತ್ವವುಳ್ಳವಳಾಗಿ ಚಿತ್ರಣಗೊಂಡಿರುವುದು ಅವಳ ಪಾತ್ರ ಓದುಗರಲ್ಲಿ ಉಳಿಯಲು ಕಾರಣ ಎನ್ನಬಹುದು. ರುಕ್ಮಿಣಿಯೊಂದಿಗಿನ ಪ್ರತಿಯೊಬ್ಬರ ಸಂಬಂಧವನ್ನು ಗಮನಿಸಿದಾಗ ಎಲ್ಲರೂ ಅವರವರ ಸ್ವಾರ್ಥಕ್ಕಾಗಿ ಅವಳನ್ನು ದುಡಿಸಿಕೊಂಡಂತೆ ಕಂಡುಬರುತ್ತದೆ; ಅವಳ ಗಂಡ ವಿಶ್ವೇಶ್ವರ ಮತ್ತು ಲಕ್ಕನ ಹೊರತಾಗಿ. ಅವಳ ತವರುಮನೆಯವರು ರುಕ್ಮಿಣಿಯು ವಿಧವೆಯಾದಾಗ ನಡೆಸಿಕೊಂಡ ರೀತಿ, ಅತ್ತಿಗೆಯ ಚುಚ್ಚುವ ಮಾತುಗಳು, ಅಣ್ಣನ ಮಗಳು ಜಾನಕಿ ಪೋಲಿ ಹುಡುಗರಿಂದ ಬಲಾತ್ಕಾರಕ್ಕೆ ಒಳಗಾದಾಗ ರುಕ್ಮಿಣಿ ವಹಿಸಿಕೊಂಡು ನಿರ್ವಹಿಸಿದ ಜವಾಬ್ದಾರಿ ಅವಳ ಘನವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಅದೇ ರುಕ್ಮಿಣಿ ಬಸುರಾಗಿದ್ದಾಳೆ ಎಂದು ತಿಳಿದಾಗ ಅತ್ತಿಗೆ, ಅಕ್ಕ, ಭಾವ ಅವಳ ಬಗ್ಗೆ ಆಡುವ ಮಾತು, ತೋರುವ ತಿರಸ್ಕಾರಭಾವ ಸಮಾಜ ಎಷ್ಟು ಅನುಕೂಲಸಿಂಧು ಎಂಬುದನ್ನು ತಿಳಿಯಪಡಿಸುತ್ತದೆ. ರುಕ್ಮಿಣಿಯಿಂದಲೇ ಅವಲಕ್ಕಿ ಮೊದಲಾದ ವಸ್ತುಗಳನ್ನು ಕೇಳಿ ಪಡೆಯುವ ಲಕ್ಷಮ್ಮ ಅವಳ ಬಗ್ಗೆ ಗುಸುಗುಸು ಮಾತನಾಡುವುದು, ವಿಧವೆಯಾಗಿ ತಲೆ ಬೋಳಿಸಿಕೊಂಡಿರುವ ಅತ್ತೆ ಸಾವಿತ್ರಿಯು ವಿಧವೆಯಾಗಿರುವ ರುಕ್ಮಿಣಿಯ ತಲೆಕೂದಲನ್ನು ರಾತ್ರಿ ಕತ್ತರಿಸಲು ಹೋಗುವುದು ಬ್ರಾಹ್ಮಣ ಸಮಾಜದ ಮಹಿಳಾಲೋಕದೊಳಗಿನ ಈರ್ಷ್ಯಾಪ್ರಪಂಚವನ್ನು ತೆರೆದುತೋರಿಸುತ್ತದೆ. ಮಾವ ಕೃಷ್ಣಶಾಸ್ತ್ರಿಗಳು ರುಕ್ಮಿಣಿಯ ತಲೆಬೋಳಿಸುವುದಕ್ಕೆ ಪ್ರತಿಭಟಿಸಿ ತನ್ನ ಬ್ರಾಹ್ಮಣ ಸಮಾಜದಿಂದ ವಿರೋಧ ಕಟ್ಟಿಕೊಂಡರೂ ಅವಳ ಮೇಲೆ ಮೋಹಗೊಂಡು ಬಲಾತ್ಕರಿಸುವುದು ಅವರ ಪೂಜೆ, ಶಾಸ್ತ್ರಗಳ ಓದು, ಮಡಿ, ಆಚಾರ ಎಲ್ಲವುಗಳಿಗೂ ಮೀರಿದ ಯಾವುದೋ ಅದಮ್ಯ ಸೆಳೆತದಿಂದಲೇ. ಗಂಡು–ಹೆಣ್ಣಿನ ಸಂಬಂಧವನ್ನು ಇತರೆ ಮಾನವ ಸಂಬಂಧ ಮತ್ತು ಜ್ಞಾನದ ಸಂಬಂಧದಿಂದ ನಿಯಂತ್ರಿಸುವಲ್ಲಿ ಉಂಟಾದ ಸೋಲು ಎಂದೇ ಭಾವಿಸುವಂತಿದೆ. ಅದುವರೆಗೂ ಮಾವಯ್ಯನ ಬಗ್ಗೆ ತುಂಬು ಗೌರವ ಇಟ್ಟುಕೊಂಡಿದ್ದ ರುಕ್ಮಿಣಿಗೆ ಅವರು ಒಮ್ಮೆ ಮಾಡಿದ ಬಲಾತ್ಕಾರ ಅವಳ ಲೈಂಗಿಕ ಒಳಗನ್ನು ಬಡಿದೆಬ್ಬಿಸಿ ಲಕ್ಕನೊಂದಿಗೆ ಕೂಡುವಂತೆ

ಮಾಡುತ್ತದೆ. ಲಕ್ಕ ಯಾವಾಗಲೂ 'ಅಮ್ಮಾವರೇ' ಎಂದೇ ಕರೆಯುತ್ತಿದ್ದವನು ರುಕ್ಮಿಣಿಯ ಬಲಾತ್ಕಾರಕ್ಕೆ ಒಳಗಾಗುತ್ತಾನೆ. ಇಲ್ಲಿ ರುಕ್ಮಿಣಿ ಮತ್ತು ಲಕ್ಕ ಇಬ್ಬರೂ ಇನ್ನೊಬ್ಬರು ಮೀಟಿದ ತಂತಿಯ ನಾದವಾಗಿಬಿಡುತ್ತಾರೆ. ಇವರಿಬ್ಬರೂ ತಪ್ಪಿತಸ್ಥರಲ್ಲದಿದ್ದರೂ ಈ ಇಬ್ಬರಿಗೇ ಶಿಕ್ಷೆಯಾಗುವುದು ಸ್ವಾರ್ಥಸಮಾಜದ ಕುರುಡುನ್ಯಾಯ ವ್ಯವಸ್ಥೆಗೆ ಸಾಕ್ಷಿಯಾಗಿದೆ. ಸಮಾಜ ಯಾವಾಗಲೂ ಅಧೀನರನ್ನೇ ಶಿಕ್ಷೆಗೆ ಒಳಗು ಮಾಡುತ್ತಿರುತ್ತದೆ. ಅದಕ್ಕೆ ನ್ಯಾಯಕ್ಕಿಂತ ನ್ಯಾಯದ ಹೆಸರಿನಲ್ಲಿ ಉಳಿದವರನ್ನು ಇಂತಹ ತಪ್ಪು ಎಸಗದಂತೆ ಎಚ್ಚರಿಸಲು ಅಧೀನರನ್ನು ಅಪರಾಧಿಗಳನ್ನಾಗಿಸಿ ಶಿಕ್ಷಿಸಲು ನೋಡುತ್ತಿರುತ್ತದೆ. ಲಕ್ಕ ದುರ್ಬಲನಲ್ಲದಿದ್ದರೂ ಜಾತಿಯ ನೆಲೆಯಿಂದ ಅಧೀನ. ರುಕ್ಮಿಣಿ ಅಸಹಾಯಕಿ ಮತ್ತು ಅಧೀನಳು. ಇಂಥವರನ್ನು ತುಳಿಯುವುದರ ಮೂಲಕ ಸಮಾಜ ಮುಂದೆಮುಂದೆ ಸಾಗಲು ಹವಣಿಸುತ್ತಿರುತ್ತದೆ.

ಚದುರಂಗರು ವೈಶಾಖ ಕಾದಂಬರಿ ಬರೆದದ್ದು 1980ರಲ್ಲಿ. ದಲಿತ–ಬಂಡಾಯ ಸಾಹಿತ್ಯ ಉಚ್ಛ್ರಾಯವಿದ್ದ ಕಾಲವದು. ದೇವನೂರ ಮಹಾದೇವ ಅವರ 'ದ್ಯಾವನೂರು' ಕಥಾ ಸಂಕಲನ 1973ರಲ್ಲಿ, 'ಒಡಲಾಳ' ನೀಳ್ಗತೆ 1978ರಲ್ಲಿ ಪ್ರಕಟವಾಗಿದ್ದ ಕಾಲವದು. ಈ ಕತೆಗಳಲ್ಲಿ ಬಳಸಿದ ಭಾಷೆ ಮೈಸೂರು ಸೀಮೆಯ ನಂಜನಗೂಡು ಭಾಷೆಯಾಗಿದ್ದು, ಇದನ್ನು ಸಾಮಾನ್ಯ ಕನ್ನಡ ಓದುಗರು ಅರ್ಥ ಮಾಡಿಕೊಳ್ಳುವುದು ಕಷ್ಟ ಎಂಬ ಅಭಿಪ್ರಾಯ ಬಂದುದ್ದುಂಟು. ಆದರೆ ದಲಿತ–ಬಂಡಾಯ ಸಾಹಿತ್ಯವು ತಳಸಮುದಾಯದಿಂದ ಬಂದ ದಲಿತ ಕವಿ/ಕತೆಗಾರರಿಂದ ತಳಸಮುದಾಯದ ಜನರು ಮಾತನಾಡುವ ಭಾಷೆಯನ್ನೇ ಸಾಹಿತ್ಯ ಭಾಷೆಯಾಗಿ ನೇರವಾಗಿ ತಂದಿದ್ದೂ ಒಂದು ಬಂಡಾಯವೇ. ಇದು ಇತರೆ ಸಮುದಾಯದ ಲೇಖಕರಿಗೆ ದಕ್ಕದ ಹಾದಿ ಎಂಬುದನ್ನು ಅನುಭವವೇದ್ಯವಾಗಿ ತಿಳಿಯಲಾಗಿತ್ತು. ಆದರೆ ಚದುರಂಗರ 'ವೈಶಾಖ' ಕಾದಂಬರಿಯನ್ನು ಓದಿದಾಗ ಇದರಲ್ಲಿ ಹೊಲೆಯರ ಲಕ್ಕನ ಸುತ್ತ ಅವ ಹಟ್ಟಿಯ ಬದುಕು ಚಿತ್ರಣವಾಗುವುದು, ಅವರ ಸಂಭಾಷಣೆ ಪೂರ್ಣವಾಗಿ ಅವರ ಸಮುದಾಯದ ಭಾಷೆಯಲ್ಲಿಯೇ ಎಂಬುದು. ಮೈಸೂರು ಸೀಮೆಯ ಹುಣಸೂರು ಭಾಗದ ಜನಭಾಷೆಯಲ್ಲಿ ಕಾದಂಬರಿ ಅಭಿವ್ಯಕ್ತಗೊಂಡಿದೆ. ಬದುಕು ಮತ್ತು ಭಾಷೆಯ ನಡುವೆ ಅವಿನಾಭಾವ ಸಂಬಂಧವಿದೆ. ಇವೆರಡನ್ನೂ ಬೇರ್ಪಡಿಸಿ ನೋಡಿದರೆ ಅದರ ಪೂರ್ಣತೆಗೆ ಧಕ್ಕೆಯಾಗುತ್ತದೆ. ಹಾಗಾಗಿಯೇ ಯಾವುದೇ ಸಮುದಾಯದ ಬದುಕು ಸಾಹಿತ್ಯದಲ್ಲಿ ಅವರ ಭಾಷೆಯಲ್ಲಿಯೇ ಅಭಿವ್ಯಕ್ತಿಗೊಳ್ಳಬೇಕು. ಇದನ್ನು ಚದುರಂಗರು ಕಾದಂಬರಿಯಲ್ಲಿ ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ದೇವನೂರ ಮಹಾದೇವರ 'ಕುಸುಮಬಾಲೆ'(1988)ಗಿಂತ ಪೂರ್ವದಲ್ಲಿಯೇ ಬಂದ 'ವೈಶಾಖ'(1980) ಕಾದಂಬರಿ ಕನ್ನಡದ ದಲಿತ ಭಾಷಿಕ ಕಾದಂಬರಿಗಳಲ್ಲಿ ಮೊದಲ ಪಂಕ್ತಿಯಲ್ಲಿ ಸೇರುವಂತಹದ್ದು ಎನ್ನಲು ಅಡ್ಡಿಯಿಲ್ಲ. ಒಂದು ಹಳ್ಳಿಯನ್ನು ಸಾಂಕೇತಿಕವಾಗಿ ತೆಗೆದುಕೊಂಡು ಅದರ ಹಿನ್ನೆಲೆಯಲ್ಲಿ ಭಾರತೀಯ ಸಮಾಜದ ಬದುಕನ್ನು ಕಟ್ಟಿಕೊಡುವ ಕನ್ನಡ ಕಾದಂಬರಿ ಪರಂಪರೆಯಲ್ಲಿ ರಾವ್ ಬಹದ್ದೂರ್ ಅವರ 'ಗ್ರಾಮಾಯಣ', ಕುವೆಂಪು ಅವರ 'ಕಾನೂರು ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು', ಶಿವರಾಮ ಕಾರಂತರ 'ಮರಳಿಮಣ್ಣಿಗೆ', ಯು.ಆರ್. ಅನಂತಮೂರ್ತಿಯವರ 'ಭಾರತೀಪುರ', ಪಿ.ಲಂಕೇಶ ಅವರ 'ಮುಸ್ಸಂಜೆಯ ಕಥಾಪ್ರಸಂಗ' ಮೊದಲಾದವುಗಳನ್ನು ಕಾಣುತ್ತೇವೆ. ಈ ಸಾಲಿನಲ್ಲಿ ಬಂದ ಚದುರಂಗರ 'ವೈಶಾಖ' ಕಾದಂಬರಿ ಭಾರತೀಯ ಸಮಾಜದ ವಾಸ್ತವತೆಯನ್ನು ಹಿಡಿದಿಡುವಲ್ಲಿ ಯಶಸ್ವಿಯಾಗಿದೆ. 'ಚಲನೆ' ಎಂಬುದನ್ನು ಕಟ್ಟಿಹಾಕಿ ತಮ್ಮತಮ್ಮ ತೆವಲುಗಳನ್ನು ತೀರಿಸಿಕೊಳ್ಳುವ ಮೇಲು ಸಮುದಾಯಗಳ ಮುಖಂಡರು ಸಮಾಜ ತಮ್ಮ ಸುತ್ತಲೂ ಗಿರ್ಕಿ ಹೊಡೆಯುವಂತೆ ರೂಪಿಸಿಕೊಂಡಿರುವುದು ಎದ್ದು ಕಾಣುತ್ತದೆ. ಸಮಾಜ ಉಳ್ಳವರಿಗೆ ತಾವು ಮೆಟ್ಟಿ ನಿಲ್ಲಲು ಪಾದುಕೆಯಾದರೆ, ಇಲ್ಲದವರಿಗೆ ತಲೆ ಮೇಲಿನ ಹೊರೆಯಾಗಿದೆ. ಇಂತಹ ವ್ಯವಸ್ಥೆಯಿಂದ ಬಿಡುಗಡೆಯಾಗುವ ಹಾದಿಗಳು ಕಾದಂಬರಿಯಲ್ಲಿ ಚಿತ್ರಣಗೊಂಡಿಲ್ಲದಿರುವುದು ಕೊರತೆಯೆನಿಸುತ್ತದೆ. ಆದರೆ ಕೊನೆಗೆ ಲಕ್ಕ ಸ್ವತಂತ್ರನಾಗಿ ಊರು ಬಿಟ್ಟು ನಾಯಿ ಬೊಡ್ಡನೊಂದಿಗೆ ಹೊರಡುವುದು(ಯಾವ ಮನುಷ್ಯನೊಂದಿಗೂ ಅಲ್ಲ ಎಂಬುದನ್ನು ಗಮನಿಸಬೇಕು) ಕಾದಂಬರಿ ಹೊಸದಿಕ್ಕಿನ ಬದುಕಿಗೆ ಮುನ್ಸೂಚನೆ ಎನಿಸುತ್ತದೆ. ಆದರೆ ರುಕ್ಮಿಣಿ ಮಾತ್ರ ನಿಗೂಢವಾಗಿ ಕಣ್ಮರೆಯಾಗುವುದು ಹೆಣ್ಣಿನ ಬಿಡುಗಡೆಯ ಹಾದಿ ಇನ್ನೂ ಸುಗಮವಿಲ್ಲ ಎಂಬುದನ್ನು ಸೂಚಿಸುತ್ತದೆ. ಚಿತ್ರಮೂಲನ ಕೋಟೆಯಲ್ಲಿ ಪ್ರತಿದಿನ ರಾತ್ರಿ ಹೆಣ್ಣಿನ ಆರ್ತಸ್ವರ ಕೇಳಿಬರುವುದು ಹೆಣ್ಣಿನ ಗೋಳಿಗೆ ಇನ್ನೂ ಬಿಡುಗಡೆ ಸಿಕ್ಕಿಲ್ಲ ಎಂಬುದರ ಸಂಕೇತವೇ ಆಗಿದೆ.

ಕನ್ನಡ ಕಾದಂಬರಿ ಪ್ರಪಂಚದಲ್ಲಿ ಚದುರಂಗರ ವೈಶಾಖ ಕಾದಂಬರಿಗೆ ವಿಶಿಷ್ಟ ಸ್ಥಾನವಿದೆ. 'ಲಕ್ಕ'ನಂತಹ ದಲಿತ ಪಾತ್ರವನ್ನು ಯಾವ ಚಳವಳಿ, ಹೋರಾಟದ ಪ್ರಭಾವ, ಪ್ರೇರಣೆಯಿಲ್ಲದೆ, ಭಾರತೀಯ ಸಮಾಜದೊಳಗೆ ದಲಿತರ ವಾಸ್ತವ ಬದುಕನ್ನು ನೈಜವಾಗಿ ಕಟ್ಟಿಕೊಡುವ ನೆಲೆಯಲ್ಲಿ ಕಾದಂಬರಿ ಗಮನ ಸೆಳೆಯುತ್ತದೆ. ಏಕೆಂದರೆ 1980ರ ದಶಕದಲ್ಲಿ ದಲಿತ–ಬಂಡಾಯ ಸಾಹಿತ್ಯ ಹೋರಾಟಗಳು ಪ್ರಚುರದಲ್ಲಿದ್ದ ಕಾಲವದು. ಇದರ ಪ್ರೇರಣೆಯಿಂದ ಬಹಳೊಷ್ಟು ಬರಹಗಾರರು ಕತೆಕಾದಂಬರಿಗಳನ್ನು

ಬರೆದರು. ಅವುಗಳಲ್ಲಿ ದಲಿತ ಪಾತ್ರಗಳನ್ನು ಚಿತ್ರಿಸುವಾಗ, ದಲಿತ ಸಮಾಜವನ್ನು ಚಿತ್ರಿಸುವಾಗ ವಾಸ್ತವತೆಗಿಂತ, ಪ್ರೇರಣಾತ್ಮಕವಾಗಿ ಚಿತ್ರಿಸಿರುವುದನ್ನು ಗಮನಿಸಿರಬಹುದು. ಆದರೆ 'ವೈಶಾಖ' ಕಾದಂಬರಿಯಲ್ಲಿ ಹಳ್ಳಿಯ ಬದುಕಿನೊಳಗಿಂದ ಹೊರಗೆ ಬದುಕುವ ದಲಿತ ಸಮುದಾಯವು ಪರರ ತೋಟಹೊಲಗಳಲ್ಲಿನ ಕೂಲಿಕಂಬಳದೊಂದಿಗೇ ಬದುಕಬೇಕು. ಸ್ವತಂತ್ರ ಬದುಕಿಗೆ ಆಸ್ಪದವಿಲ್ಲದ ವಾಸ್ತವ ಸ್ಥಿತಿಯನ್ನು ಇದು ತೋರಿಸುತ್ತದೆ. ಲಕ್ಕನ ತಂಗಿ ಸಿವುನಿ ಬ್ರಾಹ್ಮಣ ಕೇಶವಯ್ಯನೊಂದಿಗೆ ಗುಡಿಸಲಲ್ಲಿ ಮಲಗಿದ್ದನ್ನು ಕಂಡು ಉಗ್ರನಾದ ಲಕ್ಕನಿಗೆ ಅವಳು "ಏನಂದಿ?–ನಂಗೇನು ಬಂದಿತ್ತು ಕೇಡು ಅಂದ್ಯಾ?..ಇನ್ನೆನ ಬರಬೇಕಾಗಿತ್ಲ, ಅಪ್ಪಯ್ಯ?–ನೀನು ಗ್ರಾಸ್ತ, ಆ ಆರುತಿ ತಂಟೆಗೋಗಿ ಊರ ಬುಟ್ಟು ಕಡದೋದೆ. ಅವ್ವನ್ನೂ ಪಳೇಗ್‌ಮಾರಿ ತತ್ತಿಗಂಡೋಯ್ತು. ಅಯ್ಯ ಇದ್ರೂವೆ, ನಮ್ಮ ಬಾಗಕ್ಕಿಲ್ಲದಂಗೆ, ಎಲ್ಲೊ ಕುಡುದು, ಎಲ್ಲೊ ಬಿದ್ದು, ನಮ್ಮ ಗುಡ್ಲನ್ನೇ ಸೇರ್ರಾ ಇಲ್ಲ... ನಾನೊಬ್ಬಳೆ ಇಲ್ಲಿ ಈ ಕೈಕೂಸ ಮೊಡ್ಲಿಗೆ ಕಟ್ಕಂಡು ಎಂಗೆ ಬದುಕಬೇಕು?..ನನ್ನ ಎದೇಲಿ ಬ್ಯಾರೆ ಹಾಲು ಸುಂಡೋಗಿ ಮೊಗ ಗಳಿಗ್ಗೊಂದು ಸಲ ಕಜೆ ತಗೀತದೆ. ಅಂಗೂವೆ ಕೂಲಿಗೆ ವೋಯ್ತಿದ್ದಿ. ಆದರೆ ಮೊಗ ಕಜೆ ತಗೀತಿದ್ದ ನ್ವಾಡಿ, ಒಂದು ಸರ್ತಿ ಕರದೋರು ಇನ್ನೊಂದು ಸರ್ತಿ ಕಂಬಳ್ಕೆ ಕರೀತಿರ್ನಿಲ್ಲ... ಇಂಗಾಗಿ"(ಪುಟ 305) ಎಂದು ಹೇಳುವ ಮಾತು ದಲಿತರ ಅಸಹಾಯಕ ಸ್ಥಿತಿಯನ್ನು ಅನಾವರಣಗೊಳಿಸುತ್ತದೆ.

ಒಮ್ಮೆ ಮೂಗರ್ಜಿಯ ಪರಿಶೀಲನೆಗೆಂದು ದರುಮನಹಳ್ಳಿಗೆ ಬಂದ ಸಬ್‌ಇನ್‌ಸ್ಪೆಕ್ಟರ್ ಗೂಳಪ್ಪ ತಮ್ಮ ಜಾತಿಯವನು ಎಂದು ತಿಳಿದ ಲಕ್ಕ ಖುಷಿಪಟ್ಟು ಹೆಮ್ಮೆಯಿಂದ ಮಾತನಾಡಿಸಿ, "ತಾವು ತಮ್ಮ ಹೊಲಗೇರಿ ಕಡೀಕು ವಸಿ ದಯಮಾಡಿಸಬೇಕು, ಸೋಮಿ"(ಪುಟ 194) ಎಂದು ಕೈ ಜೋಡಿಸಿದಾಗ, ಗೂಳಪ್ಪ, "ನೀವು ಹೊಲಗೇರಿ ಜನ ಇನ್ನೂ ಬಲು ಕೊಳಕಾಗೇ ಇದ್ದೀರಿ... ಅಲ್ಲಿಗೆ ಬರಬೇಕಾದ್ರೆ ಮೂಗು ಮುಚ್ಚ್ಕೇ ಬರಬೇಕು"(ಪುಟ 194) ಎಂದು ಕೇವಲವಾಗಿ ಮಾತನಾಡಿ ನಕ್ಕಾಗ ಲಕ್ಕನ ಅಭಿಮಾನವೆಲ್ಲ ಕುಸಿದುಹೋಗುತ್ತದೆ. 'ನೊಂದವರ ನೋವ ನೋಯದವರೆತ್ತ ಬಲ್ಲರು' ಎಂಬುದನ್ನು ಮರೆತು ಮೇಲ್ಜಾತಿ, ಮೇಲ್ವರ್ಗದವರ ಹಾದಿ ಹಿಡಿದು ತಮ್ಮವರನ್ನೇ ಮರೆಯುವ ದಲಿತ ವಿದ್ಯಾವಂತ ವರ್ಗದವರ ವರ್ತನೆಯ ಬಗ್ಗೆ ಕಾದಂಬರಿ ಎಚ್ಚರಿಸುತ್ತದೆ. 'ಕೊಡಲಿ ಕಾವು ಕುಲಕ್ಕೆ ಮೃತ್ಯು' ಎನ್ನುವ ಹಾಗೆ ತಮ್ಮವರೇ ತಮಗೆ ಒದಗದ ಪರಿಸ್ಥಿತಿಯನ್ನು ಭಾರತೀಯ ಸಮಾಜ ಇಂದಿಗೂ ಎದುರಿಸುತ್ತಲೇ ಇರುವುದನ್ನು ಕಾಣಬಹುದು.

ಹೀಗೆ ಚದುರಂಗರ 'ವೈಶಾಖ' ಕಾದಂಬರಿ ತಳಜಾತಿ ಮತ್ತು ಮೇಲ್ಜಾತಿ ಸಮುದಾಯಗಳ ಬದುಕನ್ನು ಮುಖಾಮುಖಿಯಾಗಿಸಿ ಕಟ್ಟಿಕೊಡುವ ಅಪೂರ್ವ ಕೃತಿಯಾಗಿದೆ. ದಲಿತ ಸಮುದಾಯದ ಬದುಕನ್ನು ಅವರದೇ ಭಾಷೆಯಲ್ಲಿ ಚಿತ್ರಿಸುವುದು ಇಲ್ಲಿಯ ವಿಶೇಷ. 'ಸಹವಾಸದಂಥ ಬುದ್ಧಿ, ಆಹಾರದಂಥ ಲದ್ದಿ', 'ಕುಟುಗಲು ಮಳೆ ಬ್ಯಾಡ, ಲೊಟಗಾಲೆ ಎಡತಿ ಬ್ಯಾಡ', ಕ್ವಡಾದು ಮೂರು ಕಾಸು ಕ್ವಾಣೆ ತುಂಬ ಹಾಸು', ಇತತ್ತ ಬಾ ಅಂದ್ರೆ, ಇದ್ದದ್ನೆಲ್ಲ ಕಿತ್ತುಗಂಡರು ಅಂದಂಗಾಯ್ತು', 'ಒಂಟೊಂಟು ವಡೇರ ಗಂಟು ನಿಮ್ಮಪ್ಪನ ಕೊರಳೆಲ್ಲ ಸರಗಂಟು', ಹೂಸೋದು ತಡ ಅಂದ್ರೆ, ನಾರೋದು ತಡವೆ?', 'ಅನ್ನ ಅದೇಂತ ತಿಂದೋನು ಕೆಟ್ಟ, ಎಣ್ಣು ಅವಳೇಂತ ವೋದೋನು ಕೆಟ್ಟ' ಮೊದಲಾದ ಜನಪದರ ನಿತ್ಯಬಳಕೆಯ ಗಾದೆಮಾತುಗಳು ಕಾದಂಬರಿಯಲ್ಲಿ ಸಾಕಷ್ಟಿವೆ. ಹಾಗೆಯೇ 'ಅಕ್ರ, ಇಂಕರ ಇಂಕರಾಗಿ, ಎಕ್ಕಾಸ, ಏರಿಸಿಂಗಿ ಇಳಿಸಿಂಗಿ, ಕ್ಯಾಣ, ಕೋರೀರು, ಜಂಬರ, ದಂಥರಾಳಿ, ನಾಚಾರ್ಲು, ಪಿಚಂಡಿ ಗಂಟಾಕಿ, ಮೆಡೇಗಾರಿಕೆ, ಬವಾಳಿ ಬಂದೋನಂಗೆ, ಬವಿದ್ದನಂಗೆ ಆಡ್ತಾನೆ, ಸಿಬ್ರಿ, ಹೆಬಗ, ಹೊಳ್ಳಂಡೊಳ್ಳೆ ಆಸಾಮಿ' ಮೊದಲಾದ ಪ್ರಾದೇಶಿಕ ಪದಗಳ ಬಳಕೆ ಕಾದಂಬರಿಯಲ್ಲಿ ಯಥೇಚ್ಚವಾಗಿವೆ. ಪ್ರಗತಿಶೀಲ ಬರಹಗಾರರಾದ ಚದುರಂಗರು ನಗರ ಮಧ್ಯಮ ವರ್ಗದ ಬದುಕಿನ ತಲ್ಲಣಗಳನ್ನು ಕಟ್ಟುವ ನೆಪದಲ್ಲಿ ತತ್ವಸಿದ್ಧಾಂತಗಳನ್ನು ಹೇರುವ ಬದಲು ಗ್ರಾಮೀಣ ಬದುಕಿನ ಮೂಲ ಸಮಸ್ಯೆಗಳ ಎಳೆಗಳನ್ನು ಹಿಡಿದಡುವುದರಲ್ಲಿ ಹೆಚ್ಚು ಶ್ರಮವಹಿಸಿದ್ದಾರೆ. ಹಳ್ಳಿಯ ಜನ ಮಾತನಾಡುವ ಭಾಷೆಯ ಸೊಗಡು, ಮಾತಿನ ಮಧ್ಯಮಧ್ಯೆ ಆಡುವ ಗಾದೆಮಾತು, ಸಂಬಂಧಗಳ ನಡುವಿನ ಆಪ್ತತೆ, ಮನುಷ್ಯತ್ವವನ್ನು ಮೀರಿ ಬೆಳೆದಿರುವ ಜಾತಿಯ ದಾರ್ಢ್ಯತೆ, ಉಳ್ಳವರ ಸೌಖ್ಯಕ್ಕಾಗಿ ಸಮಾಜದಲ್ಲಾಗುವ ಪಲ್ಲಟಗಳು, ಗಂಡು–ಹೆಣ್ಣಿನ ಸಂಬಂಧದ ಅಧಮ್ಯತೆ ಮೊದಲಾದ ಲಕ್ಷಣಗಳು ಕಾದಂಬರಿಯ ಮೊದಲ ಓದಿನಲ್ಲಿಯೇ ಮನತಟ್ಟುತ್ತವೆ. 1982ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಪಾತ್ರವಾದ 'ವೈಶಾಖ' ಕಾದಂಬರಿ ನಿಜಕ್ಕೂ ಅಂತಹ ಗೌರವಕ್ಕೆ ಸಲ್ಲತಕ್ಕ ಕೃತಿಯಾಗಿದೆ.

ಆಕರ ಗ್ರಂಥ

1. ಚದುರಂಗ, ವೈಶಾಖ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006

***

ಮಹಿಳಾ ಸಂವೇದನೆಯ ಹಿನ್ನೆಲೆಯಲ್ಲಿ ‘ಎದೆಯ ಹಣತೆ’

1

ಅಭಿಜಿತ್ ಬಿ.

ಸಂಶೋಧನಾರ್ಥಿ, ಕನ್ನಡಭಾರತಿ.
ಕುವೆಂಪುವಿಶ್ವವಿದ್ಯಾನಿಲಯ, ಶಂಕರಘಟ್ಟ–577451
abhijithb736@gmail.com

ಬಾನು ಮುಷ್ತಾಕ್‌ರವರ ‘ಎದೆಯ ಹಣತೆ’ ಕೃತಿಯು ಎಲ್ಲಾ ಕಥೆಗಳು ವಾಸ್ತವಿಕ ಪ್ರಜ್ಞೆಯನ್ನು ಒಳಗೊಂಡವೆ ಹಾಗೂ ಈ ಕೃತಿಯು ಸಾಹಿತ್ಯದ ಮೆರುಗಿಗೆ ಸಾಕ್ಷಿಯಾಗಿದೆ. ಮುಷ್ತಾಕ್‌ರವರು ಮುಸ್ಲಿಂ ಸಮುದಾಯದಿಂದ ಬಂದ ಲೇಖಕಿಯಾಗಿದ್ದು ಆ ಸಮುದಾಯದ ಒಂದೊಂದು ಸಂಗತಿಗಳನ್ನು, ಒಂದೊಂದು ಕಥೆಯಲ್ಲಿ ಸೆರೆಹಿಡಿದು ವಾಸ್ತವದೆಡೆಗೆ ಮುಖ ಮಾಡುವ ಪ್ರಯತ್ನ ಮಾಡಿರುವುದು ಇಲ್ಲಿ ಗುರುತಿಸಬಹುದು. ಅಷ್ಟೇ ಅಲ್ಲದೆ ಭಾಷಾ ಶೈಲಿಯಲ್ಲಿನ ನೈಜತೆ, ಸಾಮಾಜಿಕ ಪ್ರಜ್ಞೆ, ಆರ್ಥಿಕ ಹಾಗೂ ಧಾರ್ಮಿಕ ಸ್ಥಿತಿಗತಿಗಳು ಮಹಿಳಾ ಸಂವೇದನೆಯನ್ನು ಹೊರಹಾಕುವ ಸಂಗತಿಗಳು ಅಧಿಕಾರ, ಅಧೀನತೆ, ಮೌಢ್ಯಗಳನ್ನು ಒಳಗೊಂಡಂತೆ ರಾಜಕೀಯ ಹಿತಾಸಕ್ತಿಗಳನ್ನು ಸೇರಿದಂತೆ ಹಲವಾರು ವಿಷಯಗಳನ್ನು ಒಂದೊಂದು ಕಥೆಯಲ್ಲಿ ಸೆರೆ ಹಿಡಿಯುವ ಪ್ರಯತ್ನ ಮಾಡಿರುವುದು, ಕೂಲಂಕುಶವಾಗಿ ಚರ್ಚಿಗೆ

ಒಳಪಡಿಸಿರುವುದು ಇಲ್ಲಿನ ಪ್ರತಿಯೊಂದು ಕಥೆಗಳಲ್ಲೂ ಕಂಡುಬರುತ್ತದೆ

ಈ ಹಿನ್ನೆಲೆಯಲ್ಲಿ ಎದೆಯ ಹಣತೆ ಕಥಾ ಸಂಕಲನದಲ್ಲಿ ಮುಖ್ಯವಾಗಿ 'ಎದೆಯ ಹಣತೆ' ಕಥೆಯನ್ನು ಕುರಿತಂತೆ ಚರ್ಚಿಸಬೇಕಾದ, ಅದರ ಒಳನೋಟವನ್ನು ಸೆರೆ ಹಿಡಿಯುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಎದೆಯ ಹಣತೆ ಶೀರ್ಷಿಕೆಯನ್ನು ಸ್ವಲ್ಪ ವಿಸ್ತಾರವಾಗಿ ಗ್ರಹಿಸುವುದಾದರೆ 'ಹಣತೆ ಬೆಳಗುವ ಬೆಳಕೋ ಸುಡುವ ಬೆಂಕಿಯೋ'? ಎಂಬ ಪ್ರಶ್ನೆ ಇಲ್ಲಿ ಹೆಚ್ಚು ಮುಖ್ಯವಾಗುತ್ತದೆ. ಈ ಕಥೆ ಸಾಮಾನ್ಯ ಹೆಣ್ಣು ಮಗಳೊಬ್ಬಳ ಜೀವನದ ಸ್ಥಿತಿಗತಿಯುನ್ನು ಹೊರಹಾಕುವಂತೆ ಮೇಲ್ನೋಟಕ್ಕೆಕಂಡರೂ, ಅವಳ ಆ ಸ್ಥಿತಿಗತಿಗೆ ಸಂವೇದನೆಗೆ, ಆಕೆಯ ನೋವಿಗೆ ಆಕೆಯ ಕುಟುಂಬ, ಅಲ್ಲಿನ ಸಮಾಜ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರಣಿ ಭೂತವಾಗುವ ಸಂಗತಿಗಳು ಕಥೆಯ ಮೌಲ್ಯವನ್ನು ಹೆಚ್ಚಿಸುವುದಲ್ಲದೆ, ಸಾಮಾಜಿಕ ಪ್ರಜ್ಞೆಯನ್ನು ಹುಟ್ಟು ಹಾಕುವ ಮಹೋನ್ನತ ಕಥೆಯಾಗಿ ರೂಪುಗೊಂಡಿರುವುದು ಗಮನಿಸಬಹುದು.

ಈ ಕಥೆಯ ನಾಯಕಿ 'ಮೆಹರುನ್', ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಅನ್ನೋ ಮಾತಿದೆ ಆದರೆ ಆ ಮಾತು ಎಷ್ಟು ಸರಿಯೋ ತಪ್ಪು ಎಂದು ತಿಳಿದಿಲ್ಲ, ಆದರೆ ಅದರಂತೆ ಇಲ್ಲಿನ ಮೆಹರುನ್ ಬದುಕಿನ ಚಿತ್ರಣರೂಪುಗೊಂಡಿದೆ. ಮೆಹರುನ್ ಮುಸ್ಲಿಂ ಕುಟುಂಬವೊಂದರಲ್ಲಿ ಹುಟ್ಟಿ ಬೆಳೆದ ಒಬ್ಬಳು ಹೆಣ್ಣು ಮಗಳು. ಆಕೆಯ ಮದುವೆಗೆ ಮುನ್ನ ತನ್ನ ಕುಟುಂಬಕ್ಕೆ ಆಕೆ ಪ್ರೀತಿಯ ಗಣಿ. ತಂದೆ–ತಾಯಿ, ಅಣ್ಣಂದಿರು ನೀಡುತ್ತಿದ್ದ ಪ್ರೀತಿ ಅಪಾರವಾದದ್ದೆ. ಆದರೆ, ಮದುವೆ ನಂತರ ಆಕೆಯನ್ನು ತವರು ಕಾಣುವ ರೀತಿ ಬೇರೆಯೇ.

ಮೆಹರುನ್ ಹದಿನಾರು ವರ್ಷ ಇನಾಯತ್‌ನೊಂದಿಗೆ ಸಂಸಾರವನ್ನು ಸಾಗಿಸಿದ್ದಳು. ಐದು ಮಕ್ಕಳಿಗೆ ಜನ್ಮವನ್ನು ನೀಡಿದ್ದಳು. ಮೊದಲೆಲ್ಲ ಚೆನ್ನಾಗಿಯೇ ಇದ್ದ ಬದುಕು, ತದ ನಂತರದಲ್ಲಿ ಪಡೆದತಿರುವೇ ಬೇರೆ. ಇನಾಯತ್ಗೆ ಅಪೆಂಡಿಕ್ಸ್ ಆಪರೇಷನ್ ಮಾಡುವ ಸಂದರ್ಭದಲ್ಲಿ ಅಲ್ಲಿದ್ದ ನರ್ಸ್‌ನ ಮೇಲೆ ಆತನಿಗೆ ಪ್ರೀತಿಯಾಗುತ್ತದೆ. ನಂತರ ಇನಾಯತ್ ಆಕೆಯ ಬದುಕಿಗೆ ಹಸಿರಾಗುವ ಮೂಲಕ ಮೆಹರುನ್ ಬದುಕನ್ನು ಬರುಡಾಗಿಸುತ್ತಾನೆ. ಆಕೆಯ ದೇಹವನ್ನು ತುಚ್ಚವಾಗಿ ಕಾಣುತ್ತಾನೆ. ಅವಳ ದೇಹವನ್ನು ನರ್ಸ್ ದೇಹದೊಂದಿಗೆ ಹೋಲಿಸಿ ಅವಮಾನಿಸುತ್ತಾನೆ. ಅವಳ ದೇಹದೊಂದಿಗೆ ಅವಳ ಆತ್ಮವನ್ನು ನಗ್ನಗೊಳಿಸುತ್ತಾನೆ. ಒಬ್ಬ ಗಂಡಸಿಗೆ ಇರಬೇಕಾದ ಜೀವನದ ಬದ್ಧತೆ ಆತನಲ್ಲಿ ಕಾಣುವುದಿಲ್ಲ ಊಟ, ಬಟ್ಟೆ ಕೊಟ್ಟು ನಿನ್ನನ್ನು

ನೋಡಿಕೊಳ್ಳುತ್ತಿದ್ದೇನೆ ಎಂಬ ಆತನ ಅಹಂಕಾರಯುತವಾದ ಮಾತುಗಳು ಆತ ಮನುಷ್ಯ ಸ್ವರೂಪದಲ್ಲಿರುವ ಮೃಗ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಪುರುಷಾಧಿಕಾರದ ರೂಪಕವಾಗಿ ಇನಾಯತ್ ಈ ಕಥೆಯೊಳಗೆ ಕಾಣಿಸಿಕೊಳ್ಳುತ್ತಾನೆ.

ಪ್ರಸ್ತುತದಲ್ಲಿ ಒಂದು ಸಮಾಜ ನಿರ್ಮಾಣ ಮಾಡಿರುವ ನೀತಿ, ನಿಯಮಗಳು ಹೆಂಗಸನ್ನು ಒಬ್ಬ ಗಂಡು ತನ್ನ ಅಧೀನದಲ್ಲಿರಿಸಿಕೊಳ್ಳಬೇಕು, ಆಕೆ ಆತನ ತಪ್ಪನ್ನು ಪ್ರಶ್ನಿಸಬಾರದು, ಗಂಡನೇ ಪರಮ ದೈವ ಎಂದು ತಿಳಿದು ತಲೆಬಾಗಿ ಬದುಕನ್ನು ಸಾಗಿಸಬೇಕು, ಆತನ ಎಲ್ಲಾ ತಪ್ಪುಗಳನ್ನು ಮನ್ನಿಸಬೇಕು ಎಂಬುದು ಇಂದಿಗೂ ಇದೆ. ಅದರಂತೆ ಮೆಹರುನ್ ಇಲ್ಲಿ ಕಾಣಿಸಿಕೊಳ್ಳುತ್ತಾಳೆ. ಆದರೆ ಆಕೆಗೆ ಆತನ ತಪ್ಪನ್ನು ಒಪ್ಪಿಕೊಂಡು ಬದುಕು ನಡೆಸುವ ಆಸೆ ಇಲ್ಲ ಈ ಕಾರಣಕ್ಕಾಗಿ ತನ್ನ ತವರು ನನ್ನ ನೆರವಿಗೆ ಬರಬಹುದು ಎಂದು ಹಲವಾರು ಆಕಾಂಕ್ಷೆಗಳನ್ನು ಇಟ್ಟುಕೊಂಡು ತನ್ನ ತವರಿಗೆ ಹೋಗಿ ಗಂಡ ಹಿಡಿದಿರುವ ತಪ್ಪು ದಾರಿಯ ಬಗ್ಗೆ ಪ್ರಸ್ತಾಪಿಸುತ್ತಾಳೆ. ಆದರೆ ಅಲ್ಲಿಯೂ ಆಕೆಗೆ ದೊರೆತದ್ದು ಮನೆತನದ ಮಾನ ಮರ್ಯಾದೆ ಎಂಬ ಅರಿವಿನ ಪಾಠ ಆತ ಗಂಡು ಆತ ಏನೇ ಮಾಡಿದರು ಸರಿ. ಗಂಡನಿಗೆ ತಲೆ ಬಾಗುವುದು ಸತಿಯಾದವಳ ಪರಮ ಕರ್ತವ್ಯ ಎಂಬ ತವರಿನ ವೇದಾಂತ ಆಕೆಯ ಪಾಲಿಗೆ ದೊರೆತ ಸಹಾಯವಾಗಿತ್ತು. “ಒಂಬತ್ತು ತಿಂಗಳು ಹೊಟ್ಟೆಯಲ್ಲಿಟ್ಟುಕೊಂಡು ಸಾಕಿದತಾಯಿ ‘ಬಂದೆಯಾ... ಬಾ ಮಗಳೇ’ ಅನ್ನಲಿಲ್ಲ. ತನ್ನ ಹರವಾದ ಎದೆಯ ಮೇಲೆ ಕುಣಿದು ಕುಪ್ಪಳಿಸುತ್ತಿದ್ದ ಬಾಲೆಯಿಂದ ಮುದಗೊಳ್ಳುತ್ತಿದ್ದ ತಂದೆಕಿರುನಗೆ ಬೀರಲಿಲ್ಲ. ಯಾವಾಗಲೂ ಮೈದಡವಿ ನನ್ನ ಪರಿ (ಗಂಧರ್ವಕನ್ಯೆ) ಎಂದು ಬೀಗುತ್ತಿದ್ದ ದೊಡ್ಡಣ್ಣನಾಗಲಿ, ಅವಳನ್ನು ಕಾಲೇಜಿಗೆ ಕಳಿಸಲೇಬೇಕೆಂದು ಹಠ ಹಿಡಿದಿದ್ದ ಅಮಾನ್ ಆಗಲಿ ಅವಳನ್ನು ಸ್ವಾಗತಿಸಲಿಲ್ಲ” (ಬಾನು ಮುಷ್ತಾಕ್, ಎದೆಯ ಹಣತೆ, ಪು,ಸಂ.87)

ಮೊದಲೇ ಹೇಳಿದಂತೆ ಈ ಸಮಾಜತಾನು ಹೆತ್ತು ಹೊತ್ತು ಸಾಕಿದ ಮಗಳನ್ನು ಮದುವೆಯ ನಂತರ ಕುಲದಿಂದ ಹೊರಗಿಡುವ ಅಗತ್ಯವೇನಿದೆ? ಈ ಸಮಾಜಕ್ಕೆ ಹೆದರಿ ಬದುಕು ನಡೆಸುವ ಅನಿವಾರ್ಯತೆಯಾದರೂ ಏನು? ಎಂಬುದು ಇಲ್ಲಿನ ಮತ್ತೊಂದು ಪ್ರಶ್ನೆ. ತಾಯಿ ಕೂಡ ಸಹನೆ ತಂದುಕೊ ಮಗಳೇ ಎಂಬ ಬುದ್ಧಿವಾದವನ್ನೇ ಹೇಳಿದಳು ವಿನಃ ಆಕೆಯ ಪರವಾಗಿ ಧ್ವನಿ ಎತ್ತಲಿಲ್ಲ. ಮೆಹರುನ್‌ಗೆ ತನ್ನ ಕುಟುಂಬದ ನೆರವು ಸಿಗಲಿಲ್ಲ ಮೆಹರುನ್‌ಳನ್ನು ಹಿಂತಿರುಗಿ ಮನೆಗೆ ತಂದು ಬಿಡಲು ಬಂದಿದ್ದ ಅಣ್ಣಂದಿರು ಆಕೆಯ ಗಂಡನಿಗೆ ಯಾವುದೇ ಬುದ್ಧಿಯನ್ನು ಹೇಳದೆ ಆತನನ್ನು ಗೌರವ ಪೂರ್ವಕವಾಗಿ ಯೋಗ ಕ್ಷೇಮ ವಿಚಾರಿಸಿ ಅಲ್ಲಿಂದ ಹಿಂತಿರುಗಿದ್ದರು.

ಮೆಹರ್ ತನ್ನ ತಾಯಿ ಮಾತನ್ನು ಧಿಕ್ಕರಿಸಿ ಅವರಿಂದ ತಾನೇ ತಲಾಕ್ ಪಡೆಯುತ್ತೇನೆ ಎಂಬ ನೋವಿನ ಮಾತುಗಳನ್ನು ಹೊರ ಹಾಕಿದಾಗಲು ತಾಯಿ ಹೃದಯ ಮಿಡಿಯಲಿಲ್ಲ ಕುರಾನಲ್ಲಾಗಲಿ, ಅಲ್ಲಾನಲ್ಲಾಗಲಿ ಪ್ರೀತಿ ಗೌರವ ನಿಷ್ಠೆ ಇದ್ದವರಿಗೆ ಕರುಳು ಬಳ್ಳಿಯ ನೋವು ಕಾಣಲಿಲ್ಲ. "ಮೆಹರ್ ಏನು ಮಾತಾಡ್ತಿದ್ದೀಯಾ.... ನಿಂದು ಅತಿಯಾಯ್ತು. ಏನೋ ಗಂಡ್ಸು...ಕೊಚ್ಚೆ ತುಳಿದಿದ್ದಾನೆ; ನೀರಿರೋಕಡೆ ತೊಳ್ಕೊಂಡು ಒಳಗೆ ಬರ್ತಾನೆ. ಅವನಿಗೆ ಯಾವ ಕಳಂಕನು ಇಲ್ಲ...." (ಬಾನು ಮುಷ್ತಾಕ್, ಎದೆಯ ಹಣತೆ, ಪು,ಸಂ.89.) ಹೆತ್ತತಾಯಿಯೇ ಈ ಮಾತುಗಳನ್ನು ಆಡುವುದಾದರೆ ನಮ್ಮ ಸಮಾಜ ಧಾರ್ಮಿಕವಾದ ಹಾಗೂ ಸಾಮಾಜಿಕವಾದ ಹಿತಾಸಕ್ತಿಗಳನ್ನು ಹೆಣ್ಣಿನ ಮೇಲೆ ಹೇರಿರುವ ಸಂಗತಿಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಹಾಗೂ ವಾಸ್ತವ ಅರಿತು ಇದರಿಂದ ಹೊರಬೇಕಾದ ಅನಿವಾರ್ಯತೆ ನಮಗಿದೆ.

ಈ ಕಥೆಯಲ್ಲಿ ಕಾಣಸಿಗುವ ಮತ್ತೊಂದು ಮಹತ್ವದ ಪಾತ್ರ 'ಸಲ್ಮಾ' ಈಕೆ ಮೆಹರ್‌ಳ ಹಿರಿಯ ಮಗಳು ತನ್ನ ತಾಯಿಯ ನೋವಿಗೆ ಮರುಗಿದ ಜೀವವೆಂದರೆ ಸಲ್ಮಾ ಒಬ್ಬಳೇ. ಮಾವಂದಿರು ಮನೆಗೆ ಬಂದಾಗ ಆಕೆಗೆ ಒಂದು ವಿಶ್ವಾಸವಿತ್ತು ಆದರೆ ಅವರ ವರ್ತನೆ ಮೆಹರ್‌ಗಿಂತಲೂ ಹೆಚ್ಚಿನ ದುಃಖವನ್ನು ನೀಡಿತು. ತನ್ನ ತಾಯಿ ನೋವಿನಿಂದ ಏನಾದರೂ ಮಾಡಿಕೊಳ್ಳಬಹುದು ಎಂಬ ಕಾರಣಕ್ಕೆ ಆಕೆಯ ಹೃದಯಯಾವಾಗಲೂ ಮಿಡಿಯುತ್ತಿತ್ತು ತಾಯಿ ಹೋದ ಬಂದಲ್ಲೆಲ್ಲ ಕಡೆ ಇವಳ ಕಣ್ಣು ಹರಿಯುತ್ತಿತ್ತು.

"ಮೆಹರುನ್‌ಳ ಎದೆಯ ಹಣತೆ ಆರಿ ಬಹುಕಾಲ ಕಳೆದಿತ್ತು. ತಾನು ಯಾರಿಗಾಗಿ ಬದುಕಬೇಕು? ಎಂಬ ಪ್ರಶ್ನೆ ಇಷ್ಟು ಅವಮಾನಗಳನ್ನು ಸಹಿಸಿ ಬದುಕುವ ಸಾರ್ಥಕತೆಯಾದರೂ ಏನು ಎಂಬುದು ಅವಳ ಮುಂದೆ ಇದ್ದ ಬೃಹದಾಕಾರದ ಪ್ರಶ್ನೆ" (ಬಾನು ಮುಷ್ತಾಕ್, ಎದೆಯ ಹಣತೆ, ಪು,ಸಂ.94.) ಪ್ರಶ್ನೆಗೆ ಆಕೆಗೆ ಯಾರಿಂದಲೂ ಎಲ್ಲಿಂದಲೂ ಉತ್ತರ ದೊರಕಲಿಲ್ಲ, ಈ ಕಾರಣಕ್ಕಾಗಿಯೇ ಎದೆಯ ಹಣತೆ, ಬೆಂಕಿಯೋ ಬೆಳಕೋ ಎಂಬ ಸ್ಪಷ್ಟನೆ ಬೇಕು ಎಂಬುದು ಈ ಮೊದಲಿಗೆತಾನು ಪ್ರಸ್ತಾಪಿಸಿದ್ದೇನೆ. ಮೆಹರ್ ಪಾಲಿಗೆ ಹಣತೆ ಸುಡುವ ಬೆಂಕಿಯೇ ಆಗಿತ್ತು ಆ ಬೆಂಕಿಯ ಉರಿತಾಳಲಾರದೆ ಆಕೆ ಕಂಬನಿ ಹರಿಸಿದಳು. ಅವಳಿಗೆ ಯಾವುದರ ಅಪೇಕ್ಷೆಯು ಇರಲಿಲ್ಲ. ಆಕೆಗೆ ಬದುಕು ಭಾರವಾಗಿತ್ತು. ಯಾವ ನೆನಪುಗಳು ಅವಳಲ್ಲಿ ಉಳಿದಿರಲಿಲ್ಲ ಯಾವ ಸಂಬಂಧಗಳು ಅವಳನ್ನು ಬಾಧಿಸುತ್ತಿರಲಿಲ್ಲ. ಇದೆಲ್ಲದರಿಂದ ಆಕೆ ಮುಕ್ತಿ ಪಡೆಯಲು ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾದಳು. ಎಲ್ಲವೂ

ಅವಳ ನಿರ್ಧಾರದಂತೆ ನಡೆದರೂ ಕೂಡ ಮನೆಯೊಳಗಿನ ವ್ಯವಹಾರ ಬೇರೆಯೇ ಆಗಿತ್ತು. ಆಕೆಯ ಹಸುಗೂಸು ಕಿರುಚಿಕೊಂಡಿತು. ಸಲ್ಮಾ ಮಗುವನ್ನು ಎತ್ತಿಕೊಂಡು ತಾಯಿಯನ್ನು ಹುಡುಕಾಡಿ ಬೆಂಕಿ ಇಟ್ಟುಕೊಳ್ಳುವ ಮುನ್ನ ಮೆಹರ್ ಕಾಲಿಗೆ ಬಿದ್ದು ಕಾಪಾಡಿಕೊಂಡಳು. “ಅಮ್ಮಿ.... ಅವರೊಬ್ಬರನ್ನು ಕಳೆದುಕೊಂಡ ರೋಷದಲ್ಲಿ ನಮ್ಮೆಲ್ಲರನ್ನೂ ಅವಳ ಕಾಲ ಬುಡಕ್ಕೆ ಎಸೆಯುವುದು ಸರಿಯಾ? ಅಬ್ಬಾಗೋಸ್ಕರ ಸಾಯಲು ಸಿದ್ಧಳಾಗಿರುವ ನೀನು ನಮಗಾಗಿ ಬದುಕಲು ಸಾಧ್ಯವಿಲ್ಲವೇ? ನಮ್ಮನ್ನೆಲ್ಲಾ ನೀನು ಹೇಗೆ ತಬ್ಬಲಿಗಳನ್ನಾಗಿ ಮಾಡಲು ಸಾಧ್ಯ ಅಮ್ಮಿ.... ನಮಗೆ ನೀನು ಬೇಕು....” (ಬಾನು ಮುಷ್ತಾಕ್, ಎದೆಯ ಹಣತೆ, ಪು,ಸಂ.98.) ಎಂದು ಅಂಗಲಾಚಿದ ಪರಿ, ಆ ಸ್ಪರ್ಶ ಮೆಹರ್‌ಳಿಗೆ ಗೆಳತಿಯೊಬ್ಬಳ ಸಾಂತ್ವನದಂತೆ ಕಂಡಿತು. ಈ ಸಾಂತ್ವನ ಆಕೆಯ ಪರಿಸ್ಥಿತಿಗೆ ಅವಶ್ಯಕವು ಆಗಿತ್ತು. ಮಗಳೆದುರು ಕ್ಷಮೆಯಾಚಿಸಿದಳು. ಎದೆಯ ಹಣತೆ ಆರಿ ಹೋಗಿ ಪ್ರಭಾತದ ಬೆಳಕು ಪಸರಿಸಿತು. ಈ ಬೆಳಕು ಆಕೆಯ ಬದುಕಿನ ಬೆಳಕು, ಮಕ್ಕಳಿಗಾಗಿ ಕಂಡುಕೊಂಡ ಬೆಳಕು, ತಾಯಿಯಾಗಿ ಸೃಷ್ಟಿಸಿಕೊಂಡ ಬೆಳಕು. ನಿಜಕ್ಕೂ ಈ ಬೆಳಕಿನ ಅಗತ್ಯತೆ ಮೆಹರ್‌ಳಿಗೆ ಇತ್ತು. ಕಾರಣ ಐದು ಮಕ್ಕಳ ಭವಿಷ್ಯದ ಕರ್ತವ್ಯ ಅವಳ ಮುಂದಿತ್ತು.

ಲೇಖಕಿ ಕೊನೆಗೂ ತಾಯಿಯನ್ನು ಉಳಿಸಿ ಮಕ್ಕಳ ಬದುಕಿಗೆ ಬೆಳಕು ನೀಡಿದರು ಎಂದರೆ ಅತಿಶಯೋಕ್ತಿಯೇನಲ್ಲ. ಎದೆಯ ಹಣತೆಗೆ ಮತ್ತೆ ಪ್ರಕಾಶಮಾನದ ಚೈತನ್ಯ ತುಂಬಿದರು. ಅದರಂತೆಯೇ ಈ ಸಮಾಜ ಹೆಣ್ಣನ್ನು ನೀತಿ ನಿಯಮಗಳ ಬಂಧನದಲ್ಲಿ ಇರಿಸಿದ ಸಂಗತಿಗಳನ್ನು ವಿಷಾದಕರವಾಗಿ ಪ್ರಸ್ತಾಪಿಸಿರುವುದು ಇಲ್ಲಿ ಹೆಚ್ಚು ಚರ್ಚೆಗೆ ಅವಕಾಶ ನೀಡುತ್ತದೆ. ಹಾಗೆಯೇ ವಾಸ್ತವಿಕ ಪ್ರಜ್ಞೆಯನ್ನು ಜನರಲ್ಲಿ ಹುಟ್ಟು ಹಾಕುವ ವಿಶೇಷಯುತವಾದ ಕಥೆಯಾಗಿ ಎದೆಯ ಹಣತೆಯು ಕಂಡುಬರುತ್ತದೆ.

ಆಕರ ಗ್ರಂಥ :

1. ಬಾನು ಮುಷ್ತಾಕ್, ಎದೆಯ ಹಣತೆ ಅಭಿರುಚಿ ಪ್ರಕಾಶನ, ಮೈಸೂರು. 2025

***

ಧಾರ್ಮಿಕ ಪ್ರಜ್ಞೆಯ ಹಿನ್ನಲೆಯಲ್ಲಿ 'ಬೆಂಕಿ ಮಳೆ'

1
ಕವನ ಕೆ.
ಸಂಶೋಧನಾರ್ಥಿ, ಕನ್ನಡ ಭಾರತಿ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ –577451
kavanak9353@gmail.com

ಬಾನು ಮುಷ್ತಾಕ್ ಅವರ 'ಎದೆಯ ಹಣತೆ' ಕಥಾ ಸಂಕಲನವು 2025ರಲ್ಲಿ ಬೂಕರ್ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಇಲ್ಲಿನ ಎಲ್ಲಾ ಕಥೆಗಳು ಒಂದಕ್ಕಿಂತ ಒಂದು ಭಿನ್ನವಾಗಿ ಚರ್ಚೆಗೆ ಕಾರಣವಾಗುವ, ಸಂವೇದನೆಯನ್ನು ಹೊರ ಹಾಕುವ ವಿಚಾರಗಳನ್ನು ಒಳಗೊಂಡದ್ದಾಗಿದೆ. ಇದರಲ್ಲಿ ಒಂದು ಕಥೆಯ ಆಯ್ಕೆ 'ಬೆಂಕಿ ಮಳೆ'. ಈ ಕಥೆಯು ಮುಸ್ಲಿಂ ಕುಟುಂಬವೊಂದರಲ್ಲಿ ಕಂಡು ಬರುವ ಸಾಮಾಜಿಕವಾದದ ಹಿನ್ನೆಲೆಯಲ್ಲಿ ಗೋಚರಿಸುವ ತೊಯ್ದಾಟಗಳು, ಆಸ್ತಿ ಹಂಚಿಕೆಯ ಸಂಘರ್ಷಗಳು, ಮಾನಸಿಕ ಒತ್ತಡಗಳನ್ನು ಒಂದೆಡೆ ಒಳಗೊಂಡಿದ್ದರೆ. ಇನ್ನೊಂದೆಡೆ ಸಾಮಾಜಿಕ ಘನತೆ, ಅಸ್ತಿತ್ವ, ಅಧಿಕಾರದ ಪ್ರಶ್ನೆಗಳು ಕಾರ್ಯನಿರ್ವಹಿಸುತ್ತವೆ. ಇದರೊಂದಿಗೆ ಮುಖ್ಯವಾಗಿ ಗಮನಕ್ಕೆ ಬರುವಂತದ್ದು ಹಾಗೂ ಕಾಣಿಸಿಕೊಳ್ಳುವಂತದ್ದು 'ಧಾರ್ಮಿಕವಾದ ಪ್ರಜ್ಞೆ'. ಧಾರ್ಮಿಕ

ನಂಬಿಕೆಗಳಿಗೆ ತಲೆಬಾಗುವ, ಜೀವ ಹಾಗೂ ಜೀವನಕ್ಕಿಂತ ಧರ್ಮದ ಹಿತಾಸಕ್ತಿಗಳಿಗೆ ನಿಷ್ಠೆ ತೋರುವ ಚಿತ್ರಣಗಳು ಈ ಕಥೆಯ ಮುಖ್ಯ ನೆಲೆಯಲ್ಲಿ ಗೋಚರಿಸುತ್ತವೆ. ಯಾವುದೇ ಒಂದು ಜೀವವಿಲ್ಲದ ಶವ ಮಣ್ಣು ಸೇರುವ ಅಗತ್ಯವಿದೆಯೇ ವಿನಃ ಸ್ಮಶಾನದಲ್ಲಾಗಲಿ, ಖಬರ್‌ಸ್ಥಾನ್‌ದಲ್ಲಾಗಲಿ ಮಣ್ಣಾಗಬೇಕು, ಇದರಿಂದ ಮಾತ್ರ ಸದ್ಗತಿ ಸಾಧ್ಯ ಎಂಬ ಕಲ್ಪನೆಗಳ ಹಿಂದಿರುವ ರಾಜಕೀಯ ಕಾರಣಗಳೋ ಅಥವಾ ಧಾರ್ಮಿಕ ಶ್ರದ್ಧೆಯೊ ಎಂಬ ಊಹನಾತ್ಮಕ ಚರ್ಚೆಗಳನ್ನು ಕಥೆಯೊಳಗೆ ತಂದಿರುವ ಬಾನು ಮುಷ್ತಾಕ್ ಅವರು ಏನೋ ಒಂದು ವ್ಯಂಗ್ಯ ಹಾಗೂ ವಾಸ್ತವದ ನೆಲೆಗಟ್ಟಿನಲ್ಲಿ ಕಥೆಯ ಚಿತ್ರೀಕರಣ ನೀಡಿರುವುದು ಚರ್ಚೆಗೆ ದಾರಿ ಮಾಡಿಕೊಡುತ್ತದೆ.

ಯಾವುದೇ ಧರ್ಮಗಳ ಹಾಗೂ ಅಲ್ಲಿನ ನಂಬಿಕೆಗಳ ಉಲ್ಲಂಘನೆ ಇಲ್ಲಿನ ಚರ್ಚೆಯಲ್ಲ ಆದರೂ ಒಬ್ಬ ತಂದೆ ಮಗನಿಗೆ ಕಾಯಿಲೆ ಇದ್ದರೂ ಸ್ವಂತ ತಂಗಿಯೊಬ್ಬಳು ಆಸ್ತಿಗಾಗಿ ಬೇಡಿಕೆಯನ್ನು ಮುಂದಿಟ್ಟರು, ವಿಧವೆಯಾದ ಹಿರಿಯ ತಂಗಿ 'ಸಕೀನ' ಸ್ವಾಭಿಮಾನಯುತವಾಗಿ ಸಹಾಯ ಕೇಳಿದಾಗಲೂ, ಸಾಬ್ಜಾನ್ ಮಗಳ ಮದುವೆಗಾಗಿ ಸಾಲ ಕೇಳಿದಾಗಲೂ ಬರದ ಕರುಣೆ, ಗೋಚರಿಸದ ಮಾನವೀಯತೆ ಒಬ್ಬ ಮುಸ್ಲಿಂ ಯುವಕ 'ನಿಸಾರ್' ಸ್ಮಶಾನದಲ್ಲಿ ಮಣ್ಣಾಗಿದ್ದಾನೆ ಎಂಬ ಗಾಳಿ ಸುದ್ದಿ ಕಿವಿಗೆ ಬಿದ್ದಾಗ ಮುತುವಲ್ಲಿ ಸಾಬರಿಗಾದ ಆಘಾತ, ಆಸ್ತಿ ಕೇಳಲು ಬಂದಿದ್ದ ತಂಗಿ ಜಮೀಲ ಹಾಗೂ ಅವಳ ಗಂಡ ಆಸ್ತಿ ವಿಚಾರದಿಂದ ಹಿಂದುಳಿದ ಬಗೆ, ಸಾಬ್ಜಾನ್ ಕೂಡ ಮೌನಗೊಂಡ ರೀತಿ, ನಿಸಾರ್‌ಗೆ ಸದ್ಗತಿದೊರೆಯಲೆಂದು ದೇವರಲ್ಲಿ ಮೊರೆ ಹೋದ ಜನರು, ಈ ಜೀವವಿರದ ಜೀವಕ್ಕೆ ಸದ್ಗತಿ ಬಯಸುವ ಇವರು ಕುಟುಂಬದಲ್ಲೇ ಇರುವ ಸಮಸ್ಯೆಗಳಿಗೆ ಮರುಗಲಿಲ್ಲ.

ಮುಖ್ಯವಾಗಿ ಗಮನಿಸಬೇಕಾಗಿರುವುದು ನಿಸಾರ್‌ನ ಸಾವು ಹಾಗೂ ಆತನ ಅಂತ್ಯಕ್ರಿಯೆ ಇಲ್ಲಿನ ಎಲ್ಲಾ ಜನರಿಗೆ ನೋವನ್ನು ನೀಡಿದ್ದರು ಮುತುವಲ್ಲಿ ಸಾಹೇಬರಿಗೆ ಸ್ವಲ್ಪ ಆಘಾತವಾಗಿದ್ದಿರಬಹುದು ಅದಕ್ಕಿಂತ ಹೆಚ್ಚು ಈ ಪ್ರಕರಣದಿಂದ ಸಿಗಬಹುದಾದ ಜನಪ್ರಿಯತೆ, ಬೆಂಬಲ ಅವರಿಗೆ ಅತ್ಯಂತ ಮುಖ್ಯವಾಗಿತ್ತು ಎಂಬುದು ಒಬ್ಬ ಊರಿನ ಅಥವಾ ಒಂದು ಸಮುದಾಯದ ನಾಯಕನ ಮನಸ್ಥಿತಿಯನ್ನು ಹೊರ ಹಾಕುವಂಥದ್ದು. ಘನತೆ ಗೌರವಕ್ಕಾಗಿ ಒಬ್ಬ ನಾಯಕ ಜನರೆಲ್ಲರನ್ನು ಮರಳು ಮಾಡಿತೋರಿಕೆಯ ಜೀವನವನ್ನು ನಡೆಸುವುದು ಈ ಸಂಗತಿಯಿಂದ ಕಾಣಿಸಿಕೊಳ್ಳುತ್ತದೆ. ಈ ಒಂದು ಚಿತ್ರಣ ಇಂದಿನ ಕಾಲಘಟ್ಟದಲ್ಲೂ, ವಾಸ್ತವ ಬದುಕಿನಲ್ಲೂ ಕಂಡುಬರುವ ರಾಜಕಾರಣದಲ್ಲಿ ಗುರುತಿಸಬಹುದು. ಸಾಮಾನ್ಯಜನರ ಮುಗ್ಧತೆಯನ್ನು ಬಳಸಿಕೊಂಡು

ದುರಾಡಳಿತವನ್ನು ನಡೆಸುವುದು ಈ ಮೂಲಕ ನೋಡಬಹುದು. ಅದೇನೇ ಆದರೂ ಸಹ ಈ ಕಥೆಯು ಸಾಮಾಜಿಕವಾಗಿ ಆಲೋಚನಾ ಪರವಶಕ್ಕೆ ಕೈಗನ್ನಡಿಯಾಗಿ ನಿಂತುಕೊಳ್ಳುವುದು ನಿಜಕ್ಕೂ ಸತ್ಯವೇ.

ಮುತುವಲ್ಲಿ ಸಾಹೇಬರು ನಿಸಾರ್ ವಿಷಯವನ್ನು ಜಿಲ್ಲಾಧಿಕಾರಿ ಮುಂದೆ ಇಟ್ಟಾಗ ಅವರು ಕೇಳುವ ಪ್ರಶ್ನೆಯನ್ನು ಬಾನು ಮುಷ್ತಾಕ್ ಉಲ್ಲೇಖಿಸಿರುವುದು ನಿಜಕ್ಕೂ ಅಭಿನಂದನಾರ್ಹ. "ಮತ್ತೇನು ಮುತುವಲ್ಲಿ ಸಾಹೇಬರೇ.... ನಿಮ್ಮ ಏರಿಯಾಗೆ ಬೇಕಾದ ಬೋರ್ವೆಲ್ಲಗಳ ಬಗ್ಗೆಯಾಗಲೀ, ಶಾಲೆ ರಿಪೇರಿ ಬಗ್ಗೆಯಾಗಲೀ ಅಥವಾ ಇನ್ನು ಬೇರೆಯಾವುದೇ ಕೆಲಸಗಳ ಬಗ್ಗೆಯಾಗಲೀ ನೀವು ಒಮ್ಮೆಯಾದರು ನನ್ನ ಬಳಿ ಬಂದಿಲ್ಲ" (ಬಾನು ಮುಷ್ತಾಕ್, ಎದೆಯ ಹಣತೆ, ಪು,ಸಂ.28.) ಎಂಬ ಜಿಲ್ಲಾಧಿಕಾರಿಗಳ ಪ್ರಶ್ನೆ ಮುತುವಲ್ಲಿ ಸಾಹೇಬರಿಗೆ ಮೂಕವಿಸ್ಮಿತರನ್ನಾಗಿ ಮಾಡಿಸಿತ್ತು. ಈ ಮಾತುಗಳ ಉಲ್ಲೇಖ ನಿಆಶ್ಚಿ ಇಲ್ಲಿ ಅಗತ್ಯವಾದದ್ದು ನಾಯಕನಾದವನು, ಮೂಲಭೂತವಾಗಿ ಒಂದು ಊರಿಗೆ ಅಥವಾ ಒಂದು ಕುಟುಂಬಕ್ಕೆ ಸಿಗಬೇಕಾದ ಸೌಕರ್ಯಗಳ ಬಗ್ಗೆ ಯೋಚಿಸಬೇಕೇ, ಅಭಿವೃದ್ಧಿಪಡಿಸಬೇಕೆ ಹೊರತು ಧಾರ್ಮಿಕ ಮೌಢ್ಯಗಳನ್ನು ಸಾಮಾನ್ಯ ಜನರ ತಲೆಯಲ್ಲಿ ತುಂಬಿ ಆಡಳಿತವನ್ನು ನಡೆಸುವುದು ಉತ್ತಮವಾದುದ್ದಲ್ಲ. ಜಿಲ್ಲಾಧಿಕಾರಿಯ ಮಾತುಗಳು ವ್ಯಂಗ್ಯವೇ ಆಗಿದೆ ಹಾಗೂ ವಾಸ್ತವವೂ ಆಗಿದೆ, ಅದನ್ನು ಲೇಖಕಿ ಉಲ್ಲೇಖಿಸಿರುವುದು ಪ್ರಮುಖ ಕಾಳಜಿಯಾಗಿ ಗೋಚರಿಸುತ್ತದೆ.

ಇಷ್ಟೆಲ್ಲ ಘಟನೆಗಳ ನಂತರ ಕಥೆಯ ಕೊನೆಯಲ್ಲಿ ಕಾಣಿಸಿಕೊಳ್ಳುವ ತಿರುವು ಇನ್ನಷ್ಟು ಚರ್ಚಾಸ್ಪದಕ್ಕೆ ಕಾರಣವಾಗುತ್ತದೆ ಕಾರಣ, ನಿಸಾರ್ ಅಂತ್ಯಕ್ರಿಯೆಗೆ ಒದ್ದಾಡಿ ಮಾಡಿದ ಕಾರ್ಯಗಳೆಲ್ಲ, ಯಾವುದೋ ಒಂದು ಕೊಳೆತ ಶವವನ್ನು ಸಮಾಧಿಯಿಂದ ಹೊರ ತೆಗೆದು ಖಬರ್‌ಸ್ಥಾನ್ ಕಡೆ ಹೊರಟಿದ್ದ ಶವದ ಮೆರವಣಿಗೆ ವೇಳೆ ಏರಿದ ಧ್ವನಿಯಲ್ಲಿ ತೂರಾಡುತ್ತಾ ಬಂದ ವ್ಯಕ್ತಿ ನಿಸಾರ್ ಆಗಿದ್ದ. ಆ ದೃಶ್ಯ ಮುತುವಲ್ಲಿ ಸಾಹೇಬರಲ್ಲಿ ಆತಂಕ ಹುಟ್ಟಿಸಿತ್ತು ಅವರ ಕಾಲುಗಳು ಕಂಪಿಸುತ್ತಿತ್ತು. ಅವರೊಂದಿಗೆ ನಿಸಾರ್‌ನನ್ನು ಕಂಡ ಇನ್ನು ಕೆಲವು ಜನರು ಕಂಡು ಕಾಣದಂತೆ ಪೊಲೀಸರ ಮುಂದೆ ಮುತುವಲ್ಲಿ ಸಾಹೇಬರ ಮರ್ಯಾದೆಯನ್ನು ಕಾಪಾಡಿದ್ದರು. ಖಬರ್‌ಸ್ಥಾನ್‌ದಲ್ಲಿ ಶವದಫನ್ ಕೂಡ ಆಯಿತು. ಹಾಗಿದ್ದರೆ ಆ ಶವ ಯಾರದ್ದು? ಎಂಬ ಪ್ರಶ್ನೆದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗುತ್ತದೆ. "ಹಿಂದುವಿನ ಹೆಣವೋ... ಮುಸ್ಲಿಮನ ಹೆಣವೋ... ಗುರುತಿಸಲು ಸಾಧ್ಯವಾದಷ್ಟು ಕೊಳೆತುಹೋಗಿದ್ದ ಆ ಶವ... ಇಲ್ಲೇ ಕೊಳೆಯಬೇಕೋ....

ಅಲ್ಲಿ ಕೊಳೆಯಬೇಕೋ…” (ಬಾನು ಮುಷ್ತಾಕ್, ಎದೆಯ ಹಣತೆ, ಪು,ಸಂ.30.) ಎಂಬ ಲೇಖಕಿಯ ಮಾತಿನ ಹಿಂದಿರುವ ತಾತ್ವಿಕತೆಯನ್ನು ಗ್ರಹಿಸುವುದು ಇಲ್ಲಿ ಹೆಚ್ಚು ಮುಖ್ಯವಾಗುತ್ತದೆ. ಶವವನ್ನು ದಫನ್ ಮಾಡುವ ಮೊದಲೇ ನಿಸಾರ್ ಕಣ್ಣಿಗೆ ಬಿದ್ದಿದ್ದರು ಅಧಿಕಾರದ ಘನತೆ ಗೌರವದ ಕಾರಣಕ್ಕಾಗಿ ಯಾವುದೋ ಶವದ ಪೂರ್ವಾನುಪರ ಯೋಚಿಸದೇ ಕ್ರಿಯೆ ನಡೆಸುವುದು ಎಷ್ಟು ಸರಿ. ಧಾರ್ಮಿಕ ನಂಬಿಕೆ ಯಾವುದೋ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಾದದ್ದೋ ಅಥವಾ ಎಲ್ಲಾ ಸಮುದಾಯಗಳಿಗೂ ಸೇರಿದ್ದೋ ಎಂಬ ಪ್ರಶ್ನೆಯ ಹಿನ್ನೆಲೆಯಲ್ಲಿ ಕಥೆ ಗೋಚರಗೊಳ್ಳುವುದು ಸರ್ವವನ್ನು ಕುರಿತು ಮಾತನಾಡುತ್ತದೆ. ಕೊನೆಯದಾಗಿ ಕಥೆಯಲ್ಲಿ ಕಾಣಿಸಿಕೊಳ್ಳುವ ಜಿಲ್ಲಾಧಿಕಾರಿಯ ಮಾತು ನಿಜಕ್ಕೂ ಸತ್ಯ. “ಆದರೂ ಮುತುವಲ್ಲಿ ಸಾಹೇಬರೇ… ಮಣ್ಣು ಎಲ್ಲೆಡೆಯೂ ಒಂದೇ ಅಲ್ಲವೇ…. ಮಣ್ಣಿನಲ್ಲಿ ಭೇದವೇನಿದೆ” (ಬಾನು ಮುಷ್ತಾಕ್, ಎದೆಯ ಹಣತೆ, ಪು,ಸಂ.28.) ಎಂಬ ಪ್ರಶ್ನೆ ಈ ಕಥೆಯ ಆಂತರ್ಯವನ್ನು, ಆಳದಲ್ಲಿ ಹುದುಗಿರುವ ಸತ್ಯವನ್ನು ವಾಸ್ತವ ಪ್ರಜ್ಞೆಯನ್ನು ಹೊರಹಾಕುವ ಆಶಯ ಹೊಂದಿರುವುದು ಈ ಸಮಾಜಕ್ಕೆ ಸಾಹಿತ್ಯ ಓದುಗರಿಗೆ ಮುಖ್ಯವಾಗುತ್ತದೆ.

ಆಕರ ಗ್ರಂಥ :

1. ಬಾನು ಮುಷ್ತಾಕ್, ಎದೆಯ ಹಣತೆ ಅಭಿರುಚಿ ಪ್ರಕಾಶನ, ಮೈಸೂರು. 2025

***

ಐತಿಹಾಸಿಕ ಲಾವಣಿಗಳಲ್ಲಿ ಪ್ರತಿಭಟನೆಯ ಸ್ವರೂಪ

1
ಡಾ. ಮಹಾಂತೇಶ ದುರಗಣ್ಣವರ
ಸಹಾಯಕ ಪ್ರಾಧ್ಯಾಪಕರು,
ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಕಾಲೇಜು, ರಾಣಿಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ
mahanteshnkst@gmail.com

ಕ್ರಿಸ್ತಶಕ 1600 ರ ಸುಮಾರಿಗೆ ವ್ಯಾಪಾರಕ್ಕೆಂದು ಭಾರತಕ್ಕೆ ಬಂದ ಬ್ರಿಟಿಷರು ಇಲ್ಲಿನ ಸಂಪತ್ತು, ಸಮೃದ್ಧಿಯನ್ನು ಕಂಡು ಇಲ್ಲಿಂದೇ ವಸಾಹತುಗಳನ್ನು ಸ್ಥಾಪಿಸಿಕೊಂಡು ನೆಲೆ ನಿಲ್ಲಲು ಯೋಚಿಸಿದರು. ಬ್ರಿಟಿಷರ ಈ ಯೋಜನೆಗೆ ಭಾರತದ ರಾಜಕೀಯ ಪರಿಸ್ಥಿತಿಯೂ ಪೂರಕವಾಗಿತ್ತು. ಅಂದಿನ ರಾಜ, ಮಹಾರಾಜ, ಮಾಂಡಲಿಕ, ಪಾಳೆಗಾರರು ಮೊದಲಾದವರು ತಮ್ಮ ತಮ್ಮಲ್ಲಿಯೇ ವೈಮನಸ್ಸನ್ನು ಬೆಳೆಸಿಕೊಂಡು ಪರಸ್ಪರ ದ್ವೇಷಾಸೂಯೆಗಳನ್ನು ಕಾರುತ್ತಿದ್ದರು. ಬ್ರಿಟಿಷರು ಇಂತಹ ಒಡಕನ್ನು ಉಪಯೋಗಿಸಿಕೊಂಡು ಭಾರತೀಯ ರಾಜರಲ್ಲಿ ಕಲಹಗಳಾಗುವಂತೆ ಮಾಡಿ, ನಿಧಾನವಾಗಿ ರಾಜ್ಯಗಳನ್ನು ವಶಪಡಿಸಿಕೊಂಡರು. ಹೀಗೆ ರಾಜ್ಯ ಸೂತ್ರಗಳನ್ನು ಹಿಡಿದ ಬ್ರಿಟಿಷರು (ಪ್ರಮುಖವಾದ ಅನೇಕ ಸುಧಾರಣೆಗಳನ್ನು

ಮಾಡಿದರಾದರೂ) ತಮ್ಮ ಆಡಳಿತದ ಅನುಕೂಲಕ್ಕಾಗಿ ಅನೇಕ ವಿಧಿ ನಿಷೇಧಗಳನ್ನು ಕಾಯ್ದೆ ಕಾನೂನುಗಳ ರೂಪದಲ್ಲಿ ತಂದು ಭಾರತೀಯರ ಮೇಲೆ ಹೇರ ತೊಡಗಿದರು. ಖಾಯಂ ಭೂ ಕಂದಾಯ ಪದ್ಧತಿ, ಸಹಾಯಕ ಸೈನ್ಯ ಪದ್ಧತಿ, ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ಕಾನೂನು ಮತ್ತು ನಿಶ್ಯಸ್ತ್ರೀಕರಣ ಕಾಯ್ದೆ ಮೊದಲಾದವು ಭಾರತೀಯರಿಗೆ ಮಾರಕಗಳಾದವು. ಇಂತಹ ವಿಧಿ ನಿಷೇಧಗಳು ಭಾರತೀಯರನ್ನು ಹಂತ ಹಂತವಾಗಿ ಸ್ವಾತಂತ್ರ್ಯ ವಂಚಿತರನ್ನಾಗಿ ಮಾಡತೊಡಗಿ ದಾಸ್ಯ ಮನೋಭಾವ ಮೂಡಿಸಿದವು. ಅನೇಕ ವರ್ಷಗಳು ಭಾರತೀಯರು ಇಂತಹ ದಾಸ್ಯದಲ್ಲಿಯೇ ಇದ್ದರು. ಬ್ರಿಟಿಷರ ಆಡಳಿತ ವೈಖರಿ ಭಾರತೀಯರಲ್ಲಿ ನೋವು, ನಿರಾಸೆ, ಅಪಮಾನಗಳನ್ನು ಹುಟ್ಟು ಹಾಕಿದಂತೆಲ್ಲ ದೇಶವನ್ನು ಸ್ವತಂತ್ರಗೊಳಿಸುವ, ತಮ್ಮನ್ನು ದಾಸ್ಯ ಮುಕ್ತರಾಗಿಸಿಕೊಳ್ಳುವ ಎಚ್ಚರ ಭಾರತೀಯರಲ್ಲಿ ಬೆಳೆಯತೊಡಗಿತು. ಇದು ಬೆಳೆಯತೊಡಗಿದಾಗ ಅತಿಯಾದ ಅಸಮಾಧಾನ ಸ್ಫೋಟಗೊಂಡು ದಂಗೆಯ ರೂಪದಲ್ಲಿ ಪ್ರಕಟಗೊಂಡಿತು. ಇಂತಹ ಪ್ರತಿಭಟನಾತ್ಮಕ ದಂಗೆಗಳು ದೇಶದಾದ್ಯಂತ ಅಲ್ಲಲ್ಲಿ ನಡೆಯತೊಡಗಿದವು. ಈ ದಂಗೆಗಳ ಕಥಾ ವಸ್ತುಗಳನ್ನು ಇಟ್ಟುಕೊಂಡು ಲಾವಣಿಗಳು ಜನ್ಮ ತಾಳಿದವು.

'ಲಾವಣಿ' ಎಂಬುದು ಮುಖ್ಯವಾಗಿ ಹಾಡಿನ ರೂಪದಲ್ಲಿರುವ ಒಂದು ಕಥೆ ಎಂಬುದು ಈಗಾಗಲೇ ಮನವರಿಕೆಯಾಗಿದೆ. ವಸ್ತುವನ್ನು ಆಧರಿಸಿ ಮಾಡಿಕೊಳ್ಳುವ ಒಂದು ವರ್ಗೀಕರಣದ ಪ್ರಕಾರ. ಐತಿಹಾಸಿಕ ಅಥವಾ ಚಾರಿತ್ರಿಕ ಲಾವಣಿ ಎಂಬುದು ಒಂದು ಪ್ರಮುಖ ವರ್ಗವಾಗುತ್ತದೆ. ಪೌರಾಣಿಕ, ಸಾಮಾಜಿಕ ಎಂದು ಮುಂತಾಗಿ ಇತರ ವರ್ಗಗಳಾಗಿ ಲಾವಣಿಗಳನ್ನು ವಿಂಗಡಿಸಿ ಅಧ್ಯಯನ ಮಾಡುತ್ತಾರಾದರೂ ನಮಗೆ ಪ್ರಸ್ತುತಕ್ಕೆ ಅವುಗಳ ಪ್ರಸ್ತಾಪದ ಅಗತ್ಯವಿಲ್ಲ. ಐತಿಹಾಸಿಕ ಲಾವಣಿಗಳನ್ನು ಅಧ್ಯಯನಕ್ಕೆ ಆಯ್ದುಕೊಂಡು ಅವುಗಳಲ್ಲಿ ಪ್ರತಿಭಟನೆಯ ಸ್ವರೂಪ ಯಾವ ನೆಲೆಗಟ್ಟಿನಲ್ಲಿದೆ ಎಂಬುದನ್ನು ಈ ಕೆಳಗಿನಂತೆ ನೋಡಲಾಗಿದೆ.

ಸಂಗೊಳ್ಳಿ ರಾಯಣ್ಣನ ದಂಗೆಯ ಕುರಿತು ಲಾವಣಿಯ ಈ ಹಾಡಿನಲ್ಲಿ ಹೇಳಲಾಗಿರುವ ಘಟನೆಗಳು ಬೆಳಗಾವ ಜಿಲ್ಲೆಯ ಚಾರಿತ್ರಿಕ ವೃತ್ತಾಂತಗಳಲ್ಲಿಯೇ ಶ್ರೇಷ್ಠವಾದುವು. ಎಚ್.ಜೆ. ಸ್ಟೋಕ್ಸ್ ಅವರು ಹೇಳುವಂತೆ ಜಿಲ್ಲೆಯನ್ನು ಮುಟ್ಟಿದ ಮತ್ತೊಂದು ಮುಖ್ಯ ಘಟನೆಯೆಂದರೆ ಸಂಗೊಳ್ಳಿ ರಾಯಣ್ಣನ ದಂಗೆ. ಅವನು ಸಂಗೊಳ್ಳಿಯ ತೆರಿಗೆ ಅಧಿಕಾರಿಯಾಗಿ ಕಿತ್ತೂರಿನ ದೇಸಾಯಿಯರ ಚಾಕರರಲ್ಲೊಬ್ಬನಾಗಿದ್ದ. 1824ರ ದಂಗೆಯಲ್ಲಿ ಭಾಗವಹಿಸಿದ್ದಕ್ಕೆ ಕ್ಷಮೆಯನ್ನು ಪಡೆದಿದ್ದ. ಆದರೆ ಈಗ ತನ್ನ ಅಧೀನದಲ್ಲಿದ್ದ ಭೂಮಿಯನ್ನು ಸರಕಾರ ಮುಟ್ಟುಗೋಲು

ಹಾಕಿಕೊಂಡಿದ್ದರಿಂದ ನಿರ್ವಾಹವಿಲ್ಲದೆ ಹಿಂದಕ್ಕೆ ಬಿಟ್ಟುಕೊಟ್ಟಿದ್ದರಿಂದ (ಅವನಂಥ ಇತರ ಅಪರಿಮಿತ ಅನಾವಶ್ಯಕ ತೆರಿಗೆ ಅಧಿಕಾರಿಗಳ ಮೂಲಕ ಬಂದ ಒಂದು ಅಳತೆ ಅವನ ವ್ಯವಹಾರಕ್ಕೂ ಇದ್ದದ್ದೆ) ಮತ್ತು ತನ್ನ ಹಳ್ಳಿಯ ಕುಲಕರ್ಣಿಯೊಂದಿಗಾದ ಜಗಳದಿಂದ ರೇಗಿ, ಅವನ ಸುತ್ತ ರಾಜನಿಷ್ಠೆಯಿಲ್ಲದ ಕೆಲವರನ್ನು ಸೇರಿಸಿದ. ಕಿತ್ತೂರಿನ ಗತಿಸಿದ ದೇಸಾಯಿಯಿಂದ ದತ್ತವಾಗಿ ಸ್ವೀಕರಿಸಲಾಗಿದೆ ಎಂದು ಹೇಳಲಾಗುತ್ತಿದ್ದ ಹುಡುಗನನ್ನು ಕರೆದುಕೊಂಡು ಸಂಸ್ಥಾನವನ್ನು ಪೂರ್ವಸ್ಥಿತಿಗೆ ತರುವುದನ್ನು ಒಪ್ಪಿಕೊಂಡು ಅದಕ್ಕಾಗಿ ಪಿತೂರಿಯನ್ನೇ ಪ್ರಾರಂಭಿಸಿದ.

'ಪಲ್ಲಾ' ಎಂಬ ಐದು ಸಾಲುಗಳ ಮೊದಲ ಭಾಗದಲ್ಲಿಯೇ ಇಡೀ ಲಾವಣಿಯ ಮುಖ್ಯ ವಿಚಾರ ಮತ್ತು ಪರಿಣಾಮ ಸೂತ್ರ ರೂಪದಲ್ಲಿ ಅಡಕವಾಗಿದೆ. ಸಂಗೊಳ್ಳಿಯ ರಾಯಣ್ಣನ ದಂಗೆಯನ್ನು ಅಡಗಿಸಲು ಬ್ರಿಟಿಷ್ ಸರ್ಕಾರದ ಪರ ಕಾರ್ಯಾಚರಣೆ ಮಾಡಿದವನು ಸಂಪಗಾವಿಯ ಸುಭೇದಾರ. ರಾಯಣ್ಣ ದಂಗೆ ಎದ್ದದ್ದು, ಸೈನ್ಯವನ್ನು ಕಲೆಹಾಕಿ ಬ್ರಿಟಿಷ್ ಅಧಿಕಾರಿಗಳ ಕಚೇರಿಗಳನ್ನು ಲೂಟಿ ಮಾಡಿ ವಿರಾವೇಶದಿಂದ ಹೋರಾಡಿ ವೀರ ಸ್ವರ್ಗ ಸೇರಿದ ಘಟನೆಗಳು ಪ್ರಸ್ತುತ ಲಾವಣಿಯಲ್ಲಿವೆ. ರಾಯಣ್ಣನು ಎಂಥಾ ಶೂರನೆಂದರೆ ಅವನ ಪರಾಕ್ರಮವನ್ನು ವೈರಿಗಳಾದ ಬ್ರಿಟಿಷ್ ಅಧಿಕಾರಿಗಳು ಕೂಡ ಮೆಚ್ಚಿರುತ್ತಾರೆ. ಇಂಥ ಶೂರನನ್ನು ಮೋಸದಿಂದ ಸ್ವದೇಶಿಗರೇ ಆದ ಕೆಲವರು ಸೆರೆ ಹಿಡಿದುಕೊಡುತ್ತಾರೆ. ರಾಯಣ್ಣನಿಗೆ ಗಲ್ಲು ಶಿಕ್ಷೆಯಾಗುತ್ತದೆ. ಬದುಕಿರುವಾಗ ಹೇಗೋ ಹಾಗೆಯೇ ರಾಯಣ್ಣ ಮರಣದ ನಂತರವೂ ಪ್ರಸಿದ್ಧನಾಗಿದ್ದಾನೆ. ಬ್ರಿಟಿಷರ ದರ್ಪವನ್ನು ಮುರಿಯುವಲ್ಲಿ ಅಸೀಮ ಸಾಹಸ ಮೆರೆದ ಆತ್ಮಾಭಿಮಾನಿ. ರಾಯಣ್ಣನನ್ನು ಅವನ ಸಾವಿನ ನಂತರ 'ಸಾಂಸ್ಕೃತಿಕ ವೀರ'ನನ್ನಾಗಿ ಪರಿಗಣಿಸಿ ಜನಸಾಮಾನ್ಯರು ಗೌರವಿಸುತ್ತಾ ಬಂದಿದ್ದಾರೆ. ಈ ಎಲ್ಲಾ ವಿವರಗಳು ಲಾವಣಿಯಲ್ಲಿ ಎಡೆ ಪಡೆದಿದೆ. ಅವುಗಳನ್ನು ಸವಿವರವಾಗಿ ಈ ಮುಂದಿನ ಭಾಗದಲ್ಲಿ ನೋಡಬಹುದು.

ಸಂಗೊಳ್ಳಿ ರಾಯಣ್ಣ ಕಿತ್ತೂರಿನ ದೊರೆ ಮಲ್ಲಸರ್ಜ ದೇಸಾಯಿ (ಕಿತ್ತೂರಿನ ರಾಣಿ ಚೆನ್ನಮ್ಮನ ಪತಿ)ಯ ಬಳಿ ಚಾಕರಿಯಲ್ಲಿದ್ದ. ತೆರಿಗೆ ವಸೂಲಿ ಮಾಡುವ ಕಾಯಕ ರಾಯಣ್ಣನದು. ದೇಸಾಯಿಯವರಿಗೂ ಬ್ರಿಟಿಷರಿಗೂ 1824ರಲ್ಲಿ ನಡೆದ ಹೋರಾಟದಲ್ಲಿ ರಾಯಣ್ಣ ದೇಸಾಯಿಯ ಪರ ಭಾಗವಹಿಸಿದ್ದು ಈ ಹೋರಾಟದಲ್ಲಿ ಅವನು ಬ್ರಿಟಿಷರ ಬಂಧಿಯಾಗಿದ್ದ. ನಂತರ ಕೆಲವು ಶರತ್ತುಗಳ ಮೇಲೆ ಅವನ ಬಿಡುಗಡೆಯೂ ಆಗಿತ್ತು ಎಂಬ ಕೆಲವು ಐತಿಹಾಸಿಕ ವಿಚಾರಗಳು ತಿಳಿದು ಬರುತ್ತವೆ.

ಅಲ್ಲದೆ ರಾಯಣ್ಣನಿಗೆ ಸೇರಿದ ಭೂಮಿಯನ್ನು ಕಳೆದುಕೊಂಡ ಅಸಮಾನದಲ್ಲಿ ರಾಯಣ್ಣ ಅವರನ್ನು ಒಳಗೆ ದ್ವೇಷಿಸುತ್ತಿದ್ದುದಾಗಿಯೂ ತಿಳಿಯುತ್ತದೆ. ಲಾವಣಿಯ ಆರಂಭದಲ್ಲಿ ರಾಯಣ್ಣ ಮತ್ತು ಕುಲಕರ್ಣಿ ಬಾಳಪ್ಪ ಇವರ ನಡುವೆ ನಡೆದ ಮನಸ್ತಾಪದ ಪ್ರಸ್ತಾಪವಿದೆ. ಕುಲಕರ್ಣಿ ಬಾಳಪ್ಪ ಮತ್ತು ರಾಯಣ್ಣ ಇಬ್ಬರು ಪರಸ್ಪರ ಅನ್ಯೊನ್ಯವಾಗಿ ಇದ್ದವರು. 'ಚಂದದಿಂದ ರಾಯನಾಯಕ ಹೊಂದಿಕೊಂಡು ಇದ್ದ' ಎಂಬ ಮಾತಿನಿಂದ ಇದು ಸ್ಪಷ್ಟವಾಗುತ್ತದೆ. ಹೀಗೆ ಇದ್ದ ಅವರಲ್ಲಿ ಬಾಳಪ್ಪನಿಗೆ 'ಗರ್ವ' ಬಂದು, ಗೆಳೆಯನ ಸ್ಥಾನಮಾನ, ಮಾನಾಪಮಾನಗಳನ್ನು ಲೆಕ್ಕಿಸದೆ ಒಮ್ಮೆ 'ಜಳಕ ಮಾಡು ಹೊತ್ಯಾಗ ದೋತರ ಶಳ ತಾ' ಎಂದು ಆಜ್ಞಾಪಿಸುತ್ತಾನೆ. 'ಇಷ್ಟು ಮಾತಿಗೆ ಸಿಟ್ಟ ಮಾಡಿ' ಕೊಳ್ಳುತ್ತಾನೆ ರಾಯಣ್ಣ. ಸಹಜವಾಗಿ ಮಾಡಿಕೊಂಡ ಸಿಟ್ಟನ್ನು ಬಾಳಪ್ಪ ಪ್ರಮಾದವೆಂದು ಪರಿಗಣಿಸಿದವನಂತೆ.

"ಯಾಕಲೇ ಹಳಬಾ ಜೋಕ್ಯಾಗಿದ್ದಿ
ಸೊಕ್ಕ ಬಂದಿತೇನೋ ನಿನಗ
ದಿಗರಾಡ್ತಿ ನಿಂತ ಇದರಿಗೆ"[1]

ಎಂದು ಪ್ರಶ್ನಿಸುತ್ತಾನೆ. ಬಾಳಪ್ಪನ ಮಾತಿನಲ್ಲಿ ಸ್ನೇಹ ಮರೆಯಾಗಿ ವಿಚಿತ್ರ ಗರ್ವ ಮೆರೆದಂತೆ ಕಾಣುತ್ತದೆ. ಬಾಳಣ್ಣದು ನಿಜಕ್ಕೂ ಅನುಚಿತ ವರ್ತನೆ. ಅಹಂಕಾರದ ಮೂಲದಿಂದ ಆಡಿದ ಮಾತು ರಾಯಣ್ಣನಿಗೆ ಸಹಜವಾಗಿಯೇ ಕೋಪ ತಂದಿರಬೇಕು. 'ತಾಳಿ ಸಿಟ್ಟ ಹೋಳಿ ಆಡ್ಲಿನ್ನ ಬಿಡುವೆ' ಎಂದು ಹೂಂಕರಿಸಿ; ರಾಯಣ್ಣ ಮತ್ತು ಅವನ ಸಂಗಡಿಗರು ಮಾಡಿದ ದಾಂಧಲೆ ಮತ್ತು ಅದರ ಪರಿಣಾಮ ಆ ಊರಿನ ಜನಕ್ಕೆ ಮತ್ತು ಅವರ ಸುಬೇದಾರನಿಗೆ ಆತಂಕವನ್ನೇ ಮೂಡಿಸುತ್ತದೆ. 'ಗಡಾದ ಒಳಗ ಗದ್ದಲ ಆದ ಸುದ್ದಿ ಕೇಳಿ ಸುಭೇದಾರ ಗಾಬರಿಯಾಗಿ ಎದ್ದು ಬಂದನಲ್ಲಾ' ಬಂದು ನೋಡುತ್ತಾನೆ ಅವನಿಗೆ ದಿಗಲಾಗುತ್ತದೆ.

"ಹಿತ್ತಲ ಕಾಸಿ ಸುತ್ತೇಳು ಸಮದುರ
ಮತ್ತ ನಮ್ಮ ನಾಡ ವಳಗ
ಹಿಂತಾವರು ಯಾರ್‍ಯಾರು ಬಂದಿದ್ದಿಲ್ಲ
ಎಂದು ಬೆರಗಾಗುತ್ತಾನೆ
ಲೂಟಿ ಮಾಡಿದ ಬದುಕುಯೆಲ್ಲಾ
ರವಣ ಮಾಡಿ ಹೋದರಲ್ಲ
ಈಟ ಗಡಾವಳಗ ಬಿಡಲಿಲ್ಲಾ"[2]

ಎಂಬ ಮಾತುಗಳಲ್ಲಿ ಇಡೀ ಊರೇ ಸೋರೆಗೊಳಗಾಯಿತು ಎಂಬ ವಿವರವಿದೆ. (ಊರಿಗೆ ಊರೇ ಸೋರೆಯಾಯಿತೆಂಬಲ್ಲಿ ಊರಿನ ಅಮಾಯಕರೂ ಬಲಿಯಾಗಿದ್ದಲ್ಲಿ ರಾಯಣ್ಣನ ದಂಗೆಯ ನ್ಯಾಯವನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ಬಹುಶಃ ಈ ದಂಗೆ ಬ್ರಿಟಿಷರ ಕಚೇರಿಗಳು, ಅಧಿಕಾರಿಗಳು ಅವರನ್ನು ಓಲೈಸಿಕೊಂಡಿದ್ದ ಸ್ವದೇಶಿ ಶ್ರೀಮಂತರುಗಳಿಗೆ ಸೀಮಿತವಾಗಿತ್ತೆಂಬುದೇ ಸರಿ ಅನಿಸುತ್ತದೆ.) ಊರಿನ ಲೂಟಿ ಕಂಡು ಸುಬೇದಾರ ಕೋಪಗೊಂಡು ಕುದಿದು ತನ್ನ ಮೇಲಾಧಿಕಾರಿಗಳಿಗೆ ಇದನ್ನು ವರದಿ ಮಾಡುತ್ತಾನೆ. ಯಥಾವತ್ತಾಗಿ ವರದಿ ಮಾಡಿದ ಎಂಬುದು 'ಆದ ರೀತಿ ಮಾತುಗೋಳನು ಸುಭೇಯದಾರ ಕುಂತುಕೊಂಡು ಧಾರವಾಡಕ ಬರದ ಹಾಕಿದನಲ್ಲಾ' ಎಂಬ ಮಾತಿನಿಂದ ತಿಳಿಯುತ್ತದೆ. ಮದ್ದು ಗುಂಡುಗಳು ಮುಗಿಯುವುದನ್ನೇ ಕಾಯುತ್ತಾ ಕುಳಿತಿದ್ದ ರಾಯಣ್ಣ ಮತ್ತು ಅವನ ದಂಡು 'ಗುಂಡ ಹಾಕ ಸಪ್ಪಳ ನಿಂತದ್ದು ಕಂಡು ಬರಿಗೈಯಾಗಿದ್ದ ಬ್ರಿಟಿಷರ ಯೋಧರನ್ನ ಬೆನ್ನ ಮ್ಯಾಲಿ(ಹಿಂದಿನಿಂದ) ಹೋಗಿ ಮುತ್ತಿಗೆ ಹಾಕುತ್ತದೆ. 'ಕುರಿ ವಳಗ ತೋಳ ಹೊಕ್ಕ ರೀತಿ' ಚೆಲ್ಲಾಟವಾಡುತ್ತಾನೆ ರಾಯಣ್ಣ. ಅವನ ಜೊತೆಗಾರರೇನು ಕಡಿಮೆ ಶೂರರಲ್ಲ. ಈ ಸಾಲುಗಳನ್ನು ಗಮನಿಸಿ:

"ಸುತ್ತಗಟ್ಟಿ ಕತ್ತಿ ಮಂದಿ ಎತ್ತ್ಯತ್ತೋಗಗೊಡದ ಕಡಿದಾರ
ಮುತ್ತಿಗೆ ಹಾಕ್ಯಾರೋ ದಂಡಿನ ಮ್ಯಾಲಿ
ಪಿಸ್ತೂಲ ಪಿರಂಗಿ ಹಿರದು
ಚಾಕು ಬಿಲ್ಲು ಬಾಲೆಲೊಗದು
ನಾಕು ನೂರಾ ಮಂದಿ ಕೊಂದರಲ್ಲಿ
ಕಂಡ ಮಂದಿ ಚಂಡಿ ಕೋದಾರ
ರುಂಡ ಬಿದ್ದವು ಗೊತ್ತ ಇಲ್ಲದ
ತುಂಡ ತುಂಡ ಮಾಡ್ಯಾರೊಂದೆ ಏಟ್"[3]

ಕೊಳ್ಳದಲ್ಲಿ ನೆತ್ತರು 'ಕಾಲುವೆ'ಯಾಗಿ ಹರಿಯಿತಂತೆ. ಇದು ಎಂತಹ ಭಯಂಕರ ಹೋರಾಟವೆಂದರೆ 'ಹಿಂತಾ ಶರಿ ಸೂರಿ ಆಗಿದಿಲ್ಲೋಯಲ್ಲಿ' ಎಂದು ಉದ್ಗಾರವೆತ್ತುತ್ತಾನೆ ಲಾವಣಿಕಾರ. ರಾಯಣ್ಣನ ಮುಂದಾಲೋಚನೆ, ಮಿಂಚಿನಂತೆ ತೆಗೆದುಕೊಳ್ಳುತ್ತಿದ್ದ ಸೂಕ್ತ ತೀರ್ಮಾನ ನಿಜಕ್ಕೂ ಬೆರಗು ಹುಟ್ಟಿಸುತ್ತದೆ ಮತ್ತು ರೋಮಾಂಚನಕಾರಿಯಾಗಿದೆ. ಹಲ್ಯಾಳದಲ್ಲಿ ನಡೆದ ಈ ಹೋರಾಟದಲ್ಲಿ ಜಯ ಕಂಡ ರಾಯಣ್ಣ ಮತ್ತು ಅವನ ದಂಡು ದಂಗೆಯನ್ನು ಮುಂದಿನ ಊರುಗಳಲ್ಲಿ ಮುಂದುವರಿಸುವ ನಿರ್ಧಾರ ಮಾಡುತ್ತದೆ. ಬ್ರಿಟಿಷರ ಅಧಿಪತ್ಯವಿರುವ ಎಲ್ಲಾ ಸ್ಥಳಗಳನ್ನು ಲೂಟಿ ಮಾಡುವ

ಯೋಚನೆ ಮಾಡುತ್ತಾರೆ.

"ಅದಕ್ಕೆಲೆ ಉದಯಕ ಎದ್ದು
ಹೋದ ಕಿತ್ತೂರ ತಳದ ಮ್ಯಾಲಿ
ತೇತ ಪಿರಂಗಿನ ದಂಡಿತ್ತಲ್ಲಿ
ಸೂರಿ ಮಾಡಿ ಬಿಡುವುನಂತಾರ
ಯಾರು ರಾಜ್ಯ ಆಳದಾಂಗ
ಮೀರಿ ಇರುವುನ ನಾಂವು ಲೋಕದಲ್ಲಿ"[4]

ಎಂದಿರುವ ಮಾತುಗಳನ್ನು ಗಮನಿಸಿದರೆ ಅವರು ಇಡೀ ಬ್ರಿಟಿಷ್ ಸಾಮ್ರಾಜ್ಯವನ್ನೇ ನಾಡಿನಿಂದ ತೊಲಗಿಸಿ ಬಿಡುವ ನಿರ್ಣಯ ಕೈಗೊಂಡಂತೆ ಭಾಸವಾಗುತ್ತದೆ. ಮುಂದೆ ತಮ್ಮ ಕಾರ್ಯಾಚರಣೆಯನ್ನು ಕಿತ್ತೂರಿನಲ್ಲಿ ನಡೆಸುತ್ತಾರೆ(ಕಿತ್ತೂರಿನಲ್ಲೂ ರಾಯಣ್ಣ ದಂಗೆ ನಡೆಸಿದನೆಂಬುದನ್ನು ಗಮನಿಸಿದರೆ, ಆ ಹೊತ್ತಿಗಾಗಲೇ ಮಲ್ಲಸರ್ಜ ಚನ್ನಮ್ಮರು ಗತಿಸಿ ಹೋಗಿದ್ದು, ಅದು ಬ್ರಿಟಿಷರ ಕೈವಶವಾಗಿತ್ತೆಂಬುದು ಸ್ಪಷ್ಟವಾಗುತ್ತದೆ) ರಾಯಣ್ಣನ ದಂಡು ಹಳ್ಯಾಲ, ಹನುಮಗಟ್ಟಿ, ತಳವಾಡಿ, ಅಗಸನಹಳ್ಳಿ, ಅಂಬಡಗಟ್ಟಿ, ಕಾದೋರಳ್ಳಿ, ಪುಣಚಿಕಟ್ಟಿ, ಬೆಳವಡಿ, ಸೋದಳ್ಳಿ, ಗೊದಗೇರಿ, ಬಾಳಗುಂಡ, ಇಟ್ಟಗಿ, ಬಾಗೊಡೂರು ಮೊದಲಾದ ಊರುಗಳಿಗೆ ನುಗ್ಗಿ ದಾಳಿ ಮಾಡುತ್ತದೆ. ಕಡೆಗೆ ಸಂಪಗಾಂವಿಯ ಕಛೇರಿಗೂ ನುಗ್ಗಿ ಬೆಂಕಿ ಹಚ್ಚಿ ಧ್ವಂಸ ಮಾಡಿದ್ದುದಾಗಿ ತಿಳಿಯುತ್ತದೆ. ಹೊಂಗಲದ ಮುಖಾಂತರ ಕಿತ್ತೂರಿಗೆ ಹೋಗಿ ಅಲ್ಲಿವರೆಗೆ 'ಅಂಜ ಬ್ಯಾಡ್ರಿ ಯಾವಳಿನ್ನ ಬರುತಾಳ ನೋಡುನಿಲ್ಲೆ, ಕಾವಲ ಕುಂತೈತಿ ಮಂದಿ ಹಿರದ ಕತ್ತಿ' ಎಂದು ಧೈರ್ಯ ತುಂಬುತ್ತಾನೆ ರಾಯಣ್ಣ.

"ಹಳ್ಳಕ ಹೋಗಿ ಜಳಕ ಮಾಡಿ
ಉಣ್ಣು ಯಾಳೇಕ ಹೋಗುನ"[5]

ಎಂದು ಮತ್ತೊಂದು ಸಲಹೆ ಕೊಡುತ್ತಾರೆ. ರಾಯಣ್ಣ ಅವರ ಈ ಮಾತುಗಳನ್ನು ಕೇಳುತ್ತಾನೆ (ಕೇಳಿದ ರಾಯಣ್ಣ ಮಾತುಗೋಳ). ಹಿಡಿದ ಕತ್ತಿಯನ್ನು ಕಡೆಗಿರಿಸಿ, ತೊಟ್ಟ ಚಣ್ಣ(ಚಲ್ಲಣ)ವನ್ನು ಸಡಲಿಸುವ ಸಮಯ ನೋಡಿ, ಆ ಮೂವರು ರಾಯಣ್ಣನನ್ನು 'ಒತ್ತಿ ಹಿಡಿದು' ಬಂಧಿಸುತ್ತಾರೆ. ನಿರಾಯುಧನಾದ ರಾಯಣ್ಣನನ್ನು ಸುಲಭದಲ್ಲಿ ಹಿಡಿದು 'ಹೊರಸಿನ ಮೇಲೆ ತಂದ ಹಾಕಿ ಹಿಡ್ಕೊಂಡು ಅವನ್ನ ಹೊತ್ತೊಯ್ದು ಬ್ರಿಟಿಷ್ ಅಧಿಕಾರಿಗಳಿಗೆ ಒಪ್ಪಿಸುತ್ತಾರೆ. ಆ ಅಧಿಕಾರಿ ರಾಯಣ್ಣನನ್ನು ನೋಡಿ ಅವನ ವಿಶಿಷ್ಟ ಕಳೆಗೆ ಬೆರಗಾಗಿ ನಿಲ್ಲುತ್ತಾನೆ.

"ಸರದಾರ ನೋಡಿದನ ಕಳಾ

ಧೀನ ಅಂಬು ಕೂನಾ ಸರದಾರ"[6]

ರಾಯಣ್ಣನ ಪರಾಕ್ರಮ ಕೇಳಿ ತಿಳಿದಿದ್ದ ಸರದಾರನಿಗೆ ಅವನನ್ನು ಕೊಲ್ಲುವ ಮನಸ್ಸಾಗಲಿಲ್ಲ. ಬದಲಿಗೆ ಮರುಕ ಪಡುತ್ತಾನೆ. ಇವನನ್ನು ಕೊಲ್ಲಬಾರದು ಎನ್ನುತ್ತಾನೆ. ಲಾವಣಿಯ ಈ ಮಾತುಗಳನ್ನು ಗಮನಿಸಿ:

"ಪೂರಾ ತಿಳಿದು ಇವನ ಕೊಲಬಾರದಂದ

ಮರುಗ್ಯಾವ ಇವನ ಕರುಳಾ"[7]

ತಮ್ಮವನಲ್ಲದಿದ್ದರೂ, ತಮಗೆ ಶತ್ರುವಾಗಿದ್ದರೂ ರಾಯಣ್ಣನ ಪರಾಕ್ರಮವನ್ನು ಮೆಚ್ಚುವ, ಅವನನ್ನು ಶಿಕ್ಷಿಸಬಾರದೆಂದು ಮರುಗುವ ಸರದಾರನನ್ನು ಕಂಡು ಆ ಮೂವರು ಹೌಹಾರುತ್ತಾರೆ. ಹಾಗೊಂದು ವೇಳೆ ರಾಯಣ್ಣ ಉಳಿದರೆ ನಯವಂಚಕರಾದ ತಮ್ಮನ್ನು ಜೀವ ಸಹಿತ ಉಳಿಯಗೊಡುವುದಿಲ್ಲ ಎಂಬ ಖಾತ್ರಿ ಕೂಡ ಅವರಿಗಿರುತ್ತದೆ. ಅದಕ್ಕೆಂದೆ ಅವರು:

"ನಿಷ್ಠಾದಿಂದ ಸಾಹೇಬಕ ಹೇಳ್ಯಾರಾ

ಕಷ್ಟ ತಂದು ಇಟ್ಟರಿ ನಮಗ ಬಾಳಾ"[8]

ಎನ್ನುತ್ತಾರೆ. ವೈರಿಗಳಾದರು ಬ್ರಿಟಿಷರು ತೋರಿದ ಗುಣಪಕ್ಷಪಾತ ನಿಜಕ್ಕೂ ಕ್ಷಣ ಕಾಲವಾದರೂ ಗಮನಾರ್ಹ. ಆದರೆ ನಮ್ಮವರೇ ಆದ ಆ ಮೂವರು ಬಗೆದ ದ್ರೋಹ ಮಾತ್ರ ಎಂದಿಗೂ ಮರೆಯಲಾಗದ್ದು ಮತ್ತು ಕ್ಷಮಿಸಲಾಗದ್ದು.

ರಾಯಣ್ಣನನ್ನು ಸೆರೆ ಹಿಡಿಯಲು ಅವನ ದಂಡಿನ ಕಡೆಗೆ ಗುಂಡಿನ ಮಳೆಗರೆದು ಬರಿಗೈಯಾದ ಬ್ರಿಟೀಷರ ರಿಕ್ತಾವಸ್ಥೆಯನ್ನು ಕಂಡು ಮುಂದೆ ಅವರಿಗೆ ಒದಗಬಹುದಾದ ಘೋರವನ್ನು ನೆನೆದವನಂತೆ ಲಾವಣಿಕಾರ ತೆಗೆಯುವ 'ಮುನುದಾನ ಅವರಿಗೆ ಭಗವಂತ' ಎಂಬ ಉದ್ಗಾರ ಬಹಳವೇ ಪರಿಣಾಮಕಾರಿಯಾಗಿದೆ. ಹುಡುಕುತ್ತಾ ಹೋದರೆ ಇಂತಹ ಅನೇಕ ಸಮರ್ಥ ಅಭಿವ್ಯಕ್ತಿಗಳು ಲಾವಣಿಯಲ್ಲಿ ದೊರೆಯುತ್ತಾರೆ. ರಾಯಣ್ಣನ ಮರಣಾನಂತರ ಅವನ ದಂಡಿನ ಕೆಲ ವೀರರು 'ಹಿರದ ಕತ್ತಿ ಕೈಗೆ ಹಿಡ್ಕೊಂಡು ತಿರುಗಿ ಗುಡ್ಡ ಬಿದ್ದ ಓಡ್ಯಾರ' ಎಂದು ಹೇಳಿ ಲಾವಣಿ ಒದಗಿಸುವಲ್ಲಿ ಸ್ವಾತಂತ್ರ್ಯದ ಆ ಹೋರಾಟ ನಿಲ್ಲದೆ ಮತ್ತೆ ಜೀವ ಪಡೆಯಿತೆಂಬ ಧ್ವನಿ ಅನುರಣಿತವಾಗುವುದನ್ನು ಗಮನಿಸಬಹುದು. ಯಾವುದೇ ಸೃಜನಶೀಲ ಕೃತಿಯ ನಿರ್ಮಾಣದಲ್ಲಿ ಸಾಂಸ್ಕೃತಿಕ ಅಂಶಗಳು ಎಡೆ ಪಡೆಯುತ್ತವೆ. ಕೃತಿಯಲ್ಲಿ ಸಹಜ ವಾತಾವರಣ ನಿರ್ಮಾಣಗೊಳ್ಳುವಲ್ಲಿ ಇವು ಮಹತ್ವದ ಪಾತ್ರವನ್ನು ವಹಿಸುತ್ತವೆ.

ಪ್ರಸ್ತುತ ಲಾವಣಿಯಲ್ಲಿಯೂ ಅಂತಹ ಕೆಲವು ಸಾಂಸ್ಕೃತಿಕವೆನ್ನಬಹುದಾದ ಸಂಗತಿಗಳು ಕಾಣಿಸಿಕೊಂಡಿವೆ. ದಂಗೆಗೆಂದು ಹೊರಟ ರಾಯಣ್ಣ ತನ್ನ ತಾಯಿಯ ಪಾದಕ್ಕೆ ನಮಸ್ಕರಿಸಿ ಹೊರಡುವುದು(ಮತ್ತೊಂದು ಸಂದರ್ಭದಲ್ಲಿ); ಶಿರಸಂಗಿ ಕಾಳವ್ವ, ಕಕ್ಕೇರಿ ಕರಿಯವ್ವನಂತಹ ದೇವತೆಗಳಿಗೆ ಜಯವನ್ನು ಕೊಡಿರೆಂದು ಪ್ರಾರ್ಥಿಸುವುದು; ರಾಯಣ್ಣನನ್ನು ನಂಬಿಸಲೆಂದು ಆ ಮೂವರು ವಂಚಕರು ಉಪ್ಪುಗೊಬ್ಬರ ಮುಟ್ಟಿ ಉರಿಯುವ ದೀವಿಗೆ ಮುಂದ ಭಾಷೆ ಕೊಡುವುದು; ದೇವರ ಮೇಲೆ ಆಣೆಯಿಟ್ಟು ರಾಯಣ್ಣನನ್ನು ವಿಶ್ವಾಸಕ್ಕೆ ತಂದುಕೊಳ್ಳುವ ಯತ್ನ ಮಾಡುವುದು ಮೊದಲಾದ ಪ್ರಸಂಗಗಳನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದು.

ರಾಯಣ್ಣ ಒಬ್ಬ ವೀರ ಸ್ವಾತಂತ್ರ್ಯಪ್ರೇಮಿ ಎಂಬುದನ್ನು ಹೇಳುವುದು ಲಾವಣಿಕಾರನಿಗೆ ಎಷ್ಟು ಮುಖ್ಯವೆನಿಸಿದೆಯೋ ಹಾಗೆಯೇ ಅವನನ್ನು ಒಬ್ಬ ಸಾಂಸ್ಕೃತಿಕ ವೀರನನ್ನಾಗಿ ಹೇಳುವುದೂ ಅಷ್ಟೇ ಮುಖ್ಯವೆನಿಸಿದೆ. ಆದುದರಿಂದಲೇ ಜನರು ರಾಯಣ್ಣನ ಸಮಾಧಿಯ ಬಳಿ ಮರವನ್ನು ನೆಟ್ಟು ಅದನ್ನು ಪೂಜಿಸುತ್ತಾ ರಾಯಣ್ಣನನ್ನು 'ದೈವ ಸಮಾನ'ನೆಂದು ಪರಿಗಣಿಸಿದ ಭಾವ ಶ್ರೀಮಂತಿಕೆಯನ್ನು ಪ್ರಸ್ತಾಪಿಸಿದ್ದಾನೆ. ರಾಯಣ್ಣನಂತಹ ಧೀರನು ಸ್ವಾತಂತ್ರ್ಯಪ್ರೇಮಿಯೂ, ಜನಾನುರಾಗಿಯೂ ಆದ ಮಗು ತಮಗೆ ಹುಟ್ಟಲಿ ಎಂದು ಆಶಿಸಿ ಅವನ ಸಮಾಧಿಯ ಬಳಿ ಇರುವ ಮರಕ್ಕೆ ತೊಟ್ಟಿಲ ಕಟ್ಟಿ ಪೂಜಿಸುತ್ತಾರೆ ಎಂಬ ಆಚರಣೆಯನ್ನು ಲಾವಣಿಕಾರ ಹೇಳಿದ್ದಾನೆ.

ಆದಾಯ ತೆರಿಗೆ; ಲಾವಣಿ ಹಿನ್ನೆಲೆ ಈ ಲಾವಣಿಯನ್ನು ಗಮನಿಸಿದಾಗ 1860ರ ಜುಲೈ 31 ರಿಂದ ಜಾರಿಗೆ ಬಂದ 32ನೆಯ ಕಾಯಿದೆಯ ಪ್ರಕಾರ ಆಸ್ತಿ, ಉದ್ಯೋಗ, ವ್ಯಾಪಾರ ಮತ್ತು ಕಛೇರಿಗಳ ಆದಾಯಗಳ ಮೇಲೆ ಹಾಕಿದ ಮೂಲ ಸುಂಕವನ್ನು ಕುರಿತದ್ದು. ಈ ಲಾವಣಿ 1868ರ 8ನೇಯ ಕಾಯಿದೆ ಬರುವ ತನಕ ಹಿಂದಿನ ಕಾಯಿದೆ ರದ್ದಾಗದಿದ್ದರೂ ಹಾಡಿನಲ್ಲಿ ಬರುವ ಹೇಳಿಕೆಯಿಂದ ನಮಗೆ ತಿಳಿದು ಬರುವಂತೆ ಈ ಸುಂಕ ಕೇವಲ ಎರಡು ವರ್ಷಗಳವರೆಗೆ ಮಾತ್ರ ಸಂಗ್ರಹಿತವಾಯಿತು. ನಂಬಿಕೆಯಾಗದ ಯಾವ ಅಂಶವೂ ಈ ಹಾಡಿನಲ್ಲಿಲ್ಲ. ಯಾವಾಗಲೂ ಗಮನಿಸಲ್ಪಡುತ್ತಿದ್ದ ಆದಾಯ ಮತ್ತು ಸನದು ತೆರಿಗೆಗಳ ಬಗ್ಗೆ ಇದ್ದ ಅಪಖ್ಯಾತಿ ಮತ್ತು ಸಂಶಯಗಳನ್ನು ಕುರಿತು ಈ ಹಾಡು ಉದ್ದಕ್ಕೂ ಸರಳವಾಗಿ ವಿವರಿಸುತ್ತಾ ಹೋಗುತ್ತದೆ. ಅದರಲ್ಲೂ ಭೂ-ಕಂದಾಯವನ್ನು ತೆರುತ್ತಿದ್ದ ಬೇಸಾಯಗಾರರು ಮುಖ್ಯರು. ಈ ತರಹದ ನೇರ ತೆರಿಗೆ ಅವರಿಗೆ ಹೊರೆಯಾಗಲಿ ಎಂದಾಗಲಿ, ಅಪರೂಪದ ಸಂದರ್ಭಗಳಲ್ಲಿ ರಕ್ಷಣೆಯಾಗಲಿ ಎಂದಾಗಲಿ ಅಲ್ಲ. ಆದರೆ ಹೆಚ್ಚು

ಕಡಿಮೆ ಅಂತ ತೆರಿಗೆಗಳು ಅವರ ಮೇಲೆಯೇ ಹೆಚ್ಚಾಗಿ ಬೀಳುತ್ತಿದ್ದರಿಂದ ಅದರಿಂದ ಉಂಟಾಗುತ್ತಿದ್ದ ಫಲಿತಾಂಶಗಳನ್ನು ತಡೆಯಲು ಇಂಗ್ಲಿಷ್ ಜಿಲ್ಲಾಧಿಕಾರಿಗಳ ಎಲ್ಲಾ ಪ್ರಯತ್ನಗಳನ್ನು ವಿರೋಧಿಸಲಾಗುತ್ತಿತ್ತು.

ಹಾಡಿನ ಪ್ರಮುಖ ಅಂಶಗಳು ತಿಳಿಸುವಂತೆ ಸಾಮಾನ್ಯ ಉದ್ದೇಶಗಳಿಗೆ ಶೇಕಡ ಮೂರರಂತೆಯೂ ರಸ್ತೆಗಳು, ಕಾಲುವೆಗಳು ಮತ್ತು ಇತರ ರಿಪೇರಿ ಕೆಲಸಗಳಿಗಾಗಿ ಶೇಕಡಾ ಒಂದರಂತೆಯೂ ಸುಂಕವನ್ನು ವಿಧಿಸಲಾಗುತ್ತಿತ್ತು. ರಸ್ತೆ ಮಾಡಿಸುವುದು ಮತ್ತು ಇತರ ರಿಪೇರಿ ಕೆಲಸಗಳನ್ನು ನಡೆಸುವುದು ಮುಂತಾದ ಯೋಜನೆಗಳೆಲ್ಲ ರೈತರ ಹಣವನ್ನು ಸುಲಿಯುವುದಕ್ಕಾಗಿ ಕಂದಾಯದ ಅಧಿಕಾರಿ ವಡ್ಡುತ್ತಿದ್ದ ನೆಪಗಳಾಗುತ್ತಿದ್ದವು. ಅಲ್ಲಿ ಕೆಲವು ನಿಯಮಗಳಿದ್ದವು, ವಾರ್ಷಿಕ ಆದಾಯ ಇನ್ನೂರು ರೂಪಾಯಿ(ಹೆಸರಿಗೆ ಮಾತ್ರ ಬ್ರಿಟಿಷ್ ನಾಣ್ಯದ ಇಪ್ಪತ್ತು ಪೌಂಡುಗಳು)ಗಳಿಗಿಂತ ಕಡಿಮೆ ಇದ್ದರೂ ತೆರಿಗೆ ವಿಧಿಸಲ್ಪಡಬೇಕು. ಒಟ್ಟು ಮೊತ್ತ ಕಡೆಯ ಪಕ್ಷ ಆರು ನೂರು ರೂಪಾಯಿಗಳನ್ನು ಮುಟ್ಟದಿದ್ದರೂ, ಬರಿ ಬೇಸಾಯದ ಕಸುಬುಗಳಿಂದ ಆದಾಯವಿಲ್ಲದಿದ್ದರೂ ತೆರಿಗೆ ವಿಧಿಸಲ್ಪಡಬೇಕು. ಐದುನೂರು ರೂಪಾಯಿಗಳಿಗಿಂತ ಕಡಿಮೆ ಆದಾಯಗಳಿಂದ ಶೇಕಡ ಎರಡರಷ್ಟು ಸಂಗ್ರಹಿಸಲ್ಪಡಬೇಕು ಮತ್ತು ಸಾರ್ವಜನಿಕ ಕೆಲಸಗಳಿಗೆ ಶೇಕಡ ಒಂದರಷ್ಟೂ ಇಲ್ಲ. ಜನಪ್ರಿಯ ಶೂರ 'ಹಿತ್ತಲಿ ವೀರಭದ್ರ' ದೃಶ್ಯದಲ್ಲಿ ಕಾಣಿಸಿಕೊಂಡಾಗ ಅಪೀಲು ವಿಚಾರಣೆಯ ಅಧಿಕಾರಿಗಳನ್ನುಳ್ಳ ಅಧಿಕಾರಿಯಿಂದ ಉಂಟಾದ ವಿಚಾರಗಳಿಗೆ ಉತ್ತರಿಸುತ್ತಾ ತನ್ನ ಹಳ್ಳಿಯ ಜನಗಳು ಆದಾಯಗಳಿಗನುಸಾರವಾಗಿ ಪ್ರಾಮಾಣಿಕವಾಗಿ ಐನೂರು ರೂಪಾಯಿಗಳ ಮಿತಿ ಹಾಕಿದುದ ಕಂದಾಯದ ಅಧಿಕಾರಿ ಮತ್ತು ಹಳ್ಳಿಗಳಿಗೆಲ್ಲ ಸಂತೋಷವಾಗುವಂತೆ ಇತ್ತು. ಉದಾಹರಣಗೆ ಈ 'ಪಲ್ಲ'ದ ಪದ್ಯ ಭಾಗ ಇಡೀ ಲಾವಣಿಯ ಸಾರವನ್ನು ಹಿಡಿದಿಟ್ಟಿದೆ. ಬ್ರಿಟಿಷ್ ಅಧಿಕಾರಿಗಳು ಕೊಡುತ್ತಿದ್ದ ಉಪದ್ರವ ಮತ್ತು ಅದರಿಂದ ಬಡವರಿಗೊದಗಿದ ಹೀನಸ್ಥಿತಿಯ ಚಿತ್ರಣ ಇಲ್ಲಿ ಸೂಚಿಸಲಾಗಿದೆ. ಗಮನಿಸಿ:

"ಏನು ಹೇಳಲಿ ಜನ್ಮದ ಗೋಳ
ಇಂಗ್ರಜಿ ಉಪದರ್ ಆದೀತ ಬಾಳ
ಬಡವರ ಅಳುತಾರೋ ಗಳಗಳಾ
ಮಾಡತಾರ ಚಿಂತಿ ಬಾಳ"[9]

ಗಾಡಿನ್ ಸಾಹೇಬ (ಸ್ಟೀವರ್ಟ್ ಸೈಯೆಂಟ್ ಜಾನ್ ಗೋರ್ಡನ್) ಎಂಬಾತ ಬ್ರಿಟಿಷ್ ಸರ್ಕಾರದ ವತಿಯಿಂದ(ಧಾರವಾಡ ಜಿಲ್ಲೆಯ ಆದಾಯ ತೆರಿಗೆಯ ವಿಶೇಷ

ಅಧಿಕಾರಿಯಾಗಿ ನೇಮಿಸಲ್ಪಟ್ಟು) ಬಂದವನು ಊರ ಜನರ ಮುಂದೆ ಊರಿನ ರಸ್ತೆಗಳನ್ನು ದುರಸ್ತಿ ಮಾಡುವ, ಹೊಸ ರಸ್ತೆಗಳನ್ನು ನಿರ್ಮಿಸುವ ಒಂದು ಯೋಜನೆಯನ್ನು ಇಟ್ಟ ನಿಮಗೆ ಒಳ್ಳೆಯದಾಗುವುದಕ್ಕೆ ಈ ಪ್ರಯತ್ನಗಳು ಎಂದು ಅದನ್ನು ವ್ಯಾಖ್ಯಾನಿಸಿದ.

"ಗಾಡಿನ ಸಾಹೇಬ ಹೇಳುತಾನ ತೋರಿ
ಹಸನ ಮಾಡಿಸ್ತೇನ ರಾ–ಧಾರಿ
ಇದಕ ನೀವ ಏನ ಅಂತೀರಿ
ಕೆಲಸ ನಿಮಧ ಅತಿ"[10]

'ಕೆಲಸ ನಿಮದ ಅತಿ' ಎಂದು ಸಾಹೇಬ ಹೇಳಿದರೂ ಲಾವಣಿಕಾರ ಇದನ್ನೊಂದು 'ಹುನ್ನಾರ' ಎಂದೇ ಹೇಳುತ್ತಾನೆ. ಇದು ಜನಸಾಮಾನ್ಯರಿಗೆ ಉಪಯೋಗವಾಗುವ ಯೋಜನೆ ಎಂಬುದು ಬರೀ ತೋರಿಕೆ, ನಿಜಕ್ಕೂ ಇದು ಜನರಿಂದ ದುಡ್ಡನ್ನು ದೋಚುವ ಕುತಂತ್ರ ಎಂಬ ಅರ್ಥ ಬರುವಂಥ ಮಾತುಗಳನ್ನಾಡಿದ್ದಾನೆ ಲಾವಣಿಕಾರ. ಊರಿನ ಮುಖಂಡರು ಎನಿಸಿಕೊಂಡವರಿಗೂ ಸಾಹೇಬನ ಮಾತುಗಳ ಹಿಂದಿನ ಮರ್ಮ ಅರ್ಥವಾಗಲೇ ಇಲ್ಲ. ಮುಂದೆ ಪರಿಣಾಮ ಏನಾಗಬಹುದು ಎಂದು ಊಹಿಸುವ ಕಾಳಜಿಯನ್ನು ಅವರು ಮಾಡಲಿಲ್ಲ.

"ಪಂಚರ್ ಎಲ್ಲರು ಆಧಾರಾ ಕಬೂಲಾ
ಮುಂದ್ ಹಿಂಗ್ ಆದೀತ್ ಅನ್ನುದು ತಿಳಿಲಿಲ್ಲಾ"[11]

ಅವರಿಗೆ ದುಡ್ಡಿನ ದರ್ಪವಿತ್ತು, 'ದುಡ್ಡಿನ ಗವಿಲಿ ತೆರೆದಾರ ಹಳ್ಳ ಇಲ್ಲ ಕಕಲಾತಿ' (ಕಕಲಾತಿ=ಕಕ್ಕುಲತೆ) ಎಂಬ ಮಾತುಗಳಲ್ಲಿ ಲಾವಣಿಕಾರ ಊರ ಮುಖಂಡರ ಬೇಜವಾಬ್ದಾರಿಯನ್ನು ಹುಡುಕಿದ್ದಾನೆ. ನಿಮ್ಮ ಒಳಿತಿಗಾಗಿ ಜನೋಪಯೋಗಿ ಕೆಲಸಗಳನ್ನು ನಾವು ಮಾಡುತ್ತಿರುವುದರಿಂದ ಅದಕ್ಕೆ ನಿಮ್ಮ ಸಹಾಯಬೇಕು. ಅದಕ್ಕೆ ತಗಲುವ ವೆಚ್ಚದ ಒಂದಷ್ಟು ಹಣವನ್ನು ತೆರಿಗೆ ರೂಪದಲ್ಲಿ ವಸೂಲಿ ಮಾಡುತ್ತಿದ್ದೇವೆ. ಅದನ್ನು ಕೊಡಿ ಎಂದು ಕೇಳುತ್ತಾನೆ ಸಾಹೇಬ. ಜನಸಾಮಾನ್ಯರಿಗೆ ಇದು ನುಂಗಲಾರದ ತುತ್ತು, ಕೊಡಲು ಹಣವಿಲ್ಲ; ಹಣವಿಲ್ಲವೆಂದರು ಬಿಡುವುದಿಲ್ಲ. ಸರ್ಕಾರದ ಕಾನೂನು ಇದೆ ತೆರಿಗೆ ಕೊಡಬೇಕೆಂದು, ಆದರೂ ಜನ ತಮ್ಮ ಜೀವನೋಪಾಯದ ಆಸರೆಯಾಗಿ ಇಟ್ಟುಕೊಂಡಿದ್ದ ನೂಲುವ ರಾಟಿಯಂಥ ವಸ್ತುಗಳನ್ನು ಮಾರಿ ತೆರಿಗೆ ಕೊಡುತ್ತಾರೆ.

"ಆಗ ಹಾಕಿದಾರ ಕೇಳ ಕಷ್ಟ ಪಟ್ಟಿ
ಕಠಿಣ ಬಡವರದು ತುಂಬುವುದು ಹೊಟ್ಟಿ

ಮಾರಿ ಕೊಟ್ಟಾರೋ ನೂಲುವ ರಾಟಿ”[12]

ಕೊಡಲು ಹಣವಿಲ್ಲದಿದ್ದರೂ ಹೇಗಾದರೂ ಮಾಡಿ ತೆರಿಗೆ ತೆರುವರೆಂದು ತಿಳಿದ ಬ್ರಿಟಿಷ್ ಅಧಿಕಾರಿಗಳು ಮತ್ತಷ್ಟು ತೆರಿಗೆಯನ್ನು ವಸೂಲಿ ಮಾಡಲು ವಿದ್ಯುಕ್ತರಾಗುತ್ತಾರೆ. ‘ದುಡ್ಡಿನ ಆಸೆ ಹತ್ತಿತು ಸರ್ಕಾರಕ್ಕ’ ಎನ್ನುತ್ತಾನೆ ಲಾವಣಿಕಾರ. ಚೌಕಾಶಿ ಬಾಳಾತ ದಿನದಿನಕ ಎಂಬ ಮಾತಿನಲ್ಲಿ ಬ್ರಿಟಿಷರ ಕಾಟ, ಜನಸಾಮಾನ್ಯರ ಪರದಾಟ ಎರಡು ಉಲ್ಬಳಿಸಿದ ಪ್ರಸ್ತಾಪವಿದೆ. ನೂಲುವ ರಾಟಿಯಂಥ ವಸ್ತುವನ್ನು ಮಾರಿ ಕೆಲವರು ತೆರಿಗೆ ತೆತ್ತರೆ, ಮತ್ತೆ ಕೆಲವರು ತಮ್ಮ ಕೈಲಾಗುವ ವಿಧಾನಗಳಿಂದ ತೆರಿಗೆ ಹಣ ನೀಡಿದ ಸಂಗತಿಯೂ ತಿಳಿದು ಬರುತ್ತದೆ. ಜನರು ಪರಿಪರಿಯ ಕಷ್ಟಗಳಿಗೆ ಸಿಲುಕುತ್ತಾರೆ. ‘ಕಮರಿ ಪ್ಯಾಟಿ ಮುಸಲಾಲ್’(ಮುಸಲ್ಮಾನರು) ಇದನ್ನು ಒಂದಷ್ಟು ಉಗ್ರವಾಗಿಯೇ ಪ್ರತಿಭಟಿಸುತ್ತಾರೆ. ತೆರಿಗೆಯನ್ನು ನಾವು ಕೊಡುವುದಿಲ್ಲ. ಬೇಕಾದರೆ ತಗೊಂಡ್ರಿ ದಂಡ’ ಎಂದು ಎದರುತ್ತರ ಕೊಡುತ್ತಾರೆ. ಮುಸಲ್ಮಾನರೆಲ್ಲ ಮಸೀದಿಯಲ್ಲಿ ಸೇರಿ ‘ಮಸಲತ್ತು’ ಮಾಡುತ್ತಾರೆ. ತೆರಿಗೆ ಕೊಡುವುದು ಬೇಡವೇ ಬೇಡ ಆದ್ರ ಬೇಡಿ ಹಾಕ್ಯಾರ ನಮಗ, ಮತ್ತೇನು ಮಾಡ್ಯಾರ ಇದ್ರ ಮ್ಯಾಗ? ಎಂದು ಗಟ್ಟಿ ಧೈರ್ಯ ಮಾಡುತ್ತಾರೆ. ಅವರಲ್ಲಿ ಕೆಲವರು:

“ಬಡೆ ಕಟ್ಟೈನವರೆ ದಿವಾನಾ
ಸರಕಾರ್ ಕೆ ಸಾಲ್ ಮಸ್ತಿ ನಾ ಕರ್ನಾ
ಮ ಬಾಪ್ ಕ ರಕೋ ಪಾವಾ ಪಡ್ನಾ
ಕಯಿ ತೊ ಮೇಲ್ ಆತಿ”[13]

ಸರ್ಕಾರದ ಜೊತೆ ನಾವು ಗರ್ವ ಆಡಬಾರದಪ್ಪ ಯುವಕರಿಗೆ ಉತ್ಸಾಹ ಹೆಚ್ಚು, ಬುದ್ಧಿ ಕಮ್ಮಿ. ಅವರ(ಬ್ರಿಟಿಷರ) ಜೊತೆಯಲ್ಲಿ ವಿರೋಧ ಕಟ್ಟಿಕೊಳ್ಳಬಾರದು. ಅವರನ್ನೇ ನಮ್ಮಪ್ಪ ನಮ್ಮವ್ವ ಎನ್ನುತ್ತಾ ಶರಣಾಗತರಾಗಬೇಕು ಎಂದು ಬುದ್ದಿವಾದ ಹೇಳುತ್ತಾರೆ. ಮೇಲಾಧಿಕಾರಿಗಳಿಗೆ ಅರ್ಜಿ ಕೊಡುತ್ತಾರೆ. ಸರ್ಕಾರದ ಪರವಾಗಿ ಎಲಪಾಟ್ ಸಾಹೇಬ(ಜಾನ್ ಎಲ್ಫಿನ್‌ಸ್ಟನ್, ಇವನು ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿ, ನ್ಯಾಯಾಧೀಶನಾಗಿ ಸೇವೆ ಸಲ್ಲಿಸುತ್ತಿದ್ದ) ಪರಿಸ್ಥಿತಿ ಪರಿಶೀಲನೆಗಾಗಿ ಹೋಗುತ್ತಾನೆ. ಜನರು ತಮ್ಮ ಕಷ್ಟ ದುಃಖಗಳನ್ನು ಹೇಳಿಕೊಳ್ಳುತ್ತಾರೆ. ತಮಗೆ ವಿಧಿಸಿದ ತೆರಿಗೆಯನ್ನು ಮನ್ನಾ ಮಾಡಿರಿ ಎಂದು ಕೋರಿಕೊಳ್ಳುತ್ತಾರೆ. ನುಡಿಯಲ್ಲಿ ಎಲಪಾಟ್ ಸಾಹೇಬ ಊರ ಜನರ ಅಹವಾಲನ್ನು ಕೇಳಿ ಅದಕ್ಕೊಂದು ಪರಿಹಾರ ತೋರಲು ಯತ್ನಿಸಿದ ಬಡವರ ಸ್ಥಿತಿಗತಿಗಳನ್ನು ಕಣ್ಣಾರೆ ಕಂಡ ಸಾಹೇಬನಿಗೆ ನಿಜಕ್ಕೂ ಮರುಕ ಹುಟ್ಟುತ್ತದೆ.

"ಸಾಹೇಬ ನೋಡಿದಾನ ಸೋಸಿ
ಲಗು ಮಾಡಿ ಅರ್ಜಿ ಕೊಡುತ್ತಾನ ಬರಸಿ
ಅವನ ಹೊಟ್ಯಾಗ್ ಆತ ಕಸಿವಿಸಿ
ಬೆಂಕಿ ಬಿದ್ದಾಂಗ
ಹೆಂಗಸರುಟ್ಟಂತ ಹರಕ ಪರಕ ಸೀರಿ
ನಿಂತುಕೊಂಡ ನೋಡಿದಾನ ಐಸ್ತರಿ"[14]

ಸಾಹೇಬನ ಹೊಟ್ಟೆಯಲ್ಲಿ ತಳಮಳವಾಗುತ್ತದೆ(ಸಾಹೇಬನ ಮರುಕ ನಿಜಕ್ಕೂ ಮಾನವೀಯತೆಯಿಂದ ಕೂಡಿದೆ). ಮಾನ ಮುಚ್ಚಿಕೊಳ್ಳಬೇಕಾದ ಹೆಂಗಸರು ಕೂಡ ಹರಿದ ಬಟ್ಟೆ ತೊಟ್ಟಿರುವುದನ್ನು ನೋಡಿ ಸಹಿಸಲಾಗುತ್ತಾನೆ. ತೀರ ಬಡವರು ನಿರ್ಗತಿಕರುಗಳಿಗೆ ವಿಶೇಷವಾಗಿ ಪರಿಗಣಿಸುವ ಆಲೋಚನೆ ಮಾಡುತ್ತಾನೆ. ಪ್ರತಿಯೊಬ್ಬರ ಆದಾಯ ಎಷ್ಟಿರಬಹುದು ಎಂದು ಲೆಕ್ಕ ತಿಳಿಯುತ್ತಾನೆ. 'ಹಿಟಾಳಿ ಈರಭದ್ರಪ್ಪ' ಎಂಬಾತ ಐನೂರು ರೂಪಾಯಿ ಅಂದಾಜಿಟ್ಟು ಲೆಕ್ಕ ಕೊಡುತ್ತಾನೆ. ಎಲ್ಲರೂ ಕೂಡಿ ಲೆಕ್ಕ ಮಾಡುತ್ತಾರೆ. ಆದರೆ ವಿಧಿಸಿದ ಆ ತೆರಿಗೆಯನ್ನು ಕೊಡಲು ಸಾಧ್ಯವಾಗದ ಬಡವರಿದ್ದರು. ಪ್ರಥಮಶೆಟ್ಟಿ ಮಾಪಕನೆಂಬಾತ ಬಡವರ ವರಮಾನ ಏನೂ ಇಲ್ಲ ಎಂದು ಲೆಕ್ಕ ಹೇಳುತ್ತಾನೆ. ಇದು ಬಹುಜನರಿಗೆ ಸಮ್ಮತವಾಗಿಯೂ ಕಾಣುತ್ತದೆ. ಇದನ್ನು ಒಪ್ಪಿದ ಸಾಹೇಬ ಕೂಡ ತೆರಿಗೆ ವಸೂಲಿ ನಿಲ್ಲಿಸಿದಂತೆ ಕಾಣುತ್ತದೆ.

ಹಲಗಲಿಯ ಬೇಡರು ಲಾವಣಿಯ ಹಿನ್ನೆಲೆ ಗಮನಿಸಿದಾಗ ಭಾರತದಲ್ಲಿ ಅಧಿಕಾರವನ್ನು ಹಿಡಿದಿದ್ದ ಬ್ರಿಟಿಷರು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಸಲುವಾಗಿ ಹಲವಾರು ಕಾಯ್ದೆ ಕಾನೂನುಗಳನ್ನು ತಂದದ್ದು ಸರಿಯಷ್ಟೇ ಇಂಥ ಕಾಯ್ದೆಗಳಲ್ಲಿ ನಿಶ್ಯಸ್ತ್ರೀಕರಣ ಕಾಯ್ದೆಯೂ ಒಂದು. ಈ ಕಾಯ್ದೆಯ ಪ್ರಕಾರ ಬ್ರಿಟಿಷರ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಯಾರೂ ಯಾವುದೇ ಬಗೆಯ ಆಯುಧಗಳನ್ನು ತಮ್ಮ ಬಳಿ ಇರಿಸಿಕೊಳ್ಳುವಂತಿರಲಿಲ್ಲ. ನಿಶ್ಯಸ್ತ್ರೀಕರಣ ಈ ಕಾಯ್ದೆಯನ್ನು ಬ್ರಿಟೀಷರು ಭಾರತದಲ್ಲಿ 1857ನೆಯ ಇಸ್ವಿಯಲ್ಲಿ ಜಾರಿಗೆ ತಂದರು. 1857ರಲ್ಲಿ ಭಾರತೀಯರು ಬ್ರಿಟಿಷರೊಡನೆ ನಡೆಸಿದ ಹೋರಾಟವನ್ನು ಅವರು 'ಸಿಪಾಯಿ ದಂಗೆ' ಎಂದು ಕರೆದರಾದರೂ; ಭಾರತೀಯರ ದೃಷ್ಟಿಯಲ್ಲಿ ಅದು ಸ್ವತಂತ್ರ ಹೋರಾಟವೇ ಆಗಿತ್ತು. ಈ ಹೋರಾಟಕ್ಕೂ ಮುನ್ನ ಭಾರತದಾದ್ಯಂತ ಬ್ರಿಟಿಷರ ವಿರುದ್ಧ ಸಣ್ಣಪುಟ್ಟ ಹೋರಾಟಗಳು ಬ್ರಿಟಿಷರ ಪಾಲಿಗೆ ನುಂಗಲಾರದ ತುತ್ತಾಗಿದ್ದವು. ಭಾರತೀಯರ ಆಟೋಪವನ್ನು ಹೇಗಾದರೂ ಮಾಡಿ ಬಗ್ಗು ಒಡೆಯಲೇಬೇಕೆಂದು ಆಗಾಗ ಹಲ ಕೆಲವು ಕಾಯ್ದೆಗಳನ್ನು ಹೇರ

ತೊಡಗಿದರು. ಇಂಥ ಒಂದು ಕಾಯ್ದೆಯೇ 'ನಿಶ್ಯಸ್ತ್ರೀಕರಣ ಕಾಯ್ದೆ'. ಬ್ರಿಟಿಷರು ತರುತ್ತಿದ್ದ ಕಾನೂನಿನಲ್ಲಿ ಬಹುಪಾಲು ಅವರಿಗೆ ಪ್ರಯೋಜನಕಾರಿಯಾಗುತ್ತಿದ್ದವೇ ಹೊರತು ಭಾರತೀಯರಿಗೆ ಅವುಗಳಿಂದ ಅಂತದ್ದೇನು ಪ್ರಯೋಜನವಾಗುತ್ತಿರಲಿಲ್ಲ. ಪ್ರಯೋಜನದ ಮಾತಿರಲಿ ಅವುಗಳಿಂದ ಭಾರತೀಯರಿಗೆ ಹೆಚ್ಚಾಗಿ ಆಗುತ್ತಿದ್ದುದು ತೊಂದರೆಗಳೇ ನಿಶ್ಯಸ್ತ್ರೀಕರಣ ಕಾಯ್ದೆ ಜಾರಿಗೆ ಬಂದು ಭಾರತೀಯರಲ್ಲಿ ಉಂಟುಮಾಡಿದ ಕ್ಷೋಭೆಯು ಇದಕ್ಕೆ ತಕ್ಕ ಉದಾಹರಣೆ ಶತಮಾನಗಳ ಕಾಲ ಬ್ರಿಟಿಷರ ದಾಸ್ಯದಲ್ಲಿದ್ದ ಭಾರತೀಯರಿಗೆ ಸ್ವಾತಂತ್ರದ ಮಹತ್ವ ಮನವರಿಕೆಯಾಗಿ ಅದನ್ನು ಪಡೆಯಲು ತಕ್ಕ ಸಮಯಕ್ಕಾಗಿ ಪರಿತಪಿಸುತ್ತಲೇ ಇದ್ದರು. ಭಾರತೀಯರಲ್ಲಿ ಉಂಟಾದ ಸ್ವಾತಂತ್ರ್ಯದ ಜಾಗೃತಿ ಕಂಡ ಬ್ರಿಟಿಷರು ಅದು ಹಬ್ಬದಂತೆ ತಡೆಯಲು ಯತ್ನಿಸುತ್ತಿದ್ದರು. ಅಲ್ಲಲ್ಲಿ ಆಗಾಗ ನಡೆದ ಸ್ವಾತಂತ್ರ್ಯದ ಹೋರಾಟಗಳನ್ನು 'ದಂಗೆ'ಗಳೆಂದು ಕರೆದು ಸುದ್ದಿಯಾಗದಂತೆ ನೋಡಿಕೊಳ್ಳುತ್ತಿದ್ದರು. ಆದರೂ ಈ ಹೋರಾಟ ಮುಂದುವರೆಯುತ್ತಲೇ ನಡೆಯಿತು. ಮುಂದೊಮ್ಮೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ದಾರಿಯಾಯಿತು.

ಆಯುಧ ಹೀನರಾದ ಭಾರತೀಯರನ್ನು ಸುಲಭವಾಗಿ ಹದ್ದುಬಸ್ತಿನಲ್ಲಿ ಇಡಬಹುದು ಎಂಬ ಎಣಿಕೆಯೇ ನಿಶ್ಯಸ್ತ್ರೀಕರಣದ ಹಿನ್ನೆಲೆಯಲ್ಲಿರುವುದು. ಬ್ರಿಟಿಷರು ತಮ್ಮ ಆಡಳಿತ ಅನುಕೂಲಕ್ಕಾಗಿ ಆಗಾಗ ಜಾರಿಗೆ ತರುತ್ತಿದ್ದ ಕೆಲವು ಕಾನೂನುಗಳಿಂದ ಭಾರತೀಯರು ಅತೃಪ್ತರಾಗಿ ಪ್ರತಿಭಟಿಸುತ್ತಲೇ ಇರುತ್ತಿದ್ದರು. ಇದರಿಂದ ಬ್ರಿಟಿಷರಿಗೂ ಹೋರಾಟಗಳು ನಡೆಯುತ್ತಿದ್ದವು. ಶಸ್ತ್ರ ಸಜ್ಜಿತರಾದ ಭಾರತೀಯರನ್ನು ಎದುರಿಸುವುದು ಬ್ರಿಟಿಷರಿಗೆ ತುಸು ತೊಡಕಿನ ಪ್ರಮೇಯವೇ ಆಗಿತ್ತು. ಇದಕ್ಕೆ ಅವರು ಕಂಡುಕೊಂಡ ಹಲವು ಉಪಾಯಗಳಲ್ಲಿ ಒಂದು ನಿಶ್ಯಸ್ತ್ರೀಕರಣ ಕಾಯ್ದೆ. ಈ ಕಾಯ್ದೆಯನ್ನು ಜಾರಿಗೊಳಿಸಿದಾಗ ಸ್ವಲ್ಪ ಪ್ರಮಾಣದ ಪ್ರತಿಭಟನೆ ಕೆಲವೆಡೆ ಸಂಭವಿಸಿದರೂ ಶಾಂತಿಯುತವಾಗಿಯೇ ಅಪೇಕ್ಷಿತ ಗುರಿಯನ್ನು ಮುಟ್ಟಿತು ಎಂದು ತಿಳಿದುಬರುವುದಾದರೆ ಈ ಕಾಯ್ದೆ ಹಲಗಲಿ ಎಂಬ ಊರಿನಲ್ಲಿ ತೀವ್ರ ಪ್ರತಿಭಟನೆಗೆ ಒಳಗಾಯಿತು. ಈ ಪ್ರತಿಭಟನೆಯನ್ನು ಮಾಡಿದವರು ಹಲಗಲಿ ಗ್ರಾಮದ ಬೇಡ ಜನಾಂಗದವರು ಬೇಟೆಯಾಡುವುದನ್ನು ಪ್ರಧಾನ ಕಸುಬನನ್ನಾಗಿ ಮಾಡಿಕೊಂಡಿದ್ದ ಈ ಜನಾಂಗಕ್ಕೆ ನಿಶ್ಯಸ್ತ್ರೀಕರಣದ ಕಾನೂನು ತೀವ್ರ ಅಡಚಣೆ ಉಂಟು ಮಾಡಿತು. ಬೇಟೆಯಾಡುವುದನ್ನು ಕಾಯಕದ ಈ ಜನಾಂಗಕ್ಕೆ ಆಯುಧಗಳು ಅತ್ಯಾವಶ್ಯಕವಾಗಿ ಅಗತ್ಯವಿದ್ದ ವಸ್ತುಗಳು ಅವುಗಳನ್ನು ಹೊಂದಿರುವುದರ ಮೇಲೆಯೇ ನಿರ್ಬಂಧ ಏರಿದರೆ ಜೀವನೋಪಾಯದ

ಬಗೆ ಹೇಗೆ ತಿನ್ನುವ ಅನ್ನಕ್ಕೆ ಸಂಚಕಾರ ತಂದ ಅಲ್ಲದೆ ಇನ್ನೊಬ್ಬರ ಹಂಗಿನಲ್ಲಿ ಇರಬೇಕಾಗಿ ಬಂದ ಈ ಪರಿಸ್ಥಿತಿಯಿಂದ ಸ್ವಾಭಿಮಾನಿಗಳಾದ ಹಲಗಲಿಯ ಜನರು ಬ್ರಿಟಿಷರ ವಿರುದ್ಧ ಬಂಡಾಯ ಹೇಳುತ್ತಾರೆ ಈ ಬಂಡಾಯ ವಿಷಯವನ್ನೇ ಈ ಲಾವಣಿಯ ವಸ್ತುವಾಗಿದೆ.

ಪ್ರಸ್ತುತ ಲಾವಣಿಯು ಒಂಭತ್ತು ನುಡಿಗಳಲ್ಲಿ ವಿಸ್ತರಿಸಿದೆ. ನಿಶ್ಯಸ್ತ್ರೀಕರಣ ಕಾಯ್ದೆ ಕುರಿತ ಆಜ್ಞೆ ಜಾರಿಗೆ ಬಂದದ್ದು; ಅದರ ಪರಿಣಾಮವಾಗಿ ಊರ ಜನ ಪರಿತಪಿಸುವುದು; ಹಲಗಲಿಯ ಕೆಲವು ಶೂರರು ಪ್ರತಿಭಟಿಸುವುದು; ಸರ್ಕಾರದ ಕಡೆಯ ಅಧಿಕಾರಿಗಳು ಸೈನಿಕರು ಮತ್ತು ಹಲಗಲಿಯ ಶೂರ ಬಂಡಾಯಗಾರರ ನಡುವೆ ಹೋರಾಟದ ಚಕಮಕಿ ನಡೆದದ್ದು; ಇದರ ಪರಿಣಾಮವಾಗಿ ಬ್ರಿಟಿಷರು ಇಡೀ ಹಲಗಲಿ ಊರಿಗೆ ಬೆಂಕಿ ಹಚ್ಚಿ ಸರ್ವನಾಶ ಮಾಡಿ ಅಳಿದು ಉಳಿದ ವಸ್ತು, ಒಡವೆ ಮೊದಲಾದವನ್ನು ಲೂಟಿ ಮಾಡಿಕೊಂಡು ಹೋದದ್ದು ಎಲ್ಲವನ್ನು ಬೇರೆ ಬೇರೆ ನುಡಿಗಳಲ್ಲಿ ಲಾವಣಿಕಾರ ಪ್ರಸ್ತಾಪಿಸಿದ್ದಾನೆ.

ಲಾವಣಿಯ ಮೊತ್ತ ಮೊದಲಿಗೆ ಎರಡು ಸಾಲಿನ 'ಪಲ್ಲ' ಇದೆ. ಇದು ಇಡೀ ಪ್ರಕರಣವನ್ನು ಬೀಜ ರೂಪದಲ್ಲಿ ಹಿಡಿದಿಟ್ಟಿದೆ.

"ಹೊತ್ತು ಬಂದಿತು ಮತ್ತ ನೋಡಿರಿ ಕತ್ತಿ ಹಿಡಿಯುವ ಜನಕ
ಸಿಟ್ಟಿನ ಮಂದಿ ಹಲಗಲಿ ಬಂಟರ ಮುಟ್ಟಲಿಲ್ಲೊ ದಡಕ"[15]

ಪ್ರಸ್ತುತ ಲಾವಣಿಯಲ್ಲಿ ಹಲಗಲಿಯ 'ಬೇಡ' ಜನಾಂಗ ನಡೆಸಿದ ಬಂಡಾಯದ ಪ್ರಸ್ತಾಪವೇ ಪ್ರಮುಖ ವಿಷಯವಾಗಿರುವುದರಿಂದ ಆ ಬೇಡ ಜನಾಂಗವನ್ನು 'ಕತ್ತಿ ಹಿಡಿವ ಜನ' ಎಂದು ಕರೆದಿರುವುದು ಸಹಜವೂ, ಉಚಿತವೂ ಆದುದಾಗಿದೆ. 'ಕತ್ತಿ ಹಿಡಿವ ಜನ' ಎಂಬುದು ಪರ್ಯಾಯವಾಗಿ ಆ ಜನ ಮಹಾಶೂರರೆಂಬುದನ್ನು ಕತ್ತಿ ಹಿಡಿಯುವ ಕಾಯಕ ಅವರಿಗೆ ಅನಿವಾರ್ಯ ಎಂಬುದನ್ನೂ ಧ್ವನಿಸುತ್ತದೆ. ಇಂಥ ಜನಕ್ಕೆ 'ಹೊತ್ತು ಬಂದಿತು', ಹೊತ್ತು ಎಂಬುದು ಎದುರಾದ ವಿಷಮ ಸಂದರ್ಭವನ್ನು ಪ್ರತಿನಿಧಿಸುತ್ತದೆ. ಮೃತ್ಯು, ನಾಶ ಎಂಬ ಅರ್ಥಗಳಿಗೂ ವಿಸ್ತರಿಸುತ್ತದೆ. 'ಮುಟ್ಟಲಿಲ್ಲ ದಡಕ' ಎಂಬ ಪ್ರಯೋಗ ಕೂಡ ಹಲಗಲಿ ಬೇಡರ ಬಂಡಾಯವು ನಿರೀಕ್ಷಿಸಿದ ಯಶಸ್ಸನ್ನು ತಂದು ಕೊಡಲಿಲ್ಲ ಎಂಬ ಅರ್ಥವನ್ನು ಒಳಗೊಂಡಿದೆ. ಎರಡೇ ಸಾಲುಗಳಲ್ಲಿ ಲಾವಣಿಕಾರ ಕಲಾತ್ಮಕವಾಗಿ ದ್ವನಿ ಪೂರ್ಣವಾಗಿ ಇಡೀ ಪ್ರಕರಣದ ಸ್ವರೂಪ ಮತ್ತು ಪರಿಣಾಮಗಳನ್ನು ಕಟ್ಟಿಕೊಟ್ಟಿದ್ದಾನೆ ಎಂಬುದನ್ನು ನಾವು ಗಮನಿಸಬೇಕು.

ಲಾವಣಿಕಾರ ಸಮರ್ಥ ಅಭಿವ್ಯಕ್ತಿಯನ್ನು ಹೇಗೆ ಲಾವಣಿಪ್ರತಿ ಸಾಲು ಪ್ರತಿ ಪದದಿಂದ ತಿಳಿಯಲು ಸಾಧ್ಯವಿರುವುದಾದರೂ ಮೊದಲಿಗೆ ನಾವು ಲಾವಣಿಯಲ್ಲಿ ಲಭ್ಯವಿರುವ ವಸ್ತು ವಿವರಗಳನ್ನು ಪರಿಶೀಲಿಸೋಣ. 1ನೇಯ ನುಡಿಯಲ್ಲಿ ಬ್ರಿಟಿಷ್ ಸರ್ಕಾರದಿಂದ ನಿಶ್ಶಸ್ತ್ರೀಕರಣ ಕುರಿತು ಆಜ್ಞೆ ಹೊರ ಬಿದ್ದದ್ದು, ಆ ಪ್ರಕಾರವಾಗಿ ಎಲ್ಲರೂ ತಮ್ಮಲ್ಲಿರುವ ಆಯುಧಗಳನ್ನು ಬ್ರಿಟಿಷರಿಗೆ ಒಪ್ಪಿಸಬೇಕೆಂದು ಡಂಗುರ ಸಾರಿದುದು, ಅನೇಕರು ಹಾಗೆಯೇ ನಡೆದುಕೊಂಡದ್ದು, ಆದರೂ ಈ ಕಾಯ್ದೆ ಹಲಗಲಿಯ ಕೆಲವರನ್ನಾದರೂ ಚಿಂತೆಗೆ ಈಡು ಮಾಡಿದುದೇ ಮೊದಲಾದ ವಿವರಗಳಿವೆ.

“ಕತ್ತಿ ಕಟಾರಿ ಕೈ ಚೂರಿ ಬಾಕು ಗುರ್ದಿ ಸುರಾಯಿ ಚಕ್ರ
ಬಾಲಿಯ ಬರ್ಚಿ ಬಿಚ್ಚುಗತ್ತಿ ನೋಡ ಬಾಣ ಬಿಲ್ಲಿನವರಾ
ಪಟಾತ ಪಿಸ್ತೂಲ ಕುರುಲಿ ತೇಗಾ ಚಾಪಗೊಡ್ಲಿ ಶಸ್ತ್ರಾ
ತೋಪ ತುಪಾಕಿ ಹೊಡವು ಮದ್ದು ಗುಂಡ ಬಿಡಬ್ಯಾಡಿರಿ ಚೂರಾ”[16]

ಕಾನೂನಿನ ಪಾಲನೆಗೆ ಒತ್ತಾಯ ಎಷ್ಟು ಉಗ್ರವಾಗಿತೆಂದರೆ ‘ಮುಚ್ಚಿ ಇಟ್ಟವರಿಗೆ ಮೂರು ವರ್ಷದ ಬೇಡಿ ಹಾಕರಿ, ಕೊಡದ ದಿಟಾಯಿ ಮಾಡಿದವರನಾ ಕಡದ ಹಾಕರಿ ತಾರಾ’ ಎಂಬಂತಿತ್ತು. ಇಷ್ಟೇ ನಿರ್ದಾಕ್ಷಿಣ್ಯವಾಗಿ ಆಯುಧಗಳ ಜಪ್ತಿ ಕಾರ್ಯ ಕೂಡ ನಡೆದಿತ್ತು. ಸಾಮಾನ್ಯ ಜನ ಎರಡನೆಯ ಮಾತನಾಡದೆ ತಮ್ಮಲ್ಲಿರುವ ಆಯುಧಗಳನ್ನು ತಂದು ಕೊಟ್ಟಿರಬೇಕು. ‘ಬೇಡಿದ ಕ್ಷಣಕ ತಾವು ತಂದು ಕೊಡತಾರ ಹಿಡಿಹಿಡಿರ್ ಎಂದು’ ಎಂದಿರುವ ಮಾತುಗಳಲ್ಲಿ ಈ ಅಭಿಪ್ರಾಯ ಸ್ಪಷ್ಟವಾಗಿ ಸಂಚಿತವಾಗಿದೆ. ಅಲ್ಲಿಯೇ ಮುಂದಿನ ಸಾಲುಗಳಲ್ಲಿ ತಂದು ಕೊಡುತಾರ ತಮ್ಮ ಕುಸಿಲಿಂದು’ ಎಂಬ ಮಾತುಗಳಿವೆ. ಬ್ರಿಟಿಷರ ಈ ಆಜ್ಞೆಯನ್ನು ಭಾರತೀಯರು ಮನಃಪೂರ್ವಕವಾಗಿ ಒಪ್ಪಿ ಖುಷಿಯಿಂದ ಆಯುಧಗಳನ್ನು ಕೊಟ್ಟಿದ್ದಾರೆಯೇ ಎಂಬುದು ಪ್ರಶ್ನೆಯಾಗಿ ಉಳಿಯುತ್ತದೆ. ಆದರೆ ಈ ಲಾವಣಿಯನ್ನು ಕುರಿತು ಫ್ಲೀಟರು ಬರೆದಿರುವ ಮುನ್ನುಡಿಯಂತಹ ಕೆಲವು ಮಾತುಗಳಲ್ಲಿ ಈ ಆಜ್ಞೆ ಎಲ್ಲೆಲ್ಲಿ ಪಾಲಿತವಾಯಿತೋ ಹೆಚ್ಚು ಕಡಿಮೆ ಅಲ್ಲೆಲ್ಲ ಶಾಂತಿಯುತವಾಗಿಯೇ ಅಪೇಕ್ಷಿತ ಗುರಿಯನ್ನು ಮುಟ್ಟಿತು’ ಎಂದಿರುವುದನ್ನು ನೀವು ಗಮನಿಸಿರಬಹುದು. ಈ ಘಟನೆ ಕುರಿತ ವಾಸ್ತವ ಪರಿಸ್ಥಿತಿ ಪ್ರತಿಕ್ರಿಯೆ ಹೇಗಿತ್ತು ಎಂಬುದು ಸಂದೇಹಾತೀತವಾಗಿ ಹೇಳಬರುವುದಿಲ್ಲವೆನಿಸುತ್ತದೆ. ತಮ್ಮಲ್ಲಿರುವ ಆಯುಧಗಳನ್ನು ಖುಷಿಯಿಂದ ತಂದು ಬ್ರಿಟಿಷರಿಗೆ ಕೊಟ್ಟರು ಎಂಬುದನ್ನು ಒಪ್ಪುವುದಕ್ಕಾಗದಿದ್ದರೂ ಆ ಸಾಲುಗಳ ಮುಂದಿನ ಸಾಲುಗಳಾಗಿ ಬಂದಿರುವ:

"ಶೂರ ಸಿಪಾಯಿ ಜನ ತಾವು ತಿಳಿದು
ಅಳತಾರು ಕಣ್ಣಿಗೆ ನೀರ್ ತಂದು
ಬಹಳ ಚಿಂತಿಯ್ ಆಗಿ ದುಃಖದಿಂದ ಅವರು ಬಿದ್ದರ್– ಅಣ್ಣ ನೆಲಕ"[17]

ಎಂದಿರುವ ಮಾತುಗಳ ಬಗ್ಗೆ ಸಂಶಯ ಪಡಬೇಕಾದ ಅಗತ್ಯವಿಲ್ಲ. ಶೂರರು(ಸಿಪಾಯಿ) ಆದ ಜನರಿಗೆ ಬ್ರಿಟಿಷರ ಈ ನೀತಿಯಿಂದ ಅತಿಶಯವಾದ ಆಘಾತ, ದುಃಖ ಆಗಿದ್ದಿರಬಹುದಾದದ್ದಂತೂ ಸತ್ಯವೇ ಇರಬೇಕು. ಏಕೆಂದರೆ ಶೂರನಿಗೆ ಆಯುಧವೊಂದು ಅವರಿಂದ ಪ್ರತ್ಯೇಕಿಸಲಾಗದ 'ಅಂಗ'ವಿದ್ದಂತೆ. ಅದನ್ನೇ ಕೊಡಬೇಕು ಎಂದರೆ ತನ್ನ ಸಹಜವಾದ ಒಂದು ಅಂಗವನ್ನೇ ಕತ್ತರಿಸಿ ಕೊಟ್ಟಂತೆಯೇ ಸರಿ. ಹಾಗಾಗಿಯೇ ಶೂರ ಜನ ದುಃಖಿಸುತ್ತಾರೆ, ಚಿಂತೆಗೊಳಗಾಗುತ್ತಾರೆ. ಏಕೆಂದರೆ ಎಲ್ಲಕ್ಕಿಂತ ಹೆಚ್ಚಾಗಿ ನಿಶ್ಯಸ್ತ್ರೀಕರಣವೊಂದು ಆಜ್ಞೆಯಾಗಿ ಹೊರಬಿದ್ದಿದೆ. ಅದನ್ನು ಮೀರಿ ನಡೆಯುವುದು ಶಾಸನದ ಉಲ್ಲಂಘನೆಯಾಗುತ್ತದೆ. ಕಾನೂನಿನ ತೊಡಕುಗಳು ಎದುರಾಗುತ್ತವೆ. ಭಾರತೀಯರನ್ನು ಹದ್ದುಬಸ್ತಿನಲ್ಲಿಡುವ ಉದ್ದೇಶದಿಂದಲೇ ಬ್ರಿಟಿಷರು ಈ ಕಾನೂನನ್ನು ಜಾರಿಗೆ ತಂದರೆಂಬುದನ್ನು ನೀವು ಈಗಾಗಲೇ ಗಮನಿಸಿದ್ದೀರಿ. ಈ ಕಾನೂನು 'ಶಾಂತಿಯುತವಾಗಿ ಅಪೇಕ್ಷಿತ ಗುರಿಯನ್ನು ಮುಟ್ಟಿತು' ಎಂದು ಹೇಳಿಕೊಂಡರೂ ಭಾರತದಾದ್ಯಂತ ಅಲ್ಲಲ್ಲಿ ತೀವ್ರ ವಿರೋಧ ಇದಕ್ಕೆ ತಪ್ಪದೆ ವ್ಯಕ್ತವಾಗಿದೆ. ಆಜ್ಞೆಯನ್ನು ಪೂರ್ಣವಾಗಿ ಒಪ್ಪಲೂ ಆಗದೆ, ತಿರಸ್ಕರಿಸಲೂ ಸಾಧ್ಯವಾಗದೇ ಇಕ್ಕಟ್ಟಿಗೆ ಸಿಕ್ಕಿದ ಜನ ತಮ್ಮಲ್ಲಿರುವ ಆಯುಧಗಳಲ್ಲಿ ಕೆಲವನ್ನು ಮಾತ್ರವೇ ಬ್ರಿಟಿಷರಿಗೆ ಒಪ್ಪಿಸಿ ಉಳಿದವುಗಳನ್ನು ತಮ್ಮಲ್ಲಿಯೇ ಬಚ್ಚಿಟ್ಟುಕೊಂಡರೆಂದು ತಿಳಿಯುತ್ತದೆ. ಲಾವಣಿಯ ಎರಡನೇ ನುಡಿಯ ಈ ಸಾಲುಗಳನ್ನು ಗಮನಿಸಿ:

"ಕೇಳುತ ಹುಕುಮಾ ಕೆಳವರ ತಂದ ತಂದ ಕೊಟ್ಟಾರ ಆವಾಗ
ಬಹಳ ಬೆಲಿವು ಹೆಚ್ಚಿನ ಹತಾರಾ ಮುಚ್ಚಿ ಇಟ್ಟಾರಾ ಒಳಗ"[18]

ಕೆಲವು ಸಣ್ಣಪುಟ್ಟ ಅಥವಾ ತಮಗೆ ಉಪಯೋಗಕ್ಕೆ ಬರದ ಅಥವಾ ಅಷ್ಟೇನು ಅಗತ್ಯವಿಲ್ಲದ ಹತಾರಗಳನ್ನು ಕೊಟ್ಟಿರಬೇಕು. ತಮಗೆ ಅತ್ಯಂತ ಅಗತ್ಯವಿರುವ ಬಗೆ ಬಗೆಯ ವಿಶಿಷ್ಟ ಆಯುಧಗಳನ್ನು ಹೆಚ್ಚು ಬೆಲೆ ತೆತ್ತು ತಂದ ಆಯುಧಗಳನ್ನು ಜನ ಬ್ರಿಟಿಷರಿಗೆ ಒಪ್ಪಿಸುವುದಾದರೂ ಎಂತು? ಅದಕ್ಕೆಂದೇ ಅವರು ಬಹಳ ಬೆಲೆಕೊಟ್ಟು ತಂದ ಆಯುಧಗಳನ್ನು ಬಚ್ಚಿಟ್ಟುಕೊಂಡಿದ್ದಾರೆ. ಲಾವಣಿಕಾರ ಈ ಸಂದರ್ಭವನ್ನು ಬಹಳ ತರ್ಕಬದ್ಧವಾಗಿಯೇ ವಿವರಿಸಿದ್ದಾನೆ. ಈ ಸಾಲುಗಳನ್ನು ನೋಡಿ:

"ಸಾಲಸಮದ ಮಾಡಿ ದನ ಕರ ಮಾರಿ ತಂದಿನ್ನಿ ಹಬ್ಬದಾಗ

ನೋಡಿ ನೋಡಿನು ಹ್ಯಾಂಗೆ ಕೊಡುನ್ ಅಂತ ಹುಗಿದ್ ಇಟ್ಟಾರ ನೆಲದಾಗ"19

ಎಷ್ಟೇ ಜಾಣತನ ಉಪಯೋಗಿಸಿ ಆಯುಧಗಳನ್ನು ಉಳಿಸಿಕೊಳ್ಳುವ ಯತ್ನ ಮಾಡಿದರೂ ಬ್ರಿಟಿಷರು ದರ್ಪದಿಂದ ಅವುಗಳನ್ನು ತಮ್ಮ ವಶಮಾಡಿಕೊಳ್ಳತೊಡಗಿದರು. ಬೇಟೆಗಾರರು 'ಜಾಯಿತ ಸಾಹೇಬ' (ಈತನ ಹೆಸರು ಜೆ.ಬಿ. ಸೆಟನ್‌ಕರ್ ಈತ ದಕ್ಷಿಣ ಭಾರತ ಮಹಾರಾಷ್ಟ್ರದ ರಾಜಕೀಯ ಪ್ರತಿನಿಧಿಯಾಗಿದ್ದ ಲೆಫ್ಟಿನೆಂಟ್ ಕರ್ನಲ್) ಈ ಕಾರ್ಯಕ್ಕೆ ನೇಮಿಸಲ್ಪಟ್ಟದುದ್ದಾಗಿ ತಿಳಿದು ಬರುತ್ತದೆ. ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುವ ಈ ಕಾರ್ಯಾಚರಣೆಯಲ್ಲಿ ಕೆಲ ಭಾರತೀಯರೇ ಅಸೂಯೆಯಿಂದ ಚಾಡಿ ಹೇಳಿ ತಮಗೆ ಆಗದವರ ಬಳಿ ಇದ್ದ ಶಸ್ತ್ರಾಸ್ತ್ರಗಳನ್ನು ಬ್ರಿಟಿಷರು ವಶಪಡಿಸಿಕೊಳ್ಳಲು ಸಹಕರಿಸಿದಂತೆ ತಿಳಿದು ಬರುತ್ತದೆ. ಇನ್ನೂ ಏನೂ ಉಳಿಯಲಿಲ್ಲ ಎನ್ನುವಂತೆ ಬ್ರಿಟಿಷರು ಶಸ್ತ್ರಾಸ್ತ್ರಗಳನ್ನು ದೋಚಿದ್ದಾರೆ.

"ಜ್ಯಾಡಿಸಿ ಹೋದವ್ರೊಯೆಲ್ಲಾ
ನಾಡ ಒಳಗೆಯೇನು ಉಳಿಲಿಲ್ಲ"[20]

ಎಂಬ ಮಾತುಗಳಲ್ಲಿ ಈ ಅಭಿಪ್ರಾಯ ವ್ಯಕ್ತವಾಗುತ್ತದೆ. 'ಅಜ್ಜ ಮುತ್ತ್ಯಾರ ಹಿಡುವ ಪಿಸ್ತೂಲ' ಎಂಬ ಮಾತಿನಲ್ಲಿ ಎಲ್ಲಾ ಹಳೆಯ ಆಯುಧಗಳು, ಬೆಳ್ಳಿಯ ಕವಚ, ರತ್ನದ ಹಿಡಕಿ ಇರುವ ಆಯುಧಗಳು ಎಂಬ ಮಾತಿನಲ್ಲಿ ಬೆಲೆ ಬಾಳುವ ಎಲ್ಲಾ ಆಯುಧಗಳು ಬ್ರಿಟಿಷರ ಕೈವಶವಾದವು ಎಂಬ ಅಳಲು ಅಡಗಿದೆ. ಬ್ರಿಟಿಷರ ಈ ಆಜ್ಞೆಯನ್ನು ತೀವ್ರವಾಗಿ ವಿರೋಧಿಸಿದ ಜನ 'ಹಲಗಲಿ' ಎಂಬ ಹಳ್ಳಿಯ ಬೇಡರು. ಅವರಲ್ಲಿ ಪೂಜಾರಿ ಹನುಮ, ಬಾಲ, ಜಡಗ ಮತ್ತು ರಾಮ ಎಂಬ ನಾಲ್ವರು ಒಂದಾಗಿ ದೊಡ್ಡ ಬಂಡಾಯವನ್ನೇ ಮಾಡಿದ್ದಾರೆ. 'ಕೈನ ಹತಾರ ಕೊಡಬಾರದೊ ನಾವು ನಾಲ್ಕು ಮಂದಿ ಜತ್ತು' ಎಂದು ಧೀರ ಪ್ರತಿಜ್ಞೆ ಮಾಡುತ್ತಾರೆ.

"ಸುತ್ತಿನಹಳ್ಳಿ ಮತ್ತೆ ದೊರಿಗಳಿಗೆ ತಿಳಿಶ್ಯಾರ ಹೀಂಗ್ ಅಂತು
ಮಾಡೀರಿ ಜಗಳಾ ಕೂಡ ಇರತೇವು ಕುಮುಕಿ ಯಾವತ್ತು"[21]

ಎಂಬ ಮಾತುಗಳಿಂದ ಈ ನಾಲ್ವರು ತಾವು ಮಾಡುವ ಬಂಡಾಯಕ್ಕೆ ಸಹಾಯ ಮಾಡಬೇಕೆಂದು, ಬೆಂಬಲ ನೀಡಬೇಕೆಂದು ಸುತ್ತ ಮುತ್ತಲ ಸಾಹುಕಾರರು ಮತ್ತು ಸಣ್ಣ ಪುಟ್ಟ ಪಾಳೆಯಗಾರರಿಗೆ ಕೇಳಿಕೊಂಡಂತೆಯೂ, ಬೆಂಬಲ ಕೊಡುವುದಾಗಿ ಭರವಸೆ ಪಡೆದುದಾಗಿಯೂ ತಿಳಿದು ಬರುತ್ತದೆ. ಕಾನೂನು ಜಾರಿಗೊಳಿಸಲು ಬ್ರಿಟಿಷ್ ಅಧಿಕಾರಿ ಸೆಟನ್‌ಕರ್ ಅವನ ಪರವಾಗಿ ಹಲಗಲಿಗೆ ಹೋಗಿದ್ದ ಕಾರಬಾರಿಯ ಕೆನ್ನೆಗೆ ಹೊಡೆದು ಹಲಗಲಿಯ ಬೇಡರು ಅವನನ್ನು ಹಿಮ್ಮೆಟ್ಟಿದ್ದರು. ಆ ಕಾರಬಾರಿಯು

ದುಃಖಿತನಾಗಿ ಹಿಂತಿರುಗಿ ನಡೆದ ವೃತ್ತಾಂತವನ್ನು ಸಾಹೇಬನಿಗೆ ಹೇಳುತ್ತಾನೆ. ಸಾಹೇಬನಿಗೆ ಪರಿಸ್ಥಿತಿಯ ಗಂಭೀರ ಸ್ವರೂಪ ಅರ್ಥವಾಗುತ್ತದೆ. ಉಪಾಯವಾಗಿಯೇ ಇದನ್ನು ಪರಿಹರಿಸಿಕೊಳ್ಳಬೇಕು ಎಂಬ ಜಾಣತನದಿಂದ ಕಲಾದಗಿ ಎಂಬ ಊರಿಗೆ ಹೋಗಿ ಕುಂದರಗಿಯ ಕೃಷ್ಣನಾಯಕಗೌಡ ಎಂಬುವವನನ್ನು ಸಂಧಾನಕಾರನನ್ನಾಗಿ ನೇಮಿಸುತ್ತಾನೆ. 'ಹಟಾ ಮಾಡಬಾರದು ನಿಮ್ಮ ಹತಾರ ಕೊಡಿರಿ ಸಾಹೇಬನ್ ಈಶಕ' ಎಂದು ಅವನು ನಯವಾಗಿಯೇ ಬುದ್ಧಿ ಹೇಳಲು ತೊಡಗುತನಾದರೂ ಬೇಡರು ಸುತಾರಂ ಒಪ್ಪುವುದಿಲ್ಲ.

ಸಂಧಾನಕ್ಕಾಗೆ ಹೋಗಿದ್ದ ಕೃಷ್ಣನಾಯಕಗೌಡನನ್ನೇ ಪ್ರಶ್ನಿಸಿ 'ಹತಾರ ಕೊಡಲಿಕೆ ಹೆಂಗಸ್ ಆಗಿ ಬಳಿ ಇಟ್ಟಿಲ್ಲ ಕೈಯಾಗ, ಯಾಂವ ಬಂದ್ರೂ ಜೀವ ಹೋದರೂ ಕೊಡೋದಿಲ್ಲ. ಸುಮನ್ ಹೋಗಿರಿ ಈಗ' ಎಂದು ಹೇಳಿ ಕಳುಹಿಸಿ ಬಿಡುತ್ತಾರೆ. ಹಲಗಲಿಯ ಬೇಡರು ಹೇಳಿದ ಮಾತುಗಳನ್ನೇ ಕೃಷ್ಣನಾಯಕಗೌಡ ಸಾಹೇಬನಿಗೆ ಹೇಳುತ್ತಾನೆ. ಇದನ್ನು ಕೇಳಿದ ಸಾಹೇಬ ಕ್ರುದ್ಧನಾಗುತ್ತಾನೆ. ಬೇಡರನ್ನು ಹತ್ತಿಕ್ಕಲು ಅಶ್ವದಳವನ್ನು ಕಳುಹಿಸಲಾಗುತ್ತದೆ. ಆದರೆ ಮುಂಗಾರಿನ ಮಳೆ ಸುರಿದ ಹಾಗೆ ಆ ಬೇಡರು ಸೈನ್ಯದ ಮೇಲೆ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುತ್ತಾರೆ. ಅಶ್ವದಳ ಹಿಮ್ಮೆಟ್ಟುತ್ತದೆ. ಸಾಹೇಬ ವಿಧಿಯಿಲ್ಲದೆ ಮೇಲಾಧಿಕಾರಿಗಳಿಗೆ ಕಾಗದ ಬರೆದು ದಂಡನ್ನು ಕಳುಹಿಸಿಕೊಡುವಂತೆ ಕೋರುತ್ತಾನೆ.(ಕಾಗದ ಬರದ ಕಳವರೆ ಬೇಗನೆ ದಂಡ ಬರಲ್ ಎಂತ ಹೀಂಗ) ದಂಡೂ ಬರುತ್ತದೆ. (ಬೊಂಬಾಯಿ ಎನ್.ಐ. ನ 28ನೆಯ ಸೇನಾ ತುಕಡಿಯನ್ನು ಹಲಗಳಿಗೆ ಕಳುಹಿಸಲಾಗುತ್ತದೆ) ನಟ್ಟ ನಡುರಾತ್ರಿ ಊರಿಗೆ ಮುತ್ತಿಗೆ ಹಾಕಲಾಗುತ್ತದೆ. ಗುಂಡಿನ ಚಕಮಕಿ ನಡೆಯುತ್ತದೆ. 'ಗುಂಡು ಹೊಡದಾರ ವಿಪರೀತ ಸೂರಿ ಆಗಿ' 'ಅಂಜಿ ವೋಡಾಕ ಹತ್ತಿತ ಮುಂದ್ ಆಗಿ' ಮುತ್ತಿಗೆಯಲ್ಲಿ ಎರಡೂ ಕಡೆ ಅಪಾರವಾದ ಸಾವು ನೋವುಗಳು ಸಂಭವಿಸುತ್ತವೆ. 'ಬಿದ್ದಾವ ಹೆಣಗೋಳು ಸೂರಿ ಆಗಿ' ಎಂಬ ಮಾತಿನಲ್ಲಿ ಇದು ಸ್ಪಷ್ಟವಾಗುತ್ತದೆ. ಆದರೆ ಹಲಗಲಿಯ ಜನ ಬಡಪೆಟ್ಟಿಗೆ ಬಗ್ಗಲಿಲ್ಲ. 'ಮುತ್ತಿಗೆ ಹಾಕಿ ಅವರು ಕತ್ತಿಲಿ ಕಡದರ ಅಂಜಲಿಲ್ಲ ಯಾತಕ' ಎಂದು ಹೇಳುವ ಮೂಲಕ ಲಾವಣಿಕಾರ ಹಲಗಲಿಯ ಬೇಡರ ಪರಾಕ್ರಮವನ್ನು ಪ್ರಕಟಗೊಳಿಸಿದ್ದಾನೆ. ಹಲಗಲಿಯ ಬೇಡರನ್ನು ಹದ್ದುಬಸ್ತಿಗೆ ತರಲು ಬ್ರಿಟಿಷ್ ಸರಕಾರವು ಹಲವು ಅಧಿಕಾರಿಗಳನ್ನು ಕಳುಹಿಸಿದ್ದುದ್ದಾಗಿ ತಿಳಿದು ಬರುತ್ತದೆ. ಅವರಲ್ಲಿ ಬೊಂಬಾಯಿ ಸಿವಿಲ್ ಸರ್ವಿಸ್‌ನ ಮಿಲಿಯಂ ಹೆನ್ರಿ ಹೇವಲಕ್ ಎಂಬಾತನೂ ಒಬ್ಬ. ಇವನ ಪ್ರಸ್ತಾಪ ಲಾವಣಿಯಲ್ಲಿ ಬರುತ್ತದೆ. ಇವನನ್ನು ಲಾವಣಿಯಲ್ಲಿ ಹೇವಲಕ್ ಸಾಹೇಬ

ಎಂದು ಕರೆಯಲಾಗಿದೆ. ಈತ ಹಲಗಲಿಗೆ ಹೋಗಿ ಅಲ್ಲಿನ ಬೇಡರಿಗೆ ಬಹು ಬಗೆಯಲ್ಲಿ ಬುದ್ಧಿವಾದ ಹೇಳುತ್ತಾನೆ.

"ಹೇಳತಾರ ಬುದ್ಧಿಯ ಮಾತು
ಕೊಡುತೇವ ಕವಲ ಈ ಹೊತ್ತು
ಹೋಗಬ್ಯಾಡಿರಿ ವ್ಯರ್ಥ ನೀವು ಸತ್ತು"[22]

ಹೇವಲಕ್ ಮಾತುಗಳನ್ನು ಬಂಡಾಯಗಾರ ನಾಯಕರಾಗಿದ್ದ ಹನಮ, ಜಡಗರು ಒಪ್ಪುವುದೇ ಇಲ್ಲ. 'ಘಾತಕರೊ ಯಿವರಾ ಇಸವಸ ಘಾತ ಮಾಡಿ ನೆಂಬಿಗಲೆ ಮಾಡುತಾರು ಪಿತೂರಾ' ಎಂದು ನಿಶ್ಚಯಿಸಿ, 'ಮೋಸ ಮಾಡಿ ಬಲ ದೇಶ ತಗೋತರ ಮುಂದ ನಮಗ ಘೋರ' ಎಂದು ಬಗೆದು, ಬುದ್ಧಿವಾದ ಹೇಳಲು ಬಂದ ಆ ಸಾಹೇಬನ್ನೇ(ಗುಂಡು ಹಾರಿಸಿ) ಗಾಯಗೊಳಿಸಿ ಕಳುಹಿಸುತ್ತಾರೆ. ಇದನ್ನು ತಿಳಿದು ಮತ್ತೊಬ್ಬ ಅಧಿಕಾರಿ ಕಾರ್ ಸಾಹೇಬ(ವಿಲಿಯಂ ಅಲೆಕ್ಸಾಂಡರ್ ಷೇರ್) ದಂಗೆಯನ್ನು ಹತ್ತಿಕ್ಕಲು ಯತ್ನಿಸುತ್ತಾನೆ.

"ಕಾರ್ ಸಾಹೇಬ ಬೆಂಕಿ ಚೂರು ಆಗಿ ತಾನೂ ಲೂಟಿ ಮಾಟ ಅಂದವೂರ ಹುರಪಿಲಿ ಹೊಡೆದರ ಮಳಿ ಆದ ಹಾಂಗ ಗುಂಡು ಸುರಿದಾಪು ಬರಪೂರ"[23]
ಆದರೆ ಹಣಮ, ರಾಮ ಮೊದಲಾದ ಬೇಡರು ಅಂಜದೆ ಹಿಂದೆಗೆಯದೆ ಅಪ್ರತಿಮವಾಗಿ ಹೋರಾಡುತ್ತಾರೆ.

"ಭೀಮನು ಇದಿರಿಗೆ ನಿಂತಾ
ಐನೂರ ಮಂದಿಗೆ ಮಲತಾ
ಬಾಲನು ಮಾಡಿದ ಕಸರತ್ತ
ಕುದುರೆಯ ಕಡದನೊ ಹತ್ತ
ರಾಮನ ಕಡತ ವಿಪರೀತ
ಕಾವಲಿ ಹರಿತೋ ರಕ್ತ"[24]

ಮೇಲಿನ ಮೂರು ಪದ್ಯ ಭಾಗಗಳಲ್ಲಿ ನಾಯಕರ ಹೋರಾಟದ ವೈಖರಿಯೇ ಮೂರ್ತಿವತ್ತಾಗಿ ಒಡ ಮೂಡಿರುವುದನ್ನು ಗಮನಿಸಿ, ಎಂಟನೆಯ ನುಡಿಯಲ್ಲಿ ಕೂಡ ಹೋರಾಟದ ವಿವರವೇ ಮುಂದುವರೆದಿದೆ. ಹನುಮನಿಗೆ ಗುಂಡು ತಾಕಿ ಸಾವನ್ನಪ್ಪುತ್ತಾನೆ. 'ರಾಮಿ' ಎಂಬ ಸ್ತ್ರೀ ವಿರಾವೇಶದಿಂದಲೇ ಹೋರಾಡುತ್ತಾಳೆ. ಮೂವರು ಸೈನಿಕರ ಶಿರಗಳನ್ನು ಆಕೆ ಕಡಿದು ಹಾಕಿದ್ದುದಲ್ಲದೆ ಆರು ಕುದುರೆಗಳನ್ನು ಕಡಿದು ಹಾಕುತ್ತಾಳೆ. ಹೋರಾಟದಲ್ಲಿ ಹಲಗಲಿಯ ಬಹುತೇಕ ಜನ ಸಾವನ್ನಪ್ಪುತ್ತಾರೆ. ಕೈಗೆ

ಸಿಕ್ಕ ಅಸ್ತ್ರ–ಶಸ್ತ್ರಗಳ ಜೊತೆ ವಸ್ತು ಒಡವೆಗಳನ್ನು ದೋಚಿಕೊಳ್ಳುತ್ತಾರೆ. ಬ್ರಿಟಿಷರು ಕಟ್ಟ ಕಡೆಗೆ ಇಡೀ ಊರಿಗೆ ಬೆಂಕಿ ಹಚ್ಚಿ ಸರ್ವನಾಶ ಮಾಡುತ್ತಾರೆ.

ಬೆಳಗಾವ ಜಿಲ್ಲೆಯ ಸಂಪಗಾವಿ ತಾಲೂಕಿನ ಕಿತ್ತೂರು ಈಗ ಸರ್ಕಾರದ ಒಂದು ಹಳ್ಳಿಯಾಗಿದ್ದರೂ ಅದು ಮುಂಚೆ ದೇಸಾಯಿಯವರ ರಾಜಧಾನಿಯಾಗಿತ್ತು. ಹಾಡಿನಲ್ಲಿ ಹೇಳಲಾಗಿರುವ ಶಿವಲಿಂಗಪ್ಪ ರುದ್ರಸರ್ಜನೆ ಅದರ ಕೊನೆಯ ದೇಸಾಯಿ. ಮಕ್ಕಳಿಲ್ಲದೆ ಹೆಂಡತಿ ಈರವ್ವನನ್ನೂಮ ಮಲತಾಯಿ ಚೆನ್ನವ್ವನನ್ನೂ ಬಿಟ್ಟು ಶಿವಲಿಂಗಪ್ಪ ಸತ್ತದ್ದು 1828ರ ಸೆಪ್ಟೆಂಬರ್‌ನಲ್ಲಿ. ವಂಶವನ್ನು ಉಳಿಸುವುದಕ್ಕಾಗಿ 'ಮಾಸ್ತಿಮರ್ದಿ' ಎಂಬ ಪಕ್ಕದ ಹಳ್ಳಿಯ ಪಾಟೀಲನೊಬ್ಬನ ಮಗನನ್ನು ದತ್ತು ಸ್ವೀಕಾರ ಮಾಡುವ ಪ್ರಯತ್ನವೂ ಅಲ್ಲಿನ ಕಾರಭಾರಿಯಿಂದ ನಡೆಯಿತು.

ಈ ಸಂದರ್ಭಗಳನ್ನು ಸರ್ಕಾರದ ಗಮನಕ್ಕೆ ತರುವವ ತನ್ನ ವರದಿಯಲ್ಲಿ ಥ್ಯಾಕರೆ. ಕೇವಲ ಹನ್ನೊಂದು ವರ್ಷ ವಯಸ್ಸಿನ ದೇಸಾಯಿಯ ಕುಟುಂಬ, ಅವನ ಮಲತಾಯಿ, ಎರಡು ತಿಂಗಳ ಹಿಂದೆ ಸತ್ತ ಅವನ ಸಹೋದರನ ವಿಧವೆ ಹೆಂಡತಿ ಮುಂತಾದ ಅಂಶಗಳನ್ನು ಒತ್ತಿ ಹೇಳಿದ. ದತ್ತು ಸ್ವೀಕಾರಕ್ಕೆ ಗೊತ್ತಾಗಿದ್ದ ಮಗುವಿನಂತೆ ಉಳಿದ ಸಂಬಂಧಗಳೂ ಸಗೋತ್ರವಲ್ಲದೆ ಅವರ ಹಿರಿಕರನ್ನು ಗುರುತಿಸಲಾಗದ ದೂರದ ಸಂಬಂಧವಾಗಿವೆ ಮುಂತಾದ ಅಂಶಗಳನ್ನು ಹೇಳಿ ಥ್ಯಾಕರೆ ಅನ್ಯಾಯದ ದತ್ತು ಸ್ವೀಕಾರದ ಬಗ್ಗೆ ಶೋಧನೆ ನಡೆಸಲು ಕಿತ್ತೂರಿಗೆ ಹೊರಟಿರುವುದಾಗಿ ಪತ್ರದಲ್ಲಿ ಬರೆದ. ಆದರೆ ಯಶಸ್ಸಿನ ಬಗ್ಗೆ ಸರ್ಕಾರದ ತೀರ್ಮಾನವನ್ನು ಅನಿರ್ಧಾರಿತ ಸ್ಥಿತಿಯಲ್ಲಿಡಲು, ಸರ್ಕಾರದ ಮೇಲೆ ರಾಜ್ಯ ತಿರುಗಿ ಬೀಳದಿರಲು ಎರಡಕ್ಕೂ ಅನುಕೂಲವಾಗುವಂತೆ ಇಬ್ಬರು ಮೇಲ್ವಿಚಾರಕರನ್ನು ನೇಮಿಸಿದ. ಒಬ್ಬ ಸರ್ಕಾರದ ಪರವಾಗಿ ಮತ್ತು ಇನ್ನೊಬ್ಬ ದೇಸಾಯಿಯ ಕುಟುಂಬದ ಪರವಾಗಿ, ಇದರಲ್ಲಿ ಕಿತ್ತೂರಿನ ಸೊಸೆ ಈರವ್ವ (ಬ್ರಿಟಿಷರಿಂದ ಬಂಧಿತಳಾಗಿ ಅವಳನ್ನು ಬೈಲಹೊಂಗಲದಿಂದ ಧಾರವಾಡಕ್ಕೆ ಸ್ಥಳಾಂತರಿಸಲು ಕರೆದೊಯ್ದ ಸಂದರ್ಭದಲ್ಲಿ) ಆಕೆಗೊದಗಿದ ಹೀನ ಸ್ಥಿತಿಗಾಗಿ ಮಹದುಬ್ಬ ಮಾಡುವ ಸಂದರ್ಭವಿದೆ. ಆ ಸಮಯದಲ್ಲಿ ಲಾವಣಿಕಾರ ದೊರೆ ಮಲ್ಲಸರ್ಜಾ ದೇಸಾಯಿಯನ್ನು ನೆನಪಿಸಿಕೊಳ್ಳುತ್ತಾನೆ.

"ಕಿತ್ತೂರ ಚೆನ್ನವ್ವನ ಸೊಸಿ ಹೊಂಗಲು ಬಿಟ್ಟು ಹೋಗುವಾಗ
ಮಾಡುತ್ತಿದ್ದಳಣ್ಣ ಮಹದುಬ್ಬ
ಮತ್ತ ನಮ್ಮ ಮಲ್ಲಸರ್ಜ ಸತ್ತು ಹೋಗದಿದ್ದರ
ಹೊತ್ತು ಹೋಗುದ್ಯಾಕ ನಮ್ಮ ಬದುಕು"[25]

ಮಲ್ಲಸರ್ಜನ ಅಕಾಲಿಕ ಮರಣವೇ ಈ ದುಃಖಗಳಿಗೆ ನಾಂದಿಯಾಯಿತು. ಅವರು ಇದ್ದಿದ್ದರೆ ಹೀಗಾಗುತ್ತಿರಲಿಲ್ಲ ಎಂದು ಪರಿತಪಿಸುತ್ತಾನೆ. ಕಿತ್ತೂರನ್ನು ಮುತ್ತಿ ಬ್ರಿಟಿಷರು ಅದನ್ನು ತಮ್ಮ ವಶ ಮಾಡಿಕೊಂಡಿದ್ದಾರೆ. ಆ ಊರಿನ ಸಮಸ್ತ ಸಂಪತ್ತು ಬ್ರಿಟಿಷರ ಪಾಲಾಗಿದೆ. 'ಆರು ಆನಿ, ಹದಿನಾರು ಒಂಟೆ, ಹನ್ನೆರೆಡು ಸಾವಿರ ಕಾಲಬಲ, ತೋಪು, ಮುತ್ತಿನ ಪಲ್ಲಕ್ಕಿ, ಚಕ್ಕಡಿಗಳು ಎಲ್ಲವೂ ಅವರ ವಶವಾಗುತ್ತವೆ. ಇವುಗಳಲ್ಲದೆ ಹೋರಾಟದಲ್ಲಿ ಅಪ್ರತಿಮ ಕೆಚ್ಚನ್ನು ಪ್ರದರ್ಶಿಸಿ ನಾಡಿನ ರಕ್ಷಣೆಗಾಗಿ ಪ್ರಾಣಾಪಾಯವನ್ನೂ ಲೆಕ್ಕಿಸದೆ ಹೋರಾಡಿದ ಕಲ್ಲೂರ ಕಲ್ಲಬಸಪ್ಪ, ಕಣ್ಣೂರ ಮಲ್ಲಪ್ಪ, ಅವರಾದಿ ವೀರಪ್ಪ ಇವರೇ ಮೊದಲಾದ ವೀರರನ್ನೂ ಕಿತ್ತೂರು ಕಳೆದುಕೊಂಡಿದೆ. ಇಂತಹ ಸಮಯದಲ್ಲಿ ಚೆನ್ನವ್ವನ ಸೊಸೆ ಬೇರೆ ದಿಕ್ಕೇ ತೋಚದೆ ಎಂಥ ಕಷ್ಟ ಬಂದಿತು ಎಂದು ಪನ್ನಂಗಧರನ ಪಾರ್ವತಿ ಅರಸನು ಸುತ್ತಿಸುತ್ತಾಳೆ.

"ಪೂರ್ವ ಜನ್ಮದ ಲಿಖಿತ ಪುಣ್ಯ ನಮ್ಮದು ತಪ್ಪಿತೆಂದು
ಬರದನ್ಯಾಕ ಬ್ರಹ್ಮ ಇಂಥ ಬರಿ – ಎಂದು ಮರುಗುತ್ತಾಳೆ"[26]

ಎರಡನೆಯ ನುಡಿಯಲ್ಲಿ ಲಾವಣಿಕಾರನು ಕಿತ್ತೂರಿನ ದೇಸಾಯಿಯ ಮತ್ತು ಊರಿನ ಜನರ ವಸ್ತು, ಒಡವೆಗಳ ದೊಡ್ಡ ಪಟ್ಟಿಯನ್ನೇ ಕೊಡುತ್ತಾನೆ. ಇವೆಲ್ಲವೂ ಬ್ರಿಟಿಷರಿಂದ ಲೂಟಿಗೊಳಾಗುತ್ತವೆ.

"ಮಂದರ ಧರನ ಕರುಣ ತಪ್ಪಿ ವಂದವುಳಿಯದ
ಹೋದವು ಮುಂದ ಇಲ್ಲೋ ನಮಗೆ ಅಸರ"[27]

ಎಂಬ ಮಾತುಗಳಲ್ಲಿ ಬ್ರಿಟಿಷರು ಎಲ್ಲವನ್ನೂ ದೋಚಿದ ಮತ್ತು ಅದಕ್ಕಾಗಿ ಆ ಜನ ಮರುಗಿದ ಸಂದರ್ಭ ವ್ಯಕ್ತವಾಗಿದೆ. ಇಷ್ಟಾದರೂ ಗತಿಸಿದ ಮಗ ಮುಂದೊಂದು ದಿನ ಪುನರ್ಜನ್ಮ ಪಡೆದು ಹನುಮಂತನಂತೆ ಬಂದು ಅಳಿದ ಸಕಲವನ್ನೂ ತಂದಾನು ಎಂಬ ಆಶಯ ವ್ಯಕ್ತ ಮಾಡಲಾಗಿದೆ. ಮೂರನೆಯ ನುಡಿಯಲ್ಲಿ ಕೂಡ ಮೊದಲರ್ಧ ಭಾಗ ವಸ್ತು ಒಡವೆಗಳ ಪ್ರಸ್ತಾಪವೇ ಬಂದಿದೆ. ಬಗೆ ಬಗೆಯ ಸೀರೆಗಳ ಸಣ್ಣ ಸಣ್ಣ ಮಕ್ಕಳಿಗೆ ತೊಡಿಸುವ ಉಡುಪು ಒಡವೆಗಳ ವಿವರಗಳನ್ನು ಕೊಡಲಾಗಿದೆ. ಈ ಮೂಲಕ ಸಕಲ ಸಂಪತ್ತಿನಿಂದ ಕೂಡಿದ್ದ ದೇಸಾಯಿ ಮನೆತನ ಮತ್ತು ಬೈಲಹೊಂಗಲ ಎಲ್ಲವನ್ನೂ ಕಳೆದುಕೊಂಡು ಬರಿದಾದ ಸ್ಥಿತಿಯನ್ನು ನಮ್ಮ ಗಮನಕ್ಕೆ ತರಲು ಯತ್ನಿಸಿದೆ. ಎಲ್ಲವನ್ನೂ ಕಳೆದುಕೊಂಡ ಚೆನ್ನವ್ವನ ಸೊಸೆ ಈರವ್ವ ಇನ್ನಿಲ್ಲದಂತೆ ದುಃಖ ಪಡುತ್ತಾಳೆ.

"ಅಷ್ಟು ಹೋಗಿ ನಮ್ಮ ಕಷ್ಟ ಬಿಡಲಿಲ್ಲಯ್ಯ ಪಟ್ಟನೆ
ನೆಲಕ್ಷಣೆಯ ಬಡವುತ ಈರವ್ವ ಕಟ್ಟಿ ಹಾಕುವೆನಲಗೆನುತ"[28]

ಎಂದಿರುವ ಮಾತುಗಳಲ್ಲಿ ಅವಳ ದುಃಖ ವ್ಯಕ್ತವಾಗಿದೆ. ಕತ್ತಿಯನ್ನು ಕಟ್ಟಿ ಅದಕ್ಕೆ ಹಾಯ್ದು ಪ್ರಾಣವನ್ನು ಬಿಡಬೇಕೆಂದು ಆಕೆ ನಿಶ್ಚಯಿಸುತ್ತಾಳೆ. 'ತೊತ್ತುಗಳೆಲ್ಲರು ಸುತ್ತಲೆ ಮುತ್ತಿ' ಆಕೆಯನ್ನು ಸಮಾಧಾನ ಪಡಿಸಲು ಪ್ರಯತ್ನಿಸುತ್ತಾರೆ. 'ನಾಡನಾಳುವ ದೊರೆಗಳಿಗಿಂತಾ ಕೇಡ ಬರಬಾರದು' ಎಂದು ಇಡೀ ಕಿತ್ತೂರು ಮರುಗುತ್ತದೆ. ಮಾನ್ಯ ಮಾನ್ಯರೇ ಆಳುವಂತ ಹನ್ನೆರೆಡು ಕರೂತಿ ಹಳ್ಳಿಹೊನ್ನು ಬ್ರಿಟಿಷರ ಪಾಲಾಗುತ್ತದೆ. ಇನ್ನೂರು ಎತ್ತುಗಳ 'ಹೇರಿ'ನಲ್ಲಿ ಈ ಸಂಪತ್ತನ್ನು ಸಾಗಿಸಿದ್ದಾರೆ. ಬ್ರಿಟಿಷರು ಕಿತ್ತೂರು ಬಹಳ ಸಮೃದ್ಧಿಯಿಂದ ಬಾಳಿದ ಬೀಗಿದ ನಾಡು.

"ಸತ್ಯಕ ಶ್ರಾವಣ ಮಾಸಕ ಯಪ್ಪತ್ತೇಳು ನೂರ ಮಂದಿ
ತೃಪ್ತಿ ಬಡುಹಂತಾ ಜಂಗಮರ
ಹಸ್ದೇನಂದರ ಕಿವಿಯಲಿ ಕೇಳದ
ಹಣ್ಣು ಹಾಲು ಸಕ್ಕರಿ ನೀಡಿ
ದಾನ ಕೊಡುವರಣ್ಣ ವಸ್ತುರಾ"[29]

ಎಂಬ ಮಾತಿನಲ್ಲಿ ಅನ್ನ ವಸ್ತು ಒಡವೆಗಳ ದಾನ ಅವ್ಯಾಹತವಾಗಿ ನಡೆಯುತ್ತಿದ್ದ ಸಮೃದ್ಧಿಯನ್ನು ಲಾವಣಿಕಾರ ಸೂಚಿಸಿದ್ದಾನೆ. ಇಂತಹ ವೈಭವದಲ್ಲಿ ಬಾಳಿದ ಕಿತ್ತೂರಿಗೆ 'ಧರ್ಮ ಹೋಗಿ, ಕರ್ಮ ಹೆಚ್ಚಿ, ಮರ್ಮವೆತ್ತಿ ಹೋಯಿತು' ಎನ್ನುತ್ತಾನೆ. ಈ ಎಲ್ಲಾ ಅನಾಹುತ ಆದದ್ದು ಆಧಾರ ಸ್ತಂಭಗಳಂತಿದ್ದ ಮಲ್ಲಸರ್ಜ, ಚನ್ನವ್ವ ಮತ್ತು ಶಿವಲಿಂಗಸರ್ಜಾ ದೇಸಾಯಿಯವರಿಗೆ ಒದಗಿದ ದುಃಸ್ಥಿತಿಯಿಂದಾಗಿ ಎನ್ನುತ್ತಾನೆ ಲಾವಣಿಕಾರ. ಸೆರೆ ಹಿಡಿದು ಚೆನ್ನವ್ವನನ್ನು ಬೈಲಹೊಂಗಲಕ್ಕೆ ಸಾಗಿಸಿದ್ದು, ಥ್ಯಾಕರೆ ಸಾಹೇಬ ಕಿತ್ತೂರಿನ ದತ್ತು ಸಂಬಂಧದ ವಿಷಯದಲ್ಲಿ ಕೈ ಹಾಕಿ, ಕಿತ್ತೂರಿನವರ ಕೋಪಕ್ಕೆ ಬಲಿಯಾಗಿ ಮಡಿದದ್ದು ಮೊದಲಾದ ಸಂಗತಿಗಳು ಈ ನುಡಿಯಲ್ಲಿ(ಅಸ್ಪಷ್ಟವಾಗಿ) ಕಾಣಿಸಿಕೊಳ್ಳುತ್ತವೆ. ಐದನೆಯ ನುಡಿಯಲ್ಲಿ ಚೆನ್ನವ್ವನ ಸೊಸೆ ಈರವ್ವವನ್ನು ಬೇರೆ ಕಡೆಗೆ(ಧಾರವಾಡಕ್ಕೆ) ಸಾಗಿಸುವ ಚಿತ್ರಣವಿದೆ. ಹೀಗೆ ಸಾಗಿಸುವುದು ಆಕೆಗೆ ಒಪ್ಪಿತವಿರಲಿಲ್ಲ. ಅದಕ್ಕಾಗಿ ಒಲ್ಲೆನೆಂದು ಬಹಳ ಹಠವನ್ನೇ ಮಾಡುತ್ತಾಳೆ.

"ವಸ್ತ್ರ ವಡವಿ ಯಲ್ಲಾ ಉಚ್ಚಿ
ಪೊಡವಿಗೆ ವಗದಾಳೊ ಬಡವಿ
ಉದರಸ್ತಾಳೊ ಕಣ್ಣೀರ
ಹೊಂಡ ಹೊಂಡದರ ಮುಂಡಾಟ ಹಿಡಿದಾಳೊ
ಬಂಡ ಮಾಡಿ ಅವರು ಯಳಿಯಕ ಹೋದರ

ಕಂಡವರ ಕಾಲ ಹಿಡಿದಾಳೊ”[30]

ಎಂಬ ಸಾಲುಗಳಲ್ಲಿ ಆಕೆಯು ಪ್ರತಿರೋಧ ವ್ಯಕ್ತವಾಗಿದೆ. ಅಷ್ಟೇ ಅಲ್ಲ, ‘ಕೆಂಡ ಹಾದು ನಾ ಪ್ರಾಣ ಕೊಡಲಿಲ್ಲ’ ಎಂದು ತನ್ನ ಗಂಡನನ್ನು ನೆನಪಿಸಿಕೊಳ್ಳುತ್ತಾಳೆ. ‘ದಿಕ್ಕಿನೊಳು ನಮ್ಮಂತ ದೇಶಿಗೇಡಿ ಯಾರಿಲ್ಲ’ ಎಂದು ದುಃಖಿಸುತ್ತಾಳೆ. ‘ನಮ್ಮ ಹೊಟ್ಟೇಲಿ ಒಂದು ಪುತ್ರನು ಇದ್ದರ ಕಿತ್ತೂರಿಗೆ ಈ ದುಸ್ಥಿತಿ ಬರುತ್ತಿರಲಿಲ್ಲ’ ಎಂದು ಮರುಗುತ್ತಾಳೆ. ಆರನೆಯ ನುಡಿಯಲ್ಲಿ ಆಕೆಯನ್ನು ಬಿಗಿ ಪಹರೆಯಲ್ಲಿ ಕರೆದೊಯ್ದು ಚಿತ್ರವಿದೆ. ಒಲ್ಲದ ಮನಸ್ಸಿನಿಂದ ಇರುವ ಡೋಲಿಯಲ್ಲಿ ಕುಳಿತುಕೊಳ್ಳುತ್ತಾಳೆ. ‘ಮುಂದ ಮುನ್ನೂರ ಕುದುರಿ ಮಂದಿ, ಹಿಂದ ಇನ್ನೂರು ಬಾರಿನ ಮಂದಿ ಮಾಡುತ್ತೊಂಟರಣ್ಣ ಪಾರಗಸ್ತಿ’ ಈರವ್ವನಿಗೆ ಈ ಬಿಗಿ ಪಹರೆ ಹಾಕಿ ಕರೆದೊಯ್ಯಲು ಕಾರಣ ಬ್ರಿಟಿಷರಿಗಿದ್ದ ರಾಯನಾಯಕ(ರಾಯಣ್ಣ)ನ ಹೆದರಿಕೆ. ಅವನು ಬಂದು ತಮ್ಮ ಈ ಕಾರ್ಯಯೋಜನೆಯನ್ನೆಲ್ಲ ಎಲ್ಲಿ ಕೆಡಿಸುವನೊ ಎಂಬ ಭಯ. ‘ರಾಯನಾಯಕ ಬರತಾನೆಂದು ರೌಡ ಮಾಡಿ ನಡಿರೆಂದು’ ಪಹರೆಯವರಿಗೆ ತಾಕೀತು ಮಾಡಲಾಗುತ್ತಿತ್ತು. ಈರವ್ವನನ್ನು ಧಾರವಾಡಕ್ಕೆ ಕರೆದೊಯ್ಯುವ ಬದಲು ರಾಯನಾಯಕನ ಹೆದರಿಕೆಯಿಂದ ಆಕೆಯನ್ನು ಧಾರವಾಡ ಸಮೀಪದ ‘ಕುಸುಗಲ್ಲು’ಗೆ ಕೊಂಡೊಯ್ಯುತ್ತಾರೆ. ತನಗೆ ಈ ದುಸ್ಥಿತಿ ತಂದುದಕ್ಕಾಗಿ ಮತ್ತು ತನ್ನನ್ನು ಯಾವುದೋ ಸ್ಥಳದಲ್ಲಿ ಬಂಧಿಸಿದ್ದಕ್ಕಾಗಿ ಈರವ್ವ ಅಪಾರ ದುಃಖ ಪಡುತ್ತಾಳೆ. ಪ್ರಾಣವನ್ನು ಕಳೆದುಕೊಳ್ಳಲು ನಿಶ್ಚಯಿಸುತ್ತಾಳೆ. ಇದಕ್ಕಾಗಿ ಅನ್ನ ನೀರು ಸೇವನೆಯನ್ನು ತೊರೆಯುತ್ತಾಳೆ.

“ಇನ್ನು ಈ ಧರೆಯಲ್ಲಿ ಮುನ್ನ ಇರಬಾರದೆಂದು
ಅನ್ನ ಉದಕ ಯಲ್ಲಾ ಬಿಟ್ಟಳು
ಸಣ್ಣವಾದವು ಕೈಕಾಲು
ಮಣ್ಣ ಪಾಲವಾಗಲಿಯೆಂದು
ಬಣ್ಣ ವಣಗಿಸಿ ಬಿಟ್ಟಳೊ
ಸಂಗ್ರಾಣಿ ಬ್ಯಾನಂತ ಸರ್ವಾಂಗವೆಲ್ಲ
ಒಣಗಿಸಿ ಸುಣ್ಣದ್ಹಾಂಗ ದೇಹ ಸುಟ್ಟಳೊ”[31]

ಎಂಬ ಮಾತುಗಳಲ್ಲಿ ಇದು ವ್ಯಕ್ತವಾಗಿದೆ. ಕಠಿಣ ವ್ರತ ಮಾಡುವುದಾಗಿ ನಿಶ್ಚಯಿಸಿ ಶಿವ ಪೂಜೆಯಲ್ಲಿ ತೊಡಗುತ್ತಾಳೆ. ವಿರಕ್ತರನ್ನು ಕರೆಸಿ, ಗೌರವ ಸಲ್ಲಿಸಿ, ದಾನ ಧರ್ಮಗಳನ್ನು ಮಾಡುತ್ತಾಳೆ. ಕುಸುಗಲ್ಲಿನಿಂದ ಧಾರವಾಡಕ್ಕೆ ಹೋಗಿ ಅಲ್ಲಿ ಕೆಲವು ದಿನವಿದ್ದು ಪ್ರಾಣ ತ್ಯಾಗ ಮಾಡುತ್ತಾಳೆ.

ಲಾವಣಿಯ ವಸ್ತು ವಿಷಯವನ್ನು ಗಮನಿಸಿದಾಗ ಕನ್ನಡ ನಾಡಿನ ಗಂಡೆದೆಯ ವಿರತ್ವದ ಭಾವನೆಗಳು ಎದ್ದು ಕಾಣುತ್ತವೆ. ಸಂಗೊಳ್ಳಿ ರಾಯಣ್ಣನ ಐತಿಹಾಸಿಕ ದಂಗೆಯಲ್ಲಿ ಕಿತ್ತೂರಿನ ಅಸ್ತಿತ್ವಕ್ಕಾಗಿ ಬ್ರಿಟಿಷರೊಂದಿಗೆ ಪ್ರತಿರೋಧ ಒಡ್ಡಿ ಬಂಡೆದ್ದಿದ್ರು ರಾಣಿ ಚೆನ್ನಮ್ಮ. ಸಂಗೊಳ್ಳಿ ರಾಯಣ್ಣ ಮತ್ತು ಈರವ್ವ ಇವರ ಪಾತ್ರ ಪ್ರಮುಖವಾಗಿ ತೋರುತ್ತದೆ. ಬ್ರಿಟಿಷರು ವಿನಾಕಾರಣ ಘೋಷಿಸಿರುವ ಸುಂಕ ವಸೂಲಾತಿ ನೀತಿ ದತ್ತು ಪುತ್ರನ ಹಕ್ಕಿನ ನಿರಾಕರಣೆಯಿಂದ ಅವರ ಸಂಚಕಾರದ ತಂತ್ರ ಬಯಲಾಗಿದೆ. ಸ್ಥಳೀಯರೇ ಆಗಿರುವಂತ ಕುಲಕರ್ಣಿ ಬಾಳಪ್ಪನು ರಾಯಣ್ಣನಿಗೆ ತನ್ನ ಬಟ್ಟೆಗಳನ್ನು ತೊಳೆದು ಕೊಡುವಂತೆ ದಾಸ್ಯತನದಿಂದ ನೋಡಿದಾಗ ರಾಯಣ್ಣನ ಪ್ರತಿರೋಧದ ಭಾವನೆಗಳು ಲಾವಣಿಯಲ್ಲಿ ಗೋಚರಿಸಿವೆ. ರಾಯಣ್ಣ ಒಳ ಶತೃಗಳನ್ನು ಬಗ್ಗು ಬಡಿದು, ಬ್ರಿಟಿಷರ ಸೈನಿಕರಿಗೆ ಚಳ್ಳೆ ಹಣ್ಣು ತಿನ್ನಿಸಿದ ಸಂಗತಿಗಳು ತಿಳಿದು ಬರುತ್ತವೆ. ಆದಾಯ ತೆರಿಗೆಯ ಹಿನ್ನೆಲೆಯಲ್ಲಿ ಪ್ರತಿರೋಧದ ಭಾವನೆಗಳು ಕಂಡುಬರುತ್ತವೆ. ಆಸ್ತಿ, ಉದ್ಯೋಗ, ವ್ಯಾಪಾರ ಮತ್ತು ಕಚೇರಿಗಳ ಮೇಲೆ ಹಾಕಿದ ಮೂಲ ಸುಂಕವನ್ನು ಕುರಿತು ಲಾವಣಿಯ ಹಾಡಿನಲ್ಲಿ ಪ್ರತಿಭಟನೆ ಗೋಚರಿಸಿದೆ. ಭಾರತದಲ್ಲಿ ಅಧಿಕಾರವನ್ನು ಹಿಡಿದಿರುವ ಬ್ರಿಟಿಷರು ಹಲವಾರು ಕಾಯ್ದೆಗಳನ್ನು ಜಾರಿಗೆ ತಂದಿದ್ದರು. ಅಂತಹವುಗಳಲ್ಲಿ ಮುಖ್ಯವಾಗಿ ನಿಶಸ್ತ್ರೀಕರಣ ಕಾಯ್ದೆಯು ಒಂದಾಗಿತ್ತು. ಇದರ ಪ್ರಕಾರ ಭಾರತೀಯರು ಬ್ರಿಟಿಷರ ಅನುಮತಿ ಇಲ್ಲದೆ ಯಾವುದೇ ಬಗೆಯ ಆಯುಧಗಳನ್ನು ಹೊಂದುವಂತಿರಲಿಲ್ಲ. ಈ ಕಾಯ್ದೆಯನ್ನು ನಿರಾಕರಿಸಿ ಹಲಗಲಿಯ ಬೇಡರು ವೀರಾವೇಶವಾಗಿ ಬ್ರಿಟಿಷರ ವಿರುದ್ಧ ಹೋರಾಡುತ್ತಾರೆ. ಹೀಗೆ ಹತ್ತಾರು ಅನ್ಯಾಯದ ಸಂಗತಿಗಳ ಕುರಿತು ಭಾರತೀಯ ಶೂರರು ಬ್ರಿಟಿಷರ ವಿರುದ್ಧ ಪ್ರತಿಭಟಿಸುತ್ತಾರೆ. ಈ ವೀರರನ್ನು ಉರಿದುಂಬಿಸುವದಕ್ಕಾಗಿ ಹಾಗೂ ಅವರ ಶೌರ್ಯದ ಗುಣಗಾನ ಮಾಡುತ್ತ ಲಾವಣಿಕಾರರು ಈ ಹಾಡುಗಳನ್ನು ಹುಟ್ಟುಹಾಕಿದ್ದಾರೆ.

ಕೊನೆಯ ಟಿಪ್ಪಣಿಗಳು :

1. ಕ್ಯಾತನಹಳ್ಳಿ ರಾಮಣ್ಣ; ಪೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು, ಪು.ಸಂ.25
2. ಅದೇ ಪು.ಸಂ.27
3. ಅದೇ ಪು.ಸಂ.28

4. ಅದೇ ಪು.ಸಂ.31
5. ಅದೇ ಪು.ಸಂ.33
6. ಅದೇ ಪು.ಸಂ.35
7. ಅದೇ ಪು.ಸಂ.37
8. ಅದೇ ಪು.ಸಂ.38
9. ಅದೇ ಪು.ಸಂ.40
10. ಅದೇ ಪು.ಸಂ.41
11. ಅದೇ ಪು.ಸಂ.42
12. ಅದೇ ಪು.ಸಂ.44
13. ಅದೇ ಪು.ಸಂ.44
14. ಅದೇ ಪು.ಸಂ.45
15. ಅದೇ ಪು.ಸಂ.46
16. ಅದೇ ಪು.ಸಂ.47
17. ಅದೇ ಪು.ಸಂ.47
18. ಅದೇ ಪು.ಸಂ.49
19. ಅದೇ ಪು.ಸಂ.50
20. ಅದೇ ಪು.ಸಂ.50
21. ಅದೇ ಪು.ಸಂ.55
22. ಅದೇ ಪು.ಸಂ.57
23. ಅದೇ ಪು.ಸಂ.59
24. ಅದೇ ಪು.ಸಂ.65
25. ಅದೇ ಪು.ಸಂ.68
26. ಅದೇ ಪು.ಸಂ.70
27. ಅದೇ ಪು.ಸಂ.72
28. ಅದೇ ಪು.ಸಂ.76
29. ಅದೇ ಪು.ಸಂ.80
30. ಅದೇ ಪು.ಸಂ.85
31. ಅದೇ ಪು.ಸಂ.88

ಪರಾಮರ್ಶನ ಗ್ರಂಥಗಳು:

1. ಕ್ಯಾತನಹಳ್ಳಿ ರಾಮಣ್ಣ; ಪೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು, 1972, ಪ್ರಕಾಶಕರು, ಮಾನಸಗಂಗೋತ್ರಿ, ಮೈಸೂರು.
2. ನಾವಲಗಿ ಸಿ.ಕೆ., ಶತಮಾನ ಕಂಡ ಸೋಮಲಿಂಗ ಕವಿಯ ಲಾವಣಿಗಳು, 2012, ಆನಂದ ಪ್ರಕಾಶನ, ಬೈಲಹೊಂಗಲ.
3. ವೆಂಕಟಸುಬ್ಬಯ್ಯ ಜಿ.(ಸಂ), ರಾಜಶ್ರೀ ಸತೀಶ (ಸ.ಸಂ), ಕನ್ನಡ ಕ್ಲಿಷ್ಟ ಪದಕೋಶ, ಪ್ರಿಸಮ್ ಬುಕ್ಸ್ ಪ್ರೈ.ಲಿ. ಬೆಂಗಳೂರು.
4. ಶಿವರಾಮ ಕಾರಂತ ಕೆ., ಸಿರಿಗನ್ನಡ ಅರ್ಥಕೋಶ–ಕನ್ನಡ–ಕನ್ನಡ, 1990, ಎಸ್.ಬಿ.ಎಸ್. ಪ್ರಕಾಶನ, ಬೆಂಗಳೂರು.
5. ಶ್ರೀರಾಮ ಇಟ್ಟಣ್ಣವರ, ಲಾವಣಿ, 1985, ಪ್ರಕಾಶಕರು, ಸರೋಜ ಇಟ್ಟಣ್ಣವರ, ಬೀಳಗಿ.
6. ಸುಂಕಾಪುರ ಎಂ.ಎಸ್., ಜಾನಪದ ಸಾಹಿತ್ಯ ದರ್ಶನ ಭಾಗ–4, ಪ್ರಕಾಶಕರು, ನಿರ್ದೇಶಕರು, ಪ್ರಸಾರಾಂಗ, ಕ.ವಿ.ವಿ. ಧಾರವಾಡ.

***

ಸಾಹಿತ್ಯ-ಸಂಸ್ಕೃತಿ-ಸಂಶೋಧನೆಯ ನಿಯತಕಾಲಿಕ
ಪ್ರತಿಸ್ಪಂದ
ಕೊಡು-ಕೊಳ್ಳುವಿಕೆಗಳ ಸಂಕರ..

ವೃಕ್ಷಮಾತೆಗೆ ನಮನ

ನಾಡೋಜ ಸಾಲುಮರದ ತಿಮ್ಮಕ್ಕ ಅವರು

1911-2025

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
LITERATURE, CULTURE - RESEARCH QUARTERLY
PEER - REVIEWED JOURNAL
ISSN: 2320-9941

HTTPS://PRATHISPANDHA.WORDPRESS.COM/

ಪ್ರತಿಸ್ಪಂದ

ಕೊಡು-ಕೊಳ್ಳುವಿಕೆಗಳ ಸಂಕರ..

ವೃಕ್ಷಮಾತೆಗೆ ನಮನ

ನಾಡೋಜ ಸಾಲುಮರದ ತಿಮ್ಮಕ್ಕ ಅವರು

1911-2025

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ

LITERATURE, CULTURE - RESEARCH QUARTERLY

PEER - REVIEWED JOURNAL

ISSN: 2320-9941

HTTPS://PRATHISPANDHA.WORDPRESS.COM/

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

PEER - REVIEWED JOURNAL

ISSN: 2320-9941

ಸಂಪುಟ - 9, ಸಂಚಿಕೆ- 4

VOLUME: 09, ISSUE: 04

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಭಾಗ - ೧

PART - 1